ಗುರುವಾರ, ಫೆಬ್ರುವರಿ 2, 2023 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮೆರವಣಿಗೆ
ಮಡಿವಾಳ ಮಾಚಿದೇವರ ಜಯಂತಿ ಅಂಗವಾಗಿ ಕೊಪ್ಪಳದಲ್ಲಿ ಬುಧವಾರ ನಡೆದ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಬಂಜಾರ ಯುವತಿ

ಮಲ್ಲೇಶ್ವರ ಕ್ಷೇತ್ರದ ಜನಪ್ರಿಯ ಶಾಸಕ, ಉನ್ನತ ಶಿಕ್ಷಣ, ಐಟಿ-ಬಿಟಿ, ಕೌಶಲ್ಯಾಭಿವೃದ್ಧಿ ಖಾತೆ ಸಚಿವರೂ ಆದ ರಾಮನಗರ ಜಿಲ್ಲಾ ಉಸ್ತುವಾರಿ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರದು ಅನನ್ಯ ವ್ಯಕ್ತಿತ್ವ. ಪಾದರಸದಂತಹ ಕ್ರಿಯಾಶೀಲತೆ, ದೂರದೃಷ್ಟಿ , ಸರ್ವಾಂಗೀಣ ಪ್ರಗತಿಯ ಕನಸು, ಸ್ಪಂದನಶೀಲತೆ ಇವರ ಹೆಗ್ಗುರುತುಗಳು. ಬಿ.ಎಸ್. ಯಡಿಯೂರಪ್ಪ ಸಂಪುಟದಲ್ಲಿ ಉಪ ಮುಖ್ಯಮಂತ್ರಿಗಳಾಗಿ, ಬಸವರಾಜ ಬೊಮ್ಮಾಯಿ ಸಂಪುಟದಲ್ಲಿ ಮೂರು ಮಹತ್ವದ ಖಾತೆಗಳ ಸಚಿವರಾಗಿ ಇವರು ಮಾಡಿರುವ ಸಾಧನೆಗಳು ನೂರಾರು. ಇವು ನವಕರ್ನಾಟಕ ನಿರ್ಮಾಣದ ಸೋಪಾನಗಳಾಗಿವೆ. ಇಲ್ಲಿದೆ ಅವರ ಸಾಧನೆಗಳ ಮಿಂಚುನೋಟ!

ಜನಪರ ಕಾಳಜಿಯ ನೈಜ ನಾಯಕ

ಡಾ.ಸಿಎನ್ ಅಶ್ವತ್ಥನಾರಾಯಣ

ಜನ್ಮದಿನದ ಹೃತ್ಪೂರ್ವಕ ಶುಭಾಶಯಗಳು

• ನಾಡಪ್ರಭು ಕೆಂಪೇಗೌಡರ ಭವ್ಯ ಸ್ಮಾರಕ

- ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬೆಂಗಳೂರಿನ ನಿರ್ಮಾತೃ ಕೆಂಪೇಗೌಡರ 108 ಅಡಿ ಎತ್ತರದ ಕಂಚಿನ ಪ್ರತಿಮೆ ಪ್ರತಿಷ್ಠಾಪನೆ; ಪ್ರಧಾನಿ ನರೇಂದ್ರ ಮೋದಿ ಅವರಿಂದ ಲೋಕಾರ್ಪಣೆ
- ಪ್ರತಿಮೆ ಲೋಕಾರ್ಪಣೆಯ ಭಾಗವಾಗಿ ರಾಜ್ಯಾದ್ಯಂತ 22,000 ಸ್ಥಳಗಳಲ್ಲಿ 11 ಕೆಂಪೇಗೌಡ ರಥಗಳ ಮೂಲಕ ಪವಿತ್ರ ಮೃತ್ತಿಕಾ ಸಂಗ್ರಹಣಾ ಅಭಿಯಾನದ ರೂವಾರಿ
- ವಿಮಾನ ನಿಲ್ದಾಣದ ಆವರಣದಲ್ಲೇ 23 ಎಕರೆ ವಿಸ್ತೀರ್ಣದ ಕೆಂಪೇಗೌಡ ಥೀಮ್ ಪಾರ್ಕ್ ಅಭಿವೃದ್ಧಿ
- ಕೆಂಪೇಗೌಡರಿಗೆ ಸಂಬಂಧಿಸಿದ 24 ಸ್ಥಳಗಳನ್ನು ಪ್ರವಾಸಿ ತಾಣವಾಗಿ ಬೆಳೆಸುವ ಮಹತ್ವಾಕಾಂಕ್ಷಿ ಯೋಜನೆಗೆ ಚಾಲನೆ
- ಕೆಂಪೇಗೌಡರ ಸಮಾಧಿ ಸ್ಥಳವಾದ ಮಾಗಡಿ ತಾಲ್ಲೂಕಿನ ಕೆಂಪಾಪುರದ ಸಮಗ್ರ ಅಭಿವೃದ್ಧಿ

• ಸ್ಟಾರ್ಟ್ ಅಪ್ ತವರು ನಮ್ಮ ಬೆಂಗಳೂರು

- 22,000 ಸ್ಟಾರ್ಟ್ ಆಪ್‌ಗಳ ಮೂಲಕ ಬೆಂಗಳೂರಿಗೆ 'ಸ್ಟಾರ್ಟ್ ಅಪ್ ರಾಜಧಾನಿ' ಎಂಬ ಹೆಗ್ಗಳಿಕೆ
- ತಲಾ 1 ಬಿಲಿಯನ್ ಡಾಲರ್ ಮೌಲ್ಯವುಳ್ಳ 40 ಯೂನಿಕಾರ್ನ್ ದರ್ಜೆಯ ನವೋದ್ಯಮಗಳ ಬೀಡಾದ ಕರುನಾಡಿನ ರಾಜಧಾನಿ.
- ಸ್ಟಾರ್ಟಪ್‌ಗಳಿಗೆ ಸುಗಮ ಸಾಲ ವ್ಯವಸ್ಥೆಗೆ ಬ್ಯಾಂಕಿಂಗ್ ವ್ಯವಸ್ಥೆ
- ವಿದೇಶಿ ನೇರ ಹೂಡಿಕೆಯಲ್ಲಿ ದೇಶಕ್ಕೇ ಕರ್ನಾಟಕ ನಂ.1.
- ನೀತಿ ಆಯೋಗದ ನಾವೀನ್ಯತಾ ಸೂಚ್ಯಂಕದಲ್ಲಿ ರಾಜ್ಯವೇ ನಂ.1
- ಬೆಂಗಳೂರಿನಲ್ಲಿ ಡಿಸೈನ್ ಡಿಸ್ಟ್ರಿಕ್ಟ್ ಸ್ಥಾಪನೆಗೆ ಚಾಲನೆ. ಸೆಮಿಕಂಡಕ್ಟರ್, ಚಿಪ್, ಎಲೆಕ್ಟ್ರಾನಿಕ್ ಉತ್ಪಾದನೆಯ ತೊಟ್ಟಿಲಾಗಿ ಬೆಂಗಳೂರು.
- 25ನೇ ವರ್ಷದ ಬೆಂಗಳೂರು ತಂತ್ರಜ್ಞಾನ ಸಮಾವೇಶದ ವ್ಯವಸ್ಥಿತ ಸಂಘಟನೆ
- ಬಿಯಾಂಡ್ ಬೆಂಗಳೂರು ಮತ್ತು ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ ಉಪಕ್ರಮದಡಿ ಮೈಸೂರು, ಮಂಗಳೂರು, ಹುಬ್ಬಳ್ಳಿ–ಧಾರವಾಡ–ಬೆಳಗಾವಿ,

• ಉನ್ನತ ಶಿಕ್ಷಣ ಕ್ಷೇತ್ರ: ನವಕರ್ನಾಟಕ ನಿರ್ಮಾಣದ ಸೂತ್ರ

- ನೂತನ ರಾಷ್ಟ್ರೀಯ ಶಿಕ್ಷಣ ನೀತಿ–2020 ಜಾರಿಯಲ್ಲಿ ಕರ್ನಾಟಕ ದೇಶಕ್ಕೇ ಅಗ್ರಮಾನ್ಯ ರಾಜ್ಯ
- ಸರ್ಕಾರಿ ಪದವಿ ಕಾಲೇಜುಗಳಿಗೆ 1,242 ಉಪನ್ಯಾಸಕರ ನೇಮಕ. 310 ಪ್ರಾಂಶುಪಾಲರ ನೇಮಕ ಪ್ರಕ್ರಿಯೆ ಆರಂಭ.
- ರಾಜ್ಯದ ಸರ್ಕಾರಿ ವಿವಿಗಳು ಮತ್ತು ಯುಕೆ ವಿವಿಗಳ ಜತೆ ಒಡಂಬಡಿಕೆ. 1.3 ಕೋಟಿ ರೂ ವೆಚ್ಚದ ಸಂಶೋಧನಾ ಪ್ರಾಜೆಕ್ಟ್ ಅನುಷ್ಠಾನ.
- ಉನ್ನತ ಶಿಕ್ಷಣದಲ್ಲಿ ಅಮೂಲಾಗ್ರ ಬದಲಾವಣೆಗೆ ನೂತನ ಉನ್ನತ ಶಿಕ್ಷಣ ಸಾಂಸ್ಥಿಕ ಕಾಯ್ದೆ ಜಾರಿಗೆ ಸಿದ್ಧತೆ.
- ಹೆಲ್ಪ್ ಎಜುಕೇಟ್ ಅಡಿ ಎಂಎನ್‌ಸಿಗಳ ಜತೆ ಒಡಂಬಡಿಕೆ; ಸರಕಾರಿ ಕಾಲೇಜುಗಳಿಗೆ 27,500 ಕಂಪ್ಯೂಟರ್ ಗಳ ಕೊಡುಗೆ
- ಸಿಇಟಿ, ಜೆಇಇ ಮತ್ತು ನೀಟ್ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ಸಿದ್ಧಗೊಳಿಸಲು Get-CET-Go ಆನ್‌ಲೈನ್ ವೇದಿಕೆ; ವರ್ಷಕ್ಕೆ 2 ಲಕ್ಷ ವಿದ್ಯಾರ್ಥಿಗಳಿಗೆ ಪ್ರಯೋಜನ
- 100 ಕೋಟಿ ರೂ. ವೆಚ್ಚದಲ್ಲಿ ಧಾರವಾಡದ ಉನ್ನತ ಶಿಕ್ಷಣ ಅಕಾಡೆಮಿಯ ಆಧುನೀಕರಣ; ಬೋಧಕರಿಗೆ ಅತ್ಯುತ್ತಮ ತರಬೇತಿ
- ಕಾಲೇಜು & ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಮೊದಲ ಬಾರಿಗೆ ಅಧ್ಯಾಪಕ ಸ್ನೇಹಿ ವರ್ಗಾವಣೆ
- ನ್ಯಾಕ್ ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಪ್ರಸ್ತುತ 240 ಕಾಲೇಜುಗಳು
- 'ಜಿಲ್ಲೆಗೊಂದು ವಿ.ವಿ: 10 ನೂತನ ವಿ.ವಿ.ಗಳ ಸ್ಥಾಪನೆ. ಯುವಿಸಿಇ ಈಗ ಸ್ವಾಯತ್ತ ವಿಶ್ವವಿದ್ಯಾಲಯ.
- ಡಾ.ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಕಾರ್ಯಾರಂಭ
- ಅತಿಥಿ ಉಪನ್ಯಾಸಕರ ಬೇಡಿಕೆಗೆ ಸ್ಪಂದನ; 11,500 ರಿಂದ 32,000 ರೂ.ಗಳಿಗೆ ಮಾಸಿಕ ವೇತನ ಏರಿಕೆ
- ಅಮೆರಿಕದ ವಿ.ವಿ.ಗಳೊಂದಿಗೆ ಒಡಂಬಡಿಕೆ; ಡಿಪ್ಲೊಮಾದಲ್ಲಿ ಟ್ವಿನ್ನಿಂಗ್ ಪದವಿಗೆ ಕ್ರಮ; ಶಿಕ್ಷಣದ ಅಂತಾರಾಷ್ಟ್ರೀಕರಣಕ್ಕೆ ಉತ್ತೇಜನ
- ಇನ್ಫೋಸಿಸ್ ಸ್ಪ್ರಿಂಗ್‌ಬೋರ್ಡ್ ಸಹಭಾಗಿತ್ವದಲ್ಲಿ 12,000 ಕ್ಕೂ ಹೆಚ್ಚು ಕೋರ್ಸ್‌ಗಳಲ್ಲಿ ಕೌಶಲ್ಯ ಕಲಿಕೆಗೆ ಅವಕಾಶ
- ನಿರಂತರ ಬೋಧನೆ/ಕಲಿಕೆಗೆ 'ಕಲಿಕಾ ನಿರ್ವಹಣಾ ವ್ಯವಸ್ಥೆ' (ಎಲ್‌ಎಂಎಸ್) ಅಳವಡಿಕೆ
- ವಿ.ವಿ.ಗಳ ನಿರ್ವಹಣೆಗೆ ಯುಯುಸಿಎಂಎಸ್ ಆನ್‌ಲೈನ್ ವೇದಿಕೆಯ ಮೂಲಕ ಸಂಪೂರ್ಣ ಪಾರದರ್ಶಕತೆ
- 23 ಸರಕಾರಿ ವಿ.ವಿ.ಗಳು ಮತ್ತು 3,800 ಸಂಯೋಜಿತ ಕಾಲೇಜುಗಳಿಗೆ ಅನುಕೂಲ

• ಸರ್ವರಿಗೂ ಉದ್ಯೋಗ ಸರ್ವರಿಗೂ ಕೌಶಲ್ಯ

- 1,091 ಬೃಹತ್ ಮತ್ತು ಮಿನಿ ಉದ್ಯೋಗ ಮೇಳ ಆಯೋಜನೆ. 77,105 ಯುವಕರಿಗೆ ಉದ್ಯೋಗ.
- ಟಾಟಾ ಸಮೂಹದ 4,500 ಕೋಟಿ ರೂ. ಮತ್ತು ರಾಜ್ಯ ಸರಕಾರದ 800 ಕೋಟಿ ರೂ. (ಒಟ್ಟು 5,300 ಕೋಟಿ ರೂ.) ವೆಚ್ಚದಲ್ಲಿ 150 ಸರಕಾರಿ ಐಟಿಐಗಳ ಉನ್ನತೀಕರಣ
- ಕೈಗಾರಿಕಾ ಕ್ರಾಂತಿ 4.0ಗೆ ತಕ್ಕಂತೆ ಪಠ್ಯಕ್ರಮದ ಸಮಗ್ರ ಪರಿಷ್ಕರಣೆ; 23 ಅಲ್ಪಾವಧಿ ಮತ್ತು 6 ದೀರ್ಘಾವಧಿ ಕೋರ್ಸುಗಳ ಲಭ್ಯತೆ
- ಅಲ್ಪಾವಧಿ ಕೋರ್ಸುಗಳಲ್ಲಿ ವರ್ಷಕ್ಕೆ 1 ಲಕ್ಷ ಮತ್ತು ದೀರ್ಘಾವಧಿ ಕೋರ್ಸುಗಳಲ್ಲಿ ವರ್ಷಕ್ಕೆ 20,000 ಜನರಿಗೆ ತರಬೇತಿ
- ಐಟಿಐ/ಪಾಲಿಟೆಕ್ನಿಕ್‌ಗಳಲ್ಲಿ ಶೇಕಡ 50ರಿಂದ ಶೇಕಡ 100ಕ್ಕೆ ಹೆಚ್ಚಿದ ವಿದ್ಯಾರ್ಥಿಗಳ ಪ್ರವೇಶಾತಿ
- ರಾಜ್ಯದ 28 ಜಿಟಿಟಿಸಿಗಳಲ್ಲಿ ಆಧುನಿಕ ಮತ್ತು ಗುಣಮಟ್ಟದ ವೃತ್ತಿ ತರಬೇತಿ
- 'ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ'ಯಡಿಯಲ್ಲಿ 1,49,717 ಹಾಗೂ 'ಪ್ರಧಾನಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆ'ಯಡಿಯಲ್ಲಿ 20,000 ಅಭ್ಯರ್ಥಿಗಳಿಗೆ ತರಬೇತಿ
- ಕೌಶಲ್ಯ ಕಾರ್ಯ ಪರಿಸರ ನಿರ್ಮಾಣಕ್ಕೆ 'ಇಂಡಸ್ಟ್ರಿ ಲಿಂಕೇಜ್ ಸೆಲ್' ಸ್ಥಾಪನೆ
- ಉದ್ಯೋಗದಾತರು ಹಾಗೂ ಉದ್ಯೋಗಾಕಾಂಕ್ಷಿಗಳನ್ನು ಒಂದೇ ವೇದಿಕೆಯಡಿ ತರಲು Skill Connect ಪೋರ್ಟಲ್ ಅಭಿವೃದ್ಧಿ.

• ಮಲ್ಲೇಶ್ವರ ಮಾದರಿ: ದೇಶಕ್ಕೇ ಮಾದರಿ!

- ಗುಣಮಟ್ಟದ ಶಿಕ್ಷಣ, ಕೈಗೆಟುಕುವ ಆಸ್ಪತ್ರೆ, ಆಟದ ಮೈದಾನ, ಸುಂದರ ಮತ್ತು ಸುರಕ್ಷಿತ ಮಲ್ಲೇಶ್ವರ ಅಭಿವೃದ್ಧಿಯ ಸಾಕಾರ
- ಕ್ಷೇತ್ರದ ಪ್ರತಿಯೊಂದು ವಾರ್ಡಿನಲ್ಲೂ ಹೈಟೆಕ್ ನಗರ ಸಮಗ್ರ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ನಮ್ಮ ಕ್ಲಿನಿಕ್ ಗಳ ಸ್ಥಾಪನೆ
- 40 ವರ್ಷಕ್ಕೂ ಹೆಚ್ಚು ಹಳೆಯದಾದ ನೀರು ಸರಬರಾಜು ಪೈಪ್ ಗಳ ಬದಲಾವಣೆ
- ಕ್ಷೇತ್ರದಲ್ಲಿ 3,000ಕ್ಕೂ ಹೆಚ್ಚು ಹೊಸ ಮ್ಯಾನ್‌ಹೋಲ್ ನಿರ್ಮಾಣ
- 30 ವರ್ಷಗಳ ಮುನ್ನೋಟದೊಂದಿಗೆ ಭೂಗತ ಟ್ರಾನ್ಸ್‌ಫಾರ್ಮರ್, ವಿದ್ಯುತ್ ಕೇಬಲ್ ಅಳವಡಿಕೆ
- ಸಂಪಿಗೆ ರಸ್ತೆ ವೈಟ್ ಟಾಪಿಂಗ್ ಪೂರ್ಣ; ಕ್ಷೇತ್ರದಲ್ಲಿ 230 ಕಿ.ಮೀ. ಉದ್ದದ ರಸ್ತೆಗೆ ಗುಣಮಟ್ಟದ ಡಾಂಬರೀಕರಣ
- ಕೊಳೆಗೇರಿ ನಿವಾಸಿಗಳಿಗೆ ಹಂತಹಂತವಾಗಿ ವಸತಿ ಸೌಕರ್ಯ
- ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ 50 ಹಾಸಿಗೆಗಳ ಜಯದೇವ ಹೃದ್ರೋಗ ಘಟಕ, 50 ಹಾಸಿಗೆಗಳ ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆಯ ತುರ್ತು ಚಿಕಿತ್ಸಾ ಘಟಕ, 100 ಹಾಸಿಗೆಗಳ ಅತ್ಯಾಧುನಿಕ ಐಸಿಯು ಸ್ಥಾಪನೆ. 50 ಹಾಸಿಗೆಗಳ ಟ್ರಾಮಾ ಕೇರ್ ಘಟಕದ ನಿರ್ಮಾಣ ಸದ್ಯದಲ್ಲೇ

• ರಾಮನಗರ: ಅಭಿವೃದ್ಧಿಯ ಹೆದ್ದಾರಿ

- ಪುರಾತನ ರಾಮದೇವರ ಬೆಟ್ಟವನ್ನು ದಕ್ಷಿಣದ ಅಯೋಧ್ಯೆಯಾಗಿ ಅಭಿವೃದ್ಧಿಪಡಿಸಲು ಸಂಕಲ್ಪ
- 1,800 ಕೋಟಿ ರೂ. ವೆಚ್ಚದಲ್ಲಿ ಜಿಲ್ಲೆಯಲ್ಲಿ 'ಜಲಜೀವನ್ ಮಿಷನ್' ಜಾರಿ; ಮನೆಮನೆಗೂ ನಲ್ಲಿ ನೀರಿನ ಸೌಲಭ್ಯ
- ಶ್ರೀರಂಗ ಏತ ನೀರಾವರಿ, ಸತ್ತೇಗಾಲ ಯೋಜನೆ ಮತ್ತು ವೈ.ಜಿ.ಗುಡ್ಡ ಯೋಜನೆ ಮೂಲಕ ಜಿಲ್ಲೆಯ ನೂರಾರು ಕೆರೆಗಳಿಗೆ ನೀರು ಪೂರೈಕೆ
- 75 ಕೋಟಿ ರೂ. ವೆಚ್ಚದಲ್ಲಿ ಹೈಟೆಕ್ ರೇಷ್ಮೆ ಮಾರುಕಟ್ಟೆ ಅಭಿವೃದ್ಧಿ
- 320 ಕೋಟಿ ರೂ. ವೆಚ್ಚದಲ್ಲಿ ಮಾಗಡಿ ತಾ.ನಲ್ಲಿ ಕರ್ನಾಟಕ ಸಂಸ್ಕೃತ ವಿವಿ ಕ್ಯಾಂಪಸ್ ನಿರ್ಮಾಣ
- ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಾಗಿ ಜಿಲ್ಲಾಸ್ಪತ್ರೆಯ ಉನ್ನತೀಕರಣ; 550 ಹಾಸಿಗೆಗಳ ಸಾಮರ್ಥ್ಯದ ಸೌಲಭ್ಯ.
- 70 ಕೋಟಿ ರೂ. ವೆಚ್ಚದಲ್ಲಿ ರಾಮನಗರದ ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನ ಸಮಗ್ರ ಉನ್ನತೀಕರಣ. ಹಾಗೂ ಕರ್ನಾಟಕ ರಾಜ್ಯ ಮುಕ್ತ ವಿವಿ ಪ್ರಾದೇಶಿಕ ಕೇಂದ್ರ ಸ್ಥಾಪನೆಗೆ ಕ್ರಮ.

• 30 ಎಂಜಿನಿಯರಿಂಗ್ ಕಾಲೇಜುಗಳಲ್ಲಿ RETE

- ಜಿಲ್ಲೆಗೆ ಒಂದರಂತೆ 14 ಸರಕಾರಿ ಮತ್ತು 16 ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳ ಉನ್ನತೀಕರಣಕ್ಕೆ 'ರೀತಿ' (RETE- Regional Ecosystem for Technical Eminence) ಯೋಜನೆ
- 'ಇನ್ಸಿಟ್ಯೂಟ್ ಆಫ್ ಎಮಿನೆನ್ಸ್' ಮಾದರಿಯಲ್ಲಿ 7 ಎಂಜಿನಿಯರಿಂಗ್ ಕಾಲೇಜುಗಳ ಅಭಿವೃದ್ಧಿ
- ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಇಂಟರ್ನ್‌ಶಿಪ್ ಅವಧಿ 6 ರಿಂದ 30 ವಾರಗಳಿಗೆ; ಡಿಪ್ಲೊಮಾ ವಿದ್ಯಾರ್ಥಿಗಳ ಇಂಟರ್ನ್‌ಶಿಪ್ ಅವಧಿ 2ರಿಂದ 16 ವಾರಕ್ಕೆ ವಿಸ್ತರಣೆ.

• ಮಹಿಳೆಯರ ಸಬಲೀಕರಣ

- ಸ್ತ್ರೀ ಸ್ವಸಹಾಯ ಸಂಘಗಳಿಗೆ 75,000 ಕೋಟಿ ರೂ. ಮೌಲ್ಯದ ಮಾರುಕಟ್ಟೆ ಸೃಷ್ಟಿ
- ಅಮೆಜಾನ್, ಫ್ಲಿಪ್‌ಕಾರ್ಟ್ ಕಂಪನಿಗಳ ಮೂಲಕ ಬ್ರಾಂಡಿಂಗ್, ಪ್ಯಾಕೇಜಿಂಗ್, ಮಾರ್ಕೆಟಿಂಗ್ ಸೌಲಭ್ಯ
- ಪ್ರತೀ ಗ್ರಾಮ ಪಂಚಾಯತಿ ಮಟ್ಟದಲ್ಲೂ ಗೋದಾಮು ಕಟ್ಟಡದ ಅನುಕೂಲ. ರಾಜ್ಯದ ಆರ್ಥಿಕ ಬೆಳವಣಿಗೆಯಲ್ಲಿ ಮಹಿಳೆಯರಿಗೆ ಸಕ್ರಿಯ ಪಾತ್ರ. ಆರ್ಥಿಕ ಚಟುವಟಿಕೆಗಳನ್ನು ನಡೆಸಲು ಮಹಿಳೆಯರಿಗೆ ಸೀಡ್ ಫಂಡ್ ವ್ಯವಸ್ಥೆ

ಶುಭ ಕೋರುವವರು
ಮಲ್ಲೇಶ್ವರಂ ಕಬಡ್ಡಿ ಕ್ಲಬ್ , ಕ್ಲಾಸಿಕ್ ನ್ಯಾಷನಲ್ ಸ್ಪೋರ್ಟ್ಸ್ ಕ್ಲಬ್ ಮತ್ತು ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರದ ಕಾರ್ಯಕರ್ತರು, ಬೆಂಗಳೂರು.

www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ
ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಪ್ರಚಲಿತ ವಿದ್ಯಮಾನ 'ಉಜಾಲ' ಕುರಿತ ಮಾಹಿತಿ

ಷೇರು ವಿಕ್ರಯ ರದ್ದು: ಅದಾನಿ ಎಂಟರ್‌ಪ್ರೈಸಸ್ ನಿರ್ಧಾರ 3

ಉಪನಗರ ರೈಲು: ₹450 ಕೋಟಿ 2

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,708	17,662	₹59,150 (ಬೆಂಗಳೂರು)	₹70,500 (ಬೆಂಗಳೂರು)	81.90

ಖಜಾನೆ ಭರ್ತಿಗಾಗಿ ಖರ್ಚಿಗೆ ಉತ್ತೇಜನ

ಬಜೆಟ್ ಗಾತ್ರ: ₹45.03 ಲಕ್ಷ ಕೋಟಿ ● ಭದ್ರಾ ಮೇಲ್ದಂಡೆ ಯೋಜನೆಗೆ ₹5,300 ಕೋಟಿ ● ರಕ್ಷಣೆಗೆ ₹5.94 ಲಕ್ಷ ಕೋಟಿ ● ಶಿಕ್ಷಣಕ್ಕೆ ₹1.12 ಲಕ್ಷ ಕೋಟಿ

ಕೇಂದ್ರ ಬಜೆಟ್ 2023-24

● ಮಂಜುನಾಥ ಹೆಬ್ಬಾರ್

ನವದೆಹಲಿ: ಆಕರ್ಷಕ ಹೆಸರಿನ ನವನವೀನ ಯೋಜನೆಗಳನ್ನು ಬಜೆಟ್‌ನಲ್ಲಿ ಪ್ರಕಟಿಸುವ ಮೂಲಕ ಎಲ್ಲ ವರ್ಗದ ಜನರಿಗೆ 'ಪಂಚಕಜ್ಜಾಯ' ನೀಡಿ ಬಿಜೆಪಿಯ ಮತ ಬುಟ್ಟಿಯನ್ನು ಇನ್ನಷ್ಟು ಗಟ್ಟಿ ಮಾಡಲು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಪ್ರಯತ್ನಿಸಿದ್ದಾರೆ. ಉಳಿತಾಯಕ್ಕೆ ಆದ್ಯತೆ ನೀಡುತ್ತಿದ್ದ ಜನರು ಹೆಚ್ಚು ಖರ್ಚು ಮಾಡುವಂತೆ ಹುರಿದುಂಬಿಸಿ ಕೇಂದ್ರದ ಖಜಾನೆ ಭರ್ತಿ ಮಾಡುವ ಯತ್ನವನ್ನೂ ಮಾಡಿದ್ದಾರೆ.

ಕರ್ನಾಟಕ, ಮಧ್ಯಪ್ರದೇಶ, ರಾಜಸ್ಥಾನ ಸೇರಿದಂತೆ ಒಂಬತ್ತು ರಾಜ್ಯಗಳ ವಿಧಾನಸಭೆ ಚುನಾವಣೆಯ ಹೊಸ್ತಿಲಿನಲ್ಲಿ ಮಂಡಿಸಿರುವ ಬಜೆಟ್‌ನಲ್ಲಿ, ಮತ ಸೆಳೆಯಬಹುದಾದ ಹತ್ತು ಹಲವು ಜನಪ್ರಿಯ ಯೋಜನೆಗಳನ್ನು ಸಂಭ್ರಮದಿಂದ ಘೋಷಿಸಿದ್ದಾರೆ. ಲೋಕಸಭೆಯಲ್ಲಿ ಬುಧವಾರ ಮಂಡನೆಯಾದ ಬಜೆಟ್‌ನಲ್ಲಿ, 'ಇದು ಅಮೃತ ಕಾಲದ ಮೊದಲ ಬಜೆಟ್. ವಿಶ್ವವು ಭಾರತೀಯ ಆರ್ಥಿಕತೆಯನ್ನು ಪ್ರಕಾಶಮಾನವಾದ ನಕ್ಷತ್ರವೆಂದು ಗುರುತಿಸಿದೆ' ಎಂದು ಬಣ್ಣಿಸಿದ್ದಾರೆ. ಬೆಲೆ ಏರಿಕೆ ಹಾಗೂ ನಿರುದ್ಯೋಗ ಸಮಸ್ಯೆಯಿಂದ ಬಸವಳಿದಿರುವ ಜನಸಮುದಾಯವನ್ನು ಸಂತೃಪ್ತಿಪಡಿಸುವ ಹಲವು ಉಪಕ್ರಮಗಳನ್ನು ಘೋಷಿಸಿದ್ದಾರೆ. ಅದೇ ವೇಳೆ, ಕೋವಿಡ್ ಅಲೆಯಿಂದಾಗಿ ಸಂಕಷ್ಟಕ್ಕೆ ಸಿಲುಕಿದ್ದ ಮಧ್ಯಮ ವರ್ಗ ಹಾಗೂ ಬಡವರಿಗೆ ನೀಡುತ್ತಿದ್ದ ಹಲವು ಸಬ್ಸಿಡಿಗಳ ಮೊತ್ತದಲ್ಲಿ ಕಡಿತ ಮಾಡುವುದಾಗಿ ಪ್ರಕಟಿಸಿದ್ದಾರೆ. ಅಲ್ಪಸಂಖ್ಯಾತ ವ್ಯವಹಾರಗಳ ಸಚಿವಾಲಯಕ್ಕೆ ಮೀಸಲಿಟ್ಟಿರುವ ಅನುದಾನವು ಶೇ 38ರಷ್ಟು ಕಡಿಮೆ ಆಗಿದೆ.

2024ರ ಲೋಕಸಭಾ ಚುನಾವಣೆಗೆ ಮುನ್ನ ಕೊನೆಯ ಪೂರ್ಣ ಪ್ರಮಾಣದ ಬಜೆಟ್ ಮಂಡಿಸಿದ ಅವರು, ಮಧ್ಯಮ ವರ್ಗದ ಜನರಿಗೆ ಆದಾಯ ತೆರಿಗೆ ಪಾವತಿಯಲ್ಲಿ ನಿರಾಳತೆ ಒದಗಿಸುವ ಯತ್ನ ಮಾಡಿದ್ದಾರೆ. ಹೊಸ ತೆರಿಗೆ ಯೋಜನೆಯನ್ನು ಆಯ್ಕೆ ಮಾಡಿಕೊಂಡಿರುವವರಿಗೆ ಸಾಕಷ್ಟು ವಿನಾಯಿತಿಗಳನ್ನು ಪ್ರಕಟಿಸುವ ಮೂಲಕ, ಜನರು ಹಳೆಯ ಯೋಜನೆಯಿಂದ ಹೊಸ ಯೋಜನೆಯನ್ನು ಅನಿವಾರ್ಯವಾಗಿ ಆಯ್ಕೆ ಮಾಡಿಕೊಳ್ಳಲು ಭೂಮಿಕೆ ಸಿದ್ಧಪಡಿಸಿದ್ದಾರೆ.

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಬುಧವಾರ ಬಜೆಟ್ ಮಂಡಿಸಿದರು –ಪಿಟಿಐ ಚಿತ್ರ

2020ರಲ್ಲಿ ಪರಿಚಯಿಸಿರುವ ಹೊಸ ತೆರಿಗೆ ಯೋಜನೆಯನ್ನು ಆಯ್ಕೆ ಮಾಡಿಕೊಳ್ಳಲು ಹಲವು ಉತ್ತೇಜನಗಳನ್ನು ನೀಡಲಾಗಿದೆ. ವಾರ್ಷಿಕ ₹7 ಲಕ್ಷ ಆದಾಯ ಹೊಂದಿರುವವರು ಹೊಸ ತೆರಿಗೆ ಪದ್ಧತಿ ಆಯ್ಕೆ ಮಾಡಿಕೊಂಡರೆ ಏಪ್ರಿಲ್ 1ರ ನಂತರ ಯಾವುದೇ ತೆರಿಗೆ ಪಾವತಿಸಬೇಕಿಲ್ಲ. ಜತೆಗೆ, ₹50 ಸಾವಿರ ಸ್ಟ್ಯಾಂಡರ್ಡ್ ಡಿಡಕ್ಷನ್ ಸಹ ದೊರಕಲಿದೆ. ತೆರಿಗೆ ಹಂತಗಳನ್ನು ಐದಕ್ಕೆ ಇಳಿಸಲಾಗಿದೆ. ಹಳೆಯ ತೆರಿಗೆ ಯೋಜನೆ ಪ್ರಕಾರ, ₹5 ಲಕ್ಷಗಳವರೆಗೆ ವಾರ್ಷಿಕ ಆದಾಯ ಹೊಂದಿರುವ ವ್ಯಕ್ತಿ ಯಾವುದೇ ತೆರಿಗೆ ಪಾವತಿಸಬೇಕಿಲ್ಲ. 'ಈ ಪ್ರಸ್ತಾವಿತ ಬದಲಾವಣೆಗಳು ಹೊಸ ಯೋಜನೆ ಆಯ್ಕೆ ಮಾಡುವ ಎಲ್ಲ ತೆರಿಗೆ ಪಾವತಿದಾರರಿಗೆ ದೊಡ್ಡ ನಿರಾಳತೆ ಒದಗಿಸಲಿದೆ' ಎಂದು ಸಚಿವರು ಹೇಳಿಕೊಂಡಿದ್ದಾರೆ.

ಬಹುಸಂಖ್ಯೆಯ ತೆರಿಗೆ ಪಾವತಿದಾರರು ಈಗಲೂ ನೆಚ್ಚಿಕೊಂಡಿರುವ ಹಳೆಯ ಯೋಜನೆಯಲ್ಲಿ ಯಾವುದೇ ಮಾರ್ಪಾಡು ಮಾಡಿಲ್ಲ. ವೇತನದಾರರನ್ನು ಹೊರತುಪಡಿಸಿ ಯಾವುದೇ ತೆರಿಗೆದಾರರು ಒಮ್ಮೆ ಹೊಸ ಯೋಜನೆ ಆಯ್ಕೆ ಮಾಡಿದ ನಂತರ ಹಳೆಯ ಯೋಜನೆಗೆ ಮರಳುವಂತಿಲ್ಲ. ಹೊಸ ಯೋಜನೆಯಲ್ಲಿ ನಿಗದಿತ ಕಡಿತ ₹52,500 ಹಾಗೂ ನಿವೃತ್ತಿ ಪ್ರಯೋಜನಗಳನ್ನು ಬಿಟ್ಟು ಬೇರೆ ಕಡಿತಗಳ ಸೌಲಭ್ಯ ದೊರಕುವುದಿಲ್ಲ.

'ಹೊಸ ತೆರಿಗೆ ಯೋಜನೆ ಆಯ್ಕೆ ಮಾಡಿಕೊಂಡರೆ ₹9 ಲಕ್ಷ ವಾರ್ಷಿಕ ಆದಾಯ ಹೊಂದಿರುವ ವ್ಯಕ್ತಿ ₹45,000 ತೆರಿಗೆ ಪಾವತಿಸಬೇಕು. ಇದು ಆಕೆ ಅಥವಾ ಆತನ ಆದಾಯದ ಶೇ 5ರಷ್ಟು ಮಾತ್ರ. ಇದರಿಂದ ಅವರು ಈಗ ಪಾವತಿಸಬೇಕಿರುವ ಮೊತ್ತದ ಶೇ 25ರಷ್ಟು ಕಡಿತವಾಗಲಿದೆ. ಅದೇ ರೀತಿ, ₹15 ಲಕ್ಷ ಆದಾಯ ಹೊಂದಿರುವ ವ್ಯಕ್ತಿ ₹1.5 ಲಕ್ಷ ಅಥವಾ ಆದಾಯದ ಶೇ 10ರಷ್ಟು ತೆರಿಗೆ ಪಾವತಿಸಬೇಕಾಗುತ್ತದೆ' ಎಂದು ಸಚಿವರು ವಿವರಿಸಿದ್ದಾರೆ.

ಜಾಗತಿಕ ಆರ್ಥಿಕ ಹಿಂಜರಿತದ ಲಕ್ಷಣಗಳು ಕಾಣಿಸಿಕೊಂಡಿರುವ ಹೊತ್ತಿನಲ್ಲಿ ಉದ್ಯೋಗ ಸೃಷ್ಟಿಗೆ 'ಬೂಸ್ಟರ್ ಡೋಸ್' ನೀಡಲು ಬಜೆಟ್‌ನಲ್ಲಿ ಪ್ರಯತ್ನಿಸಲಾಗಿದೆ. ಈ ಸಲ ಬಂಡವಾಳ ವೆಚ್ಚವನ್ನು ₹10 ಲಕ್ಷ ಕೋಟಿಗೆ ಹೆಚ್ಚಿಸಲಾಗಿದೆ.

7ನೇ ಪುಟ ನೋಡಿ

ಯಾವುದಕ್ಕೆ ಕತ್ತರಿ?

- ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಅನುದಾನ ₹29 ಸಾವಿರ ಕೋಟಿ ಕಡಿಮೆ
- ಆಹಾರಕ್ಕೆ ನೀಡುವ ಸಬ್ಸಿಡಿ ಪ್ರಮಾಣ 2022-23 ಕ್ಕಿಂತ ₹90 ಸಾವಿರ ಕೋಟಿಗಳಷ್ಟು ಕಡಿಮೆಯಾಗಿದೆ. (2022-23ರಲ್ಲಿ ₹2.87 ಲಕ್ಷ ಕೋಟಿ ಇತ್ತು. ಈ ವರ್ಷ ₹1.97 ಲಕ್ಷ ಕೋಟಿಗೆ ಇಳಿದಿದೆ)
- ರಸಗೊಬ್ಬರದ ಮೇಲಿನ ಸಬ್ಸಿಡಿ ಪ್ರಮಾಣ ₹50 ಸಾವಿರ ಕೋಟಿ ಕಡಿಮೆ
- ಕೈಗಾರಿಕಾ ಅಭಿವೃದ್ಧಿಗೆ ಕಳೆದ ಸಾಲಿನಲ್ಲಿ ₹53 ಸಾವಿರ ಕೋಟಿ ಇಡಲಾಗಿತ್ತು. ಈ ವರ್ಷ ₹48 ಸಾವಿರ ಕೋಟಿ ಆಗಿದೆ
- ಅಲ್ಪಸಂಖ್ಯಾತ ಕಲ್ಯಾಣ ಸಚಿವಾಲಯಕ್ಕೆ 2022–23ರಲ್ಲಿ ₹5,020 ಕೋಟಿ ಅನುದಾನ ಇತ್ತು. ಈ ವರ್ಷ ₹3,097 ಕೋಟಿ ನೀಡಲಾಗಿದೆ (ಇಳಿಕೆ ಶೇ38)
- ಗ್ರಾಮೀಣಾಭಿವೃದ್ಧಿ ಸಚಿವಾಲಯದ ಅನುದಾನವನ್ನು ಶೇ 13ರಷ್ಟು ಕಡಿತ ಮಾಡಲಾಗಿದ್ದು, ₹1.81 ಲಕ್ಷ ಕೋಟಿ ಯಿಂದ ₹1.57 ಲಕ್ಷ ಕೋಟಿಗೆ ಇಳಿಕೆ ಮಾಡಲಾಗಿದೆ
- ಪೋಷಣ್ ಅಭಿಯಾನದ ಅನುದಾನವನ್ನು ₹12,800 ಕೋಟಿಯಿಂದ ₹11,600 ಕೋಟಿಗೆ ಇಳಿಸಲಾಗಿದೆ

ಸಂಪಾದಕೀಯ 6

ಬಜೆಟ್ ವಿಶೇಷ ಪುಟಗಳು 8,9,10,11

ತುಟ್ಟಿ

- ಚಿನ್ನದ ಗಟ್ಟಿಯಿಂದ ಮಾಡಿದ ಕಲಾಕೃತಿಗಳು
- ಸಿಗರೇಟ್
- ಬೆಳ್ಳಿ
- ಆಮದು ಎಲೆಕ್ಟ್ರಾನಿಕ್ ಚಿಮಣಿ
- ಆಮದು ಸೈಕಲ್‌ಗಳು ಮತ್ತು ಆಟಿಕೆಗಳು
- ಆಮದು ಕಾರುಗಳು, ಆಮದು ವಿದ್ಯುತ್‌ಚಾಲಿತ ಕಾರುಗಳು

ಅಗ್ಗ

- ಮೊಬೈಲ್ ಫೋನ್ ಬಿಡಿಭಾಗಗಳು
- ಟಿ.ವಿ ಪ್ಯಾನೆಲ್ ಬಿಡಿಭಾಗಗಳು
- ವಿದ್ಯುತ್ ಚಾಲಿತ ವಾಹನಗಳ ತಯಾರಿಕೆಯಲ್ಲಿ ಬಳಸುವ ಕಚ್ಚಾವಸ್ತುಗಳು
- ಲಿ-ಅಯಾನ್ ಬ್ಯಾಟರಿ ತಯಾರಿಕೆಯಲ್ಲಿ ಬಳಸುವ ಯಂತ್ರ
- ಮೀನಿನ ಆಹಾರ ತಯಾರಿಕೆಯಲ್ಲಿ ಬಳಸುವ ಕಚ್ಚಾವಸ್ತುಗಳು

ಹಳೆಯ ತೆರಿಗೆ ಪದ್ಧತಿ

ತೆರಿಗೆ ಹಂತ	ಆದಾಯ	ತೆರಿಗೆ ಪ್ರಮಾಣ (%)	ಸರ್‌ಚಾರ್ಜ್	ಸೆಸ್ (%)	ಒಟ್ಟು ತೆರಿಗೆ ಪ್ರಮಾಣ(%)	ಒಟ್ಟು ತೆರಿಗೆ ಮೊತ್ತ (ಗರಿಷ್ಠ)
1	₹2.5 ಲಕ್ಷದವರೆಗೆ	-	–	–	–	–
2	₹2.5 ಲಕ್ಷದಿಂದ ₹5 ಲಕ್ಷದವರೆಗೆ	5	–	0.20	5.20	₹13,000
3	₹5 ಲಕ್ಷದಿಂದ ₹10 ಲಕ್ಷದವರೆಗೆ	20	–	0.80	20.80	₹1.17 ಲಕ್ಷ
4	₹10 ಲಕ್ಷದಿಂದ ₹50 ಲಕ್ಷದವರೆಗೆ	30	–	1.20	31.20	₹13.65 ಲಕ್ಷ

ನೂತನ ತೆರಿಗೆ ಪದ್ಧತಿ

ತೆರಿಗೆ ಹಂತ	ಆದಾಯ	ತೆರಿಗೆ ಪ್ರಮಾಣ (%)	ಸರ್‌ಚಾರ್ಜ್	ಸೆಸ್ (%)	ಒಟ್ಟು ತೆರಿಗೆ ಪ್ರಮಾಣ (%)	ಒಟ್ಟು ತೆರಿಗೆ ಮೊತ್ತ (ಗರಿಷ್ಠ)
1	₹3 ಲಕ್ಷದವರೆಗೆ	–	–	–	–	–
2	₹3 ಲಕ್ಷದಿಂದ ₹6 ಲಕ್ಷದವರೆಗೆ	5	–	0.20	5.20	-
3	₹6 ಲಕ್ಷದಿಂದ ₹9 ಲಕ್ಷದವರೆಗೆ *	10	–	0.40	10.40	₹46,800
4	₹9 ಲಕ್ಷದಿಂದ ₹12 ಲಕ್ಷದವರೆಗೆ	15	–	0.60	15.60	₹93,600
5	₹12 ಲಕ್ಷದಿಂದ ₹15 ಲಕ್ಷದವರೆಗೆ	20	–	0.80	20.80	₹1.56 ಲಕ್ಷ
6	₹15 ಲಕ್ಷದಿಂದ ₹50 ಲಕ್ಷದವರೆಗೆ	30	–	1.20	31.20	₹12.48 ಲಕ್ಷ

*₹ 7ಲಕ್ಷದವರೆಗೆ ತೆರಿಗೆ ವಿನಾಯಿತಿ ಅನ್ವಯವಾಗುತ್ತದೆ.

ಮಾಹಿತಿ: ಡಾ.ಸಿ.ಎ.ನಾಗರಾಜ್ ಆಚಾರ್, ಕಾನೂನು ಮತ್ತು ಆರ್ಥಿಕ ತಜ್ಞರು

ಇದು ಐತಿಹಾಸಿಕ ಬಜೆಟ್. 'ಅಮೃತ ಕಾಲ'ದಲ್ಲಿ ಮಂಡಿಸಲಾಗಿರುವ ಮೊದಲ ಆಯವ್ಯಯವು ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ರೂಪಿಸುವ ಸಂಕಲ್ಪಕ್ಕೆ ಹಾಗೂ ಮಹತ್ವಾಕಾಂಕ್ಷೆಯ ಸಮಾಜ ನಿರ್ಮಾಣದ ಕನಸಿಗೆ ಭದ್ರ ಬುನಾದಿ ಹಾಕಿಕೊಟ್ಟಿದೆ. ಎಲ್ಲ ಕಾಲದಲ್ಲೂ ಮಧ್ಯಮ ವರ್ಗದವರ ಜೊತೆ ನಿಲ್ಲುವ ನಮ್ಮ ಸರ್ಕಾರ ಅವರಿಗೆ ದೊಡ್ಡ ಮಟ್ಟದ ತೆರಿಗೆ ವಿನಾಯಿತಿ ನೀಡಿದೆ. ಬಡಗಿಗಳು, ಅಕ್ಕಸಾಲಿಗರು, ಕುಂಬಾರರು, ಶಿಲ್ಪಿಗಳ ಶ್ರಮಕ್ಕೆ ಗೌರವ ಸಲ್ಲಿಸುವ ಸಲುವಾಗಿ ಇದೇ ಮೊದಲ ಬಾರಿಗೆ ಹಲವು ಯೋಜನೆಗಳನ್ನು ಜಾರಿಗೊಳಿಸಲಾಗಿದೆ

ನರೇಂದ್ರ ಮೋದಿ, ಪ್ರಧಾನಿ

ಇದು ದೂರದೃಷ್ಟಿ ಇಲ್ಲದ ಬಜೆಟ್. ದೇಶದ ಜನ ನಿರಂತರವಾಗಿ ಬಿಜೆಪಿ ಮೇಲಿನ ನಂಬಿಕೆ ಕಳೆದುಕೊಳ್ಳುತ್ತಿರುವುದಕ್ಕೆ ಇದು ನಿದರ್ಶನ. ನಿರುದ್ಯೋಗ ಸಮಸ್ಯೆ ನಿವಾರಣೆ ಹಾಗೂ ಅಗತ್ಯ ವಸ್ತುಗಳ ಬೆಲೆ ತಗ್ಗಿಸುವುದಕ್ಕೆ ಬಜೆಟ್‌ನಲ್ಲಿ ಯಾವುದೇ ಕ್ರಮ ಕೈಗೊಂಡಿಲ್ಲ. ದಲಿತರು, ಬುಡಕಟ್ಟು ಸಮುದಾಯದವರು ಹಾಗೂ ಹಿಂದುಳಿದ ವರ್ಗದವರ ಶ್ರೇಯೋಭಿವೃದ್ಧಿಗೆ ಒತ್ತು ನೀಡಿಲ್ಲ. ಹೀಗಾದರೆ ಬಡವರ ಕಥೆ ಏನು? ರೈತ ವಿರೋಧಿ ಮೋದಿ ಸರ್ಕಾರವು ಬಜೆಟ್‌ನಲ್ಲಿ ಈ ವರ್ಗಕ್ಕೆ ಯಾವುದೇ ಕೊಡುಗೆ ನೀಡಿಲ್ಲ

ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಅಧ್ಯಕ್ಷ

ಭವಿಷ್ಯದ ದೃಷ್ಟಿಕೋನವನ್ನು ಬಜೆಟ್ ಹೊಂದಿಲ್ಲ. ಇದು ಅವಕಾಶವಾದಿತನದಿಂದ ಕೂಡಿದೆ ಮತ್ತು ಜನವಿರೋಧಿ, ಬಡವರ ವಿರೋಧಿಯಾಗಿದೆ. ಕೇವಲ ಒಂದು ವರ್ಗದ ಜನರಿಗೆ ಮಾತ್ರ ಅನುಕೂಲವಾಗುವಂತಿದೆ. ದೇಶದ ನಿರುದ್ಯೋಗ ಸಮಸ್ಯೆಗೆ ಬಜೆಟ್‌ನಲ್ಲಿ ಪರಿಹಾರವಿಲ್ಲ. 2024ರ ಲೋಕಸಭೆ ಚುನಾವಣೆಯನ್ನು ಗಮನದಲ್ಲಿರಿಸಿಕೊಂಡು ಇದನ್ನು ರೂಪಿಸಲಾಗಿದೆ. ಹೊಸ ತೆರಿಗೆ ಹಂತದಿಂದ ಯಾರಿಗೂ ಪ್ರಯೋಜನವಿಲ್ಲ. ಈ ಬಜೆಟ್‌ನಲ್ಲಿ ಯಾವ ಆಶಾಕಿರಣವೂ ಗೋಚರಿಸುತ್ತಿಲ್ಲ

ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ

IN OUR HEARTS FOREVER

H VENKATESH REDDY
16-09-1950 – 01-02-2023
Chairman A.V.R Group
EX COUNCILLOR FORMER BJP LEADER

Passed away on 01st February 2023

His mortal remains will be kept for viewing on Thursday 02-02-2023 between 8:00 AM to 11:30 AM

Cremation will be held thereafter at 12:00 PM at Kundlahalli Gate Residence

Dearly Missed & Fondly Remembered by
Family and Friends

ಕಾರಿನ ಮೇಲೆ ಬಿದ್ದ ಕಾಂಕ್ರೀಟ್ ಲಾರಿ: ತಾಯಿ, ಮಗಳು ಸಾವು

ಪ್ರಜಾವಾಣಿ ವಾರ್ತೆ

ಆನೇಕಲ್: ಕಗ್ಗಲಿಪುರ ಕ್ರಾಸ್ ಬಳಿ ಬುಧವಾರ ಬೆಳಿಗ್ಗೆ ರಸ್ತೆಯಲ್ಲಿ ಹೊರಟಿದ್ದ ಕಾರಿನ ಮೇಲೆ ಎದುರಿನಿಂದ ಬಂದ ಕಾಂಕ್ರೀಟ್ ಲಾರಿಯೊಂದು ಉರುಳಿಬಿದ್ದ ಬಿದ್ದ ಪರಿಣಾಮ ಕಾರಿನಲ್ಲಿದ್ದ ತಾಯಿ ಮತ್ತು ಮಗಳು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ಕಾರಿನಲ್ಲಿದ್ದ ಗಾಯತ್ರಿ ಕುಮಾರ್ ಮತ್ತು ಅವರ ಮಗಳು ಸುಮತಾ ಕುಮಾರ್ ಮೃತ ದುರ್ದೈವಿಗಳು. ಬನ್ನೇರು ಘಟ್ಟದ ಸಮೀಪದಲ್ಲಿರುವ ಗ್ರೀನ್ ಹುಡ್ ಹೈ ಶಾಲೆಯಲ್ಲಿ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಮಗಳು ಸುಮತಾಳನ್ನು ತಾಯಿ ಗಾಯತ್ರಿ ತಮ್ಮ ಕಾರಿನಲ್ಲಿ ಶಾಲೆಗೆ ಬಿಡಲು ಹೊರಟಿದ್ದರು.

3A ಪುಟ ನೋಡಿ

ಶ್ರೀನಗರದಲ್ಲಿ ಹಿಮಕುಸಿತ: ಇಬ್ಬರು ಪ್ರವಾಸಿಗರ ಸಾವು 14

ಚಿನಕುರಳಿ

ಪ್ರಕಾಶ್ ಶೆಟ್ಟಿ

ಐಎಫ್‌ಎಸ್ ಅಧಿಕಾರಿಗಳ ವರ್ಗಾವಣೆ

ಬೆಂಗಳೂರು: ಮಂಗಳೂರು ವೃತ್ತದ ಮುಖ್ಯಅರಣ್ಯ ಸಂರಕ್ಷಣಾಧಿಕಾರಿ ಪ್ರಕಾಶ್ ಎಸ್. ನೆಟಲ್ಕರ್ ಅವರನ್ನು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಕರ್ನಾಟಕ ಗೇರುಬೀಜ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿ ವರ್ಗಾವಣೆ ಮಾಡಲಾಗಿದೆ. ಬೆಂಗಳೂರು ಜಂಗಲ್ ಲಾಡ್ಜ್ಸ್ ಆ್ಯಂಡ್ ರೆಸಾರ್ಟ್ ನಿರ್ದೇಶಕಿ (ನಿರ್ವಹಣೆ), ಅರಣ್ಯ ಉಪ ಸಂರಕ್ಷಣಾಧಿಕಾರಿ ಎನ್‌.ಕೆ. ನಿರ್ಮಲ ಅವರನ್ನು ಬೆಂಗಳೂರು ದೊರೆಸಾನಿಪಾಳ್ಯ (ಸಾಮಾಜಿಕ ಅರಣ್ಯ ಮತ್ತು ಸಂಶೋಧನೆ) ಉಪ ಅರಣ್ಯ ಸಂರಕ್ಷಣಾಧಿಕಾರಿಯಾಗಿ ನಿಯೋಜಿಸಲಾಗಿದೆ.

PUBLIC NOTICE

Notice is hereby given to the general public that G.B. Global Limited, a company incorporated under the Laws of India and having its registered office at 10th Floor, Dev Plaza, Opp. Andheri Fire Station, S. V. Road, Andheri (West) Mumbai City-400058, India (**'Owner'**) is the sole and absolute owner of the immovable property bearing Plot Nos. SW-49 and SW-50 of Apparel Park II Phase Industrial Area (formed out of properties bearing Survey Nos. 71, 72 & 76), situated at Arehalli-Guddadahalli Village, Kasaba Hobli, Doddaballapura Taluk, Bangalore Rural District, admeasuring 20,267 square meters together with structures/ building constructed thereon (**'Property'**).

The following original documents in connection with the Property (**'Original Documents'**) have been lost/misplaced by the Owner:

(I) Allotment Letter dated 21.12.2006 bearing No. IADB/16240/1615/06-07, issued by the Chief Executive Officer and Executive Member, Karnataka Industrial Area Developmental Board;

(ii) Endorsement dated 19.06.2008 bearing No. IADB/16240/3191/2008-09, issued by the Chief Engineer and Chief Development Officer;

(iii) Possession Certificate dated 29.12.2007 bearing No. IADB/AE/PC-14/14/07-08, issued by the Assistant Engineer, Karnataka Industrial Area Developmental Board;

(iv) Lease Cum Sale Agreement dated 23.06.2008 (Registered as Document No. DBP-1-02046-2008-09, Book-1, stored in C.D. No. DBPD 151, at the office of the Sub-Registrar, Doddaballapura) executed by Karnataka Industrial Area Developmental Board in favour of Mandhana Industries Limited; and

(v) Board Resolution dated 03.01.2008 passed by the Board of Directors of Mandhana Industries Limited.

Despite best efforts, the Owner is unable to trace the aforementioned Original Documents for which a Police Complaint intimating the loss of the Original Documents has been filed with Bengaluru Rural Station, *vide* Lost Report No. 0454015/2023 dated 24.01.2023.

Members of the public are hereby notified that in the event any person/s has/have found/ discovered/ is in custody of the Original Documents, such person/s is/are hereby requested to return the said Original Documents to the undersigned, at the below mentioned address.

Date: 02.02.2023
Place : Bengaluru

Sd/-
Ms. Brijita Prakash, Partner
DSK Legal
Prestige Loka, No. 201, 2nd Floor, No. 7/1 & 7/7,
Brunton Road, Bengaluru – 560025, Tel: 080-69548770

ಕೇಂದ್ರದಿಂದ ಕರ್ನಾಟಕಕ್ಕೆ ಹಂಚಿಕೆ ಆಗಲಿರುವ ತೆರಿಗೆ ಪಾಲಿನ ಮೇಲೆ ಮುಖ್ಯಮಂತ್ರಿ ಕಣ್ಣು

ಮತಬೇಟೆ ‘ಅಸ್ತ್ರ’ವಾಗಿ ರಾಜ್ಯ ಬಜೆಟ್?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬರುವ ರಾಜ್ಯ ವಿಧಾನಸಭೆ ಚುನಾವಣೆ ಗಮನದಲ್ಲಿಟ್ಟು ಮತಬೇಟೆಯ ‘ಅಸ್ತ್ರ’ವಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ 2023-24ನೇ ಸಾಲಿನಲ್ಲಿ ಬಜೆಟ್ ಮಂಡಿಸುವ ಸಾಧ್ಯತೆಯಿದ್ದು, ಕೇಂದ್ರದಿಂದ ಕರ್ನಾಟಕಕ್ಕೆ ಹಂಚಿಕೆ ಆಗಲಿರುವ ತೆರಿಗೆ ಪಾಲು ₹ 37,252 ಕೋಟಿ ಮೇಲೆ ಅವರು ಕಣ್ಣಿಟ್ಟಿದ್ದಾರೆ.

ಮಾರ್ಚ್‌ಗೆ ಅಂತ್ಯಗೊಳ್ಳುವ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಕರ್ನಾಟಕಕ್ಕೆ ಕೇಂದ್ರದಿಂದ ಸಿಗುವ ತೆರಿಗೆ ಪಾಲಿನ ಮೊತ್ತಕ್ಕಿಂತ 2023-24ನೇ ಸಾಲಿನಲ್ಲಿ ಸುಮಾರು ₹ 5 ಸಾವಿರ ಕೋಟಿ ಹೆಚ್ಚು ಸಿಗಲಿದೆ.

ತೆರಿಗೆ ವಿಕೇಂದ್ರೀಕರಣದ ಅಡಿಯಲ್ಲಿ ರಾಜ್ಯಗಳಿಗೆ ₹ 1.02 ಲಕ್ಷ ಕೋಟಿ ಹಂಚಿಕೆ ಮಾಡಲಾಗುವುದು ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅಂದಾಜಿಸಿದ್ದಾರೆ. 15ನೇ ಹಣಕಾಸು ಆಯೋಗವು ನಿಗದಿಪಡಿಸಿದಂತೆ, ಕರ್ನಾಟಕವು ಕೇಂದ್ರದಿಂದ ತೆರಿಗೆ ಪಾಲು ಶೇ 3.647ರಷ್ಟು ಪಡೆಯಲು ಅರ್ಹವಾಗಿದೆ.

ಮುಖ್ಯಾಂಶಗಳು
- **ಕರ್ನಾಟಕಕ್ಕೆ ₹ 37,252 ಕೋಟಿ ತೆರಿಗೆ ಪಾಲು**
- **ರಾಜ್ಯದ ತೆರಿಗೆ ಪಾಲು 2023–24ರಲ್ಲಿ ಏರಿಕೆ ಸಾಧ್ಯತೆ**

ಅದರ ಆಧಾರದಲ್ಲಿ ಕರ್ನಾಟಕಕ್ಕೆ ₹ 37,252 ಕೋಟಿ ಅಂದಾಜಿಸಲಾಗಿದೆ.

ಕರ್ನಾಟಕಕ್ಕೆ 2022-23ನೇ ಸಾಲಿನಲ್ಲಿ ₹ 29,783 ಕೋಟಿ ಸಿಗಬಹುದು ಎಂದು ಕೇಂದ್ರ ಸರ್ಕಾರ ಮೊದಲು ಅಂದಾಜಿಸಿತ್ತು. ಪರಿಷ್ಕೃತ ಅಂದಾಜಿನ ಪ್ರಕಾರ ಕರ್ನಾಟಕಕ್ಕೆ ಪ್ರಸಕ್ತ ವರ್ಷ ₹ 34,596 ಕೋಟಿ ಸಿಗಲಿದೆ. ‘ಫೆಬ್ರುವರಿ ಮತ್ತು ಮಾರ್ಚ್ ತಿಂಗಳಲ್ಲಿ ತೆರಿಗೆ ಸಂಗ್ರಹ ಪ್ರಮಾಣ ಇನ್ನಷ್ಟು ಸುಧಾರಿಸಿದರೆ ಈ ಮೊತ್ತ ಮತ್ತಷ್ಟು ಹೆಚ್ಚಬಹುದು’ ಎಂದು ಆಯವ್ಯಯ ಮತ್ತು ನೀತಿ ಅಧ್ಯಯನ ಕೇಂದ್ರದ ಮಧುಸೂಧನ್ ರಾವ್ ತಿಳಿಸಿದರು.

ಹೆಚ್ಚಳವಾದ ತೆರಿಗೆ ಪಾಲು ಚುನಾವಣಾ ಬಜೆಟ್ ಸಿದ್ಧಪಡಿಸುತ್ತಿರುವ, ಹಣಕಾಸು ಖಾತೆಯನ್ನೂ ಹೊಂದಿರುವ ಮುಖ್ಯಮಂತ್ರಿಗೆ ಅನುಕೂಲ ಆಗಬಹುದು. ಆದರೆ, ಸಾಲ ಮರುಪಾವತಿಯೂ ಸೇರಿದಂತೆ ಹೆಚ್ಚುತ್ತಿರುವ ಬದ್ಧ ವೆಚ್ಚವನ್ನು ಮುಖ್ಯಮಂತ್ರಿ ಹೇಗೆ ನಿಭಾಯಿಸುತ್ತಾರೆ ಎಂಬುವುದನ್ನು ಕಾದು ನೋಡಬೇಕಾಗಿದೆ.

ಮಾರ್ಚ್ 2022ಕ್ಕೆ ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬದ್ಧ ವೆಚ್ಚವು ರಾಜ್ಯದ ಆದಾಯದ ಸುಮಾರು ಶೇ 90ರಷ್ಟಕ್ಕೆ ತಲುಪಿದೆ. ಅದರರ್ಥ, ಸರ್ಕಾರದ ಆದಾಯದಲ್ಲಿ ಶೇ 90% ಸಂಬಳ, ಪಿಂಚಣಿ, ಸಹಾಯಧನ ಇತ್ಯಾದಿಗಳಿಗೆ ವೆಚ್ಚವಾಗುತ್ತದೆ.

ಅಲ್ಲದೆ, ಕರ್ನಾಟಕದ ಸಾಲದ ಪ್ರಮಾಣವೂ ಹೆಚ್ಚುತ್ತಿದೆ. 2023-24ನೇ ಆರ್ಥಿಕ ವರ್ಷದಲ್ಲಿ ರಾಜ್ಯದ ಒಟ್ಟು ಹೊಣೆಗಾರಿಕೆ ₹ 5.91 ಲಕ್ಷ ಕೋಟಿ ಆಗಬಹುದೆಂದು ಅಂದಾಜಿಸಲಾಗಿದೆ. ಕಳೆದ ಸಾಲಿನ ಬಜೆಟ್‌ನಲ್ಲಿ (2022-23) ರಾಜ್ಯ ₹ 72 ಸಾವಿರ ಕೋಟಿ ಸಾಲ ಪಡೆಯಲಿದೆ ಎಂದು ಬಜೆಟ್‌ನಲ್ಲಿ ತಿಳಿಸಲಾಗಿದೆ. ಹೀಗೆ ಪಡೆದ ಸಾಲದ ಮರುಪಾವತಿಗೆ ಮುಖ್ಯಮಂತ್ರಿ ₹ 41,572.24 ಕೋಟಿ ಮೀಸಲಿಟ್ಟಿದ್ದಾರೆ. ಆ ಮೊತ್ತದಲ್ಲಿ ಅಸಲು ₹ 12,632.70 ಕೋಟಿ, ಬಡ್ಡಿ ಮೊತ್ತ ₹ 28,939.54 ಕೋಟಿ ಆಗಿದೆ.

ಉಪನಗರ ರೈಲು: ₹450 ಕೋಟಿ

ಬೆಂಗಳೂರು: ಉಪನಗರ ರೈಲು ಯೋಜನೆಗೆ ಕೇಂದ್ರ ಬಜೆಟ್‌ನಲ್ಲಿ ₹ 450 ಕೋಟಿ ಮೀಸಲಿಡಲಾಗಿದೆ.

`ಒಟ್ಟಾರೆ ₹1,350 ಕೋಟಿಯಲ್ಲಿ ₹450 ಕೋಟಿ ನೇರವಾಗಿ ಬಜೆಟ್‌ನಲ್ಲಿ ಘೋಷಿಸಲಾಗಿದೆ. ಬಾಕಿ ₹900 ಕೋಟಿಗಳನ್ನು ಆಂತರಿಕ ಹೆಚ್ಚುವರಿ ಬಜೆಟ್ ಸಂಪನ್ಮೂಲದ (ಐಇಬಿಆರ್) ಮೂಲಕ ಸಂಗ್ರಹಿಸಲು ಅವಕಾಶ ಕಲ್ಪಿಸಿದೆ. ಯೋಜನೆ ಘೋಷಣೆ ನಂತರ ಬಜೆಟ್‌ನಲ್ಲಿ ದೊಡ್ಡ ಮೊತ್ತವನ್ನು ಇಡಲಾಗಿದೆ. 148 ಕಿಲೋ ಮೀಟರ್ ಉದ್ದದ ಉಪನಗರ ರೈಲು ಯೋಜನೆಗೆ ₹15,767 ಕೋಟಿ ವೆಚ್ಚವನ್ನು ಅಂದಾಜಿಸಲಾಗಿದೆ.

ನೈಋತ್ಯ ರೈಲ್ವೆ G20

ಇ–ಟೆಂಡರು ಸೂಚನೆ ಸಂ.: **ALAT_KYND_KRYP_DDHI**, ದಿನಾಂಕ: 23.01.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಬೆಂಗಳೂರು ವಿಭಾಗದಲ್ಲಿ ತುಮಕೂರು–ರಾಯದುರ್ಗ ನಡುವೆ ಹೊಸ ಲೈನ್ ಕ್ರಾಸಿಂಗ್ ನಿಲ್ದಾಣಗಳಿಗೆ ಸಂಬಂಧಿಸಿದಂತೆ ಅವುಲದಟ್ಲ, ಕಲ್ಯಾಣದುರ್ಗ, ಕದಿರಿದೇವರಪಲ್ಲಿ ಮತ್ತು ದೊಡ್ಡಹಳ್ಳಿ ನಿಲ್ದಾಣಗಳಲ್ಲಿ ಎಲೆಕ್ಟ್ರಾನಿಕ್ ಇಂಟರ್ ಲಾಕಿಂಗ್ ಜೊತೆಗೆ ಹೊರಾಂಗಣ ಸಿಗ್ನಲಿಂಗ್ ಮತ್ತು ದೂರಸಂಪರ್ಕ ವ್ಯವಸ್ಥೆಗಳ ಪೂರೈಕೆ.	ರೂ. 15,66,93,471.37

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **14.02.2023, 11:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಸಿಗ್ನಲ್ & ದೂರಸಂಪರ್ಕ ಇಂಜಿನಿಯರ್/ ನಿರ್ಮಾಣ/ಬೆಂಗಳೂರು ದಂಡು

PUB/638/AAD/PRB/SWR/2022-23

S.W.Railways SWRRLY SWRRLY

ನೈಋತ್ಯ ರೈಲ್ವೆ G20

ಇ–ಟೆಂಡರು ಸೂಚನೆ ಸಂ.: **Provision_SP_SBC_MWM_YPR**, ದಿನಾಂಕ: 16.02.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಕೆಎಸ್‌ಆರ್ ಬೆಂಗಳೂರು, ಮಲ್ಲೇಶ್ವರಂ, ಯಶವಂತಪುರ ವಿಭಾಗದ ನಡುವೆ, ಎಸ್‌ಪಿ ಯ ಪೂರೈಕೆಗೆ ಅನುಕೂಲವಾಗುವಂತೆ ಎಸ್&ಟಿ ಕಾಮಗಾರಿ.	ರೂ. 12.27.501.01

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **16.02.2023, 15:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಸಿಗ್ನಲ್ & ದೂರಸಂಪರ್ಕ ಇಂಜಿನಿಯರ್/ ಬೆಂಗಳೂರು

PUB/639/AAD/PRB/SWR/2022-23

S.W.Railways SWRRLY SWRRLY

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ–562101
ದೂ. ಸಂ: ಕಛೇರಿ: 08156–295427, ಫ್ಯಾಕ್ಸ್: 08156 295427, ಇಮೇಲ್ eemidcbpura@gmail.com
ಅಲ್ಪಾವಧಿ ಟೆಂಡರ್ ಅಧಿಸೂಚನೆ
ಸಂಖ್ಯೆ : ಕಾಸಬ/ತಾಂಶಾ/ಸ.ಇಂ/ ಟೆಂಡರ್ ಪ್ರಕಟಣೆ ಸಂಖ್ಯೆ: 18/2022–23, ದಿನಾಂಕ : 31/01/2023
2702 ನೀರು ಕೆರೆಗಳ ದುರಸ್ತಿ ಮತ್ತು ನಿರ್ವಹಣೆ (ನಿರ್ವಹಣೆ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ ರವರಿಂದ ಶಿಡ್ಲಘಟ್ಟ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ **2702 ನೀರು ಕೆರೆಗಳ ದುರಸ್ತಿ ಮತ್ತು ನಿರ್ವಹಣೆ (ನಿರ್ವಹಣೆ) ಅಡಿಯಲ್ಲಿ** ಅನುಮೋದನೆಯಾಗಿರುವ ಕಾಮಗಾರಿಗಳಿಗೆ ಕೆ.ಡಬ್ಲೂ 1 ನಿಭಂದನೆಗೊಳಪಟ್ಟಂತೆ ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಮೂಲಕ ಏಕ ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ 1, 2 ಮತ್ತು 3 ನೇ ದರ್ಜೆ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯಲ್ಲಿ ನೊಂದಾಯಿತ) ಅರ್ಹ ಗುತ್ತಿಗೆದಾರರಿಂದ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. **ಇ.ಎಂ.ಡಿ ಮೊತ್ತ ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಇದ್ದಂತೆ.** ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ 13/02/2023 ಸಾಯಂಕಾಲ 4.00 ಗಂಟೆಯವರೆಗೆ ಟೆಂಡರ್ ತೆರೆಯುವ ದಿನಾಂಕ : 16/02/2023 ಬೆಳಿಗ್ಗೆ 11.00 ಗಂಟೆಯ ನಂತರ (ಸಾಧ್ಯವಾದಲ್ಲಿ) ಸದರಿ ಕಾಮಗಾರಿಯ ಟೆಂಡರ್‌ಗಳ ಮೊತ್ತ ಅಥವಾ ಇ.ಎಂ.ಡಿ ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಇ–ಪ್ರಕ್ಯೂರ್‌ಮೆಂಟ್‌ನ ಬಿಡ್ ಡಾಕ್ಯೂಮೆಂಟ್‌ನಲ್ಲಿ ನಮೂದಿಸಿರುವ ಮೊತ್ತಗಳು ಅಂತಿಮವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ – 08156–295427 ಮತ್ತು ಇ–ಪ್ರೋಕ್ಯೂರ್‌ಮೆಂಟ್ ಸಹಾಯವಾಣಿ ದೂರವಾಣಿ ಸಂಖ್ಯೆ: 080–25501216 ಮತ್ತು 080–25501227 ರಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

‘ನಿಜ ಭಾರತ ಪ್ರತಿನಿಧಿಸಿದ ಏಕೈಕ ಆತ್ಮ ಗಾಂಧೀಜಿ’

‘ಗಾಂಧಿ ಸ್ಮರಣೆ – ಗಾಂಧಿ ನಮನ’: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭಾರತದ ಬಗೆಗಿನ ಅಭಿಪ್ರಾಯ ಬದಲಿಸಿದ್ದು ಗಾಂಧೀಜಿ. ಇಡೀ ಜಗತ್ತಿಗೆ ನಿಜವಾದ ಭಾರತವನ್ನು ಪ್ರತಿನಿಧಿಸಿದ ಏಕೈಕ ಆತ್ಮ ಗಾಂಧೀಜಿ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಣ್ಣಿಸಿದರು.

ವಿವೇಕ ಯುಗ ಮತ್ತು ಗಮ್ಯ ಫೌಂಡೇಷನ್, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಹಾಗೂ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಸಹಯೋಗದೊಂದಿಗೆ ಬುಧವಾರ ವಿಧಾನಸೌಧದ ಮೆಟ್ಟಿಲುಗಳ ಬಳಿ ಆಯೋಜಿಸಿದ್ದ ‘ಗಾಂಧಿ ಸ್ಮರಣ–ಗಾಂಧಿ ನಮನ’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಎರಡನೇ ವಿಶ್ವಯುದ್ಧ ಮುಗಿದು ಎಲ್ಲೆಡೆ ಪ್ರಜಾಪ್ರಭುತ್ವ ಸ್ಥಾಪನೆ ಆಗುತ್ತಿರುವಾಗ ಇಡೀ ವಿಶ್ವವು ಭಾರತದ ಬಗ್ಗೆ ಗೌರವಯುತವಾಗಿ ನಡೆದುಕೊಳ್ಳುವಂತೆ ಮಾಡಿದ್ದು ಮಹಾತ್ಮ ಗಾಂಧೀಜಿ’ ಎಂದು ಸ್ಮರಿಸಿದರು.

‘ಗಾಂಧಿ ಸ್ಮರಣ–ಗಾಂಧಿ ನಮನ’ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿದ್ಯಾರ್ಥಿಗಳತ್ತ ಕೈ ಬೀಸಿದರು. 'ವಿವೇಕಯುಗ ಫೌಂಡೇಷನ್' ಅಧ್ಯಕ್ಷ ಡಾ.ಡಿ.ಎಂ ಹೆಗಡೆ ಇದ್ದರು. –ಪ್ರಜಾವಾಣಿ ಚಿತ್ರ

‘ಗಾಂಧೀಜಿ ಅವರ ಆಚಾರ-ವಿಚಾರಗಳೇ ಅವರ ಬದುಕಾಗಿತ್ತು. ಮಹಾತ್ಮ ಗಾಂಧೀಜಿ ಅವರಿಗೆ ಮಿದುಳು ಮತ್ತು ಹೃದಯ ಒಂದೇ ಇತ್ತು. ಹೃದಯ ಹೇಳುವುದೇ ಅವರ ವಿಚಾರವಾಗಿತ್ತು. ಹೃದಯ ಮಾತಾಡುವ ವಿಚಾರ ಅವರ ಆಚಾರವಾಗಿತ್ತು. ಆ ಆಚಾರ ವಿಚಾರಗಳೇ ಅವರ ಬದುಕಾಗಿತ್ತು. ಅಹಿಂಸೆಯ ಬಗ್ಗೆ ಗಾಂಧೀಜಿ ಗಟ್ಟಿಯಾಗಿ ಪ್ರತಿಪಾದಿಸಿದ್ದರು. ಹಿಂಸೆ ಅತ್ಯಂತ ಹೇಡಿತನದ ಕೆಲಸ. ಅಹಿಂಸೆಯಿಂದ ನಡೆದುಕೊಳ್ಳುವುದು ಅತ್ಯಂತ ಕಷ್ಟದ ಕೆಲಸ. ಗಾಂಧೀಜಿ ಅವರು ಎಲ್ಲವನ್ನೂ ಸಮಚಿತ್ತದಿಂದ ಸ್ವೀಕರಿಸಿ ಜನರಿಗೆ ತಿಳಿಹೇಳಿದರು. ಎಲ್ಲವನ್ನೂ ಮೀರಿ ಬದುಕಿ ತೋರಿಸಿದ್ದು ಗಾಂಧೀಜಿ’ ಎಂದು ವಿವರಿಸಿದರು.

‘ಗಾಂಧೀಜಿಯನ್ನು ಸ್ಮರಿಸಿದರೆ ಅವರಿಗೆ ನಮಿಸಿದಂತೆ. ಅವರ ಜೀವನದಲ್ಲಿ ಎಲ್ಲವೂ ಇದೆ. ಪರಿವರ್ತನೆ ಇದೆ. ತಪ್ಪುಗಳಿವೆ. ತಪ್ಪೊಪ್ಪಿಕೊಂಡಿರುವುದೂ ಇದೆ. ಅವನ್ನು ಸರಿಪಡಿಸಿಕೊಂಡಿದ್ದೂ ಇದೆ. ಅವಮಾನ ಇದೆ. ಹಟವೂ ಇದೆ, ಜಯವೂ ಇದೆ’ ಎಂದು ಹೇಳಿದರು.

ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಡಾ. ಶಿವರಾಜ ಪಾಟೀಲ, ಪ್ರಜಾವಾಣಿ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೆ ಪಿ. ಕೃಷ್ಣ, ವಿವೇಕಯುಗ ಫೌಂಡೇಷನ್ ಅಧ್ಯಕ್ಷ ಡಿ.ಎಂ. ಹೆಗಡೆ ಇದ್ದರು.

ಶರಣರ ಅರ್ಜಿ: ಬೇರೆ ಪೀಠಕ್ಕೆ ವರ್ಗ

ಬೆಂಗಳೂರು: ‘ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ (ಪೊಕ್ಸೊ), ಅತ್ಯಾಚಾರ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆಯಡಿ ಕ್ರಿಮಿನಲ್ ಪ್ರಕರಣ ಎದುರಿಸುತ್ತಿರುವ ಚಿತ್ರದುರ್ಗ ಮುರುಘಾ ಮಠದ ಪೀಠಾಧಿಪತಿ ಮುರುಘಾ ಶರಣರು ಆರೋಪಿ ಸ್ಥಾನದಲ್ಲಿರುವ ಕಾರಣ ತಮ್ಮ ಅಧಿಕಾರ ಚಲಾಯಿಸುವಂತಿಲ್ಲ’ ಎಂದು ಆದೇಶಿಸಿರುವ ಚಿತ್ರದುರ್ಗ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ಆದೇಶ ಪ್ರಶ್ನಿಸಿದ ಅರ್ಜಿ ವಿಚಾರಣೆಯನ್ನು ಹೈಕೋರ್ಟ್, ಬೇರೊಂದು ನ್ಯಾಯಪೀಠಕ್ಕೆ ವರ್ಗಾವಣೆ ಮಾಡಿದೆ.

ಪಂಚಮಸಾಲಿ ಮೀಸಲಾತಿ: ಬಹಿರಂಗ ವಿಚಾರಣೆ

ಬೆಂಗಳೂರು: ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೆ ‘2 ಎ’ ಮೀಸಲಾತಿ ಕಲ್ಪಿಸುವ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗವು ಬುಧವಾರ ಬಹಿರಂಗ ವಿಚಾರಣೆ ನಡೆಸಿತು.

ಕೂಡಲ ಸಂಗಮದ ಪಂಚಮಸಾಲಿ ಪೀಠದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಈ ಸಂದರ್ಭದಲ್ಲಿ ಹಾಜರಿದ್ದರು. ಸ್ವಾಮೀಜಿ ಪರವಾಗಿ ಕಾನೂನು ಘಟಕದ ಅಧ್ಯಕ್ಷರಾದ ಬೆಳಗಾವಿ ದಿನೇಶ ಪಾಟೀಲ್ ವಾದ ಮಂಡಿಸಿದರು.

‘ಈಗಾಗಲೇ ಎರಡು ವರ್ಷಗಳ ಕಾಲ ರಾಜ್ಯದಾದ್ಯಂತ ಬಹುಪಾಲು ಜಿಲ್ಲೆಗಳಲ್ಲಿ ಸಮೀಕ್ಷೆ ಮಾಡಿ ಮಧ್ಯಂತರ ವರದಿಯನ್ನು ಸರ್ಕಾರಕ್ಕೆ ಒಪ್ಪಿಸಿದ್ದೀರಿ. ಮತ್ತೊಮ್ಮೆ ದಾಖಲಾತಿಗಳನ್ನು ಕೇಳಿ ವಿಳಂಬ ಮಾಡುವುದು ಸರಿ ಅಲ್ಲ. ಈಗಾಗಲೇ ಸಮೀಕ್ಷೆ ಮೂಲಕ ಯಾವ ದಾಖಲಾತಿಗಳನ್ನು ಸಂಗ್ರಹಿಸಿದ್ದೀರಿ? ಎಂಬುದನ್ನು ಬಹಿರಂಗಪಡಿಸಬೇಕು’ ಎಂದು ಆಯೋಗದ ಮುಂದೆ ವಾದ ಮಂಡಿಸಿದರು.

ಬಹಿರಂಗ ವಿಚಾರಣೆಯಲ್ಲಿ ಕೂಡಲ ಸಂಗಮದ ಪಂಚಮಸಾಲಿ ಪೀಠದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಹಾಜರಿದ್ದರು.

ಬಹಿರಂಗ ವಿಚಾರಣೆಯಲ್ಲಿ ಗದಗ ಜಿಲ್ಲಾ ಯುವ ಅಧ್ಯಕ್ಷ ಅಯ್ಯಪ್ಪ ಅಂಗಡಿ, ಮಲ್ಲಣಗೌಡ ಪಾಟೀಲ್, ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಪುಟ್ಟರಾಜು, ಸುರೇಶ್ ಪಲ್ಲೆದ ಇದ್ದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ:ಬೆಂಅಪ್ರಾ/ನಯೋಸ/CLU-352/2995/2022–23 ದಿನಾಂಕ:01.02.2023

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ಕೈಗಾರಿಕೆ ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಮಧುಕುಮಾರ್ ಬಿ.ಎಸ್.ಬಿನ್ ಲೇಟ್ ಬಿ.ಕೆ. ಶ್ರೀನಿವಾಸ್	ಬೆಂಗಳೂರು ಪೂರ್ವ	ಬಿದರಹಳ್ಳಿ	ಚೀಮಸಂದ್ರ	99/6	1–00	ಕೈಗಾರಿಕೆ	ವಸತಿ

ಷರಾ:– ಅರ್ಜಿದಾರರು ಈ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯದ ಜಾಗಗಳು, ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುವುದಾಗಿ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು "ಕೈಗಾರಿಕೆ ವಲಯ" ದಿಂದ "ವಸತಿ ವಲಯ" ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಚಿಸಿರುವುದಾಗಿ ತಿಳಿಸಿರುತ್ತಾರೆ.

BDA/PRO/CLU/395/2022-23 ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ದೇವಸ್ಥಾನದ ವಾರ್ಷಿಕೋತ್ಸವ ಇಂದಿನಿಂದ

ಬೆಂಗಳೂರು: ಬಿಳೆಕಹಳ್ಳಿಯ ಶ್ರೀದೇವಿ ಭೂದೇವಿ ಸಮೇತ ವೈಕುಂಠನಾರಾಯಣಸ್ವಾಮಿ ದೇವಸ್ಥಾನದ 15ನೇ ವಾರ್ಷಿಕೋತ್ಸವ ಫೆ. 2 ಮತ್ತು 3 ರಂದು ನಡೆಯಲಿದೆ.

ಫೆ. 2ರಂದು (ಗುರುವಾರ) ಬೆಳಿಗ್ಗೆ 7ಕ್ಕೆ ವಿಷ್ಣುಸಹಸ್ರನಾಮ ಹೋಮ ನಡೆಯಲಿದ್ದು, ಬೆಳಿಗ್ಗೆ 10ಕ್ಕೆ ಉಡುಪಿ ಪೇಜಾವರ ಮಠದ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಭಾಗವಹಿಸಲಿದ್ದಾರೆ. ಸಂಜೆ 6ಕ್ಕೆ ಕರ್ನಾಟಕ ಶಾಸ್ತ್ರೀಯ ಗಾಯಕಿ ಭಾರತಿ ವೇಣುಗೋಪಾಲ್ ಮತ್ತು ತಂಡದವರು ರಂಜಿಸಲಿದ್ದಾರೆ.

ಫೆ. 3ರಂದು (ಶುಕ್ರವಾರ) ಬೆಳಿಗ್ಗೆ 8ಕ್ಕೆ ಮಹಾಧನ್ವಂತರಿ ಹೋಮ ಮತ್ತು ವ್ರತ ನಡೆಯಲಿದೆ. ಸಂಜೆ 6ಕ್ಕೆ ಸದಾಶಿವ ಭಟ್ ಮತ್ತು ತಂಡದವರು ಭಕ್ತಿ ಸಂಗೀತ ಪ್ರಸ್ತುತ ಪಡಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ
ನಂ. 333/1, 1ನೇ ಮಹಡಿ, ವಿ.ಜಿ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ–562 110.

ಸಂ: ಬಿಐಎಎಪಿಎ/ಟಿಪಿ/ಭೂಉಬ/122/2022–23/2445 ದಿನಾಂಕ: 30.01.2023

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **ವಸತಿ** ವಲಯದಿಂದ **ವಾಣಿಜ್ಯ** ಭೂವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀಕರಂ ಮೌಳಿ ವಿನೋದ್ ಕುಮಾರ್ ಬಿನ್ ಶ್ರೀಕರಂ ಮೋಹನ್, ಶ್ರೀಕರಂ ರೇವಣ್ಣ ಕುಮಾರ್ ಬಿನ್ ಶ್ರೀಕರಂ ಮೋಹನ್, ಶ್ರೀಮತಿ ರಾಠಕೊಂಡ ಪದ್ಮಜ ರೆಡ್ಡಿ ಕೋಂ ರಾಠಕೊಂಡ ಗುರು ಪ್ರಸಾದ್, ಶ್ರೀ ರೆಡ್ಡಿವಾರಿ ಪ್ರಸನ್ನ ಕುಮಾರ್ ರೆಡ್ಡಿ ಬಿನ್ ಲೇ॥ ಆರ್.ರಾಮಿ ರೆಡ್ಡಿ	ಯಲಹಂಕ	ಜಾಲ	ಮುತ್ತುಗದಹಳ್ಳಿ	8/2	0–2.08	ವಸತಿ	ವಾಣಿಜ್ಯ
		ಯಲಹಂಕ	ಜಾಲ	ಮುತ್ತುಗದಹಳ್ಳಿ	8/3	0–6.08	ವಸತಿ	ವಾಣಿಜ್ಯ
		ಯಲಹಂಕ	ಜಾಲ	ಮುತ್ತುಗದಹಳ್ಳಿ	8/15	0–2.08	ವಸತಿ	ವಾಣಿಜ್ಯ
		ಯಲಹಂಕ	ಜಾಲ	ಮುತ್ತುಗದಹಳ್ಳಿ	8/16	0–2.08	ವಸತಿ	ವಾಣಿಜ್ಯ
		ಯಲಹಂಕ	ಜಾಲ	ಮುತ್ತುಗದಹಳ್ಳಿ	8/17	0–6.08	ವಸತಿ	ವಾಣಿಜ್ಯ
		ಯಲಹಂಕ	ಜಾಲ	ಮುತ್ತುಗದಹಳ್ಳಿ	8/18	0–6.08	ವಸತಿ	ವಾಣಿಜ್ಯ

ಷರಾ :– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನುಗಳ ಪರಿಸರದಲ್ಲಿ ವಸತಿ/ವಸತಿಯೇತರ ಅಭಿವೃದ್ಧಿ ಬೆಳವಣಿಗೆಗಳು ಬರುತ್ತಿದ್ದು, ಈ ಜಮೀನುಗಳ ಪರಿಸರದಲ್ಲಿ ವಾಣಿಜ್ಯ ಉದ್ದೇಶಕ್ಕೆ ಸಾರ್ವಜನಿಕರಿಂದ ತುಂಬ ಬೇಡಿಕೆಯಿದ್ದು, ಭವಿಷ್ಯದಲ್ಲಿ ವಾಣಿಜ್ಯ ಉದ್ದೇಶಕ್ಕೆ ಹೆಚ್ಚಿನ ಬೇಡಿಕೆ ಬರುವುದರಿಂದ ಪ್ರಸ್ತಾಪಿತ ಪ್ರದೇಶದಲ್ಲಿ ವಾಣಿಜ್ಯ ಬೆಳವಣಿಗೆಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿರುತ್ತೇವೆ. ಅಲ್ಲದೇ, ಪ್ರಸ್ತಾಪಿತ ಜಮೀನುಗಳಲ್ಲಿ ವಾಣಿಜ್ಯ ಬೆಳವಣಿಗೆ ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲಿನ ಸಾರ್ವಜನಿಕರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **'ವಸತಿ ವಲಯ'** ದಿಂದ **'ವಾಣಿಜ್ಯ'** ಉದ್ದೇಶಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಚಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ

ವಾಸಾಸಂಇ/ವಾಪ್ರ/ಜಿಎ/4423/2022–23

ಬಿಬಿಎಂಪಿಯಿಂದ ಗೋವಿಂದರಾಜನಗರದಲ್ಲಿ ನಿರ್ಮಾಣ • 300 ಹಾಸಿಗೆ ಸಾಮರ್ಥ್ಯ • ಫೆ.16ಕ್ಕೆ ಚಾಲನೆ

ರಾಜ್ಯದ ಅತಿದೊಡ್ಡ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ

ಪ್ರಜಾವಾಣಿ ವಾರ್ತೆ

₹57.5 ಕೋಟಿ ನಿರ್ಮಾಣ ವೆಚ್ಚ | **₹49 ಕೋಟಿ** ಒಳಾಂಗಣ ಹಾಗೂ ವೈದ್ಯ ಉಪಕರಣ | **52,443** ಚದರ ಅಡಿ ಒಟ್ಟು ಪ್ರದೇಶ | **1,40,886** ಚದರ ಅಡಿ (ಬಿ+ಜಿ+ನಾಲ್ಕು ಅಂತಸ್ತು) ನಿರ್ಮಾಣ ಪ್ರದೇಶ | **2020ರ ಏಪ್ರಿಲ್ 9** ನಿರ್ಮಾಣ ಆರಂಭ

ಬೆಂಗಳೂರು: ರಾಜ್ಯದಲ್ಲಿ ಕಾರ್ಪೊರೇಷನ್‌ಗಳ ಮಟ್ಟದಲ್ಲಿ ಅತಿದೊಡ್ಡ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯು ನಗರದ ಗೋವಿಂದರಾಜನಗರದಲ್ಲಿ ನಿರ್ಮಾಣವಾಗಿದ್ದು, ಫೆ.16ರಂದು ಉದ್ಘಾಟನೆಯಾಗಲಿದೆ.

ಮುಂಬೈ ಕಾರ್ಪೊರೇಷನ್ ಒಂದು ವೈದ್ಯಕೀಯ ಕಾಲೇಜನ್ನೇ ಹೊಂದಿದೆ. ಅದು ಬಿಟ್ಟರೆ ದೇಶದಲ್ಲಿ ಕಾರ್ಪೊರೇಷನ್‌ಗಳ ಒಡೆತನದ ಅತಿದೊಡ್ಡ ಆಸ್ಪತ್ರೆ ಇದಾಗಿದೆ.

ಬಿಬಿಎಂಪಿ ವತಿಯಿಂದ ಗೋವಿಂದರಾಜನಗರದಲ್ಲಿ 300 ಹಾಸಿಗೆಗಳ ಬೃಹತ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಒಟ್ಟಾರೆ ₹106.5 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಿದೆ. ಎಲ್ಲ ರೀತಿಯ ವೈದ್ಯ ಚಿಕಿತ್ಸೆಗಳನ್ನು ಒಂದೇ ಸೂರಿನಡಿ, ಹೈಟೆಕ್ ವ್ಯವಸ್ಥೆಗಳೊಂದಿಗೆ ಒದಗಿಸುವ ಉದ್ದೇಶ ಈ ಆಸ್ಪತ್ರೆಯದು.

ಒಂದು ಎಕರೆಗೂ ಹೆಚ್ಚು ಪ್ರದೇಶದಲ್ಲಿರುವ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ 22 ಐಸಿಯು ಹಾಗೂ ಏಳು ಶಸ್ತ್ರ ಚಿಕಿತ್ಸಾ ಘಟಕಗಳಿವೆ. ಲಿಫ್ಟ್, ಸಮ್ಮೇಳನ ಸಭಾಂಗಣಸೇರಿದಂತೆತ್ಯಾಜ್ಯವನ್ನುವೈಜ್ಞಾನಿಕವಾಗಿ ಸಂಗ್ರಹಿಸುವ ಸೌಲಭ್ಯ ಒಳಗೊಂಡಿದೆ.

ನಗರದ ಎಲ್ಲ ನಾಗರಿಕರಿಗೆ ಎಲ್ಲ ರೀತಿಯ ರೋಗಗಳಿಗೆ ಚಿಕಿತ್ಸೆ ನೀಡುವ ಬಹುಚಿಕಿತ್ಸಾ ವ್ಯವಸ್ಥೆಯನ್ನು ಈ ಆಸ್ಪತ್ರೆ ಒಳಗೊಳ್ಳಲಿದೆ. ಸಿಟಿ-ಎಂಆರ್‌ಐ ಸ್ಕ್ಯಾನ್‌ನಿಂದ ಹಿಡಿದು ಕಣ್ಣು, ಮೂಗು, ಕಿವಿ, ಹೃದಯ ಚಿಕಿತ್ಸೆಗೂ

ಬಿಬಿಎಂಪಿಯಿಂದ ಗೋವಿಂದರಾಜನಗರದಲ್ಲಿ ನಿರ್ಮಾಣಗೊಂಡಿರುವ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ

ಇಲ್ಲಿ ಸೌಲಭ್ಯವಿದೆ. ವಿಶೇಷ ಐಸಿಯುಗಳನ್ನು ಸ್ಥಾಪಿಸಲಾಗಿದೆ.

ಗುಣಮಟ್ಟದ ಚಿಕಿತ್ಸೆ: 'ಗೋವಿಂದರಾಜನಗರ ಹಾಗೂ ಸುತ್ತಮುತ್ತಲಿನ ಜನರಿಗೆ ಸ್ಥಳೀಯವಾಗಿ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಬೃಹತ್ ಆಸ್ಪತ್ರೆ ನಿರ್ಮಿಸಬೇಕೆಂಬ ಉದ್ದೇಶವಿತ್ತು. ಮುಖ್ಯಮಂತ್ರಿಯವರು ನೀಡಿದ ಅನುದಾನ ಬಳಸಿಕೊಂಡು ಎಲ್ಲ ರೋಗಗಳಿಗೂ ಗುಣಮಟ್ಟದ ಚಿಕಿತ್ಸೆ ನೀಡುವ ಈ ಆಸ್ಪತ್ರೆ ನಿರ್ಮಿಸಲಾಗಿದೆ.

'ಬಾಲಗಂಗಾಧರನಾಥ ಸ್ವಾಮೀಜಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ' ಎಂದು ಹೆಸರಿಸಲಾಗಿದ್ದು, ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಫೆ.16ರಂದು ಉದ್ಘಾಟಿಸಲಿದ್ದಾರೆ' ಎಂದು ವಸತಿ ಸಚಿವ ವಿ. ಸೋಮಣ್ಣ ತಿಳಿಸಿದರು.

ಆರೋಗ್ಯ ಇಲಾಖೆಯಿಂದ ಸಿಬ್ಬಂದಿ: ಗೋವಿಂದರಾಜನಗರ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಗೆ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ತಜ್ಞರು ಹಾಗೂ ವೈದ್ಯರನ್ನು ನಿಯೋಜಿಸಲು ಸರ್ಕಾರಕ್ಕೆ ಮನವಿ ಮಾಡಿಕೊಳ್ಳಲಾಗಿದೆ. ಅದಕ್ಕೆ ಸಮ್ಮತಿ ದೊರೆತಿದೆ. ನಂತರದ ದಿನಗಳಲ್ಲಿ ಕಾಯಂ ವೈದ್ಯ ಸಿಬ್ಬಂದಿಯನ್ನು ನೇಮಿಸಿಕೊಳ್ಳಲಾಗುತ್ತದೆ ಎಂದು ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಡಾ.ತ್ರಿಲೋಕ ಚಂದ್ರ ಹೇಳಿದರು.

ಲಭ್ಯವಿರುವ ಸೌಲಭ್ಯಗಳು

ಬೇಸ್‌ಮೆಂಟ್, ನೆಲಮಹಡಿ ಹಾಗೂ ನಾಲ್ಕು ಅಂತಸ್ತುಗಳಲ್ಲಿ ತಲಾ ಐದು ವಿಂಗ್‌ಗಳಲ್ಲಿ ಗೋವಿಂದರಾಜನಗರ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯನ್ನು ನಿರ್ಮಿಸಲಾಗಿದೆ. ಬೇಸ್‌ಮೆಂಟ್‌ನಲ್ಲಿ ಪ್ರಯೋಗಾಲಯ, ರಕ್ತ ನಿಧಿ,ರೇಡಿಯೊಲಜಿ, ಎಂಆರ್‌ಐ–ಸಿ.ಟಿ ಸ್ಕ್ಯಾನ್, ದಂತ ಒಪಿಡಿ, ಪಾರ್ಕಿಂಗ್ ವ್ಯವಸ್ಥೆ ಇದೆ.

ನೆಲಮಹಡಿಯಲ್ಲಿ ಮಕ್ಕಳು, ಗರ್ಭಿಣಿಯರು, ಸ್ತ್ರೀರೋಗ, ಅಲ್ಟ್ರಾಸೌಂಡ್, ಮೂಳೆ ಚಿಕಿತ್ಸೆ, ಔಷಧಾಲಯ, ಒಪಿಡಿ, ತುರ್ತು ಚಿಕಿತ್ಸೆ, ಶಸ್ತ್ರಚಿಕಿತ್ಸೆ, ಆಡಳಿತ ಬ್ಲಾಕ್ ಸೌಲಭ್ಯವಿದೆ.

ಮೊದಲ ಅಂತಸ್ತಿನಲ್ಲಿ ಕಣ್ಣು, ಕಿವಿ, ಮೂಗು, ಗಂಟಲು, ದಂತ, ಹೃದಯ, ಫಿಜಿಯೊಥೆರಪಿ, ಜನರಲ್, ಕೆಎಂಸಿ ವಾರ್ಡ್, ಹೆರಿಗೆ, ನವಜಾತ ಶಿಶುಗಳ ತೀವ್ರನಿಗಾ ಘಟಕ, ಶಸ್ತ್ರಚಿಕಿತ್ಸಾ, ವೈದ್ಯರ ಕೊಠಡಿಗಳು, ರೋಗಿಗಳ ಸಹಾಯಕರಿಗೆ ಕೊಠಡಿಗಳು, ಶೌಚಾಲಯಗಳಿವೆ.

ಎರಡನೇ ಅಂತಸ್ತಿನಲ್ಲಿ ಶಸ್ತ್ರಚಿಕಿತ್ಸೆ, ಐಸಿಯು ಬ್ಲಾಕ್, ಜನರಲ್ ವಾರ್ಡ್, ಸ್ಪೆಷಲ್ ವಾರ್ಡ್, ಔಷಧಾಲಯ, ವೈದ್ಯರ ಕೊಠಡಿ, ಶೌಚಾಲಯ, ನರ್ಸ್‌ಗಳ ಕೊಠಡಿ ಇದೆ.

ಮೂರನೇ ಅಂತಸ್ತಿನಲ್ಲಿ ವಿಶೇಷ ವಾರ್ಡ್, ಏಕ ಹಾಸಿಗೆಯ ವಿಶೇಷ ವಾರ್ಡ್, ಕ್ಯಾಥ್ ಲ್ಯಾಬ್, ಜನರಲ್ ವಾರ್ಡ್ ಇದೆ.

ನಾಲ್ಕನೇ ಅಂತಸ್ತಿನಲ್ಲಿ ವಿಶೇಷ ವಾರ್ಡ್, ಜನರಲ್ ವಾರ್ಡ್, ವಿರಾಮ ಪ್ರದೇಶ, ಸ್ಟೋರ್ ರೂಂ, ವೈದ್ಯರ ಕೊಠಡಿ, ಶೌಚಾಲಯಗಳಿವೆ.

ಅನಧಿಕೃತ ಧಾರ್ಮಿಕ ಕಟ್ಟಡ ತೆರವು: ಅಮಿಕಸ್ ಕ್ಯೂರಿ ನೇಮಕ

ಬೆಂಗಳೂರು: ಸಾರ್ವಜನಿಕ ಸ್ಥಳಗಳಲ್ಲಿರುವ ಅನಧಿಕೃತ ಧಾರ್ಮಿಕ ಕಟ್ಟಡಗಳ ತೆರವಿಗೆ ಸಂಬಂಧಿಸಿ ಹೈಕೋರ್ಟ್ ದಾಖಲಿಸಿಕೊಂಡಿರುವ ಸ್ವಯಂ ಪ್ರೇರಿತ ಅರ್ಜಿಯ ಪ್ರಕರಣದಲ್ಲಿ, ಹೈಕೋರ್ಟ್‌ನ ಹಿರಿಯ ವಕೀಲ ವಿಕ್ರಂ ಹುಯಿಲಗೋಳ ಅವರನ್ನು ಅಮಿಕಸ್ ಕ್ಯೂರಿ (ಕೋರ್ಟ್‌ಗೆ ಸಹಕರಿಸುವ ವಕೀಲ) ಆಗಿ ನೇಮಿಸಿದೆ.

ಸಾರ್ವಜನಿಕ ಸ್ಥಳಗಳಲ್ಲಿನ ಅನಧಿಕೃತ ಧಾರ್ಮಿಕ ಕಟ್ಟಡಗಳನ್ನು ತೆರವುಗೊಳಿಸಲು ಸುಪ್ರೀಂಕೋರ್ಟ್ ನೀಡಿರುವ ನಿರ್ದೇಶನ ಜಾರಿಗೆ ಹೈಕೋರ್ಟ್ ದಾಖಲಿಸಿಕೊಂಡಿರುವ ಈ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಮತ್ತು ನ್ಯಾ. ಅಶೋಕ್ ಎಸ್.ಕಿಣಗಿ ಅವರಿದ್ದ ವಿಭಾಗೀಯ ಪೀಠ ಬುಧವಾರ ವಿಚಾರಣೆ ನಡೆಸಿತು.

'ಪ್ರಕರಣದಲ್ಲಿ ಸಾಕಷ್ಟು ಮಧ್ಯಂತರ ಅರ್ಜಿಗಳು ಸಲ್ಲಿಕೆಯಾಗಿದ್ದು, ಅರ್ಜಿದಾರರ ಆಕ್ಷೇಪಣೆಗಳನ್ನು ಕೂಲಂಕಷ ಪರಿಶೀಲಿಸಬೇಕಿದೆ. ಸರ್ಕಾರ ಗುರುತಿಸಿರುವ ಅನಧಿಕೃತ ಕಟ್ಟಡಗಳ ಪಟ್ಟಿಯಲ್ಲಿ ಕೈಬಿಡಲಾಗಿರುವ ಕೇಂದ್ರಗಳನ್ನು ಗುರುತಿಸಿ 3 ವಾರಗಳಲ್ಲಿ ಹೊಸಪಟ್ಟಿ ಒದಗಿಸಬೇಕು' ಎಂದು ಅಮಿಕಸ್ ಕ್ಯೂರಿ ಅವರಿಗೆ ಸೂಚಿಸಿರುವ ಪೀಠ, 'ಸರ್ಕಾರವು ಅಮಿಕಸ್ ಕ್ಯೂರಿಗೆ ಸಂಪೂರ್ಣ ದಾಖಲೆಗಳನ್ನು ಒದಗಿಸಿ ನೆರವು ನೀಡಬೇಕು' ಎಂದು ನಿರ್ದೇಶಿಸಿದೆ. ವಿಚಾರಣೆಯನ್ನು ಮೂರು ವಾರಗಳ ಕಾಲ ಮುಂದೂಡಲಾಗಿದೆ.

'ಈತನಕ 1,563 ಕಟ್ಟಡಗಳನ್ನು ತೆರವುಗೊಳಿಸಲಾಗಿದೆ. 457 ಕಟ್ಟಡಗಳನ್ನು ಉಳಿಸಿಕೊಳ್ಳಲಾಗಿದ್ದು 48 ಅನ್ನು ಸ್ಥಳಾಂತರಿಸಲಾಗಿದೆ ಮತ್ತು 17 ಕಟ್ಟಡಗಳನ್ನು ಸಕ್ರಮಗೊಳಿಸಲಾಗಿದೆ' ಎಂದು ಸರ್ಕಾರ ನ್ಯಾಯಪೀಠಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ವಿವರಿಸಲಾಗಿದೆ.

'ಸುಪ್ರೀಂ ಕೋರ್ಟ್ 2009ರ ಸೆಪ್ಟೆಂಬರ್ 29ರಂದು ನೀಡಿರುವ ತೀರ್ಪಿನಂತೆ ಅನಧಿಕೃತ ಧಾರ್ಮಿಕ ಕೇಂದ್ರಗಳನ್ನು ತೆರವುಗೊಳಿಸಲು ಕೈಗೊಂಡಿರುವ ಕ್ರಮಗಳ ಕುರಿತಂತೆ ವರದಿ ಸಲ್ಲಿಸಿ' ಎಂದು ಹೈಕೋರ್ಟ್ 2019ರ ಸೆಪ್ಟೆಂಬರ್ 5ರಂದು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿತ್ತು. ರಾಜ್ಯ ಸರ್ಕಾರ ಕಾಲಕಾಲಕ್ಕೆ ಹೈಕೋರ್ಟ್‌ಗೆ ವರದಿ ಸಲ್ಲಿಸುತ್ತಿದೆ.

ಷೇರು ವಿಕ್ರಯ ರದ್ದು: ಅದಾನಿ ಎಂಟರ್‌ಪ್ರೈಸಸ್ ನಿರ್ಧಾರ

ನವದೆಹಲಿ (ಪಿಟಿಐ): ಮಾರುಕಟ್ಟೆಯಲ್ಲಿನ ಸ್ಥಿತ್ಯಂತರದ ಹಿನ್ನೆಲೆಯಲ್ಲಿ ಅದಾನಿ ಸಮೂಹವು ₹ 20 ಸಾವಿರ ಕೋಟಿ ಮೌಲ್ಯದ ಷೇರು ವಿಕ್ರಯ ಪ್ರಕ್ರಿಯೆಯನ್ನು ಹಿಂಪಡೆಯಲು ತೀರ್ಮಾನಿಸಿದೆ.

ಮುಂದುವರಿದ ಷೇರು ವಿಕ್ರಯ (ಎಫ್‌ಪಿಒ) ಪ್ರಕ್ರಿಯೆಯನ್ನು ಕೈಬಿಡಲು ನಿರ್ಧರಿಸಿದ್ದು, ಮೊತ್ತವನ್ನು ಹೂಡಿಕೆದಾರರಿಗೆ ಹಿಂದಿರುಗಿಸಲಾಗುವುದು ಎಂದು ಕಂಪನಿಯ ಹೇಳಿಕೆ ತಿಳಿಸಿದೆ. ಮಂಗಳವಾರವಷ್ಟೇ ಎಫ್‌ಪಿಒ ಷೇರು ಪೂರ್ಣ ಪ್ರಮಾಣದಲ್ಲಿ ಮಾರಾಟವಾಗಿತ್ತು. ಒಂದು ದಿನದ ಬಳಿಕ ಈ ಪ್ರಕ್ರಿಯೆಯನ್ನು ರದ್ದುಪಡಿಸುವ ಹೇಳಿಕೆ ಹೊರಬಿದ್ದಿದೆ.

ಮಾರುಕಟ್ಟೆ ಸ್ಥಿತಿಯ ಹಿನ್ನೆಲೆಯಲ್ಲಿ ಹೂಡಿಕೆದಾರರ ಸಮುದಾಯದ ಹಿತರಕ್ಷಿಸುವ ಕ್ರಮವಾಗಿ ಷೇರುಗಳ ಮುಂದುವರಿದ ಮಾರಾಟ ಕೈಬಿಡಲಾಗಿದೆ ಎಂದು ಅದಾನಿ ಎಂಟರ್‌ಪ್ರೈಸಸ್ ಲಿಮಿಟೆಡ್ ಸಂಸ್ಥೆಯು ಹೇಳಿಕೆಯಲ್ಲಿ ತಿಳಿಸಿದೆ.

'ಪೌರಕಾರ್ಮಿಕರ ಕಾಯಂಗೆ ಆಗ್ರಹ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಘನತ್ಯಾಜ್ಯ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ವಾಹನ ಚಾಲಕರು, ಸಹಾಯಕರು, ಲೋಡರ್‌ಗಳು, ಕ್ಲೀನರ್‌ಗಳನ್ನು ನೇರ ಪಾವತಿಗೆ ಒಳಪಡಿಸಿ, ಕಾಯಂಗೊಳಿಸಬೇಕು ಎಂದು ಎಐಸಿಸಿಟಿಯು ಬೆಂಬಲಿತ ಬಿಬಿಎಂಪಿ ಪೌರಕಾರ್ಮಿಕರ ಸಂಘ ಆಗ್ರಹಿಸಿದೆ.

'ಬಿಬಿಎಂಪಿ ಘನತ್ಯಾಜ್ಯ ನಿರ್ವಹಣೆಯ ಕೆಲಸ ಕಾನೂನು ಪ್ರಕಾರ ಕಡ್ಡಾಯವಾಗಿ ಮಾಡಲೇಬೇಕಾಗಿದ್ದು, ಇದು ನಿರಂತರ ಸ್ವರೂಪದ ಕೆಲಸವಾಗಿದೆ. ಈಗಾಗಲೇ ಕಸ ಗುಡಿಸುವ ಪೌರಕಾರ್ಮಿಕರಿಗೆ ನೇರವೇತನ ಪಾವತಿ ಮಾಡಲಾಗಿದೆ. ಆದರೆ, ಮನೆ ಮನೆಗೆ ಹೋಗಿ ಕಸ ಸಂಗ್ರಹಿಸುವ ಮತ್ತು ಕಸ ವಿಲೇವಾರಿ ಮಾಡುವ ಪೌರಕಾರ್ಮಿಕರನ್ನು ಗುತ್ತಿಗೆ ವ್ಯವಸ್ಥೆಯಡಿಯಲ್ಲಿ ನೇಮಕ ಮಾಡಿಕೊಳ್ಳಲಾಗಿದೆ' ಎಂದು ಸಂಘದ ಅಧ್ಯಕ್ಷೆ ನಿರ್ಮಲಾ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

'ಗುತ್ತಿಗೆ ಆಧಾರದಲ್ಲಿರುವ ಪೌರಕಾರ್ಮಿಕರನ್ನು ಹಂತ–ಹಂತವಾಗಿ ಕಾಯಂಗೊಳಿಸುವವರೆಗೂ ಸಕಾಲಕ್ಕೆ ಕನಿಷ್ಠ ವೇತನ ಪಾವತಿಸಿ, ವೇತನ ಚೀಟಿ ನೀಡಬೇಕು. 3 ರಿಂದ 8 ತಿಂಗಳವರೆಗೆ ಬಾಕಿ ಇರುವ ವೇತನವನ್ನು ಪಾವತಿಸಿ, ಸಮಾನ ಕೆಲಸಕ್ಕೆ ಸಮಾನ ವೇತನ, ಹೆಚ್ಚುವರಿ ಕೆಲಸಕ್ಕೆ ಅಧಿಕ ವೇತನ ನೀಡುವ ಪದ್ಧತಿ ಜಾರಿಗೊಳಿಸಬೇಕು. ಬಿಬಿಎಂಪಿ ಅಡಿಯಲ್ಲಿರುವ ಬೆಂಗಳೂರು ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್‌ನವರು 2023ರ ಜ. 21ರಂದು ಘನತ್ಯಾಜ್ಯ ನಿರ್ವಹಣೆ ಮಾಡಲು ಕರೆದಿರುವ ಟೆಂಡರ್ ಪ್ರಕ್ರಿಯೆಯನ್ನು ಕೂಡಲೇ ರದ್ದುಗೊಳಿಸಬೇಕು' ಎಂದು ಒತ್ತಾಯಿಸಿದರು.

'ವಿಶ್ರಾಂತಿ ಕೊಠಡಿ, ಶೌಚಾಲಯ, ಕುಡಿಯುವ ನೀರು ಮತ್ತು ಪೌಷ್ಟಿಕ ಆಹಾರವನ್ನು ಒದಗಿಸಬೇಕು. ಇ.ಎಸ್.ಐ ಮತ್ತು ಪಿ.ಎಫ್ ಸೌಲಭ್ಯವನ್ನು ಕಲ್ಪಿಸಿ, ಸುರಕ್ಷಾ ಪರಿಕರಗಳನ್ನು ನೀಡಬೇಕು. ಕಸ ಸಂಗ್ರಹಿಸುವ ಆಟೊಗಳ ದುರಸ್ತಿ ವೆಚ್ಚವನ್ನು ಬಿಬಿಎಂಪಿಯೇ ಭರಿಸಬೇಕು. ಸರ್ಕಾರಿ ರಜೆ ಮತ್ತು ರಾಷ್ಟ್ರೀಯ ಹಬ್ಬದ ದಿನಗಳು ಒಳಗೊಂಡಂತೆ ರಜೆ ಸೌಲಭ್ಯವನ್ನು ವಿಸ್ತರಿಸಬೇಕು' ಎಂದರು.

ನೆಡುಮಾರನ್ ವ್ಯಂಗ್ಯ ಭಾವಚಿತ್ರಗಳ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಕಾರ್ಟೂನಿಸ್ಟ್ ವತಿಯಿಂದ ಫೆಬ್ರುವರಿ 4ರಿಂದ 18ರವರೆಗೆ ತಮಿಳುನಾಡಿನ ವ್ಯಂಗ್ಯ ಚಿತ್ರಕಾರ ನೆಡುಮಾರನ್ ಬಿಡಿಸಿರುವ ವ್ಯಂಗ್ಯ ಭಾವಚಿತ್ರಗಳ ಪ್ರದರ್ಶನ ನಡೆಯಲಿದೆ.

ಟ್ರಿನಿಟಿ ವೃತ್ತದಲ್ಲಿರುವ ಇಂಡಿಯನ್ ಕಾರ್ಟೂನ್ ಗ್ಯಾಲರಿಯಲ್ಲಿ ಫೆಬ್ರುವರಿ 4ರಂದು ಈ ಪ್ರದರ್ಶನಕ್ಕೆ ಚಾಲನೆ ನೀಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಬಜಾಜ್ ಆಲಾಯಾನ್ಜ್ ಲೈಫ್ ಇನ್‌ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್
BJAZ-O-6059/03-Jan-23

ಮಯೂರ ಓದಿರಿ

ಕಾಣೆಯಾಗಿದ್ದಾರೆ

ಪ್ರಮೀಳಾ ದೇವಿ
(ವಯಸ್ಸು: 62 ವರ್ಷ)
5 ಅಡಿ ಎತ್ತರ, ಹಸಿರು ಸೀರೆ ಧರಿಸಿರುವ ಇವರು ರಾಮಮೂರ್ತಿನಗರ ಬ್ರಿಡ್ಜ್, ಬೆಂಗಳೂರು–16 ಇಲ್ಲಿಂದ ಕಾಣೆಯಾಗಿರುತ್ತಾರೆ. ಇವರು ಯಾರಿಗಾದರೂ ಕಂಡಲ್ಲಿ ದಯವಿಟ್ಟು ಸಂಪರ್ಕಿಸಿ
9972023783 / 9836221300
ಬಹುಮಾನ ಇರುತ್ತದೆ.

TENDER NOTICE

CONRAD BENGALURU

Conrad Bengaluru, a luxurious 5-Star hotel invites sealed tenders from reliable and established vendors in Bengaluru on a rate contract basis of 12 months commencing from 1st April 2023 to 31st March 2024 to supply of following:

Food & Beverage	Non Food Items
1. Provisions, Spices, Groceries & Dry Fruits.	1. Office General Printing & Stationery
2. Tinned, Canned & Bottled Food Products	2. Housekeeping, Laundry & Cleaning Supplies
3. Fresh Vegetables, Fruits & Exotic Vegetables, Peeled Garlic, Bean Sprouts, Peeled Shallots/Onions, Mushrooms	3. Cooking, Industrial Gas & Gel Fuel
4. Lamb & Lamb Products	4. Charcoal
5. Tenderloin	5. Fresh Flowers and Flower designs.
6. Fresh Milk & Dairy Products	6. Hiring of AV Equipment and Banquet CCG/ Furniture
7. Imported Meats & Sea Food Products	7. Courier Services
8. Chicken, Poultry Products & Farm Fresh Eggs	8. Motor Rewinding/Glass & Mirrors Fixing
9. Fresh Fish & Seafood	9. Goods Transport Vehicle Providers
10. Imported Tinned, Canned & Bottled Food Products	10. Glass/Floor Cleaning
11. Ice Cream & Kulfis	
12. Frozen Sea Food	

Tender Forms and other Particulars can be obtained on payment of **RS.1500/-** for each category and are available with the purchase manager at the hotel between 10am to 5pm from **2nd February to 10th February 2023.** Last date of duly filled tender forms submitting is on **15th February 2023**

The Tender is subject to following: 1. The Rates finalized for the twelve months will not change under any circumstances. **2.** The rates must be inclusive of delivery charges until our stores premises; tax should be shown separately on the invoices if applicable. **3.** The Hotel reserves the right to reject any or all tenders without any reasons whatsoever and no representation shall be entertained on this account.

Sealed tenders must be addressed to the attention of :
Purchase Manager, Conrad Bengaluru, 25/3, Kensington Rd, Ulsoor, Bengaluru - 560008, Tel: +91 80 22144444

ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನಮಂತ್ರಿಗಳು

ಕರ್ನಾಟಕ ಸರ್ಕಾರ | 75 ಸ್ವಾತಂತ್ರ್ಯದ ಅಮೃತಮಹೋತ್ಸವ | B.W.S.S.B

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

15 ಎಕರೆ ವಿಸ್ತೀರ್ಣವುಳ್ಳ ನಾಯಂಡನಹಳ್ಳಿ ಕೆರೆಗೆ 120 ದಶಲಕ್ಷ ಲೀಟರ್ ಶುದ್ಧೀಕರಿಸಿದ ತ್ಯಾಜ್ಯ ನೀರನ್ನು ತುಂಬಿಸುವ ಕಾರ್ಯಕ್ರಮಕ್ಕೆ ಚಾಲನೆ

ದಿನಾಂಕ : 02–02–2023 ಗುರುವಾರ
ಸ್ಥಳ: ನಾಯಂಡನಹಳ್ಳಿ ಕೆರೆ, ಮೈಸೂರು ರಸ್ತೆ, ಬೆಂಗಳೂರು,
ಸಮಯ: ಬೆಳಿಗ್ಗೆ: 08:00 ಕ್ಕೆ

ಬೆಂಗಳೂರಿನ ಪ್ರಮುಖ ಕೆರೆಗಳಲ್ಲೊಂದಾದ ನಾಯಂಡನಹಳ್ಳಿ ಕೆರೆಗೆ ತ್ಯಾಜ್ಯನೀರನ್ನು ಶುದ್ಧೀಕರಿಸಿ ತುಂಬಿಸುವ ಮೂಲಕ ನಗರದಲ್ಲಿ ಅಂತರ್ಜಲ ಮಟ್ಟ ಹೆಚ್ಚಾಗುವುದರ ಜೊತೆಗೆ ಕೆರೆಯ ಗತವೈಭವವು ಮರುಕಳಿಸಿದಂತಾಗುತ್ತದೆ.

: ಚಾಲನೆ :
ಶ್ರೀ ವಿ. ಸೋಮಣ್ಣ
ಮಾನ್ಯ ವಸತಿ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು
ಹಾಗೂ ಗೋವಿಂದರಾಜನಗರ ವಿಧಾನಸಭಾ
ಕ್ಷೇತ್ರದ ಶಾಸಕರು, ಕರ್ನಾಟಕ ಸರ್ಕಾರ

ಮಾನ್ಯ ವಸತಿ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು ಹಾಗೂ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ವಿ. ಸೋಮಣ್ಣರವರು ಹಾಗೂ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಸದಸ್ಯರಾದ ಶ್ರೀ ಎಲ್.ಎಸ್. ತೇಜಸ್ವಿ ಸೂರ್ಯ ರವರು ಇಲಾಖಾ ಕಾರ್ಯಕ್ರಮದಲ್ಲಿ ಭಾಗವಹಿಸಿರುವುದು.

ಸರ್ವರಿಗೂ ಹಾರ್ದಿಕ ಸ್ವಾಗತ

ಶ್ರೀ ರಾಕೇಶ್‌ಸಿಂಗ್, ಭಾ.ಆ.ಸೇ.,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ.

ಶ್ರೀ ಎನ್.ಜಯರಾಮ್, ಭಾ.ಆ.ಸೇ.,
ಅಧ್ಯಕ್ಷರು
ಬೆಂಗಳೂರು ಜಲಮಂಡಳಿ

"ಎಲ್ಲಾ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿಯನ್ನು ಸಾಧಿಸಲು ಪ್ರಯತ್ನಿಸಿ ದೇಶದ ಪ್ರಗತಿಗಾಗಿ ಶ್ರಮಿಸುವುದು" ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560 009.

Helpline : 1916 (24/7)
E-mail : chairman@bwssb.gov.in
Website : www.bwssb.karnataka.gov.in
8762228888

ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ • ಸಾಮಾಜಿಕ ಹೋರಾಟಗಾರ ಎಸ್‌.ಆರ್‌.ಹಿರೇಮಠ ಆಕ್ರೋಶ

‘ಬಡವರಿಗೆ ಬರೆ: ಶ್ರೀಮಂತರಿಗೆ ವಿನಾಯಿತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣ ವಿರೋಧಿಸಿ ಹಾಗೂ ಮಹಿಳೆಯರಿಗೆ ಶಿಕ್ಷಣ, ಉದ್ಯೋಗ ಹಾಗೂ ಭದ್ರತೆ ನೀಡಬೇಕೆಂದು ಒತ್ತಾಯಿಸಿ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ (ಎಐಎಂಎಸ್‌ಎಸ್‌) ರಾಜ್ಯ ಸಮಿತಿಯಿಂದ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಯಿತು.

‘ನಾವೇ ಆಯ್ಕೆ ಮಾಡಿ ಕಳುಹಿಸಿದ್ದ ಜನಪ್ರತಿನಿಧಿಗಳ ನಿಷ್ಕಾಳಜಿ ಕಾಣಿಸುತ್ತಿದೆ. ಸಾರ್ವಜನಿಕರ ಸೇವೆ ಮಾಡಬೇಕಿದ್ದವರು ಹಣವಂತರ ಗುಲಾಮರಂತೆ ಕೆಲಸ ಮಾಡುತ್ತಿದ್ದಾರೆ’ ಎಂದು ಸಾಮಾಜಿಕ ಹೋರಾಟಗಾರ ಎಸ್‌.ಆರ್‌. ಹಿರೇಮಠ ಆಪಾದಿಸಿದರು.

‘ಸಾಮಾನ್ಯ ಜನರಿಗೆ ಪಡಿತರ, ಪಿಂಚಣಿ ಸೇರಿದಂತೆ ಮುಂತಾದ ಸಾಮಾಜಿಕ ಭದ್ರತೆ ಒದಗಿಸುವ ಬದಲಿಗೆ, ಈಗಿನ ಸರ್ಕಾರಗಳು ಶ್ರೀಮಂತರಿಗೆ ತೆರಿಗೆ ವಿನಾಯಿತಿ, ಸಾಲಮನ್ನಾದಂತಹ ಉಡುಗೊರೆ ನೀಡುತ್ತಿವೆ’ ಎಂದು ದೂರಿದರು.

> ಪ್ರಧಾನ ಮಂತ್ರಿಯೇ ಮಂಡಿ ಊರುವಂತೆ ಮಾಡಿದ್ದ ದೆಹಲಿಯ ರೈತ ಚಳವಳಿ ನಮ್ಮೆಲ್ಲರಿಗೂ ಸ್ಫೂರ್ತಿ ಆಗಬೇಕಿದೆ.
> **ಎಸ್‌.ಆರ್‌.ಹಿರೇಮಠ**
> ಸಾಮಾಜಿಕ ಹೋರಾಟಗಾರ

ಎಐಎಂಎಸ್‌ಎಸ್‌ನ ರಾಷ್ಟ್ರ ಅಧ್ಯಕ್ಷರಾದ ಡಾ.ಸುಧಾ ಕಾಮತ್‌ ಮಾತನಾಡಿ, ‘ಎಲ್ಲರಿಗೂ ಆರೋಗ್ಯ, ಉದ್ಯೋಗ, ಮುಂತಾದ ಮೂಲ ಸೌಲಭ್ಯಗಳು ದೊರೆಯಬೇಕು ಎಂಬುದು ಸ್ವಾತಂತ್ರ್ಯ ಹೋರಾಟಗಾರರ ಆಶಯವಾಗಿತ್ತು. ಆದರೆ, ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಈ ಸಂದರ್ಭದಲ್ಲಿ ತದ್ವಿರುದ್ಧ ಪರಿಸ್ಥಿತಿ ಕಾಣುತ್ತಿದ್ದೇವೆ. ರಾಷ್ಟ್ರದ ಬಹುಪಾಲು ಮಹಿಳೆಯರು ಅಪೌಷ್ಟಿಕತೆಯಿಂದ ಬಳಲುವ ಸ್ಥಿತಿ ಇದೆ. ಆರೋಗ್ಯ ಕ್ಷೇತ್ರದಲ್ಲೂ ಖಾಸಗೀಕರಣ ವಿಪರೀತವಾಗಿದೆ’ ಎಂದು ಕಳವಳ ವ್ಯಕ್ತಪಡಿಸಿದರು.

‘ಉಚಿತ ಆರೋಗ್ಯ ಸೌಲಭ್ಯಗಳಿಂದ ಬಡ ಮಹಿಳೆಯರು ವಂಚಿತರಾಗಿದ್ದಾರೆ. ಆಶಾ, ಅಂಗನವಾಡಿ ಹಾಗೂ ಬಿಸಿಯೂಟ ಕಾರ್ಯಕರ್ತೆಯರಿಗೆ ಜೀವನ ಭದ್ರತೆಯೇ ಇಲ್ಲ’ ಎಂದರು.

ಸಂಘಟನೆ ರಾಜ್ಯ ಅಧ್ಯಕ್ಷೆ ಬಿ.ಆರ್‌. ಅಪರ್ಣಾ ಮಾತನಾಡಿ, ‘ಮಹಿಳೆಯರ ಮೇಲೆ ಅತ್ಯಾಚಾರ ಪ್ರಕರಣಗಳು ಹೆಚ್ಚುತ್ತಿವೆ. ಈ ರೀತಿಯ ಕೃತ್ಯದಲ್ಲಿ ತೊಡಗಿದ್ದವರಿಗೆ ರಾಜಕೀಯ ಬೆಂಬಲ ಕೂಡ ಇದೆ’ ಎಂದು ವಿಷಾದಿಸಿದರು.

ಕೋವಿಡ್‌ ಬಳಿಕ ದೇಶದ ಬಹುತೇಕ ಜನರ ಬದುಕು ಬೀದಿಗೆ ಬಂದಿದೆ. ಇದರ ಅರಿವಿದ್ದರೂ ಸರ್ಕಾರಗಳು ತೆರಿಗೆ ಬರೆ ಹಾಕುತ್ತಿವೆ ಎಂದು ದೂರಿದರು.

ರಾಜ್ಯ ಉಪಾಧ್ಯಕ್ಷೆ ಎಂ.ಎನ್‌. ಮಂಜುಳಾ. ಕಾರ್ಯದರ್ಶಿ ಎಸ್‌. ಶೋಭಾ ಇದ್ದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ನಡೆದ ಪ್ರತಿಭಟನೆಯಲ್ಲಿ ಸಾಮಾಜಿಕ ಹೋರಾಟಗಾರ ಎಸ್‌.ಆರ್‌.ಹಿರೇಮಠ, ಸಮಿತಿಯ ರಾಷ್ಟ್ರ ಅಧ್ಯಕ್ಷರಾದ ಡಾ.ಸುಧಾ ಕಾಮತ್‌, ರಾಜ್ಯ ಅಧ್ಯಕ್ಷೆ ಬಿ.ಆರ್‌.ಅಪರ್ಣಾ ಇದ್ದರು

ಸುದ್ದಿ 2 ನಿಮಿಷ

‘ಅಪರಾಧಿ ಮೃತಪಟ್ಟರೂ ವಾರಸುದಾರ ದಂಡ ಕಟ್ಟಬೇಕು’

ಬೆಂಗಳೂರು: ‘ಅಪರಾಧಿ ಮೃತಪಟ್ಟರೂ ಆತನಿಗೆ ವಿಧಿಸಿದ ದಂಡವನ್ನು ಆತನ ಆಸ್ತಿಯಿಂದ ಇಲ್ಲವೇ, ಆತನ ಉತ್ತರಾಧಿಕಾರಿಯಿಂದ ವಸೂಲು ಮಾಡಬಹುದು’ ಎಂದು ಹೈಕೋರ್ಟ್‌ ಆದೇಶಿಸಿದೆ.

ಹಾಸನದ ತೊಟ್ಟಿಲೇಗೌಡ ಎಂಬುವರು ಸಲ್ಲಿಸಿದ್ದ ಮೇಲ್ಮನವಿಯನ್ನು ವಜಾಗೊಳಿಸಿರುವ ನ್ಯಾಯಮೂರ್ತಿ ಶಿವಶಂಕರ್‌ ಅಮರಣ್ಣವರ ಅವರಿದ್ದ ಏಕಸದಸ್ಯ ನ್ಯಾಯಪೀಠ, ಈ ಕುರಿತಂತೆ ಆದೇಶಿಸಿದೆ.

‘ಮೇಲ್ಮನವಿದಾರರು ಮೃತಪಟ್ಟಿರುವ ಹಿನ್ನೆಲೆಯಲ್ಲಿ ಮೇಲ್ಮನವಿ ವಜಾಗೊಳಿಸಲಾಗಿದೆ. ಆದರೆ, ದಂಡದ ಮೊತ್ತವನ್ನು ಮೃತರ ಆಸ್ತಿಯಿಂದ ಅಥವಾ ಅವರ ವಾರಸುದಾರರಿಂದ ವಸೂಲು ಮಾಡುವಂತೆ ವಿಚಾರಣಾ ನ್ಯಾಯಾಲಯ ನೀಡಿರುವ ಆದೇಶ ಸೂಕ್ತವಾಗಿಯೇ ಇದೆ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

‘ಮೇಲ್ಮನವಿದಾರರು ಮೃತಪಟ್ಟಿದ್ದಾರೆ ಎಂದಾಕ್ಷಣ ದಂಡ ಪಾವತಿಸುವ ಹೊಣೆಗಾರಿಕೆಯಿಂದ ಮುಕ್ತರಾಗುವುದಿಲ್ಲ. ಸಿಆರ್‌ಪಿಸಿ ಕಲಂ 394ರ ಅನ್ವಯ ಮೇಲ್ಮನವಿಯಿಂದ ಅವರ ಹೆಸರು ತೆಗೆಯಲು ಮೃತಪಟ್ಟ 30 ದಿನದಲ್ಲಿ ಅರ್ಜಿ ಸಲ್ಲಿಸಬೇಕಿತ್ತು. ಆದರೆ ಈ ಪ್ರಕರಣದಲ್ಲಿ ಅಂತಹ ಅರ್ಜಿ ಸಲ್ಲಿಸಲಾಗಿಲ್ಲ’ ಎಂದು ನ್ಯಾಯಪೀಠ ವಿವರಿಸಿದೆ.

ಭಾರತೀಯ ವಿದ್ಯುತ್‌ ಕಾಯ್ದೆ-2003 ಕಾಯ್ದೆಯಡಿ ತೊಟ್ಟಿಲೇಗೌಡ ಅವರನ್ನು ಅಪರಾಧಿ ಎಂದು ತೀರ್ಮಾನಿಸಿದ್ದ ಹಾಸನದ ಹೆಚ್ಚುವರಿ ಸೆಷನ್ಸ್‌ ನ್ಯಾಯಾಲಯ, 2021ರ ಡಿ.12ರಂದು ಅವರಿಗೆ ₹ 29,204 ದಂಡ ವಿಧಿಸಿತ್ತು. ಇದನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿದ್ದರು. ವಿಚಾರಣೆ ಬಾಕಿ ಇರುವಾಗಲೇ ಮೃತಪಟ್ಟಿದ್ದರು.

ಇನ್‌ಸ್ಪೆಕ್ಟರ್‌ ವಿರುದ್ಧ ಇಲಾಖಾ ವಿಚಾರಣೆಗೆ ಆದೇಶ

ಬೆಂಗಳೂರು: ಕಳ್ಳತನ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಎಫ್‌ಐಆರ್‌ ದಾಖಲಿಸಲು ನಗರದ ಮ್ಯಾಜಿಸ್ಟ್ರೇಟ್‌ ನ್ಯಾಯಾಲಯ ನೀಡಿದ್ದ ಸೂಚನೆ ಪಾಲನೆ ಮಾಡದೆ ನಿರ್ಲಕ್ಷ್ಯ ತೋರಿದ ಆರೋಪದಡಿ ಕಾಟನ್‌ಪೇಟೆ ಪೊಲೀಸ್‌ ಠಾಣೆಯ ಇನ್‌ಸ್ಪೆಕ್ಟರ್‌ ಆಗಿದ್ದ ಮತ್ತು ಸದ್ಯ ಅಮಾನತಿನಲ್ಲಿರುವ ಕೆ.ವೈ.ಪ್ರವೀಣ್‌ ವಿರುದ್ಧ ಇಲಾಖಾ ತನಿಖೆ ನಡೆಸುವಂತೆ ರಾಜ್ಯ ಪೊಲೀಸ್‌ ಮಹಾನಿರ್ದೇಶಕರಿಗೆ ಹೈಕೋರ್ಟ್‌ ನಿರ್ದೇಶಿಸಿದೆ.

‘ಮನೆಗಳ್ಳತನ ಪ್ರಕರಣದಲ್ಲಿ ಮ್ಯಾಜಿಸ್ಟ್ರೇಟ್‌ ನ್ಯಾಯಾಲಯದ ಆದೇಶದ ಮೇರೆಗೆ ನಡೆಯುತ್ತಿರುವ ತನಿಖೆಗೆ ಹಿರಿಯ ಅಧಿಕಾರಿಯೊಬ್ಬರನ್ನು ನೇಮಕ ಮಾಡಲು ನಿರ್ದೇಶಿಸಬೇಕು’ ಎಂದು ಕೋರಿ ಎಂ. ಪ್ರಕಾಶ್‌ ಎಂಬುವರು ಸಲ್ಲಿಸಿದ್ದ ರಿಟ್‌ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ನ್ಯಾಯಪೀಠ ವಿಲೇವಾರಿ ಮಾಡಿ ಈ ಕುರಿತಂತೆ ಆದೇಶಿಸಿದೆ. ‘ಅಧಿಕಾರಿಗಳ ಗಂಭೀರ ದುರ್ನಡತೆ ಮತ್ತು ದಂಡ ವಿಧಿಸಲು ಇದು ಯೋಗ್ಯ ಉದಾಹರಣೆಯಾಗಿದೆ. ನ್ಯಾಯಾಲಯಗಳು ನೀಡುವ ಆದೇಶಗಳನ್ನು ಪೊಲೀಸರು ಗಂಭೀರವಾಗಿ ಪರಿಗಣಿಸಿ ಜಾರಿಗೊಳಿಸಬೇಕು. ಇಲ್ಲವಾದಲ್ಲಿ ಸಂತ್ರಸ್ತರ ಮೂಲಭೂತ ಹಕ್ಕುಗಳಿಗೆ ಧಕ್ಕೆಯಾಗಲಿದೆ.ಇಲಾಖಾವಾರು ತನಿಖೆ ಬಳಿಕ ವರದಿಯನ್ನು ಹೈಕೋರ್ಟ್‌ ರಿಜಿಸ್ಟ್ರಾರ್‌ ಅವರಿಗೆ ಸಲ್ಲಿಸಿ’ ಎಂದು ನಿರ್ದೇಶಿಸಿದೆ.

ಬನ್ನೇರುಘಟ್ಟ ಸಮೀಪದ ಕಗ್ಗಲಿಪುರ ಕ್ರಾಸ್‌ ಬಳಿ ಕಾರಿನ ಮೇಲೆ ಮುಗುಚಿ ಬಿದ್ದ ಕಾಂಕ್ರಿಟ್‌ ಲಾರಿ

ಕಾರಿನ ಮೇಲೆ ಬಿದ್ದ ಕಾಂಕ್ರಿಟ್‌ ಲಾರಿ: ತಾಯಿ, ಮಗಳು ಸಾವು

ಒಂದನೇ ಪುಟದಿಂದ...

ಕಗ್ಗಲಿಪುರ ಕ್ರಾಸ್‌ ಬಳಿ ಬೆಳಗ್ಗೆ 8.30 ಗಂಟೆ ಸುಮಾರು ಎದುರಿನಿಂದ ಬಂದ ಕಾಂಕ್ರೀಟ್‌ ಲಾರಿ ರಸ್ತೆ ತಿರುವಿನಲ್ಲಿ ನಿಯಂತ್ರಣ ತಪ್ಪಿ ಕಾರಿನ ಮೇಲೆ ಉರುಳಿ ಬಿದ್ದಿದೆ. ಲಾರಿ ಅಡಿ ಸಿಲುಕಿ ತಾಯಿ ಮತ್ತು ಮಗಳು ಕಾರಿನಲ್ಲಿಯೇ ಅಪ್ಪಚ್ಚಿಯಾಗಿದ್ದಾರೆ. ಬನ್ನೇರುಘಟ್ಟ ಪೊಲೀಸ್‌ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೆದರಿಸಿ ಸುಲಿಗೆ: ಗೃಹ ರಕ್ಷಕ ಬಂಧನ

ಟ್ವೀಟ್‌ ಮೂಲಕ ಯುವತಿ ದೂರು: ಕೆಲ ಗಂಟೆಗಳಲ್ಲೇ ಪೊಲೀಸರಿಂದ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುಂದನಹಳ್ಳಿ ಕೆರೆ ದಡದಲ್ಲಿ ಕುಳಿತಿದ್ದ ಯುವಕ-ಯುವತಿಯನ್ನು ಬೆದರಿಸಿ ಸುಲಿಗೆ ಮಾಡಿದ್ದ ಆರೋಪದಡಿ ಗೃಹ ರಕ್ಷಕ ಮಂಜುನಾಥ್‌ ರೆಡ್ಡಿ (47) ಅವರನ್ನು ಪೊಲೀಸರು ಬಂಧಿಸಿದ್ದಾರೆ.

ಮಂಜುನಾಥ್‌ ರೆಡ್ಡಿ

‘ಆರೋಪಿ ಮಂಜುನಾಥ್‌, ಐಟಿಐ ಕಾಲೊನಿ ಘಟಕದಲ್ಲಿ ಗೃಹ ರಕ್ಷಕನಾಗಿದ್ದ. ಬಿಬಿಎಂಪಿ ಅಡಿಯಲ್ಲಿ ಕೆಲಸ ಮಾಡುತ್ತಿದ್ದ. ಈತನ ಕೃತ್ಯದ ಬಗ್ಗೆ ಯುವತಿ ಟ್ವೀಟ್‌ ಮಾಡಿದ್ದರು. ಪ್ರಕರಣ ದಾಖಲಿಸಿಕೊಂಡು, ಕೆಲ ಗಂಟೆಗಳಲ್ಲಿ ಮುಂಜುನಾಥ್‌ನನ್ನು ಬಂಧಿಸಲಾಗಿದೆ’ ಎಂದು ವೈಟ್‌ಫೀಲ್ಡ್‌ ವಿಭಾಗದ ಡಿಸಿಪಿ ಎಸ್‌. ಗಿರೀಶ್‌ ಹೇಳಿದರು.

‘ಸಮವಸ್ತ್ರ ಧರಿಸಿ ಕೆರೆ ದಡಕ್ಕೆ ಹೋಗಿದ್ದ ಮಂಜುನಾಥ್‌, ಪೊಲೀಸ್‌ ಎಂಬುದಾಗಿ ಹೇಳಿ ₹ 1,000 ಸುಲಿಗೆ ಮಾಡಿದ್ದ. ಪೊಲೀಸರೇ ಸುಲಿಗೆ ಮಾಡಿದ್ದಾಗಿ ಯುವತಿ ಟ್ವೀಟ್‌ನಲ್ಲಿ ಆರೋಪಿಸಿದ್ದರು. ತನಿಖೆ ಮಾಡಿದಾಗ, ಆತ ಗೃಹ ರಕ್ಷಕನೆಂಬುದು ತಿಳಿಯಿತು’ ಎಂದು ಮಾಹಿತಿ ನೀಡಿದರು.

ಫೋಟೊ ಕ್ಲಿಕ್ಕಿಸಿ ಬೆದರಿಕೆ: ‘ಇತ್ತೀಚೆಗೆ ಬೆಂಗಳೂರಿಗೆ ಭೇಟಿ ನೀಡಿದ್ದೆ. ನಾನು ಹಾಗೂ ಸ್ನೇಹಿತ ಜ. 29ರಂದು ಮಧ್ಯಾಹ್ನ ಕುಂದಲಹಳ್ಳಿ ಕೆರೆ ಬಳಿ ಹೋಗಿದ್ದೆವು. ಇಬ್ಬರೂ ಕೆರೆ ದಡದಲ್ಲಿ ಕುಳಿತಿದ್ದೆವು’ ಎಂದು ಯುವತಿ ಟ್ವೀಟ್‌ನಲ್ಲಿ ಬರೆದಿದ್ದರು.

‘ಪೊಲೀಸ್‌ ಸಮವಸ್ತ್ರ ಧರಿಸಿದ್ದ ವ್ಯಕ್ತಿ ನಮ್ಮ ಬಳಿ ಬಂದಿದ್ದ. ನನ್ನ ಹಾಗೂ ಸ್ನೇಹಿತನ ಫೋಟೊವನ್ನು ತನ್ನ ಮೊಬೈಲ್‌ ಕ್ಯಾಮೆರಾದಲ್ಲಿ ಕ್ಲಿಕ್ಕಿಸಿಕೊಂಡಿದ್ದ. ನಮ್ಮ ವಿಳಾಸ ನೀಡುವಂತೆ ಒತ್ತಾಯಿಸಿದ್ದ. ‘ಕೆರೆ ದಡದಲ್ಲಿ ಕುಳಿತುಕೊಳ್ಳುವುದು ಅಪರಾಧ. ನಿಮ್ಮಿಬ್ಬರ ಮೇಲೆ ಪ್ರಕರಣ ದಾಖಲಿಸುತ್ತೇನೆ. ಠಾಣೆಗೆ ಬನ್ನಿ’ ಎಂದು ಬೆದರಿಸಿದ್ದ.’

‘ನಿಮ್ಮ ಮೇಲೆ ಪ್ರಕರಣ ದಾಖಲಿಸಿದರೆ, ಜೀವನಪೂರ್ತಿ ಜೈಲಿನಲ್ಲಿ ಇರಬೇಕಾಗುತ್ತದೆ. ಈ ರೀತಿ ಮಾಡಬಾರದೆಂದರೆ ₹ 1,000 ದಂಡ ಕಟ್ಟಿ. ನಿಮ್ಮ ಮೇಲೆ ಯಾವುದೇ ಪ್ರಕರಣ ದಾಖಲಿಸುವುದಿಲ್ಲ’ ಎಂದು ಆರೋಪಿ ಹೇಳಿದ್ದ. ನಂತರ, ಆತನ ಪೇಟಿಎಂ ಸಂಖ್ಯೆಗೆ ₹ 1,000 ವರ್ಗಾವಣೆ ಮಾಡಿದ್ದೆವು. ಬಳಿಕವೇ ಆತ ಸ್ಥಳದಿಂದ ಹೊರಟುಹೋದ. ಈತನ ವಿರುದ್ಧ ಕ್ರಮ ಕೈಗೊಳ್ಳಿ’ ಎಂದು ಯುವತಿ ಟ್ವೀಟ್‌ನಲ್ಲಿ ಉಲ್ಲೇಖಿಸಿದ್ದರು.

ಆರೋಪಿ ಮಂಜುನಾಥ್‌ ರೆಡ್ಡಿ ಫೋಟೊವನ್ನು ಬೈಕ್‌ ನೋಂದಣಿ ಸಂಖ್ಯೆ ಸಮೇತ ಟ್ವೀಟ್‌ನಲ್ಲಿ ಅಪ್‌ಲೋಡ್‌ ಮಾಡಲಾಗಿತ್ತು. ಅದೇ ಸುಳಿವು ಆಧರಿಸಿ ಪೊಲೀಸರು, ಆರೋಪಿಯನ್ನು ಬಂಧಿಸಿದ್ದಾರೆ. ನಂತರ ಯುವತಿ ತಮ್ಮ ಟ್ವೀಟ್‌ ಅಳಿಸಿ ಹಾಕಿದ್ದಾರೆ.

> **‘ಹಣ ಕೇಳಿದರೆ 112ಕ್ಕೆ ಕರೆ ಮಾಡಿ’**
> ‘ಪೊಲೀಸರು ಅಥವಾ ಪೊಲೀಸರ ಹೆಸರಿನಲ್ಲಿ ಯಾರಾದರೂ ಹಣ ಕೇಳಿದರೆ ನಿಯಂತ್ರಣ ಕೊಠಡಿ 112ಕ್ಕೆ ಕರೆ ಮಾಡಬಹುದು. ಹಿರಿಯ ಅಧಿಕಾರಿಗಳಿಗೂ ದೂರು ನೀಡಬಹುದು. ಇಂಥ ದೂರುಗಳನ್ನು ಗಂಭೀರವಾಗಿ ಪರಿಗಣಿಸಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು’ ಎಂದು ಪೊಲೀಸ್‌ ಅಧಿಕಾರಿಯೊಬ್ಬರು ಹೇಳಿದರು.

‘ಮತದಾರರಿಗೆ ಆಮಿಷ: ಕಟ್ಟುನಿಟ್ಟಿನ ಕ್ರಮಕೈಗೊಳ್ಳಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಧಾನಸಭೆ ಚುನಾವಣೆ ಸಮೀಪಿಸುತ್ತಿದ್ದಂತೆ ವಿವಿಧ ರಾಜಕೀಯ ಪಕ್ಷಗಳು ಮತದಾರರಿಗೆ ವಿವಿಧ ಉಡುಗೊರೆ, ಆಮಿಷಗಳನ್ನು ಒಡ್ಡುತ್ತಿರುವುದು ಗಮನಕ್ಕೆ ಬಂದಿದ್ದು, ಕಾನೂನು ಉಲ್ಲಂಘಿಸಿದವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು’ ಎಂದು ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳಿಗೆ ಮುಖ್ಯ ಚುನಾವಣಾಧಿಕಾರಿ ಮನೋಜ್‌ ಕುಮಾರ್‌ ಮೀನಾ ಸೂಚಿಸಿದ್ದಾರೆ.

ಚುನಾವಣೆಗೆ ಪೂರ್ವಸಿದ್ಧತೆ ಕುರಿತು ಬುಧವಾರ ನಡೆದ ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳ ಮುಖ್ಯಸ್ಥರ ಸಭೆಯಲ್ಲಿ ಈ ಸೂಚನೆ ನೀಡಿದ ಅವರು, ಚುನಾವಣೆಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಸಲಹೆ ನೀಡಿದರು.

‘ಮತದಾರರಿಗೆ ಮದ್ಯಪಾನ ಸೇರಿದಂತೆ ವಿವಿಧ ರೀತಿಯ ಉಡುಗೊರೆ, ಆಮಿಷಗಳನ್ನು ಕೂಪನ್‌ಗಳ ಮೂಲಕ ವಿತರಿಸುತ್ತಿರುವ ಬಗ್ಗೆಯೂ ಮಾಧ್ಯಮಗಳಲ್ಲಿ ವರದಿಯಾಗುತ್ತಿದೆ. ಹೀಗಾಗಿ, ಕಳೆದ ವರ್ಷದ ಇದೇ ಸಮಯದಲ್ಲಿ ಮಾರಾಟವಾದ ಮದ್ಯ ಹಾಗೂ ಪ್ರಸ್ತುತ ಈಗ ಮಾರಾಟವಾಗುತ್ತಿರುವ ಮದ್ಯದ ಪ್ರಮಾಣ ಕುರಿತಂತೆ ಅಬಕಾರಿ ಇಲಾಖೆ ನಿಗಾ ವಹಿಸಬೇಕು. ಹಣ, ಬಂಗಾರದಂಥ ಬೆಲೆಬಾಳುವ ವಸ್ತುಗಳ ಸಾಗಣೆ ಮೇಲೆಯೂ ಕಣ್ಣಿಡಬೇಕು. ಅಂತರರಾಜ್ಯ ಚೆಕ್‌ಪೋಸ್ಟ್‌ಗಳನ್ನು ತೆರೆಯಬೇಕು’ ಎಂದೂ ಸೂಚಿಸಿದರು.

‘ಆಮಿಷಗಳನ್ನು ಒಡ್ಡುತ್ತಿರುವ ಕುರಿತು ಸಂಬಂಧಿಸಿದ ಇಲಾಖೆಗಳು ಅಂತರ್‌ ಇಲಾಖಾಮಟ್ಟದಲ್ಲಿ ಮಾಹಿತಿಗಳನ್ನು ಹಂಚಿಕೊಳ್ಳಬೇಕು. ವಿವಿಧ ಇಲಾಖೆಗಳ ಮೂಲಕ ಸ್ವೀಕರಿಸಲಾಗುವ ನೋಂದಾಯಿತ ಪ್ರಕರಣಗಳ ಕುರಿತು ಜಾರಿ ನಿರ್ದೇಶನಾಲಯ ಕ್ರಮ ಕೈಗೊಳ್ಳಲಿದೆ. ಮಾದಕ ವಸ್ತುಗಳ ಸಾಗಣೆ, ಮಾರಾಟದ ಮೇಲೆಯೂ ಕಣ್ಣಿಡಬೇಕು. ರೈಲು, ಬಂದರು ಹಾಗೂ ವಿಮಾನ ನಿಲ್ದಾಣಗಳಲ್ಲಿ ವಿಶೇಷ ನೋಡಲ್‌ ಅಧಿಕಾರಿಗಳನ್ನು ನಿಯೋಜಿಸಬೇಕು’ ಎಂದು ತಿಳಿಸಿದರು.

ಸಾಂದೀಪನಿ ಶಾಲೆ ಮುಖ್ಯಸ್ಥನ ವಿಚಾರಣೆ

ನಕಲಿ ಎನ್‌ಒಸಿ ಸಲ್ಲಿಕೆ ಆರೋಪ: ಆಡಳಿತ ಮಂಡಳಿ ವಿರುದ್ಧ ಎಫ್‌ಐಆರ್‌

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಲಿ ನಿರಾಕ್ಷೇಪಣಾ ಪತ್ರ (ಎನ್‌ಒಸಿ) ನೀಡಿ ಅಕ್ರಮವಾಗಿ ಸಿ.ಬಿ.ಎಸ್‌.ಇ ಪಠ್ಯಕ್ರಮ ಬೋಧನೆ ಆರೋಪದ ಮೇರೆಗೆ ಚಿತ್ರದುರ್ಗ ಜಿಲ್ಲೆ, ಹೊಳಲ್ಕೆರೆ ತಾಲ್ಲೂಕಿನ ತಾಳಿಕಟ್ಟೆ ಸಾಂದೀಪನಿ ಅಂತರರಾಷ್ಟ್ರೀಯ ವಸತಿಯುತ ಶಾಲಾ ಆಡಳಿತ ಮಂಡಳಿ ವಿರುದ್ಧ ವಿಧಾನಸೌಧ ಪೊಲೀಸ್‌ ಠಾಣೆಯಲ್ಲಿ ಜ.9ರಂದು ದಾಖಲಾಗಿದ್ದ ಪ್ರಕರಣ ಸಂಬಂಧ ಶಾಲಾ ಆಡಳಿತ ಮಂಡಳಿ ಮುಖ್ಯಸ್ಥ ಲೋಕೇಶ್‌ ತಾಳಿಕಟ್ಟೆ ಅವರನ್ನು ಪೊಲೀಸರು ವಿಚಾರಣೆ ನಡೆಸಿದರು.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ (ಪ್ರಾಥಮಿಕ) ಹೆಚ್ಚುವರಿ ಕಾರ್ಯದರ್ಶಿ ಎಸ್‌. ಮಹಾಂತಯ್ಯ ಹೊಸಮಠ ಅವರು ನೀಡಿದ್ದ ದೂರಿನ ಮೇರೆಗೆ ಸಂಸ್ಥೆಯ ವಿರುದ್ಧ ಪ್ರಕರಣ ದಾಖಲಾಗಿತ್ತು. ‘ಕರ್ನಾಟಕ ಸರ್ಕಾರದಿಂದ ಸಿ.ಬಿ.ಎಸ್‌.ಇ ನಿರಾಕ್ಷೇಪಣಾ ಪತ್ರ ನೀಡಲಾಗಿದೆ ಎಂದು ನಕಲಿ ದಾಖಲೆ ಸೃಷ್ಟಿಸಿ, ಅದನ್ನು ದೆಹಲಿಯ ಕೇಂದ್ರೀಯ ಪ್ರೌಢಶಿಕ್ಷಣ ಮಂಡಳಿಗೆ ಸಲ್ಲಿಸಿ ಅನುಮತಿ ಪಡೆದು ಶಾಲೆ ನಡೆಸುತ್ತಿದ್ದಾರೆ. ಈ ಶಾಲೆಗೆ ರಾಜ್ಯ ಸರ್ಕಾರದಿಂದ ಎನ್‌ಒಸಿ ನೀಡಿಲ್ಲ’ ಎಂದು ಮಹಾಂತಯ್ಯ ದೂರಿನಲ್ಲಿ ತಿಳಿಸಿದ್ದರು. ಶಾಲಾ ಆಡಳಿತ ಮಂಡಳಿ ವಿರುದ್ಧ ಕ್ರಮಕ್ಕೂ ಮನವಿ ಮಾಡಿದ್ದರು.

‘ಇಲಾಖೆ ನೀಡಿದ ದೂರಿನ ಸಂಬಂಧ ಇಲ್ಲಿನ ರಾಜರಾಜೇಶ್ವರಿ ನಗರದಲ್ಲಿ ನೆಲೆಸಿರುವ ಲೋಕೇಶ್‌ ಅವರನ್ನು ವಿಧಾನಸೌಧ ಠಾಣೆಗೆ ಬುಧವಾರ ಕರೆಸಿ, ವಿಚಾರಣೆ ನಡೆಸಲಾಗಿದೆ’ ಎಂದು ಪೊಲೀಸ್‌ ಮೂಲಗಳು ತಿಳಿಸಿವೆ.

‘ಶಿಕ್ಷಣ ಇಲಾಖೆಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ ಕುರಿತು ಸಾಕ್ಷಿ ಸಮೇತ ಪ್ರಧಾನಿ ನರೇಂದ್ರ ಮೋದಿ ಅವರಿಗೆ ನೋಂದಾಯಿತ ಅನುದಾನರಹಿತ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಸಂಘವು (ರುಪ್ಸ) ಪತ್ರ ಬರೆದಿತ್ತು. ಅಧಿಕಾರಿಗಳ ಮೇಲೆ ಶಿಕ್ಷಣ ಸಚಿವರು ಒತ್ತಡ ತಂದು ನಮ್ಮ ಶಾಲೆಗಳ ಮೇಲೆ ಕ್ರಮಕ್ಕೆ ಪ್ರಯತ್ನಿಸಿದ್ದರು. ನನ್ನ ಮೇಲೂ ಸುಳ್ಳು ಪ್ರಕರಣ ದಾಖಲಿಸಿ ಕ್ರಮಕ್ಕೆ ಮುಂದಾಗಿದ್ದರು. ಆದರೆ, ಹೈಕೋರ್ಟ್‌ ನಿರೀಕ್ಷಣಾ ಜಾಮೀನು ನೀಡಿದ್ದು, ಜಾಮೀನು ಪ್ರತಿ ಹಾಗೂ ದಾಖಲೆ ಸಲ್ಲಿಸಲು ಬುಧವಾರ ಪೊಲೀಸ್‌ ಠಾಣೆಗೆ ತೆರಳಿದ್ದೆ. ನನ್ನ ಬಂಧನವಾಗಿದೆ ಎಂದು ಶಿಕ್ಷಣ ಇಲಾಖೆ ಅಧಿಕಾರಿಗಳು, ಶಿಕ್ಷಣ ಹಾಗೂ ಗೃಹ ಸಚಿವರು ಹೇಳುತ್ತಿರುವುದು ಸುಳ್ಳು’ ಎಂದು ರುಪ್ಸ ಅಧ್ಯಕ್ಷರೂ ಆಗಿರುವ ಲೋಕೇಶ್‌ ತಾಳಿಕಟ್ಟೆ ಪ್ರತಿಕ್ರಿಯಿಸಿದ್ದಾರೆ.

6ಕ್ಕೆ ಪ್ರತಿಭಟನೆ

ಬೆಂಗಳೂರು: ರಾಜ್ಯ ಸರ್ಕಾರದ ಕಾರ್ಮಿಕ ನೀತಿಗಳನ್ನು ವಿರೋಧಿಸಿ ಫೆ. 6ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಭಾರತೀಯ ಮಜ್ದೂರ್‌ ಸಂಘ ತಿಳಿಸಿದೆ.

‘ಆರೋಗ್ಯ ಇಲಾಖೆಯ ಒಳ ಮತ್ತು ಹೊರಗುತ್ತಿಗೆ ನೌಕರರಿಗೆ ಸಂಬಂಧಿಸಿದಂತೆ ಶ್ರೀನಿವಾಸಾಚಾರಿ ವರದಿ ಜಾರಿಗೊಳಿಸಿ, ಕಾಯಂ ಗೊಳಿಸಬೇಕು. ಸಾರಿಗೆ ಇಲಾಖೆಯ ನೌಕರರ ವೇತನ ಪರಿಷ್ಕರಣೆ ಮಾಡಿ ಸರ್ಕಾರಿ ನೌಕರರಿಗೆ ನೀಡುವ ಸರಿಸಮಾನ ವೇತನ ನಿಗದಿಗೊಳಿಸಬೇಕು’ ಎಂದು ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಚ್‌.ಎಲ್‌. ವಿಶ್ವನಾಥ್‌ ಆಗ್ರಹಿಸಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PERSONAL

Change of Name

CHANGE OF NAME
- ಇದು ಮನೆ ಮಟ್ಟದಲ್ಲಿ ಶಕ್ತಿಯ ಸಾಮರ್ಥ್ಯ ಬಳಕೆಯನ್ನು ಉತ್ತೇಜಿಸುವ ಗುರಿ ಹೊಂದಿದೆ. ಇದು ಇಂಧನ ದಕ್ಷ ಉಪಕರಣಗಳನ್ನು ಪರಿಣಾಮಕಾರಿಯಾಗಿ ಬಳಸುವ ಬಗ್ಗೆ ಗ್ರಾಹಕರಿಗೆ ಅರಿವು ಮೂಡಿಸುವುದು ಹಾಗೂ ಇವುಗಳನ್ನು ಅಳವಡಿಸಲು ಆರಂಭಿಕ ವೆಚ್ಚಗಳನ್ನು ಕಡಿತಗೊಳಿಸುವ ಗುರಿ ಹೊಂದಿದೆ. ಹೀಗಾಗಿ ಹೆಚ್ಚಿನ ಗೃಹ ಬಳಕೆದಾರರಿಗೆ ಎಲ್‌ಇಡಿ ದೀಪಗಳನ್ನು ಖರೀದಿಸಲು ಅನುಕೂಲವಾಗುತ್ತದೆ.
- ಈ ಯೋಜನೆಯಡಿಯಲ್ಲಿ ಗ್ರಾಹಕರಿಗೆ ಸಾಂಪ್ರದಾಯಿಕ ಮತ್ತು ಅಸಮರ್ಪಕ ಉಪಕರಣಗಳಿಗೆ ಪರ್ಯಾಯವಾಗಿ ಎಲ್‌ಇಡಿ ಬಲ್ಬ್‌ಗಳು, ಎಲ್‌ಇಡಿ ಟ್ಯೂಬ್‌ಲೈಟ್ ಮತ್ತು ಇಂಧನ ದಕ್ಷತೆ ಹೆಚ್ಚಿರುವ ಫ್ಯಾನ್‌ಗಳನ್ನು ಒದಗಿಸಲಾಗುತ್ತದೆ.

ಈ ಯೋಜನೆಯ ಸಾಧನೆಗಳು :

- ಉಜಾಲ ಯೋಜನೆಯ ಮಾಹಿತಿಯ ಪ್ರಕಾರ(on Dash Board information) ಜುಲೈ 19, 2016 ಕ್ಕೆ 13,31,79,689 ಎಲ್‌ಇಡಿ ಬಲ್ಬ್‌ಗಳನ್ನು ವಿತರಿಸಲಾಗಿದೆ. ಈ ಸಂಖ್ಯೆ ಜನವರಿ 4ರ ವೇಳೆಗೆ 2023ಕ್ಕೆ 36,86,86,920 ಕ್ಕೆ ಏರಿಕೆಯಾಗಿದೆ.
- ದೇಶೀಯವಾಗಿ ಎಲ್‌ಇಡಿ ಬಲ್ಬ್‌ಗಳ ಉತ್ಪಾದನೆ ತಿಂಗಳಿಗೆ 1 ಲಕ್ಷದಿಂದ 4 ಕೋಟಿಗೆ ಹೆಚ್ಚಿದೆ. ಹೀಗಾಗಿ ಇದು ಮೇಕ್ ಇನ್ ಇಂಡಿಯಾ ಪರಿಕಲ್ಪನೆಯನ್ನು ಉತ್ತೇಜಿಸುತ್ತಿದ್ದು, ದೇಶೀಯ ಬೆಳಕಿನ ಉದ್ಯಮಕ್ಕೆ ಇದು ಪ್ರೋತ್ಸಾಹ ನೀಡುತ್ತಿದೆ.
- 2014 ರಿಂದ 2017ರ ವೇಳೆಗೆ ಎಲ್‌ಇಡಿ ಬಲ್ಬ್‌ಗಳ ಖರೀದಿ ದರ ಶೇ 90 ರಷ್ಟು ಕಡಿಮೆ ಯಾಗಿದೆ.(ಅಂದರೆ ₹310ಯಿಂದ ₹38 ಕ್ಕೆ ಇಳಿದಿದೆ)
- ಭಾರತ, ಜಾಗತಿಕ ಮಟ್ಟದ ಎಲ್‌ಇಡಿ ಬೇಡಿಕೆ ಪೂರೈಸುವ ಅತಿ ದೊಡ್ಡ ರಾಷ್ಟ್ರವಾಗಿದೆ. ಜಾಗತಿಕ ಮಟ್ಟದ ಎಲ್‌ಇಡಿ ಬಲ್ಬ್‌ಗಳ ಬೇಡಿಕೆ ಪೂರೈಕೆಯಲ್ಲಿ 2013-14ರಲ್ಲಿ ಭಾರತದ ಪಾಲು ಶೇ 0.1ರಷ್ಟಿತ್ತು. ಅದು 2015-16ರಲ್ಲಿ ಶೇ 12 ಕ್ಕೆ ಏರಿಕೆಯಾಗಿದೆ.
- ಉಜಾಲ ಕಾರ್ಯಕ್ರಮವು ಜಾಗತಿಕ ರಾಷ್ಟ್ರಗಳ ಗಮನ ಸೆಳೆದಿದೆ. ಈ ಕುರಿತು ಅಂತರರಾಷ್ಟ್ರೀಯ ಇಂಧನ ಸಂಸ್ಥೆಯು ಒಂದು ಅಧ್ಯಯನ ವರದಿಯನ್ನು ಪ್ರಕಟಿಸಿದೆ. ಆ ವರದಿಯಲ್ಲಿ ಉಜಾಲ ಯೋಜನೆಯಿಂದ ಶೇ 5 ರಷ್ಟು ವಾರ್ಷಿಕ ಗೃಹ ಬಳಕೆಯ ವಿದ್ಯುತ್ ಬಿಲ್ ಕಡಿಮೆಯಾಗುತ್ತಿದೆ ಮತ್ತು ಪ್ರತಿ ವರ್ಷ ಗ್ರಾಹಕರಿಗೆ ₹ 1600 ಕೋಟಿ(₹16 ಬಿಲಿಯನ್) ಹಣ ಉಳಿತಾಯವಾಗುತ್ತಿದೆ ಎಂದು ಉಲ್ಲೇಖಿಸಿದೆ.

ಪ್ರಚಲಿತ

ಯೋಜನೆಯ ಅಗತ್ಯತೆ

- 7W ಎಲ್‌ಇಡಿ ಬಲ್ಬ್‌ಗಳು, 14W ಕಾಂಪ್ಯಾಕ್ಟ್ ಫ್ಲೋರೊಸೆಂಟ್ ಲ್ಯಾಂಪ್‌ಗಳಷ್ಟು (CFL) ಮತ್ತು 60W ಇನ್ಕ್ಯಾಂಡೆಸೆಂಟ್ ಲ್ಯಾಂಪ್ (Incandescent lights - ICLs) ಗಳಷ್ಟೇ ಪ್ರಮಾಣದ ಬೆಳಕನ್ನು ಒದಗಿಸುತ್ತವೆ. ಆ ಮೂಲಕ ಐಸಿಎಲ್‌ಎಸ್ ಬಲ್ಬ್‌ಗಳಿಗೆ ಹೋಲಿಸಿದರೆ ಸುಮಾರು ಶೇ 90 ರಷ್ಟು ಇಂಧನ ಉಳಿತಾಯ ಮತ್ತು ಸಿಎಫ್‌ಎಲ್ ಬಲ್ಬ್‌ಗೆ ಹೋಲಿಸಿದರೆ ಶೇ 50 ರಷ್ಟು ಶಕ್ತಿಯನ್ನು ಉಳಿಸುತ್ತದೆ.
- ತುಲನಾತ್ಮಕವಾಗಿ ನೋಡುವುದಾದರೆ 140 ಗಂಟೆಗಳ ಕಾಲ ಬೆಳಕನ್ನು ನೀಡಲು ಎಲ್‌ಇಡಿ ಬಲ್ಬ್‌ಗಳು ಒಂದು ಯೂನಿಟ್ ವಿದ್ಯುತ್ ಬಳಸಿದರೆ, ಅದೇ ಸಿಎಫ್‌ಎಲ್‌ಗಳು ಎರಡು ಯೂನಿಟ್ ವಿದ್ಯುತ್ ಮತ್ತು ಐಸಿಎಲ್ ಬಲ್ಬ್ ಗಳು 9 ಯೂನಿಟ್‌ಗಳಷ್ಟು ವಿದ್ಯುತ್ ಬಳಸುತ್ತವೆ. ಇದು ಎಲ್‌ಇಡಿ ಬಲ್ಬ್‌ಗಳ ಕಾರ್ಯಕ್ಷಮತೆಯನ್ನು ಸೂಚಿಸುತ್ತದೆ.

ಅನುಷ್ಠಾನದಲ್ಲಿನ ಸವಾಲುಗಳು :

- ಐಸಿಎಲ್ ಮತ್ತು ಸಿಎಫ್‌ಎಲ್‌ಗಳಿಗೆ ಹೋಲಿಸಿದರೆ ಎಲ್‌ಇಡಿಗಳನ್ನು ಅಳವಡಿಸುವ ಆರಂಭಿಕ ವೆಚ್ಚ ಅಧಿಕವಾಗಿರುತ್ತದೆ ಹಾಗೂ ಎಲ್‌ಇಡಿ ಬಳಕೆಯಿಂದ ಆಗುವ ವಿದ್ಯುತ್ ಬಿಲ್ ಕಡಿತದ ಬಗ್ಗೆ ಜನಸಾಮಾನ್ಯರಲ್ಲಿ ಅರಿವಿನ ಕೊರತೆ ಇದೆ.
- ಎಲ್‌ಇಡಿ ಬಳಕೆಯಿಂದಾಗುವ ಪ್ರಯೋಜನಗಳು ಹಾಗೂ ಅದರ ಅಳವಡಿಸುವಿಕೆಯ ಅಗತ್ಯಗಳ ಬಗ್ಗೆ, ರಾಜ್ಯ ಮತ್ತು ಡಿಸ್ಕಾಂ (DISCOM) ಮಟ್ಟದಲ್ಲಿ ನೀತಿ ನಿರೂಪಕರು ಹೆಚ್ಚಿನ ಪ್ರಾಶಸ್ತ್ಯ ನೀಡುತ್ತಿಲ್ಲ ಎನ್ನುವ ಟೀಕೆಗಳು ಆಗಿಂದಾಗ್ಗೆ ಕೇಳಿಬರುತ್ತಿವೆ.
- ಇದನ್ನು ಬಳಸುವ ಗ್ರಾಹಕರಿಗೂ ಈ ಬಗ್ಗೆ ಯಾವುದೇ ಪ್ರೋತ್ಸಾಹಕಗಳನ್ನು ನೀಡಲಾಗುತ್ತಿಲ್ಲ. ಈ ಸವಾಲುಗಳನ್ನು ನಿವಾರಿಸಿ ಜನಸಾಮಾನ್ಯರಿಗೆ ಅರಿವು ನೀಡಿಸುವತ್ತ ಮತ್ತಷ್ಟು ಹಾದಿಯನ್ನು ಕ್ರಮಿಸಬೇಕಿದೆ.

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ
www.exammastermind.com

ಮತ್ತಷ್ಟು ಮಾಹಿತಿಗಾಗಿ
ಕೇಂದ್ರ ಸರ್ಕಾರದ ‘ಉಜಾಲ’ ಯೋಜನೆ ಕುರಿತ ವಿಸ್ತೃತ ಮಾಹಿತಿ ಹಾಗೂ ನಾಗರಿಕ ಸೇವಾ ಪರೀಕ್ಷೆಗಳಿಗೆ ಅಗತ್ಯವಾದ ಇಂಥ ಪ್ರಚಲಿತ ವಿದ್ಯಮಾನಗಳು ಕುರಿತ ಮಾಹಿತಿ ಹಾಗೂ ವಿಡಿಯೊಗಳಿಗಾಗಿ ‘ಪ್ರಜಾವಾಣಿ – ಡೆಕ್ಕನ್‌ಹೆರಾಲ್ಡ್’ ಪತ್ರಿಕೆಯ ‘ಮಾಸ್ಟರ್ ಮೈಂಡ್’ ಇ-ಪತ್ರಿಕೆಗೆ ಚಂದಾದಾರರಾಗಿ. ಚಂದಾಕ್ಕಾಗಿ ಪಕ್ಕದಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

ಮಾದರಿ ಪ್ರಶ್ನೋತ್ತರ

ಐಎಎಸ್, ಕೆಎಎಸ್, ಕೆಪಿಎಸ್‌ಸಿ ಸೇರಿದಂತೆ ವಿವಿಧ ಹುದ್ದೆಗಳಿಗಾಗಿ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿನ ‘ಸಾಮಾನ್ಯ ಜ್ಞಾನ’ ವಿಷಯಕ್ಕೆ ಸಂಬಂಧಿಸಿದ ಮಾದರಿ ಪ್ರಶ್ನೋತ್ತರಗಳನ್ನು ಇಲ್ಲಿ ನೀಡಲಾಗಿದೆ.

1)ಭಾರತೀಯ ಸೇನೆ ಆಧುನಿಕ ರೈಫಲ್‌ಗಳ ಕೊರತೆ ಎದುರಿಸುತಿದ್ದ ಕಾಲದಲ್ಲಿ, ಕೇಂದ್ರ ಸರ್ಕಾರ ರಷ್ಯಾದೊಂದಿಗೆ ಒಪ್ಪಂದ ಮಾಡಿಕೊಂಡಿತ್ತು. ಇದರ ಫಲವಾಗಿ `ಇಂಡೊ ರಷ್ಯನ್ ರೈಫಲ್ ಪ್ರೈ ವೇಟ್ ಲಿಮಿಟೆಡ್’ ಸ್ಥಾಪನೆಯಾಯಿತು. ಈಗ ...... ದಲ್ಲಿರುವ ಶಸ್ತ್ರಾಸ್ತ್ರ ತಯಾರಿಕಾ ಕಾರ್ಖಾನೆಯಲ್ಲಿ ಎಕೆ-203 ಕಲಾಶ್ನಿಕೋವ್ ಅಸಾಲ್ಟ್ ರೈಫಲ್ ಉತ್ಪಾದನೆ ಶುರುವಾಗಲಿದೆ.

ಎ) ಉತ್ತರ ಪ್ರದೇಶದ ಅಮೇಠಿಯ ಕೊರ್ವಾ
ಬಿ) ತೆಲಂಗಾಣದ ಹೈದರಾಬಾದ್
ಸಿ) ಮಹರಾಷ್ಟ್ರದ ಔರಂಗಾಬಾದ್ ಡಿ) ಕರ್ನಾಟಕದ ರಟ್ಟೇನಹಳ್ಳಿ

ಉತ್ತರ: ಎ

2) ಭಾರತದ ಅತ್ಯಂತ ಹಳೆಯ ಮೊಕದ್ದಮೆ ಕೋಲ್ಕತ್ತಾದ ಹೈಕೋರ್ಟ್‌ನಲ್ಲಿ 1951ರಿಂದ ಬಾಕಿ ಉಳಿದಿತ್ತು. ಈ ವರ್ಷ ಅದಕ್ಕೆ ಅಂತ್ಯ ಹಾಡಲಾಗಿದೆ. 72 ವರ್ಷಗಳ ಸುದೀರ್ಘ ನಡೆದ ಆ ಪ್ರಕರಣ ಯಾವುದು?

ಎ) ಮುಖ್ಯಮಂತ್ರಿಗಳ ಕೊಲೆ ಬಿ) ಬರ್ಹಾಂಪೋರ್ ಬ್ಯಾಂಕ್ ಲಿಮಿಟೆಡ್ ದಿವಾಳಿ ಪ್ರಕ್ರಿಯೆ ಸಿ) ನೇತಾಜಿ ಸುಭಾಷ್ ಚಂದ್ರರ ಸಾವಿನ ಪ್ರಕರಣ ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:- ಬಿ

3) ಪ್ರತಿ ವರ್ಷ ಜನವರಿ ತಿಂಗಳಲ್ಲಿ ಸ್ವಿಟ್ಜರ್‌ಲೆಂಡ್‌ನ ದಾವೋಸ್‌ನಲ್ಲಿ ವರ್ಲ್ಡ್ ಎಕಾನಾಮಿಕ್ ಫೋರಂ ಸಮ್ಮೇಳನ ನಡೆಯುತ್ತದೆ. ಸಾವಿರಕ್ಕೂ ಹೆಚ್ಚು ಕಂಪನಿಗಳ ಸಿಇಒಗಳು, ಆಯ್ದ ರಾಜಕಾರಣಿಗಳು, ಎನ್‌ಜಿಒ ಮತ್ತು ಧಾರ್ಮಿಕ ನಾಯಕರು ಇದರಲ್ಲಿ ಪಾಲ್ಗೊಳ್ಳುತ್ತಾರೆ. 1997ರಲ್ಲಿ ಅಂದಿನ ಪ್ರಧಾನಿಯಾಗಿದ್ದ ಎಚ್.ಡಿ. ದೇವೇಗೌಡರು ದಾವೋಸ್ ವರ್ಲ್ಡ್ ಎಕಾನಾಮಿಕ್ ಫೋರಂನ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಅದಾದ ಬಳಿಕ ಈಗಿನ ಪ್ರಧಾನಿ ನರೇಂದ್ರ ಮೋದಿಯವರು ಭಾಗವಹಿಸಿದ್ದರು. ಹಾಗಾದರೆ ಈ ಸಲ ನಡೆದ ದಾವೋಸ್ ವರ್ಲ್ಡ್ ಎಕಾನಾಮಿಕ್ ಫೋರಂನ ಸಮ್ಮೇಳನದ ವಿಷಯ/ಥಿಮ್ ಏನಾಗಿತ್ತು?

ಎ) ‘ವಿಘಟಿತ ಜಗತ್ತಿನಲ್ಲಿ ಸಹಕಾರ’ (Cooperation in a Fragmented World)
ಬಿ) ವಿತ್ತ ಸಮಸ್ಯೆಗಳ ಸುತ್ತ ಪರಿಹಾರಗಳ ಗುಚ್ಛ
ಸಿ) ಬಡತನ ಮುಕ್ತ ವಿಶ್ವ : ಭ್ರಷ್ಟಾಚರ ಮುಕ್ತ ವ್ಯವಸ್ಥೆ
ಡಿ) ಮೇಲಿನ ಯಾವುದೂ ಅಲ್ಲ

ಉತ್ತರ: ಎ

4) ಮಾರ್ಕ್ ಕಬ್ಬನ್ ಕಾಲದ ಬಾಲುಬ್ರೂಯಿ ಅತಿಥಿ ಗೃಹವನ್ನು ‘ಸಾಂವಿಧಾನಿಕ ಕ್ಲಬ್’ ಮಾಡಲು ನಿಶ್ಚಯಿಸಲಾಗಿದೆ. ಹಾಗಾದರೆ ಅದು ಎಲ್ಲಿದೆ?

ಎ) ಮೈಸೂರು ಬಿ) ಕಲಬುರ್ಗಿ
ಸಿ) ವಿಜಯಪುರ ಡಿ) ಬೆಂಗಳೂರು

ಉತ್ತರ:- ಡಿ

5) ಉದಮ್‌ಪುರ - ಶ್ರೀನಗರ- ಬಾರಾಮುಲ್ಲಾ ರೈಲು ಸಂಪರ್ಕ ಯೋಜನೆಯ ಭಾಗವಾದ `ಅಂಜಿಖಾಡ್ ಸೇತುವೆ’ (Anji Khad bridge) ವಿಶೇಷತೆ ಏನು?

ಎ) ಇದು ದೇಶದ ಮೊದಲ cable-stayed ರೈಲು ತೂಗು ಸೇತುವೆ ಬಿ) ಇದು ದೇಶದ ಮೊದಲ ಉಕ್ಕು ರಹಿತ ಸೇತುವೆ. ಸಿ) ಇದು ದೇಶದ ಏಕೈಕ ಸೌರ ವಿದ್ಯುತ್‌ನಿಂದ ರೈಲು ಸಂಚರಿಸುವ ಸೇತುವೆಯಾಗಿದೆ. ಡಿ) ಮೇಲಿನ ಯಾವುದೂ ಅಲ್ಲ.

ಉತ್ತರ: ಎ

6) ಪಾಕ್ ಆಕ್ರಮಿತ ಕಾಶ್ಮೀರದ ಗಿಲ್ಗಿಟ್ ಬಾಲ್ಟಿಸ್ಥಾನವನ್ನು ....ದೊಂದಿಗೆ ವಿಲೀನಕ್ಕೆ ಒತ್ತಾಯಿಸಿ ಪಾಕಿಸ್ತಾನದ ಮಿಲಿಟರಿ ಹಾಗೂ ಸರ್ಕಾರದ ವಿರುದ್ಧ ಜನರು ಪ್ರತಿಭಟಿಸುತ್ತಿದ್ದಾರೆ.

ಎ) ಚೀನ ಬಿ) ಅಫ್ಘಾನಿಸ್ತಾನ
ಸಿ) ಭಾರತ ಡಿ) ನೇಪಾಳ **ಉತ್ತರ: ಸಿ**

7) ವಿಶ್ವಸಂಸ್ಥೆ 2023ನೇ ವರ್ಷವನ್ನು ಅಂತಾರಾಷ್ಟ್ರೀಯ ಸಿರಿಧಾನ್ಯ ವರ್ಷ ಎಂದು ಘೋಷಿಸಿದೆ(UN has declared 2023 as the International Year of Millets) ನಮ್ಮ ದೇಶದಲ್ಲಿ 138 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಸಿರಿಧಾನ್ಯ ಬೆಳೆಯಲಾಗುತ್ತದೆ. ಹಾಗಾದರೆ ನಮ್ಮ ರಾಜ್ಯದಲ್ಲಿ ಎಷ್ಟು ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಸಿರಿಧಾನ್ಯ ಬೆಳೆಯಲಾಗುತ್ತದೆ?

ಎ) 06.39 ಬಿ) 26.39 ಸಿ) 36.39 , ಡಿ) 16.39

ಉತ್ತರ: ಡಿ

8) ಗಾಂಧಿಜೀಯವರು ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ವಾಪಸ್ ಬಂದುದರ ನೆನಪಿಗಾಗಿ ಸಾಗರೋತ್ತರ ಭಾರತೀಯರ ವ್ಯವಹಾರಗಳ ಸಚಿವಾಲಯವು ಪ್ರತಿವರ್ಷ ‘ಪ್ರವಾಸಿ ಭಾರತೀಯ ದಿವಸ್’ ಆಚರಿಸುತ್ತದೆ. ಈ ವರ್ಷ ಪ್ರವಾಸಿ ಭಾರತೀಯ ದಿವಸ್ ಆಯೋಜಿಸುವ ಜವಾಬ್ದಾರಿಯನ್ನು ....ಸರ್ಕಾರ ವಹಿಸಿಕೊಂಡಿತು

ಎ) ಕರ್ನಾಟಕ ಬಿ) ಮಧ್ಯಪ್ರದೇಶ
ಸಿ) ಗುಜರಾತ್ ಡಿ) ಒಡಿಶಾ

ಉತ್ತರ: ಬಿ

9) ಕೃಷಿಕರು ಕರ್ನಾಟಕದಲ್ಲಿ ಶುಂಠಿ ಬೆಳೆಯುತ್ತಿದ್ದು, ಕಳೆಯ ನಾಶಕ್ಕಾಗಿ .... ರಾಸಾಯನಿಕವನ್ನು ಬಳಸುತ್ತಿದ್ದಾರೆ. ಅದು ಭೂಮಿಯ ಒಡಲು ಸೇರಿದ ಪರಿಣಾಮ ಅಂತರ್ಜಲ ವಿಷಯುಕ್ತವಾಗುತ್ತಿದೆ. ಅಂತಹ ನೀರು ಕುಡಿಯುವುದರಿಂದ ಅಥವಾ ನೀರನ್ನು ಬಳಸಿ ಆಹಾರ ತಯಾರಿಸಿ ತಿನ್ನುವುದರಿಂದ ಚರ್ಮ, ಕಣ್ಣಿಗೆ ತೊಂದರೆಯಾಗುವುದಲ್ಲದೇ ಲಿವರ್, ಕಿಡ್ನಿಯ ಮೇಲೂ ಕೆಟ್ಟ ಪರಿಣಾಮದ ಜತೆಗೆ ಉಸಿರಾಟಕ್ಕೂ ತೊಂದರೆಯಾಗುತ್ತದೆ.

ಎ) ಗ್ಲೈಫೋಸ್ಫೇಟ್ (Glyphosate)
ಬಿ) ಗಂಧಕಾಮ್ಲ ರಹಿತ ಯೂರಿಯಾಯುಕ್ತ
ಸಿ) ಸಾವಯವ ಗೊಬ್ಬರದ ಜತೆಗೆ ಯೂರಿಯಾಯುಕ್ತ
ಡಿ) ಮೇಲಿನ ಯಾವುದೂ ಅಲ್ಲ **ಉತ್ತರ: ಎ**

(ಮಾಹಿತಿ: Spardha Bharati UPSC ಯೂಟ್ಯೂಬ್ ಚಾನೆಲ್)

ಉದ್ಯೋಗ ವಾರ್ತೆ

‘ಕೆಎಂಎಫ್–ರಾಬಕೊವಿ’ಯಲ್ಲಿ ವಿವಿಧ ಹುದ್ದೆಗಳು

ರಾಯಚೂರು, ಬಳ್ಳಾರಿ, ಕೊಪ್ಪಳ ಮತ್ತು ವಿಜಯನಗರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದಿಂದ (ಕೆಎಂಎಫ್-ರಾಬಕೊವಿ) ಡೇರಿ ಮೇಲ್ವಿಚಾರಕರು, ಕಿರಿಯ ತಂತ್ರಜ್ಞರ ಹುದ್ದೆಗಳ ಭರ್ತಿಗಾಗಿ ಅರ್ಜಿ ಆಹ್ವಾನಿಸಿದೆ. ಈ ಕುರಿತು ಅಧಿಸೂಚನೆ ಹೊರಡಿಸಿದೆ.

ಡೇರಿ ಮೇಲ್ವಿಚಾರಕರು, ಆಡಳಿತ ಸಹಾಯಕ, ಅಕೌಂಟ್ಸ್ ಅಸಿಸ್ಟೆಂಟ್, ಬಾಯ್ಲರ್, ಎಲೆಕ್ಟ್ರಾನಿಕ್ಸ್ ಮೆಕ್ಯಾನಿಕಲ್, ಎಲೆಕ್ಟ್ರಾನಿಕ್ಸ್ ಮತ್ತು ಎಲೆಕ್ಟ್ರಿಕಲ್, ಶಿತಲೀಕರಣ ಮತ್ತು ಎಸಿ ಘಟಕಗಳಲ್ಲಿ ಖಾಲಿ ಇರುವ 24 ಹುದ್ದೆಗಳ ಭರ್ತಿಗಾಗಿ ಜನವರಿ 23ರಂದು ಅಧಿಸೂಚನೆ ಹೊರಡಿಸಲಾಗಿದೆ. ಬಿ.ಇ, ಬಿ.ಕಾಂ ಪದವೀಧರರು, ಐಟಿಐ (ಎಲೆಕ್ಟ್ರಿಕಲ್- ಮೆಕ್ಯಾನಿಕಲ್, ಎಲೆಕ್ಟ್ರಾನಿಕ್ಸ್, ಬಾಯ್ಲರ್, ರೆಫ್ರಿಜರೇಷನ್-ಎಸಿ) ವಿದ್ಯಾಭ್ಯಾಸ ಪೂರ್ಣಗೊಳಿಸಿರುವವರು ಅರ್ಜಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗೆ: www.rbkmul.in ಅಥವಾ https://virtualofficeerp.com/ballary_kmf/uploads/files/notification/1dm4vq.pdf ಈ ಲಿಂಕ್ ನೋಡಬಹುದು.

ಅಂಚೆ ಇಲಾಖೆಯಲ್ಲಿ 40,889 ಹುದ್ದೆಗಳು

ಭಾರತೀಯ ಅಂಚೆ ಇಲಾಖೆ ದೇಶದಾದ್ಯಂತ ಖಾಲಿಯಿರುವ 40,889 ಶಾಖಾ ಅಂಚೆ ಪಾಲಕ (ಬ್ರಾಂಚ್ ಪೋಸ್ಟ್ ಮಾಸ್ಟರ್), ಸಹಾಯಕ ಶಾಖಾ ಅಂಚೆ ಪಾಲಕ (ಅಸಿಸ್ಟೆಂಟ್ ಬ್ರಾಂಚ್ ಪೋಸ್ಟ್ ಮಾಸ್ಟರ್) ಮತ್ತು ಗ್ರಾಮೀಣ ಢಾಕ್ ಸೇವಕ್ ಹುದ್ದೆಗಳ ಭರ್ತಿಗಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಕರ್ನಾಟಕದಲ್ಲಿ ಈ ವಿಭಾಗಗಳಲ್ಲ 3036 ಹುದ್ದೆಗಳು ಖಾಲಿ ಇವೆ. ಇದೇ ಮೊದಲ ಬಾರಿಗೆ ಗ್ರಾಮೀಣ ಅಂಚೆ ಸೇವಕರ ನೇಮಕಾತಿಯು ಅಖಿಲ ಭಾರತ ಮಟ್ಟದಲ್ಲಿ ಏಕಕಾಲದಲ್ಲಿ ನಡೆಯುತ್ತಿದೆ.

ಶೈಕ್ಷಣಿಕ ಅರ್ಹತೆ: ಎಸ್ಸೆಸ್ಸೆಲ್ಸಿ ತರಗತಿ ತೇರ್ಗಡೆಯಾದವರು ಅರ್ಜಿ ಸಲ್ಲಿಸಬಹುದು. 18ರಿಂದ 40 ವರ್ಷದ ವಯೋಮಿತಿ ಒಳಗಿರಬೇಕು. ಅಂಕಗಳ ಆಧಾರದಲ್ಲಿ ಆನ್‌ಲೈನ್ ಮೂಲಕವೇ ನೇಮಕಾತಿ ನಡೆಯಲಿದೆ.

ಅರ್ಜಿ ಸಲ್ಲಿಸಲು ಫೆ.16 ಕೊನೆಯ ದಿನವಾಗಿದ್ದು, https://indiapostgdsonline.gov.in ವೆಬ್‌ಸೈಟ್ ಮೂಲಕವೇ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ವಿವರಗಳಿಗೆ ಇಲಾಖೆಯ ಜಾಲತಾಣಕ್ಕೆ ಭೇಟಿ ನೀಡಬಹುದು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜ ವಿಜ್ಞಾನ

ಮಾದರಿ ಪ್ರಶ್ನೋತ್ತರ

13) ಯಾವ ಮೈದಾನಗಳನ್ನು ಡೂನ್‌ಗಳೆಂದು ಕರೆಯುತ್ತಾರೆ?
ಉತ್ತರ:- ಹಿಮಾಲಯದಲ್ಲಿ ಕಿರಿದಾದ ಸಮ್ಮತಟ್ಟಾದ ಮೈದಾನಗಳಿವೆ.ಈ ಮೈದಾನಗಳನ್ನು ಡೂನ್‌ಗಳು ಎಂದು ಕರೆಯುವರು. ಉದಾ: ಡೆಹರಾಡೂನ್, ಕೋಟಾ, ಪಾಟ್ಲಿ ಚೌಕಾಂಬಾ, ಉದಾಂಪುರ ಮತ್ತು ಕೋಟ್ಲಾಗಳು ಮೊದಲಾದವು

14) ಮೊದಲ ಮಹಾಯುದ್ಧದ ಸಂದರ್ಭದಲ್ಲಿ ಮೈಸೂರು ಸಂಸ್ಥಾನ ಹೇಗೆ ನಡೆದುಕೊಂಡಿತು?
ಉತ್ತರ:- ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರು ಭಾರತದ ವೈಸರಾಯ್ ಅವರಿಗೆ 1914ರ ಆಗಸ್ಟ್‌ನಲ್ಲಿ ಪತ್ರಬರೆದು ಮಹಾಯುದ್ಧದ ಆಪತ್ಕಾಲದಲ್ಲಿ ತಾವು ಬ್ರಿಟಿಷ್ ಸಾಮ್ರಾಜ್ಯದ ರಕ್ಷಣೆಗೆ ಹೆಗಲಿಗೆ ಹೆಗಲು ಕೊಟ್ಟು ನಿಲ್ಲುವುದಾಗಿ ತಿಳಿಸಿದರು. ಕೂಡಲೇ 50 ಲಕ್ಷ ರೂಪಾಯಿಗಳನ್ನು ಸಂಸ್ಥಾನದ ವತಿಯಿಂದ ಭಾರತ ಯುದ್ಧ ನಿಧಿಗೆ ಒಪ್ಪಿಸಿದರು. ಸೆಪ್ಟೆಂಬರ್ 1914ರಲ್ಲಿ ಮೈಸೂರು ಲ್ಯಾನ್ಸ್ರ ರೆಜಿಮೆಂಟ್‌ನ್ನು ಯುದ್ಧಕ್ಕಾಗಿ ಈಜಿಪ್ಟಿಗೆ ಹೊರಡಲು ಸಿದ್ಧಪಡಿಸಬೇಕೆಂದು ಬ್ರಿಟಿಷರು ಹುಕುಂ ಕೊಟ್ಟ ತಕ್ಷಣ ಸೇನಾಧಿಕಾರಿ ಬಿ. ಚಾಮರಾಜ ಅರಸುರವರ ನೇತೃತ್ವದಲ್ಲಿ ಮೈಸೂರು ಸೇನೆಯನ್ನು ರಣಭೂಮಿಗೆ ಕಳುಹಿಸಿದರು. ಹಾಗೂ ಕರ್ನಲ್ ಜೆ. ದೇಸಿರಾಜ ಅರಸುರವರನ್ನು ದರ್ಬಾರಿನ ಪ್ರತಿನಿಧಿಯಾಗಿ ಮಹಾರಾಜರು ಯುದ್ಧ ಭೂಮಿಗೆ ಕಳುಹಿಸಿದರು. ಇದರ ಜೊತೆಯಲ್ಲಿ 23 ಆಫೀಸರರು, 444 ಸಿಪಾಯಿಗಳೂ, 526 ಕುದುರೆಗಳೂ, 49 ಹೇಸರಕತ್ತೆಗಳು, 132 ಪರಿವಾರದವರು ಉಳ್ಳ ಈ ರೆಜಿಮೆಂಟು ಬೆಂಗಳೂರಿಂದ 1914 ಅಕ್ಟೋಬರ್ 13ರಂದು ಹೊರಟಿತ್ತು. ಮೇಜರ್ ಎಂ. ಎಚ್. ಹೆಂಡರ್‌ಸನ್ ಕೂಡ ಇವರೊಡನೆ ಇದ್ದರು. ಮೈಸೂರು ಸಂಸ್ಥಾನವು ಕಬ್ಬಿಣ, ಅಭ್ರಕ, ಕ್ರೋಮೈಟ್ ಮರಮುಟ್ಟುಗಳು, ಕಂಬಳಿಗಳನ್ನು ಹೆಚ್ಚು ಹೆಚ್ಚಾಗಿ ಉತ್ಪಾದಿಸಿ ರಣರಂಗಕ್ಕೆ ಕಳುಹಿಸಿಕೊಟ್ಟಿತು.

15) ಅಸಂಘಟಿತ ಕೆಲಸಗಾರರ ಸಮಸ್ಯೆಗಳು ಯಾವುವು?
ಉತ್ತರ: ಅಸಂಘಟಿತ ಕೆಲಸಗಾರರು ಮಾಡುವ ದುಡಿಮೆಗೆ ಯಾವುದೇ ನಿಗದಿತ ನಿಯಮ, ಕಾಯ್ದೆಗಳಿರುವುದಿಲ್ಲ. ಇವರ ದುಡಿಮೆಗೆ ಕಡಿಮೆ ಕೂಲಿ ನೀಡಲಾಗುತ್ತದೆಯಲ್ಲದೆ ಇವರಿಗೆ ಯಾವುದೇ ಉಚಿತ ವೈದ್ಯಕೀಯ ಸೌಲಭ್ಯಗಳಿರುವುದಿಲ್ಲ. ಇವರ ಕೆಲಸಕ್ಕೆ ಭದ್ರತೆ ಮತ್ತು ನಿಗದಿತ ವೇತನ, ವಿರಾಮ ವೇತನ, ನಿವೃತ್ತಿ ವೇತನ ಹಾಗೂ ಭತ್ಯೆಗಳ ಸೌಲಭ್ಯಗಳಿರುವುದಿಲ್ಲ.

16) ಭಾಷಾವಾರು ರಾಜ್ಯಗಳ ರಚನೆ ಹೋರಾಟ ಮತ್ತು ಕರ್ನಾಟಕ ರಾಜ್ಯದ ರಚನೆಗಾಗಿ ಆದ ಪ್ರಯತ್ನದ ಬಗ್ಗೆ ಬರೆಯಿರಿ.
ಉತ್ತರ:- ಭಾರತ ಸ್ವತಂತ್ರಗೊಂಡ ನಂತರ ಕಂಡುಬಂದ ಪ್ರಮುಖವಾದ ಪ್ರಜಾಸತ್ತಾತ್ಮಕ ಚಳವಳಿಯೆಂದರೆ ಭಾಷಾವಾರು ರಾಜ್ಯಗಳಿಗಾಗಿನ ಹೋರಾಟ. ಜನರಿಗೆ ಉತ್ತಮವಾದ ಆಡಳಿತವನ್ನು ನೀಡಲು ಜನರ ಭಾಷೆಯನ್ನು ಆಧರಿಸಿದ ಭೌಗೋಳಿಕ ಗಡಿಗಳನ್ನು ಗುರುತಿಸಬೇಕೆಂಬ ಒತ್ತಾಯ ತೀವ್ರವಾಗಿತ್ತು. ಬ್ರಿಟಿಷ್ ಮತ್ತು ದೇಶೀಯ ಸಂಸ್ಥಾನಗಳೆರಡರಲ್ಲೂ ಜನರಾಡುವ ಭಾಷೆಯಲ್ಲಿ ಆಡಳಿತ ನಡೆಸುತ್ತಿರಲಿಲ್ಲ. ಈ ಹಿನ್ನೆಲೆಯಲ್ಲಿ ದೇಶದಾದ್ಯಂತ ಭಾಷಾವಾರು ರಾಜ್ಯಗಳನ್ನು ರಚಿಸಬೇಕೆಂಬ ಕೂಗು ತೀವ್ರವಾಗಿತ್ತು. ವಿಶಾಲಾಂಧ್ರ ರಾಜ್ಯ ರಚಿಸಬೇಕೆಂದು ಆಂಧ್ರಮಹಾಸಭಾದ ನೇತೃತ್ವದಲ್ಲಿ 1952ರಲ್ಲಿ ಪೊಟ್ಟಿ ಶ್ರೀರಾಮುಲು 58 ದಿನಗಳ ಉಪವಾಸ ಸತ್ಯಾಗ್ರಹ ನಡೆಸಿ ಅಸುನೀಗಿದ ನಂತರ ಈ ಬೇಡಿಕೆ ತೀವ್ರ ಸ್ವರೂಪವನ್ನು ಪಡೆಯಿತು. 1953ರಲ್ಲಿ ಸರ್ಕಾರವು ರಾಜ್ಯ ಪುನರ್ ವಿಂಗಡಣಾ ಆಯೋಗವನ್ನು ರಚಿಸಿತು. ಇದರಲ್ಲಿ ಫಜಲ್ ಅಲಿ ಅಧ್ಯಕ್ಷರಾಗಿ, ಕೆ. ಎಂ. ಫಣಿಕ್ಕರ್ ಮತ್ತು ಎಚ್. ಎನ್. ಕುಂಜ್ರು ಸದಸ್ಯರಾಗಿದ್ದರು. ಮೊದಲ ಭಾಷಾವಾರು ರಾಜ್ಯವಾಗಿ 1953ರಲ್ಲಿ ಆಂಧ್ರಪ್ರದೇಶ ರಚನೆಯಾಯಿತು. ಈ ಆಯೋಗದ ವರದಿಯಂತೆ 1956ರಲ್ಲಿ ರಾಜ್ಯ ಪುನರ್ವಿಂಗಡಣಾ ಕಾನೂನು ಜಾರಿಗೆ ಬಂದಿತು. ಈ ಕಾನೂನಿನ ಪ್ರಕಾರ ಅಂದು ದೇಶದಲ್ಲಿ 14 ರಾಜ್ಯಗಳು ಮತ್ತು 6 ಕೇಂದ್ರಾಡಳಿತ ಪ್ರದೇಶಗಳು ರಚನೆಯಾದವು. ಕನ್ನಡ ಮಾತನಾಡುವ ಪ್ರದೇಶಗಳು ಹಲವು ಸಂಸ್ಥಾನಗಳಲ್ಲಿ ಹರಿದು ಹಂಚಿಹೋಗಿದ್ದವು. ಇವೆಲ್ಲವನ್ನೂ ಒಟ್ಟುಗೂಡಿಸುವ ಬೇಡಿಕೆಯಿಟ್ಟು ‘ಅಖಿಲ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತು’ ನೇತೃತ್ವದಲ್ಲಿ ಚಳವಳಿ ನಡೆಯಿತು. ಅಂತಿಮವಾಗಿ 1956 ನವೆಂಬರ್ 1 ರಂದು ‘ಮೈಸೂರು ರಾಜ್ಯ’ವು ಅಸ್ತಿತ್ವಕ್ಕೆ ಬಂದಿತು. ಮುಂದೆ 1973ರಲ್ಲಿ ‘ಕರ್ನಾಟಕ’ ಎಂದು ಮರುನಾಮಕರಣ ಮಾಡಲಾಯಿತು.

ಎಸ್ಸೆಸ್ಸೆಲ್ಸಿ

17) ಪ್ಲಾಸಿ ಕದನದ ಪರಿಣಾಮಗಳೇನು?
ಉತ್ತರ:- ಪ್ಲಾಸಿ ಕದನದ ಪರಿಣಾಮಗಳು
1. ಈ ಯುದ್ಧವು ಭಾರತೀಯರಲ್ಲಿದ್ದ ಅನೈಕ್ಯತೆ, ಅಸಂಘಟನೆ ಮತ್ತು ಈ ಕಾಲದ ವ್ಯಾಪಾರಿ ವರ್ಗದಲ್ಲಿದ್ದ ಲೋಭಿತನವನ್ನು ಪ್ರದರ್ಶಿಸಿತು.
2. ಮೀರ್ ಜಾಫರ್ ಬಂಗಾಳದ ನವಾಬನಾದನು.
3. ಕಂಪನಿಯು ಬಂಗಾಳ ಪ್ರಾಂತ್ಯದಲ್ಲಿ ವ್ಯಾಪಾರ ನಡೆಸಲು ಅನಿರ್ಬಂಧಿತ ಹಕ್ಕನ್ನು ಪಡೆಯಿತು.
4. ಸಿರಾಜನು ಕಲ್ಕತ್ತಾದ ಮೇಲೆ ನಡೆಸಿದ ಆಕ್ರಮಣಕ್ಕೆ ಯುದ್ಧ ಪರಿಹಾರವಾಗಿ ಮೀರ್ ಜಾಫರನು ಕಂಪನಿಗೆ ಹದಿನೇಳು ಕೋಟಿ ಎಪ್ಪತ್ತು ಲಕ್ಷ ರೂಪಾಯಿಗಳನ್ನು ನೀಡಿದನು. ಒಟ್ಟಾರೆ, ಮೀರ್ ಜಾಫರನು ಕಂಪನಿ ಮತ್ತು ನೌಕರರ ಕೈಗೊಂಬೆಯಾಗುವ ಮೂಲಕ ನಿರಂತರ ಶೋಷಣೆಗೆ ಒಳಗಾದನು. ಇದರಿಂದ ನವಾಬನ ಬೊಕ್ಕಸ ಬರಿದಾಯಿತೇ ವಿನಃ ಧನ ಪಿಶಾಚಿಗಳಾದ ಕಂಪನಿಯ ಅಧಿಕಾರಿಗಳ ತೃಷೆ ಮಾತ್ರ ತೀರಲಿಲ್ಲ. ಪರಿಣಾಮವಾಗಿ ಬ್ರಿಟಿಷರು ಮೀರ್ ಜಾಫರ್ ಅಸಮರ್ಥನೆಂದು ಬಿಂಬಿಸಿ ಅವನನ್ನು ನವಾಬ ಸ್ಥಾನದಿಂದ ಪದಚ್ಯುತಗೊಳಿಸಿ ಅವನ ಅಳಿಯನಾದ ಮೀರ್ ಖಾಸಿಂನನ್ನು ಬಂಗಾಳದ ನವಾಬನೆಂದು ನೇಮಿಸಿದರು. ಹೀಗೆ ರಾಜಕೀಯ ಚದುರಂಗದಾಟಗಳು ನಡೆದವು.

18) `ಕಾನ್‌ಸ್ಟಾಂಟಿನೋಪಲ್ - ಅಂತರರಾಷ್ಟ್ರೀಯ ಸರಕು ವಿನಿಮಯ ಕೇಂದ್ರವಾಗುವ ಮೂಲಕ ಯೂರೋಪಿನ ವ್ಯಾಪಾರದ ಹೆಬ್ಬಾಗಿಲೆಂದೇ ಪರಿಗಣಿಸಲ್ಪಟ್ಟಿತು’. ಈ ಹೇಳಿಕೆಯನ್ನು ಸಮರ್ಥಿಸಿ
ಉತ್ತರ:-. ಏಷ್ಯಾದ ಸರಕುಗಳನ್ನು ಅರಬ್ ವರ್ತಕರು ಪೂರ್ವ ರೋಮನ್ (ಬೈಜಾಂಟಿಯಂ) ಸಾಮ್ರಾಜ್ಯದ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ ನಗರಕ್ಕೆ ತಲುಪಿಸುತ್ತಿದ್ದರು. ಅಲ್ಲಿಂದ ಇಟಲಿಯ (ರೋಮನ್ ಸಾಮ್ರಾಜ್ಯದ ಭಾಗ) ವರ್ತಕರು ಅವುಗಳನ್ನು ಕೊಂಡು ಯುರೋಪಿನ ದೇಶಗಳಲ್ಲಿ ಮಾರುತ್ತಿದ್ದರು. ಹೀಗೆ ಕಾನ್‌ಸ್ಟಾಂಟಿನೋಪಲ್ ಅಂತರರಾಷ್ಟ್ರೀಯ ಸರಕು ವಿನಿಮಯ ಕೇಂದ್ರವಾಗುವ ಮೂಲಕ ಯೂರೋಪಿನ ವ್ಯಾಪಾರದ ಹೆಬ್ಬಾಗಿಲೆಂದೇ ಪರಿಗಣಿಸಲ್ಪಟ್ಟಿತು.

ಪ್ರಜಾವಾಣಿ ನೋಡಿಯೊ
ಎಸ್ಸೆಸ್ಸೆಲ್ಸಿ ಗಣಿತವಿಜ್ಞಾನದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಗಳಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾದರಿ ಪ್ರಶ್ನೋತ್ತರ

ರಸಾಯನವಿಜ್ಞಾನ

3) ಅಮೈನ್‌ಗಳ ತಯಾರಿಕೆ (Preparation of amines)) ವಿಧಾನಗಳು ಯಾವುವು?

ಉತ್ತರ:- ಅಮೈನ್‌ಗಳನ್ನು ಕೆಳಗಿನ ವಿಧಾನಗಳಿಂದ ತಯಾರಿಸಲಾಗುತ್ತದೆ.

1. ನೈಟ್ರೋ ಸಂಯುಕ್ತಗಳ ಅಪಕರ್ಷಣೆಯಿಂದ :- (Reduction of nitro compound) ಸೂಕ್ಷ್ಮ ವಿಭಜಿತ ನಿಕ್ಕಲ್, ಪೆಲ್ಲೇಡಿಯಂ ಅಥವಾ ಪ್ಲಾಟಿನಂನ ಉಪಸ್ಥಿತಿಯಲ್ಲಿ ಜಲಜನಕ ಅನಿಲವನ್ನು ಹಾಯಿಸಿದಾಗ, ನೈಟ್ರೋ ಸಂಯುಕ್ತಗಳು ಅಮೈನ್‌ಗಳಾಗಿ ಅಪಕರ್ಷಿಸಲ್ಪಡುತ್ತವೆ. ಮತ್ತು ಆಮ್ಲೀಯ ಮಾಧ್ಯಮದಲ್ಲಿ ಲೋಹಗಳಿಂದಲೂ ಕೂಡ ಅಪಕರ್ಷಿಸಲ್ಪಡುತ್ತವೆ. ನೈಟ್ರೋ ಆಲ್ಕೇನ್‌ಗಳು ಕೂಡ ಇದೇ ರೀತಿಯಲ್ಲಿ ಅನುಗುಣವಾದ ಆಲ್ಕೇನಮೈನ್‌ಗಳಾಗಿ ಅಪಕರ್ಷಿಸಲ್ಪಡುತ್ತವೆ.



ರದ್ದಿ ಕಬ್ಬಿಣ ಮತ್ತು ಹೈಡ್ರೋಕ್ಲೋರಿಕ್ ಆಮ್ಲದೊಂದಿಗಿನ ಅಪಕರ್ಷಣೆ ಕ್ರಿಯೆಗೆ ಹೆಚ್ಚು ಪ್ರಾಶಸ್ತ್ಯ ನೀಡಲಾಗಿದೆ. ಏಕೆಂದರೆ ಈ ಕ್ರಿಯೆಯಲ್ಲಿ ಉತ್ಪತ್ತಿಯಾದ $FeCl_2$ ಜಲೀಯ ವಿಭಜನೆ ಹೊಂದಿ ಹೈಡ್ರೋ ಕ್ಲೋರಿಕ್ ಆಮ್ಲವನ್ನು ಬಿಡುಗಡೆ ಮಾಡುತ್ತದೆ . ಹಾಗಾಗಿ ರಾಸಾಯನಿಕ ಕ್ರಿಯೆಯನ್ನು ಆರಂಭಿಸಲು ಸ್ವಲ್ಪ ಪ್ರಮಾಣದ ಹೈಡ್ರೋಕ್ಲೋರಿಕ್ ಆಮ್ಲ ಸಾಕಾಗುತ್ತದೆ.

2. ಆಲ್ಕೈಲ್ ಹ್ಯಾಲೈಡ್‌ಗಳ ಅಮೋನೀಯ ವಿಭಜನೆ: (Ammonolysis of alkyl halides) ಆಲ್ಕೈಲ್ ಅಥವಾ ಬೆಂಜೈಲ್ ಹ್ಯಾಲೈಡ್‌ಗಳಲ್ಲಿ, ಇಂಗಾಲ - ಹ್ಯಾಲೋಜನ್ ಬಂಧವನ್ನು ನ್ಯೂಕ್ಲಿಯಾಕಾಂಕ್ಷಿಗಳಿಂದ ಸುಲಭವಾಗಿ ವಿಭಜನೆ ಮಾಡಬಹುದು ಹಾಗಾಗಿ ಆಲ್ಕೈಲ್ ಅಥವಾ ಬೆಂಜೈಲ್ ಹ್ಯಾಲೈಡ್‌ಗಳು ಅಮೋನಿಯಾದ ಎಥೇನಾಲ್ ದ್ರಾವಣದಲ್ಲಿ ನ್ಯೂಕ್ಲಿಯಾಕಾಂಕ್ಷಿ ಆದೇಶಿತ ಕ್ರಿಯೆ ಹೊಂದಿ ಅವುಗಳ ಹ್ಯಾಲೋಜನ್‌ಗಳು ಅಮೈನೋ($-NH_2$) ಗುಂಪಿನಿಂದ ಪ್ರತಿಸ್ಥಾಪಿಸಲ್ಪಡುತ್ತವೆ.

ಅಮೋನಿಯಾ ಅಣುವಿನ ಇಂಗಾಲ - ಹ್ಯಾಲೋಜನ್ ಬಂಧದ ಈ ವಿಭಜನೆ ಕ್ರಿಯೆಯನ್ನು ಅಮೋನೀಯ ವಿಭಜನೆ ಎನ್ನುವರು. ಈ ಕ್ರಿಯೆಯನ್ನು ಮುಚ್ಚಿದ ಪ್ರನಾಳದಲ್ಲಿ 373K ಉಷ್ಣತೆಯಲ್ಲಿ ನಡೆಸುವರು. ಈ ರೀತಿ ತಯಾರಾದ ಪ್ರಾಥಮಿಕ ಅಮೈನ್, ನ್ಯೂಕ್ಲಿಯಾಕಾಂಕ್ಷಿಯಂತೆ ವರ್ತಿಸುತ್ತದೆ ಮತ್ತು ಪುನಃ ಆಲ್ಕೈಲ್ ಹ್ಯಾಲೈಡ್‌ಗಳೊಂದಿಗೆ ವರ್ತಿಸಿ ದ್ವಿತೀಯಕ ಮತ್ತು ತೃತೀಯಕ ಅಮೈನ್‌ಗಳು ಉಂಟಾಗುತ್ತವೆ. ಮತ್ತು ಕೊನೆಯಲ್ಲಿ ಚತುರ್ಥಕ ಅಮೋನಿಯಂ ಲವಣ ಉತ್ಪತ್ತಿಯಾಗುತ್ತದೆ.



ಅಮೋನಿಯಂ ಲವಣವನ್ನು ಪ್ರಬಲ ಪ್ರತ್ಯಾಮ್ಲದೊಂದಿಗೆ ವರ್ತಿಸಿದಾಗ ಮುಕ್ತ ಅಮೈನ್ ಪಡೆಯಬಹುದು. ಪ್ರಾಥಮಿಕ, ದ್ವಿತೀಯಕ, ತೃತೀಯಕ ಅಮೈನ್‌ಗಳು ಮತ್ತು ಚತುರ್ಥಕ ಲವಣಗಳ ಮಿಶ್ರಣ ಉತ್ಪತ್ತಿಯಾಗುವುದು ಅಮೋನೀಯ ವಿಭಜನೆಯ ನ್ಯೂನತೆಯಾಗಿದೆ. ಹಾಗಿದ್ದರೂ ಅಧಿಕ ಪ್ರಮಾಣದ ಅಮೋನಿಯಾ ಬಳಸಿದಾಗ ಪ್ರಾಥಮಿಕ ಅಮೈನ್ ಮುಖ್ಯ ಉತ್ಪನ್ನವಾಗಿ ದೊರೆಯುತ್ತದೆ. ಹ್ಯಾಲೈಡ್‌ಗಳ ಕ್ರಿಯಾಶೀಲತೆಯು ಕೆಳಗಿನ ಅನುಕ್ರಮದಲ್ಲಿ ಇರುತ್ತದೆ. RI > RBr > RCl

3. ನೈಟ್ರೈಲ್‌ಗಳ ಅಪಕರ್ಷಣೆ (Reduction of nitriles)) : ನೈಟ್ರೈಲ್‌ಗಳು, ಲೀಥಿಯಂ ಅಲ್ಯುಮೀನಿಯಂ ಹೈಡ್ರೈಡ್ ($LiAlH_4$) ಗಳಿಂದ ಅಪಕರ್ಷಣೆ ಹೊಂದಿ ಅಥವಾ ಕ್ರಿಯಾವರ್ಧಿತ ಹೈಡ್ರೋಜನೀಕರಣದಿಂದ ಪ್ರಾಥಮಿಕ ಅಮೈನ್‌ಗಳನ್ನು ಉತ್ಪತ್ತಿ ಮಾಡುತ್ತವೆ. ಈ ಕ್ರಿಯೆಯನ್ನು ಅಮೈನ್‌ಗಳ ಸರಣಿಯ ಆರೋಹರಣಕ್ಕೆ ಬಳಸುವರು. ಅಂದರೆ ಆರಂಭದ ಅಮೈನ್‌ಗಿಂತ ಒಂದು ಇಂಗಾಲದ ಪರಮಾಣು ಹೆಚ್ಚು ಇರುವ ಅಮೈನ್ ಉತ್ಪತ್ತಿಗೆ ಬಳಸುವರು.

$$R-C\equiv N \xrightarrow[Na(Hg)/C_2H_5OH]{H_2/Ni} R-CH_2-NH_2$$

4. ಅಮೈಡ್‌ಗಳ ಅಪಕರ್ಷಣೆ (Reduction of amides):: ಅಮೈಡ್‌ಗಳು ಲೀಥಿಯಂ ಅಲ್ಯುಮೀನಿಯಂ ಹೈಡ್ರೈಡ್‌ನೊಂದಿಗೆ ಅಪಕರ್ಷಣೆ ಹೊಂದಿ ಅಮೈನ್‌ಗಳನ್ನು ಕೊಡುತ್ತವೆ.

$$R-\overset{O}{\overset{\|}{C}}-NH_2 \xrightarrow[(ii)\ H_2O]{(i)\ LiA1H_4} R-CH_2-NH_2$$

5. ಗೇಬ್ರೀಯಲ್ ಥ್ಯಾಲಿಮೈಡ್ ಸಂಶ್ಲೇಷಣೆ (Gabriel-phthalimide synthesi) ಗೇಬ್ರೀಯಲ್ ಸಂಶ್ಲೇಷಣೆಯನ್ನು ಪ್ರಾಥಮಿಕ ಅಮೈನ್‌ಗಳ ತಯಾರಿಕೆಯಲ್ಲಿ ಬಳಸುತ್ತಾರೆ. ಥ್ಯಾಲಿಮೈಡ್, ಎಥೆನಾಲಿಕ್ ಪೊಟ್ಯಾಷಿಯಂ ಹೈಡ್ರಾಕ್ಸೈಡ್‌ನೊಂದಿಗೆ ವರ್ತಿಸಿ, ಪೊಟ್ಯಾಷಿಯಂ ಥ್ಯಾಲಿಮೈಡ್ ಲವಣ ಉಂಟು ಮಾಡುತ್ತದೆ. ಇದನ್ನು ಆಲ್ಕೈಲ್ ಹ್ಯಾಲೈಡಿನೊಂದಿಗೆ ಕಾಯಿಸಿ, ನಂತರ ಕ್ಷಾರೀಯ ಜಲೀಯ ವಿಭಜನೆ ಹೊಂದಿ ಸಂಬಂಧಿಸಿದ ಪ್ರಾಥಮಿಕ ಅಮೈನನ್ನು ಉಂಟು ಮಾಡುತ್ತದೆ. ಈ ವಿಧಾನದಿಂದ ಆರೋಮ್ಯಾಟಿಕ್ ಪ್ರಾಥಮಿಕ ಅಮೈನ್‌ಗಳನ್ನು ತಯಾರಿಸಲು ಸಾಧ್ಯವಿಲ್ಲ ಏಕೆಂದರೆ ಥ್ಯಾಲಿಮೈಡಿನಿಂದ ಉಂಟಾದ ಋಣ ಅಯಾನ್‌ಗಳೊಂದಿಗೆ ಅರೈಲ್ ಹಾಲೈಡ್‌ಗಳು ನ್ಯೂಕ್ಲಿಯಾಕಾಂಕ್ಷಿ ಆದೇಶಿತ ಕ್ರಿಯೆ ಹೊಂದುವುದಿಲ್ಲ.

ಪಿಯುಸಿ



6. ಹಾಫ್‌ಮನ್ ಬ್ರೋಮಮೈಡ್ ನಿಮ್ನೀಕರಣ ಕ್ರಿಯೆ (Hoffmann bromamide degradation reaction)) ಹಾಫ್‌ಮನ್ನನು ಅಮೈಡ್‌ಗಳು ಮತ್ತು ಜಲೀಯ ಅಥವಾ ಎಥೆನಾಲಿಕ್ ದ್ರಾವಣದಲ್ಲಿನ NaOH, ಬ್ರೋಮಿನ್‌ನೊಂದಿಗೆ ವರ್ತಿಸಿ ಪ್ರಾಥಮಿಕ ಅಮೈನ್‌ಗಳನ್ನು ತಯಾರಿಸುವ ವಿಧಾನವನ್ನು ಅಭಿವೃದ್ಧಿಗೊಳಿಸಿದನು. ಈ ನಿಮ್ನಿಕರಣ ಕ್ರಿಯೆಯಲ್ಲಿ ಅಮೈಡ್‌ನ ಕಾರ್ಬೋನಿಲ್ ಕಾರ್ಬನ್‌ನ ಆಲ್ಕೈಲ್ ಅಥವಾ ಅರೈಲ್ ಸಮೂಹವು ಅದರ ನೈಟ್ರೋಜನ್ ಪರಮಾಣುವಿನ ಕಡೆಗೆ ವಲಸೆಹೋಗುತ್ತದೆ. ಈ ರೀತಿ ಉತ್ಪತ್ತಿಯಾದ ಅಮೈನ್‌ನಲ್ಲಿ ಅಮೈಡ್‌ಗಿಂತ ಒಂದು ಕಾರ್ಬನ್ ಕಡಿಮೆ ಇರುತ್ತದೆ.

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ಪ್ರಜಾವಾಣಿ ನೋಡಿಯೊ
ಪಿಯುಸಿ ಭೌತವಿಜ್ಞಾನದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಗಳಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಒಂದನೇ ನಿಯಮ: ಹಣವನ್ನು ಎಂದಿಗೂ ಕಳೆದುಕೊಳ್ಳಬೇಡಿ. ಎರಡನೇ ನಿಯಮ: ಮೊದಲನೇ ನಿಯಮವನ್ನು ಎಂದಿಗೂ ಮರೆಯಬೇಡಿ.

–ವಾರನ್ ಬಫೆಟ್

ಚುನಾವಣೆಯ ಮೇಲೆ ನೆಟ್ಟ ಕಣ್ಣು ಸಮತೋಲನಕ್ಕಾಗಿ ತಂತಿ ನಡಿಗೆ

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬುಧವಾರ ಮಂಡಿಸಿದ 2023–24ನೇ ಸಾಲಿನ ಬಜೆಟ್‌ನಲ್ಲಿ ಎರಡು ಸಂಗತಿಗಳು ಎದ್ದು ಕಾಣುತ್ತಿವೆ. ಒಂದು, ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಈ ಸಂದರ್ಭದಲ್ಲಿ ಸಮತೋಲಿತ ಹಾಗೂ ಜಾಗರೂಕ ಹೆಜ್ಜೆ ಇಡುವಂತಹ ಪ್ರಯತ್ನ. ಮತ್ತೊಂದು, ಪ್ರಸಕ್ತ ವರ್ಷ ನಡೆಯಲಿರುವ ವಿವಿಧ ರಾಜ್ಯಗಳ ವಿಧಾನಸಭಾ ಚುನಾವಣೆಗಳು ಹಾಗೂ ಮುಂದಿನ ವರ್ಷ ನಡೆಯಲಿರುವ ಲೋಕಸಭಾ ಚುನಾವಣೆಯ ಮೇಲೆ ನೆಟ್ಟಿರುವ ಕಣ್ಣು. ಬಜೆಟ್ ಎಲ್ಲ ಕಸರತ್ತುಗಳೂ ಈ ಎರಡು ಸಂಗತಿಗಳ ಮೇಲೆಯೇ ಗಮನವನ್ನು ಕೇಂದ್ರೀಕರಿಸಿರುವುದು ಸುಸ್ಪಷ್ಟ. 2024ರ ಸಾರ್ವತ್ರಿಕ ಚುನಾವಣೆಗೂ ಮುನ್ನ ಮಂಡಿಸಲಾದ ಪೂರ್ಣಪ್ರಮಾಣದ ಕೊನೆಯ ಬಜೆಟ್ ಇದಾಗಿದೆ. ಹೀಗಾಗಿ ಹಣಕಾಸು ಸಚಿವರಿಗೆ ಬಜೆಟ್ ಮಂಡಿಸುವಾಗ 'ಮತ ಬುಟ್ಟಿ'ಯ ಕಣ್ಣಿಂದ ಕಂಡಿದ್ದರಲ್ಲಿ ಆಶ್ಚರ್ಯವೇನಿಲ್ಲ. ಹೊಸ ತೆರಿಗೆ ದರ ಪದ್ಧತಿ ಆಯ್ಕೆ ಮಾಡಿಕೊಂಡವರಿಗೆ ಆದಾಯ ತೆರಿಗೆ ವಿನಾಯಿತಿಯ ಮಿತಿಯನ್ನು ಹೆಚ್ಚಿಸುವ ಘೋಷಣೆಯು ಮಧ್ಯಮ ವರ್ಗದವರ ಹೃದಯವನ್ನು ಬೆಚ್ಚಗೆ ಮಾಡಿರುವುದರಲ್ಲಿ ಅನುಮಾನವೇ ಇಲ್ಲ. ಆದರೆ, ಹೂಡಿಕೆ– ಉಳಿತಾಯಕ್ಕೆ ಉತ್ತೇಜನ ಕೊಡುವ ಹಳೆ ತೆರಿಗೆ ದರ ಪದ್ಧತಿಯಲ್ಲಿ ಇರುವವರಿಗೆ, ಯಾವುದೇ ಹೊಸ ಉತ್ತೇಜಕ ಕ್ರಮಗಳು ಇಲ್ಲ. ಸರ್ಕಾರದ ಈ ನಿಲುವು ಉಳಿತಾಯಕ್ಕೆ ಉತ್ತೇಜನಕಾರಿಯಾಗಿಲ್ಲ, ಖರ್ಚಿಗೆ ಇಂಬು ನೀಡುವಂತಿದೆ. ಉಳಿತಾಯಕ್ಕಿಂತಲೂ ಹೆಚ್ಚಾಗಿ ಜನರ ಕೈಯಲ್ಲಿ ದುಡ್ಡು ಓಡಾಡಲಿ ಮತ್ತು ಅದು ಮಾರುಕಟ್ಟೆಯಲ್ಲಿ ಹೂಡಿಕೆ ಆಗಲಿ ಎನ್ನುವ ಅಭಿಲಾಷೆಯೇ ಈ ತಂತ್ರದ ಹಿಂದೆ ಕೆಲಸ ಮಾಡಿದಂತಿದೆ. ತನಗೆ 'ಉಳಿತಾಯ ವಿರೋಧಿ' ಎಂಬ ಹಣೆಪಟ್ಟಿ ಅಂಟಬಾರದೆಂದು ಮಹಿಳೆಯರಿಗೆ ವಿಶೇಷ ಉಳಿತಾಯ ಯೋಜನೆಯನ್ನು ಘೋಷಿಸುವ ಮೂಲಕ, ಹಿರಿಯ ನಾಗರಿಕರ ಠೇವಣಿ ಮಿತಿಯನ್ನು ಹೆಚ್ಚಿಸುವ ಮೂಲಕ ಸರ್ಕಾರ ಜಾಣತನ ಮೆರೆದಿದೆ. ಮೂಲಸೌಕರ್ಯ ಯೋಜನೆಗಳಿಗೆ ಮಾಡುವ ಬಂಡವಾಳ ವೆಚ್ಚವನ್ನು ಭಾರಿ ಪ್ರಮಾಣದಲ್ಲಿ ಹೆಚ್ಚಿಸಲಾಗಿದೆ. ಏರೋಬ್ಬರಿ ₹ 10 ಲಕ್ಷ ಕೋಟಿಯನ್ನು ಈ ಬಾಬ್ತಿಗೆ ಎತ್ತಿಡಲಾಗಿದ್ದು, ಕಳೆದ ಹಣಕಾಸು ವರ್ಷಕ್ಕೆ ಹೋಲಿಸಿದರೆ ಅನುದಾನವನ್ನು ಶೇಕಡ 33ರಷ್ಟು ಹೆಚ್ಚಿಸಲಾಗಿದೆ. ಆ ಮೂಲಕ 'ಬೆಳವಣಿಗೆ'ಗೆ ಪೂರಕವಾದ ಬಜೆಟ್ ಎಂಬಂತೆ ಬಿಂಬಿಸಲಾಗಿದೆ. ಆದರೆ, 'ಸಾಲ ಮಾಡಿಯಾದರೂ ತುಪ್ಪ ತಿನ್ನು' ಎನ್ನುವ ಧೋರಣೆಯು ಬಜೆಟ್‌ನಲ್ಲಿ ಕಾಣುತ್ತಿದೆ. ಮುಂಬರುವ ಆರ್ಥಿಕ ವರ್ಷದಲ್ಲಿ ₹ 15 ಲಕ್ಷ ಕೋಟಿಯಷ್ಟು ಹಣವನ್ನು ಸಾಲದ ರೂಪದಲ್ಲಿ ತರುವುದಾಗಿ ಹೇಳಲಾಗಿದೆ. ವಿತ್ತೀಯ ಕೊರತೆಯನ್ನು ತಗ್ಗಿಸುವ ಮಾತು ಕೊಟ್ಟು, ದಾಖಲೆಯ ಮಟ್ಟದಲ್ಲಿ ಸಾಲ ಮಾಡುವುದು ಎಷ್ಟು ಸರಿ ಎಂಬುದು ಮರುಪರಿಶೀಲನೆಗೆ ಯೋಗ್ಯವಾದ ಅಂಶ. ಖಾಸಗಿ ವಲಯದಿಂದ ನಿರೀಕ್ಷಿತ ಪ್ರಮಾಣದಲ್ಲಿ ಹೂಡಿಕೆ ಆಗದಿರುವುದು, ಸರ್ಕಾರವೇ ಸಾಲ ಮಾಡಿ ಹಣ ಹೊಂದಿಸಬೇಕಾದ ಸಂದರ್ಭವನ್ನು ಸೃಷ್ಟಿಸಿದೆಯೇ? ಇದು ಯೋಚಿಸಬೇಕಾದಂತಹ ವಿದ್ಯಮಾನ.

ಸಾಮಾಜಿಕ ವಲಯದತ್ತ ಮಾನವೀಯ ನೋಟ ಹರಿಸುವ ಅಗತ್ಯವು ಈ ಹೊತ್ತಿನಲ್ಲಿ ಇತ್ತು

ಕೃಷಿ ಆಧಾರಿತ ಗ್ರಾಮೀಣ ಆರ್ಥಿಕತೆಗೆ ಬಜೆಟ್‌ನಲ್ಲಿ ವಿಶೇಷ ಒತ್ತು ನೀಡಿದರೂ ಕೆಲವು ಹಾಲಿ ಯೋಜನೆಗಳಿಗೆ ಅನುದಾನ ಕಡಿತ ಮಾಡಿರುವುದು ಗಮನಾರ್ಹ. ಕೃಷಿಗೆ 'ಬಲ' ನೀಡುವಂತಹ ಡಿಜಿಟಲ್ ತಂತ್ರಜ್ಞಾನದ ವಿಸ್ತರಣೆ, ನೈಸರ್ಗಿಕ ಕೃಷಿಗೆ ಉತ್ತೇಜನ, ಬೀಜ–ರಸಗೊಬ್ಬರ ಪೂರೈಕೆಯ ಸರಪಳಿ ಬಲವರ್ಧನೆ, ಗ್ರಾಮೀಣ ನವೋದ್ಯಮಗಳ ನೆರವಿಗಾಗಿ ನಿಧಿ ಸ್ಥಾಪನೆಯಂತಹ ಘೋಷಣೆಗಳು ಕೇಳಲು ಹಿತವಾಗಿವೆ. ಆದರೆ, ಅವುಗಳು ಕಾರ್ಯರೂಪಕ್ಕೆ ಬಂದರೆ ಮಾತ್ರ ಗ್ರಾಮೀಣ ಆರ್ಥಿಕತೆ ಚೇತರಿಕೆಯ ಹಾದಿ ಹಿಡಿಯಲು ಸಾಧ್ಯ. ಗ್ರಾಮಭಾರತಕ್ಕೆ ಒಂದು ಕೈಯಿಂದ ಕೊಟ್ಟು, ಮತ್ತೊಂದು ಕೈಯಿಂದ ಕಿತ್ತುಕೊಳ್ಳಲು ಹಣಕಾಸು ಸಚಿವರು ಹೊರಟಂತಿದೆ. ಏಕೆಂದರೆ, ಗ್ರಾಮಾಂತರ ಭಾಗದಲ್ಲಿ ಉದ್ಯೋಗವನ್ನು ಖಾತರಿಗೊಳಿಸುವ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ (ಮನರೇಗಾ) ಯೋಜನೆಯ ಅನುದಾನದಲ್ಲಿ ಭಾರಿ ಕಡಿತ ಮಾಡಲಾಗಿದೆ. ಪ್ರಸಕ್ತ ವರ್ಷದಲ್ಲಿ ಈ ಯೋಜನೆಗೆ ಮಾಡಲಾಗುತ್ತಿರುವ ಪರಿಷ್ಕೃತ ವೆಚ್ಚ ₹ 89,400 ಕೋಟಿ. ಆದರೆ, ಮುಂದಿನ ಹಣಕಾಸು ವರ್ಷದಲ್ಲಿ 'ಮನರೇಗಾ'ಕ್ಕೆ ₹ 60 ಸಾವಿರ ಕೋಟಿಯನ್ನಷ್ಟೇ ಎತ್ತಿಡಲಾಗಿದೆ. ಹಾಗೆಯೇ ಕೃಷಿ ಬೆಳೆಗಳ ಕನಿಷ್ಠ ಬೆಂಬಲ ಬೆಲೆ ಹೆಚ್ಚಿಸುವ ಯಾವ ಭರವಸೆಯನ್ನೂ ನೀಡಲಾಗಿಲ್ಲ. ಚುನಾವಣೆ ಹೊಸ್ತಿಲಲ್ಲಿರುವ ಕರ್ನಾಟಕದ ಭದ್ರಾ ಮೇಲ್ದಂಡೆ ಯೋಜನೆಗೆ ದೊಡ್ಡಪ್ರಮಾಣದ ಅನುದಾನ ಘೋಷಿಸಲಾಗಿದೆ.

ಹಸಿರು ಇಂಧನಕ್ಕೆ ಹೆಚ್ಚಿನ ಒತ್ತು ನೀಡಿರುವುದು ಸ್ವಾಗತಾರ್ಹ ನಿರ್ಧಾರ. ಹವಾಮಾನ ಬದಲಾವಣೆಯ ಈ ಕಾಲಘಟ್ಟದಲ್ಲಿ ಪರಿಸರಕ್ಕೆ ಪೂರಕವಾದ ತಂತ್ರಜ್ಞಾನ ಅಳವಡಿಸಿಕೊಳ್ಳುವುದು ಇಂದಿನ ಅಗತ್ಯ ಕೂಡ. ಜಗತ್ತಿನ ಹಲವೆಡೆ ಕಂಡುಬಂದಿರುವ ಆರ್ಥಿಕ ಬಿಕ್ಕಟ್ಟಿನ ಕರಿನೆರಳಿನಿಂದ ಪಾರಾಗುವ ಯತ್ನ ಕೂಡ ಬಜೆಟ್‌ನಲ್ಲಿ ಗೋಚರಿಸುತ್ತದೆ. ವಸತಿ ಯೋಜನೆಗೆ ಹೆಚ್ಚಿಸಿರುವ ಅನುದಾನ, ರೈಲ್ವೆ ಯೋಜನೆಗಳಿಗೆ ನೀಡಿರುವ ದೊಡ್ಡ ಮೊತ್ತದ ನೆರವು, ಮೂಲಸೌಕರ್ಯ ಯೋಜನೆಗಳಲ್ಲಿ ಭಾರಿ ಪ್ರಮಾಣದ ಬಂಡವಾಳ ಹೂಡಿಕೆಯಂತಹ ಕ್ರಮಗಳೆಲ್ಲ ಆ ಯತ್ನದ ಭಾಗಗಳಾಗಿ ಕಾಣುತ್ತವೆ. ಆರ್ಥಿಕತೆಗೆ ಬಲ ತುಂಬುವಲ್ಲಿ ತಯಾರಿಕಾ ವಲಯದ ಕೊಡುಗೆಯ ಮಹತ್ವವನ್ನು ಎಂದೂ ನಿರ್ಮಲಾ ಅವರು ಭಾವಿಸಿದಂತಿದೆ. ಸಾಮಾಜಿಕ ವಲಯದತ್ತ ಮಾನವೀಯ ದೃಷ್ಟಿಕೋನದಿಂದ ಗಮನ ನೀಡುವುದು ಅನಿವಾರ್ಯವಾದ ಕೋವಿಡ್ ನಂತರದ ಈ ಕಾಲಘಟ್ಟದಲ್ಲಿ 'ಅಮೃತಕಾಲ'ದ ಬಜೆಟ್ ಈ ದಿಸೆಯಲ್ಲಿ ಇನ್ನಷ್ಟು ಗಮನ ಹರಿಸಬೇಕಿತ್ತು. ಇತ್ತೀಚಿನ ವರ್ಷಗಳಲ್ಲಿ ಜನರ ಕಿವಿಗೆ ಬೀಳುತ್ತಿರುವ ಅಂಕಿ-ಅಂಶಗಳು ಅವರ ವಿಶ್ವಾಸ ಗಳಿಸುವಲ್ಲಿ ಸಂಪೂರ್ಣವಾಗಿ ಸೋತಿವೆ. ಬರೀ ಘೋಷಣೆಗಳು ಕ್ಷಣಿಕ ಹಿತಾನುಭವ ನೀಡಬಹುದೇ ವಿನಾ ಅವುಗಳಿಂದ ಹೆಚ್ಚೇನೂ ಪ್ರಯೋಜನವಿಲ್ಲ. ಬಜೆಟ್‌ನ ಘೋಷಣೆಗಳೆಲ್ಲ ಅನುಷ್ಠಾನಕ್ಕೆ ಬಂದರಷ್ಟೇ ಅವುಗಳಿಗೆ ಕಿಮ್ಮತ್ತು. ಆ ದಿಕ್ಕಿನಲ್ಲಿ ಸರ್ಕಾರ ತನ್ನ ಬದ್ಧತೆಯನ್ನು ಪ್ರದರ್ಶಿಸಬೇಕು.

ದಿನದ ಟ್ವೀಟ್

ಮೇಲ್ಸೇತುವೆ ಪರಿಹಾರವಲ್ಲ

ಬೆಂಗಳೂರಿನ ಟ್ರಾಫಿಕ್ ದಟ್ಟಣೆಯನ್ನು ತಗ್ಗಿಸಲು ಉತ್ತಮ ಮೂಲಸೌಕರ್ಯ ಕಲ್ಪಿಸಬೇಕೆಂಬುದು ನಾಗರಿಕರ ಬೇಡಿಕೆ. ಚಂಡೀಗಡ ವಿಶ್ವವಿದ್ಯಾಲಯದ ಉದಾಹರಣೆಯನ್ನು ಇಟ್ಟುಕೊಂಡು, ನಗರದ ಸುತ್ತ ಅನಗತ್ಯವಾಗಿ ಮೇಲ್ಸೇತುವೆಗಳನ್ನು ನಿರ್ಮಿಸಿದರೆ ಸಂಚಾರ ದಟ್ಟಣೆ ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಿಲ್ಲ. #FlyoverYaake

ಸಿಂಥಿಯಾ ಸ್ಟೀಫನ್, ಬರಹಗಾರ್ತಿ

ಕಿಡಿನುಡಿ



ಇದು ಇಂದು ಮಂಡಿಸಿದ ಬಜೆಟ್ ಹೌದೇ? ಇದು ದಿನಸಿ ಅಂಗಡಿ ಮಾಲೀಕನೊಬ್ಬ ಕೊಡುವ ಬಿಲ್ ಇದ್ದಂತಿದೆ- ಒಂದು ಒಳ್ಳೆಯ ಬಜೆಟ್ ತನ್ನ ಧ್ಯೇಯೋದ್ದೇಶಗಳೇನು ಎಂಬುದನ್ನು ಹೇಳಬೇಕು. ಜಿಡಿಪಿ ಬೆಳವಣಿಗೆ ದರದ ಕುರಿತು ಹೇಳುತ್ತದೆ ಎಂದಾದರೆ, ಹೂಡಿಕೆಯ ಪ್ರಮಾಣ ಎಷ್ಟು, ಅದಕ್ಕೆ ಸಿಗುವ ಪ್ರತಿಫಲ ಏನು, ಸರ್ಕಾರದ ಆದ್ಯತೆಗಳೇನು, ಆರ್ಥಿಕ ಮಾರ್ಗೋಪಾಯಗಳೇನು ಮತ್ತು ಸಂಪನ್ಮೂಲ ಕ್ರೋಡೀಕರಣ ಇವೆಲ್ಲವನ್ನೂ ಸಾರ್ವಜನಿಕರ ಮುಂದಿಡಬೇಕಾಗುತ್ತದೆ.

ಸುಬ್ರಮಣಿಯನ್ ಸ್ವಾಮಿ, ಬಿಜೆಪಿ ಮುಖಂಡ

25 ವರ್ಷಗಳ ಹಿಂದೆ

ಸೋಮವಾರ, 2-2-1998

• ರಾಷ್ಟ್ರೀಯ ಸರ್ಕಾರ ರಚನೆ ಸಲಹೆ: ಪ್ರಧಾನಿ ವಿರೋಧ

ನವದೆಹಲಿ, ಫೆ. 1 (ಪಿಟಿಐ)– ಲೋಕಸಭಾ ಚುನಾವಣೆಯ ಬಳಿಕ ಅತಂತ್ರ ಸಂಸತ್ ಅಸ್ತಿತ್ವಕ್ಕೆ ಬಂದಲ್ಲಿ ಸರ್ವ ಪಕ್ಷಗಳ ರಾಷ್ಟ್ರೀಯ ಸರ್ಕಾರವನ್ನು ರಚಿಸುವುದಕ್ಕೆ ಪ್ರಧಾನಿ ಐ.ಕೆ. ಗುಜ್ರಾಲ್ ವಿರೋಧ ವ್ಯಕ್ತಪಡಿಸಿದ್ದಾರೆ.

ಟಿ.ವಿ. ಚಾನೆಲ್‌ವೊಂದಕ್ಕೆ ನೀಡಿದ ಸಂದರ್ಶನದಲ್ಲಿ ಅವರು, 'ವಿರೋಧ ಪಕ್ಷಗಳ ಸಾಲಿನಲ್ಲಿ ಯಾರೂ ಇರದೆ ಎಲ್ಲ ಪಕ್ಷಗಳೂ ಒಂದಾದರೆ ಸರ್ಕಾರಕ್ಕೆ ಇದು ಯೋಗ್ಯವಾದುದಲ್ಲ. ಅಂದು ದುಃಖದ ದಿನವಾಗುತ್ತದೆ' ಎಂದರು.

• ರಾಜೀವ್ ಹತ್ಯೆ: ರಾಜಕಾರಣಿಗಳ ಕೈವಾಡ– ಸೋನಿಯಾ ಆರೋಪ

ಗಾಂಧಿ ನಗರ (ಅಮೇಠಿ) ಫೆ. 1– ರಾಜೀವ್ ಗಾಂಧಿ ಅವರ ಹತ್ಯೆಯಲ್ಲಿ ಕೆಲವು ರಾಜಕಾರಣಿಗಳ ಕೈವಾಡ ಇದೆ ಎಂದು ಸೋನಿಯಾ ಗಾಂಧಿ ಅವರು ಆಪಾದಿಸಿದ್ದಾರೆ.

ಇಲ್ಲಿ ಚುನಾವಣಾ ಪ್ರಚಾರ ಭಾಷಣ ಮಾಡುತ್ತಿದ್ದ ಅವರು, 'ರಾಜೀವ್ ಗಾಂಧಿ ಹತ್ಯೆಯ ಒಳಸಂಚನ್ನು ರೂಪಿಸಿದವರಿಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸಹಾಯ ಮಾಡಿದವರನ್ನು ರಕ್ಷಿಸಲಾಗುತ್ತಿದೆ' ಎಂದು ಪರೋಕ್ಷವಾಗಿ ಡಿಎಂಕೆ ಮತ್ತು ಸಂಯುಕ್ತ ರಂಗವನ್ನು ಟೀಕಿಸಿದರು.

50 ವರ್ಷಗಳ ಹಿಂದೆ

ಶುಕ್ರವಾರ, 2-2-1973

• ಐದನೇ ಯೋಜನೆ ಜಾರಿಗೆ ಶ್ರಮಿಸಲು ಕಾಂಗ್ರೆಸ್ಸಿಗರಿಗೆ ಕರೆ

ನವದೆಹಲಿ, ಫೆ. 1– ಐದನೆಯ ಯೋಜನೆ ಜಾರಿಗೆ ಬರಲು ಕಾಂಗ್ರೆಸ್ ಸದಸ್ಯರು ಸಕ್ರಿಯಾತ್ಮಕವಾಗಿ ಸಹಕರಿಸಬೇಕೆಂದು ಪ್ರಧಾನಿ ಇಂದಿರಾ ಗಾಂಧಿ ಮತ್ತು ಕಾಂಗ್ರೆಸ್ ಅಧ್ಯಕ್ಷ ಡಾ. ಶಂಕರದಯಾಳ್ ಶರ್ಮ ಅವರು ದೇಶದ ಎಲ್ಲ ಕಾಂಗ್ರೆಸ್ ನಾಯಕರಿಗೆ ಇಂದು ಕರೆ ನೀಡಿದರು. ಯೋಜನೆ ಕಾರ್ಯಕ್ರಮ ಮತ್ತು ಸಾಮಾಜಿಕ– ಆರ್ಥಿಕ ಸುಧಾರಣೆಗೆ ಕ್ರಮಗಳು ಜಾರಿಗೆ ಬರುವುದನ್ನು ಪೂರ್ತಿ ಆಡಳಿತಾಂಗದ ಮೇಲೆ ಹೊರಿಸುವುದರಲ್ಲಿ ಇರುವ ಅಪಾಯದ ವಿರುದ್ಧ ಅವರು ಎಚ್ಚರಿಸಿದರು.

ಹಾಕಿ: ಏಷ್ಯನ್ ಗೇಮ್ಸ್, ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಆಡುವ ಕನಸಿಗೆ ರೆಕ್ಕೆ

ಕನ್ನಡಿಗರಿಗೆ ಒಲಿಯುವುದೇ ಅವಕಾಶ?

ವಿಶ್ಲೇಷಣೆ

ಗಿರೀಶ ದೊಡ್ಡಮನಿ

ಎರಡು ವರ್ಷಗಳ ಹಿಂದೆ ಟೋಕಿಯೊದಲ್ಲಿ ಕಂಚು ಹಾಗೂ ಹೋದ ವರ್ಷ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಬೆಳ್ಳಿ ಗೆದ್ದು, ಎಫ್‌ಐಎಚ್ ಪ್ರೊ ಲೀಗ್ ಟೂರ್ನಿಯಲ್ಲಿ ಎರಡನೇ ಸ್ಥಾನ ಪಡೆದಿದ್ದ ಭಾರತ ಹಾಕಿ ತಂಡ ವಿಶ್ವಕಪ್ ಟೂರ್ನಿಯಲ್ಲಿ ಮುಗ್ಗರಿಸಿತು.

ರೂರ್ಕೆಲಾದಲ್ಲಿ ಈಚೆಗೆ ಉದ್ಘಾಟನೆಗೊಂಡ ಬಿರ್ಸಾ ಮುಂಡಾ ಹಾಕಿ ಕ್ರೀಡಾಂಗಣದಲ್ಲಿ ಭಾರತ ತಂಡವು ವಿಶ್ವಕಪ್ ಎತ್ತಿಹಿಡಿದು ಸಂಭ್ರಮಿಸುವ ಕನಸು ಕೈಗೂಡಲಿಲ್ಲ. ಹರ್ಮನ್‌ಪ್ರೀತ್ ಸಿಂಗ್ ನಾಯಕತ್ವದ ಭಾರತ ತಂಡ ಎಂಟರ ಘಟ್ಟವನ್ನೂ ಪ್ರವೇಶಿಸಲಿಲ್ಲ. ಒಟ್ಟಾರೆ ಒಂಬತ್ತನೇ ಸ್ಥಾನ ಪಡೆಯಲಷ್ಟೇ ತಂಡಕ್ಕೆ ಸಾಧ್ಯವಾಯಿತು. 48 ವರ್ಷಗಳ ಹಿಂದೆ ವಿಶ್ವಕಪ್ ಟೂರ್ನಿಯಲ್ಲಿ ಚಿನ್ನ ಗೆದ್ದ ನಂತರ ಭಾರತಕ್ಕೆ ಇದುವರೆಗೆ ಪದಕ ಜಯಿಸಲು ಸಾಧ್ಯವಾಗಿಲ್ಲ. ಈ ಬಾರಿಯೂ ಅದು ಕೈಗೂಡಲಿಲ್ಲ. ಆದರೆ ಈ ನಿರಾಸೆಯ ನಡುವೆಯೇ ಕರ್ನಾಟಕದ ಪಾಲಿಗೆ ಒಂದು ಆಶಾದಾಯಕ ಸಂಗತಿ ಇದೆ. ಅದು ಮುಂಬರುವ ಏಷ್ಯನ್ ಗೇಮ್ಸ್ ಮತ್ತು ಪ್ಯಾರಿಸ್ ಒಲಿಂಪಿಕ್ ಕೂಟಗಳಿಗೆ ತಂಡವನ್ನು ಕಟ್ಟುವತ್ತ ಹಾಕಿ ಇಂಡಿಯಾ ಚಿತ್ತ ಹರಿಸುತ್ತಿದೆ. ಇದರಿಂದಾಗಿ ಕನ್ನಡಿಗರಿಗೆ ಮತ್ತೆ ಅವಕಾಶ ಸಿಗುವ ನಿರೀಕ್ಷೆ ಮೂಡಿದೆ.

ಟೋಕಿಯೊ ಒಲಿಂಪಿಕ್ಸ್ ಸಂದರ್ಭದಲ್ಲಿ ಕರ್ನಾಟಕದ ಎಸ್‌.ವಿ. ಸುನೀಲ್ ಫಿಟ್ ಇದ್ದರೂ ಭಾರತ ತಂಡದಲ್ಲಿ ಸ್ಥಾನ ನೀಡಿರಲಿಲ್ಲ. ಅಲ್ಲಿಂದ ಇಲ್ಲಿಯವರೆಗೆ ಕರ್ನಾಟಕದ ಯಾರಿಗೂ ಸ್ಥಾನ ಲಭಿಸಿಲ್ಲ. ಪಂಜಾಬ್ ಮತ್ತು ಹರಿಯಾಣ ಆಟಗಾರರ ಪ್ರಾಬಲ್ಯ ಈಗಲೂ ಇದೆ. ಆದರೆ ಹಾಕಿಯಲ್ಲಿ ಭಾರತಕ್ಕೆ ಚಿನ್ನದ ಯುಗ ಸೃಷ್ಟಿಸಿದವರಲ್ಲಿ ಕನ್ನಡಿಗರೂ ಇದ್ದರಲ್ಲವೇ?

1964ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದಿದ್ದ ಭಾರತ ತಂಡದಲ್ಲಿ ಬೆಳಗಾವಿಯ ಬಂಡು ಪಾಟೀಲ, 1972ರಲ್ಲಿ ಮ್ಯೂನಿಕ್ ಒಲಿಂಪಿಕ್ಸ್‌ನಲ್ಲಿ ಕಂಚು ಜಯಿಸಿದ್ದ ಭಾರತ ತಂಡದಲ್ಲಿ ಕೊಡಗಿನ ಎಂ.ಪಿ. ಗಣೇಶ್, ಬಿ.ಪಿ. ಗೋವಿಂದ ಹಾಗೂ 1980ರಲ್ಲಿ ಚಿನ್ನ ಗೆದ್ದ ಬಳಗದಲ್ಲಿ ಎಂ.ಎಂ. ಸೋಮಯ್ಯ ಇದ್ದರು. 1975ರಲ್ಲಿ ವಿಶ್ವಕಪ್ ಗೆದ್ದ ತಂಡದಲ್ಲಿಯೂ ಗೋವಿಂದ ಮತ್ತು ಪಿ.ಇ. ಕಾಳಯ್ಯ ಆಡಿದ್ದರು.

ಅದರ ನಂತರವೂ ಭಾರತದ ಹಾಕಿ ಕ್ರೀಡೆಗೆ ಕರ್ನಾಟಕ ಕೊಡುಗೆ ಕೊಟ್ಟಿದೆ. ಎ.ಬಿ. ಸುಬ್ಬಯ್ಯ, ಸಿ. ಪೂಣಚ್ಚ, ರವಿ ನಾಯ್ಕರ್, ಆಶಿಶ್ ಬಲ್ಲಾಳ, ಜ್ಯೂಡ್ ಫೆಲಿಕ್ಸ್, ಅರ್ಜುನ್ ಹಾಲಪ್ಪ ಕೊಡುಗೆಯನ್ನೂ ಮರೆಯುವಂತಿಲ್ಲ.

2008ರಲ್ಲಿ ಒಲಿಂಪಿಕ್ ಅರ್ಹತೆಯನ್ನು ಗಿಟ್ಟಿಸಿರಲಿಲ್ಲ. ಆದರೆ, 2012ರ ಲಂಡನ್ ಒಲಿಂಪಿಕ್ ಕೂಟದಲ್ಲಿ ಮರಳಿ ಸ್ಥಾನ ಪಡೆಯುವಲ್ಲಿ ಎಸ್‌.ವಿ.ಸುನೀಲ್, ವಿ.ಆರ್. ರಘುನಾಥ್, ಭರತ್ ಚೆಟ್ರಿ ಅವರ ಆಟವೇ ಪ್ರಮುಖವಾಗಿತ್ತು. ಅಂದು ಆರಂಭವಾದ ಪುನರುತ್ಥಾನದ ಫಲ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಲಭಿಸಿತು. ರಾಜ್ಯದಲ್ಲಿ ಹಾಕಿ ಆಟಕ್ಕೆ ಇಂತಹ ಗಟ್ಟಿಮುಟ್ಟಾದ ನೆಲೆ ಇದೆ.

ಬೆಂಗಳೂರಿನಲ್ಲಿರುವ ಭಾರತ ಕ್ರೀಡಾ ಪ್ರಾಧಿಕಾರದ ವಸತಿ ನಿಲಯಗಳಲ್ಲಿಯೇ ರಾಷ್ಟ್ರೀಯ ತಂಡದ ಶಿಬಿರಗಳು ನಡೆಯುತ್ತವೆ. ಇಲ್ಲಿಂದಲೇ ತಂಡಗಳು ಅಂತರ ರಾಷ್ಟ್ರೀಯ ಟೂರ್ನಿಗಳಿಗೆ ಹೋಗುತ್ತಿವೆ. ಆದರೂ ಏಕೆ ರಾಜ್ಯದ ಆಟಗಾರರು ರಾಷ್ಟ್ರೀಯ ತಂಡದಲ್ಲಿ ಸ್ಥಾನ ಪಡೆಯುವ ಮಟ್ಟಿಗೆ ಬೆಳೆಯುತ್ತಿಲ್ಲ? ಸೌಲಭ್ಯಗಳ ಕೊರತೆಯೇ, ಉದ್ಯೋಗ ಅವಕಾಶಗಳು ಮತ್ತು ಆರ್ಥಿಕ ನೆರವುಗಳಿಲ್ಲವೇ ಅಥವಾ ಮಕ್ಕಳನ್ನು ಹಾಕಿ ಆಟದತ್ತ ಆಕರ್ಷಿಸಬಲ್ಲ ತಾರೆಗಳ ಕೊರತೆ ಇದೆಯೇ ಅಥವಾ ಒಡಿಶಾ ಮಾದರಿ ಕರ್ನಾಟಕಕ್ಕೂ ಬೇಕಿತ್ತೇ ಎಂಬ ಪ್ರಶ್ನೆಗಳು ಏಳುವುದು ಸಹಜ.

ಎರಡು ವರ್ಷಗಳ ಹಿಂದೆ ಹಾಕಿ ಇಂಡಿಯಾದ ಆಗಿನ ಅಧ್ಯಕ್ಷ ನರೀಂದರ್ ಬಾತ್ರಾ ಕೂಡ ಕರ್ನಾಟಕದ ಹಾಕಿ ಕಣಜ ಕೊಡಗಿನಿಂದ ಹೊಸ ಆಟಗಾರರೇ ಬರುತ್ತಿಲ್ಲ, ಕರ್ನಾಟಕದ ಕಾಣಿಕೆ ಕುಂಠಿತವಾಗಿದೆ ಎಂದಿದ್ದರು.

ಆದರೆ ಈಗ ಪರಿಸ್ಥಿತಿ ಹಾಗಿಲ್ಲ ಎನ್ನುತ್ತಾರೆ ಹಾಕಿ ಕರ್ನಾಟಕದ ಪದಾಧಿಕಾರಿ ಹಾಗೂ ಒಲಿಂಪಿಯನ್ ವಿ.ಆರ್. ರಘುನಾಥ್. ರಾಷ್ಟ್ರೀಯ ತಂಡದಲ್ಲಿ ಆಡುವ ಪ್ರತಿಭಾವಂತರು ರಾಜ್ಯದಲ್ಲಿ ಇದ್ದಾರೆ. ಕಳೆದ ರಾಷ್ಟ್ರೀಯ ಸೀನಿಯರ್ ಶಿಬಿರದಲ್ಲಿಯೂ ಇಲ್ಲಿಯ ಆಟಗಾರರು ಅರ್ಹತೆ ಪಡೆದಿದ್ದರು. ಆದರೆ, ಭಾರತ ತಂಡದಲ್ಲಿ ಒಲಿಂಪಿಯನ್ ಪದಕ ವಿಜೇತರ ದಂಡು ಇದ್ದ ಕಾರಣ ಹೊಸಬರಿಗೆ ಸ್ಥಾನ ಸಿಗಲಿಲ್ಲ. ಆದ್ದರಿಂದ ಕಾಯಬೇಕಾಯಿತು. ಇದೀಗ ಜೂನಿಯರ್ ರಾಷ್ಟ್ರೀಯ ಶಿಬಿರದಲ್ಲಿಯೂ ಪೂವಣ್ಣ, ವಿಶ್ವಾಸ್, ಬಿಪಿನ್ ಮತ್ತು ಮೋಹಿತ್ ಗೌಡ ಇದ್ದಾರೆ. ಅಲ್ಲದೆ ಸೌಲಭ್ಯಗಳಿಗೂ ಕೊರತೆಯಿಲ್ಲ. ಎಲ್ಲ ಕಡೆಯೂ ತರಬೇತಿ ಹಾಗೂ ವಸತಿ ನಿಲಯಗಳು ಇವೆ. ಪ್ರತಿವರ್ಷ ಎಲ್ಲ ವಯೋಮಿತಿಗಳಲ್ಲಿಯೂ ಬಹಳಷ್ಟು ಟೂರ್ನಿಗಳು ನಡೆಯುತ್ತಿವೆ. ಪ್ರತಿಭೆ ತೋರಲು ಅವಕಾಶ ಸಿಗುತ್ತಿದೆ. ಪೊಲೀಸ್, ಬ್ಯಾಂಕ್, ರೈಲ್ವೆ ಮತ್ತು ಅಂಚೆ ಇಲಾಖೆಗಳಲ್ಲಿ ಉದ್ಯೋಗಾವಕಾಶಗಳು ಹೆಚ್ಚಿವೆ. ಹಾಕಿ ಸಂಸ್ಥೆಯು ಎಲ್ಲ ನೆರವನ್ನೂ ನೀಡುತ್ತಿದೆ. ಆದರೆ ರಾಷ್ಟ್ರೀಯ ಶಿಬಿರಕ್ಕೆ ಆಯ್ಕೆಯಾಗುವವರೆಗೂ ರಾಜ್ಯ ಸಂಸ್ಥೆ ಇರುತ್ತದೆ. ಅಲ್ಲಿ ಉತ್ತಮವಾಗಿ ಆಡಿ ಆಯ್ಕೆಗಾರರ ಗಮನ ಸೆಳೆಯುವುದು ಆಟಗಾರರ ಮೇಲೆ ಬಿಟ್ಟಿದ್ದು ಎಂದು ರಘುನಾಥ್ ಹೇಳುತ್ತಾರೆ.

ಒಡಿಶಾ ಮಾದರಿಯ ಹಾಕಿ ಅಭಿವೃದ್ಧಿ ಕರ್ನಾಟಕಕ್ಕೆ ಹೊಂದುವುದು ಕಷ್ಟ ಎನ್ನುತ್ತಾರೆ ಅವರು. ಏಕೆಂದರೆ, ರಾಜ್ಯದ ಪ್ರತೀ ಜಿಲ್ಲೆಯಲ್ಲಿಯೂ ಐದಾರು ಬಗೆಯ ಕ್ರೀಡೆಗಳಿಗೆ ಆದ್ಯತೆ ಇದೆ. ಎಲ್ಲಕ್ಕಿಂತ ಹೆಚ್ಚಾಗಿ ಹತ್ತನೇ ತರಗತಿಯವರೆಗೆ ಮಾತ್ರ ಮಕ್ಕಳು ಕ್ರೀಡೆಯಲ್ಲಿ ಹೆಚ್ಚು ಆಸಕ್ತಿ ವಹಿಸುತ್ತಾರೆ ನಂತರ ಓದಿಗೆ ಆದ್ಯತೆ ಕೊಡುತ್ತಾರೆ, ಇದರಿಂದಾಗಿಯೂ ಪ್ರಮುಖ ಘಟ್ಟದಲ್ಲಿ ಹಿನ್ನಡೆಯಾಗುತ್ತಿದೆ ಎಂದು ಅವರು ಹೇಳುತ್ತಾರೆ.

ಆದರೆ ದಶಕಗಳಿಂದಲೂ ಹುಬ್ಬಳ್ಳಿ, ಬಾಗಲಕೋಟೆ ಹಾಗೂ ಗದುಗಿನ ಸೆಟ್ಲಮೆಂಟ್‌ಗಳು ಹಾಕಿ ಕ್ರೀಡೆಗೆ ಹಲವಾರು ಆಟಗಾರರನ್ನು ಕಾಣಿಕೆಯಾಗಿ ನೀಡಿವೆ. ಗದುಗಿನ ಬೇನು ಭಾಟ್, ಎಚ್‌.ವೈ. ಸಿದ್ಲಿಂಗ್, ರಾಚಯ್ಯ, ಮಾಣಿಕ್ ಭಾಟ್, ಸಿದ್ಧಪ್ಪ ಬಾಲೆಹೊಸೂರು, ಎಚ್‌.ಬಿ. ವೀರಾಪುರ, ಜಾಕ್ಸನ್ ಭಾಟ್, ಕೆ.ಆರ್. ಹಬೀಬ್, ಕಾರ್ಲಟನ್ ಗೋಮ್ಸ್ ರಾಷ್ಟ್ರ ಮಟ್ಟದಲ್ಲಿ ಆಡಿ ಗಮನ ಸೆಳೆದಿದ್ದರು. ರಾಜು ಬಗಾಡೆ 90ರ ದಶಕದಲ್ಲಿ ಬೆಂಗಳೂರಿನ ಕ್ರೀಡಾ ಹಾಸ್ಟೆಲ್‌ನಲ್ಲಿ ಕೆಲವು ವರ್ಷ ಆಡಿದ್ದರು. ಕೆಲವು ವರ್ಷಗಳ ಹಿಂದಷ್ಟೇ ಜೂನಿಯರ್ ಏಷ್ಯಾ ಕಪ್ ಹಾಕಿ ಟೂರ್ನಿಯಲ್ಲಿ ಚಿನ್ನದ ಪದಕ ಗೆದ್ದ ಭಾರತ ತಂಡದಲ್ಲಿದ್ದ ಹರೀಶ ಮುತಗಾರ ಗದುಗಿನವರು.

ಆದರೆವಿಪರ್ಯಾಸವೆಂದರೆ,ಇಡೀಉತ್ತರಕರ್ನಾಟಕದಲ್ಲಿ ಒಂದೂ ಹಾಕಿ ಕ್ರೀಡಾ ಹಾಸ್ಟೆಲ್ ಇಲ್ಲವೆಂಬ ದೂರು ಇದೆ. ಗದುಗಿನಲ್ಲಿ ಮಾತ್ರ ಆಸ್ಟ್ರೋ ಟರ್ಫ್ ಮೈದಾನ ನಿರ್ಮಾಣವಾಗಿದೆ. ಬಳ್ಳಾರಿಯಲ್ಲಿ ಇನ್ನೂ ನಿರ್ಮಾಣ ಹಂತದಲ್ಲಿದೆ. ಆದರೆ, ಹುಬ್ಬಳ್ಳಿ, ಧಾರವಾಡ, ಬಾಗಲಕೋಟೆ, ಬೆಳಗಾವಿಯಲ್ಲಿ ಇಲ್ಲವೆಂಬ ಕೊರಗು ಇದೆ. ಅಲ್ಲದೆ ಜೂನಿಯರ್ ಹಂತದಲ್ಲಿ ಪಂದ್ಯಗಳ ಸಂಖ್ಯೆ ಹೆಚ್ಚಬೇಕು. ಕರ್ನಾಟಕ ಕ್ರಿಕೆಟ್ ಸಂಸ್ಥೆಯು ಕಳೆದ ಒಂದೂವರೆ ತಿಂಗಳಲ್ಲಿ 250ಕ್ಕೂ ಹೆಚ್ಚು ಪಂದ್ಯಗಳನ್ನು ಆಯೋಜಿಸಿದೆ. ಇಂತಹ ಮಾದರಿ ಹಾಕಿ ಕ್ರೀಡೆಯಲ್ಲಿ ಇದೆಯೇ?

ಈ ದೇಶದಲ್ಲಿ ಕ್ರಿಕೆಟ್ ಪ್ರವರ್ಧಮಾನಕ್ಕೆ ಬರುವ ಮುನ್ನವೇ ಹಾಕಿ ಕ್ರೀಡೆಯು ಒಲಿಂಪಿಕ್ ಕೂಟಗಳಲ್ಲಿ ದಾಖಲೆಯ ಸಂಖ್ಯೆಯಲ್ಲಿ ಚಿನ್ನದ ಪದಕಗಳನ್ನು ಗೆದ್ದಾಗಿತ್ತು. ಆದರೆ, ಕ್ರಿಕೆಟ್ ತನ್ನ ತಾರಾವರ್ಚಸ್ಸಿನ ಆಟಗಾರರನ್ನೇ ರಾಯಭಾರಿಗಳನ್ನಾಗಿ ಮಾಡಿಕೊಂಡಿತು. ಆ ಮೂಲಕ ಬೇರುಮಟ್ಟದಿಂದ ನೆಲೆಗಟ್ಟನ್ನು ಸದೃಢಗೊಳಿಸಿಕೊಂಡಿತು. ಕ್ರಿಕೆಟ್‌ನಷ್ಟೇ ಶ್ರೀಮಂತವಾಗಿ ಹಾಗೂ ದೊಡ್ಡದಾಗಿ ಬೆಳೆಯುವ ಶಕ್ತಿ ಹಾಕಿಗೂ ಇದೆ. ದಶಕಗಳು ಉರುಳಿದರೂ ಈ ಕ್ರೀಡೆಯೊಂದಿಗೆ ದೇಶವು ಭಾವನಾತ್ಮಕ ನಂಟು ಹೊಂದಿದೆ. ಅದಕ್ಕಾಗಿಯೇ ಸೋತಾಗ ಟೀಕೆಗಳು ಮತ್ತು ಗೆದ್ದಾಗ ಪ್ರೀತಿಯ ಮಳೆ ಸುರಿಯುತ್ತವೆ.

ಚುರುಮುರಿ

ಹೆಣ್ಮಕ್ಕೆ ಸ್ಟ್ರಾಂಗು ಗುರು…

• ಕೆ.ವಿ.ರಾಜಲಕ್ಷ್ಮಿ

ಟಿ.ವಿ.ಯಲ್ಲಿ ಬಜೆಟ್ ಪ್ರಸ್ತುತಿ ಬಿತ್ತರವಾಗುತ್ತಿದ್ದಂತೆ 'ಹಿರಿಯ ನಾಗರಿಕರ ಉಳಿತಾಯ ಯೋಜನೆಯ ಮಿತಿಯನ್ನು ಹೆಚ್ಚಿಸಿದ್ದಾರೆ' ಎಂಬ ನನ್ನವಳ ರನ್ನಿಂಗ್ ಕಾಮೆಂಟರಿ ಶುರುವಾಗಿತ್ತು.

'ನಿಜ, ನಾನೂ ಈಗ ಹಿರಿಯ ನಾಗರಿಕನೆ' ಬೀಗಿದೆ.

'ಅಜ್ಜಿ ನಿನಗಿಂತ ಸೀನಿಯರ್ ಅನ್ನೋದು ಮರೀಬೇಡ' ಪುಟ್ಟಿಯ ಅಡ್ಡಮಾತು.

'ಹೊಸ ಪ್ರಸ್ತಾವ, ಮಹಿಳಾ ಸಮ್ಮಾನ್ ಸೇವಿಂಗ್ಸ್ ಸರ್ಟಿಫಿಕೇಟ್‌ನಲ್ಲಿ ಎರಡು ಲಕ್ಷ ಇಡಬಹುದು…' ನನ್ನತ್ತ ಅರ್ಥಗರ್ಭಿತ ನೋಟ.

'ಅದೇನೋ ಶ್ರೀ ಅನ್ನ, ನಮ್ಮ ದೇಶದಲ್ಲಿ ಹೆಚ್ಚು ಬೆಳೀತೀವಿ ಅಂದ್ರು ಗೊತ್ತಾಗ್ಲಿಲ್ಲ' ಅತ್ತೆ ಹುಬ್ಬೇರಿಸಿದರು.

'ಅದು ಸಿರಿಧಾನ್ಯ, ಮಿಲ್ಲೆಟ್ಸ್ ಅಂತ ಮಾಲ್‌ಗಳಲ್ಲಿ ಮಾರ್ತಾರಲ್ಲ? ಮೊನ್ನೆ ನನ್ ಫ್ರೆಂಡ್ಸ್ ಬಂದಾಗ ಸಜ್ಜೆ ರೊಟ್ಟಿ ಮಾಡಿದ್ಯಲ್ಲ, ತುಂಬಾ ರುಚಿಯಾಗಿತ್ತು ಅಂತ ನಿನ್ನ ಹೊಗಳಿದ್ರು' ಪುಟ್ಟಿ ಸಂದೇಹ ನಿವಾರಿಸಿದಳು.

'ಅಪ್ಪಾ, ಮೊಬೈಲ್ ಇನ್ಮುಂದೆ ಅಗ್ಗ, ಅಜ್ಜಿಗೂ ಸ್ಮಾರ್ಟ್‌ಫೋನ್ ಕೊಳ್ಳೋಣ' ಎಂದಾಗ ಅತ್ತೆ ಹಿಗ್ಗಿ ಹೀರೇಕಾಯಿ ಆದರು.

'ಚಿನ್ನ ಬೆಳ್ಳಿ ದುಬಾರಿ ಆಗುತ್ತೆ' ಹಲ್ಕಿರಿದೆ, ಅವೆಲ್ಲ ಎಟುಕದು, ಅಷ್ಟರಮಟ್ಟಿಗೆ ನನ್ನ ಪರ್ಸ್ ಭದ್ರ ಅಂದುಕೊಂಡೆ.

'ರಥಸಪ್ತಮಿ ಬರ್ತಿದ್ದಾಗ್ಲೆ ಬಿಸಿಲು ಏರ್ತಿದೆ… ಕರೆಂಟೂ ಆಗಾಗ ಹೋಗ್ತಿದೆ' ಎನ್ನುತ್ತಾ ಕಂಠಿ ಬಂದ. 'ಮನೆಯ ಮಾಲೀಕತ್ವ… ಮಹಿಳೆಯರೇ ಮುಂದಿದ್ದಾರೆ' ಎಂದ.

'ಮನೆಯೊಡೆಯ ಗಂಡಸಾದರೂ ನಿಜವಾದ ಅರ್ಥದಲ್ಲಿ ಮನೆಯಾಕೆಯೇ ನಿಜವಾದ ಒಡತಿ ಅಲ್ವೇ?' ಎಂದು ನಾನೂ ರಾಗ ಹಾಡಿ ಅವುಡುಗಚ್ಚಿದೆ.

'ಕ್ರಿಕೆಟ್‌ನಲ್ಲೂ 19 ವರ್ಷದ ಒಳಗಿನವರ ಮಹಿಳಾ ಟೀಮ್ ಐತಿಹಾಸಿಕ ಜಯ ಸಾಧಿಸಿದೆ' ಪುಟ್ಟಿ ಕುಣಿದಳು.

'ಅಷ್ಟೆಲ್ಲ ಯಾಕೆ? ಸತತ ಐದನೇ ಬಾರಿ, ನಮ್ಮ ನಿರ್ಮಲಾ ಮೇಡಂರವರಿಂದ ಬಜೆಟ್ ಮಂಡನೆ ಅಂದರೆ ಸಾಮಾನ್ಯ ವಿಷಯವೇ? ಹೆಣ್ಮಕ್ಕಳೇ ಸ್ಟ್ರಾಂಗ್ ಅನ್ನೋದ್ರಲ್ಲಿ ಎರಡು ಮಾತಿಲ್ಲ' ನನ್ನವಳು ಮುಕ್ತಾಯ ಹಾಡಿದಳು.

ಸಂಗತ

ಬರೀ ಭೂಮಿಯಲ್ಲ, ತರಿ ಭೂಮಿ!

ಜೀವಸಂಕುಲವನ್ನು ಸಲಹುತ್ತಿರುವ ನಿಸರ್ಗಸಹಜ ತರಿ ಭೂಮಿಗಳು ನಾಶವಾಗದಂತೆ ತಡೆಯಬೇಕಾದ ಜರೂರಿದೆ

• ಶಿಶಿರ ವಸಿಷ್ಠ

ಕರ್ನಾಟಕದ ಪಕ್ಷಿಕಾಶಿ ಎಂದೇ ಖ್ಯಾತವಾಗಿರುವ ರಂಗನತಿಟ್ಟು ಪಕ್ಷಿಧಾಮಕ್ಕೆ 'ರಾಮ್‌ಸಾರ್ ತಾಣ' (ರಾಮ್‌ಸಾರ್ ಸೈಟ್) ಎಂಬ ಅಂತರರಾಷ್ಟ್ರೀಯ ಗೌರವ ಪ್ರಾಪ್ತಿಯಾದ ನಂತರ ಇದೇ ಮೊದಲ ಬಾರಿಗೆ ನೂರಕ್ಕೂ ಹೆಚ್ಚು ಶಾಲಾ ಮಕ್ಕಳು ಪಕ್ಷಿ ಗಣತಿ ಕಾರ್ಯ ಕೈಗೊಳ್ಳಲಿದ್ದಾರೆ. ಅಂತರರಾಷ್ಟ್ರೀಯ ರಾಮ್‌ಸಾರ್ ಗೌರವ ಸಂಪಾದಿಸಿರುವ ಕರ್ನಾಟಕದ ಏಕೈಕ ತರಿ ಭೂಮಿಯಲ್ಲಿ ಸಲೀಮ್ ಅಲಿ ಸೆಂಟರ್ ಫಾರ್ ಆರ್ನಿಥಾಲಜಿ ಆ್ಯಂಡ್ ನ್ಯಾಚುರಲ್ ಹಿಸ್ಟರಿ ತಂಡದ ತಜ್ಞರು ಮತ್ತು ಸದಸ್ಯರು ವಿದ್ಯಾರ್ಥಿಗಳಿಗೆ ನೆರವಾಗಲಿದ್ದಾರೆ. ಇಡೀ ದಿನ ನಡೆಯುವ ಗಣತಿ ಮತ್ತು ಸಮೀಕ್ಷಾ ಕಾರ್ಯ ಹಲವು ದಿನಗಳವರೆಗೆ ಮುಂದುವರಿಯಲಿದೆ.

ಸದಾ ನೀರಿನಿಂದ ಕೂಡಿದ ಮತ್ತು ಒದ್ದೆಯಾದ ನೆಲ ಎರಡನ್ನೂ ಒಳಗೊಂಡಿರುವ ಭೂ ಪ್ರದೇಶವನ್ನು ತರಿ ಭೂಮಿ ಎನ್ನುತ್ತೇವೆ. ಕರ್ನಾಟಕದಲ್ಲಿ 682 ತರಿ ಭೂಮಿ (ಜೌಗು) ಪ್ರದೇಶಗಳನ್ನು ಗುರುತಿಸಲಾಗಿದ್ದು, ಅವು ಬಹು ಜಾತಿಯ ಮೀನು ಮತ್ತು ವಲಸೆ ಹಕ್ಕಿಗಳ ತಾಣಗಳೆನಿಸಿವೆ. ರಾಜ್ಯದ 11 ತಾಣಗಳಿಗೆ ರಾಮ್‌ಸಾರ್ ಸೈಟ್ ಮಾನ್ಯತೆ ನೀಡುವಂತೆ ಯುನೆಸ್ಕೊಗೆ ಅರ್ಜಿ ಸಲ್ಲಿಸಿ ಹತ್ತು ವರ್ಷಗಳೇ ಕಳೆದಿದ್ದವು. ಹಿಂದಿನ ವರ್ಷ ಆಚರಿಸಿದ ಸ್ವಾತಂತ್ರ್ಯದ ಅಮೃತ ಮಹೋತ್ಸವದ ನೆನಪಿಗೆ ನಮ್ಮ ರಂಗನತಿಟ್ಟಿಗೆ ರಾಮ್‌ಸಾರ್ ಗೌರವ ದೊರೆತಿದೆ. ಈ ವರ್ಷದ ವಿಶ್ವ ತರಿ ಭೂಮಿ ಆಚರಣೆಯ (ಫೆ. 2) ಧ್ಯೇಯವಾಕ್ಯ 'ಇಟ್ ಈಸ್ ಟೈಂ ಫಾರ್ ವೆಟ್‌ಲ್ಯಾಂಡ್ ರೆಸ್ಟೊರೇಷನ್'. ಅಂದರೆ 'ಇದು ತರಿ ಭೂಮಿಯ ಪುನಃಸ್ಥಾಪನೆಗೆ ಸಮಯ'. ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬುಧವಾರದ ಬಜೆಟ್ ಭಾಷಣದಲ್ಲಿ ರಾಮ್‌ಸಾರ್ ತಾಣಗಳ ಪ್ರಾಮುಖ್ಯ ಕುರಿತು ಪ್ರಸ್ತಾಪಿಸಿದರು.

ಯಾವುದೇ ತರಿ ಭೂಮಿಯನ್ನು 'ರಾಮ್‌ಸಾರ್' ತಾಣ ಎಂದು ಘೋಷಿಸಲು, ಗುರುತಿಸಲು ಅದು 9 ವಿವಿಧ ಅಂತರರಾಷ್ಟ್ರೀಯ ಪಾರಿಸರಿಕ ಮಾನದಂಡಗಳನ್ನು ಪೂರೈಸಬೇಕು. ಯಾವುದೇ ಒಂದು ಜಾತಿಯ ಹಕ್ಕಿಯ ಶೇಕಡ 1ರಷ್ಟನ್ನಾದರೂ ಸಲಹಬೇಕು, ಅತ್ಯಂತ ವಿಶೇಷವೆನಿಸುವ ನೈಸರ್ಗಿಕ ತಾಣವಾಗಿರಬೇಕು. ಆ ಪ್ರದೇಶದ ಜೀವವೈವಿಧ್ಯವನ್ನು ಕಾಪಾಡಿಕೊಳ್ಳುವ ನೈಸರ್ಗಿಕ ಗಿಡ ಮರ, ಕಲ್ಲುಬಂಡೆ, ಪೊದೆಗಳಿರಬೇಕು. ವಿನಾಶದ ಅಂಚಿನಲ್ಲಿರುವ ಪ್ರಾಣಿ ಪಕ್ಷಿ ಪ್ರಭೇದಗಳನ್ನು ಸಂರಕ್ಷಿಸುವ ಸಹಜ ಆವಾಸ ಅಲ್ಲಿರಬೇಕು, ಸತತವಾಗಿ 20,000 ನೀರುಹಕ್ಕಿಗಳನ್ನು ಪೋಷಿಸಬೇಕು ಎಂಬ ವಿವಿಧ ಕಟ್ಟಲೆಗಳಲ್ಲಿ 5ರಿಂದ 6ನ್ನು ಪೂರೈಸುವ ತಾಣಕ್ಕೆ 'ರಾಮ್‌ಸಾರ್' ಗೌರವ ದೊರಕುತ್ತದೆ.

ನೈಸರ್ಗಿಕ ತರಿ ಭೂಮಿಗಳು ಸಾವಿರಾರು ಜೀವಿ ಪ್ರಭೇದಗಳಿಗೆ ನೆಲೆ ನೀಡಿ ಮಳೆ ಪ್ರವಾಹವನ್ನು ತಡೆದು, ನೀರಿಂಗಿಸಿ, ಅಂತರ್ಜಲ ಹೆಚ್ಚಿಸಿ, ಹೆಚ್ಚಿನ ನೀರನ್ನು ಶೇಖರಿಸಿ ಇಟ್ಟುಕೊಂಡು ನದಿಗಳಿಗೆ ನೀರು ಹರಿಸುತ್ತಾ ಮಣ್ಣು ಮತ್ತು ಪೋಷಕಾಂಶ ಸವಕಳಿಯನ್ನು ತಡೆಯುತ್ತವೆ. ಹೊಲ ಗದ್ದೆಗಳಿಂದ ಹರಿದು ಬರುವ ಭಾರವಾದ ಲೋಹ, ಕೆಸರು, ಸಾರಜನಕ, ರಂಜಕಗಳನ್ನು ಸೋಸಿ ತೆಗೆದು ನೀರನ್ನು ಶುದ್ಧೀಕರಿಸುತ್ತವೆ. ಮಾನವನಿರ್ಮಿತ ಗದ್ದೆ, ಸರೋವರ, ಜಲಾಶಯ, ಅಣೆಕಟ್ಟು, ನೀರು ನಿಲ್ಲುವ ಗಣಿಗುಂಡಿ, ತೋಡುಗಳನ್ನು ಕೃತಕ ತರಿ ಭೂಮಿ ಎನ್ನುತ್ತಾರೆ. ನೈಸರ್ಗಿಕವಾಗಿ ರೂಪುಗೊಂಡ ತರಿ ಭೂಮಿಗಳನ್ನು 'ರಾಮ್‌ಸಾರ್' ತಾಣ ಎಂದು ಗುರುತಿಸುತ್ತಾರೆ.

ತರಿಭೂಮಿಗಳನ್ನು ಉಳಿಸಲು 1971ರ ಫೆಬ್ರುವರಿ 2ರಂದು ಇರಾನ್‌ನ ಕ್ಯಾಸ್ಪಿಯನ್ ಸಮುದ್ರ ತೀರದ 'ರಾಮ್‌ಸಾರ್'ನಲ್ಲಿ ಪ್ರಥಮ ಬಾರಿಗೆ ಒಪ್ಪಂದ ಏರ್ಪಟ್ಟಿದ್ದರಿಂದ ಆ ಹೆಸರು ಬಂದಿದೆ. ಭಾರತದಾದ್ಯಂತ ಗುರುತಿಸಲಾಗಿರುವ 'ರಾಮ್‌ಸಾರ್' ತಾಣಗಳ ಸಂಖ್ಯೆ ಕೇವಲ 75.



ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಯೋಜನೆಯಂತೆ ಪಕ್ಷಿಧಾಮದ ಬಳಿಯೇ ರಾಷ್ಟ್ರೀಯ ಹೆದ್ದಾರಿ ನಿರ್ಮಾಣಕ್ಕೆ ಅನುಮೋದನೆ ಸಿಕ್ಕಿದ್ದು, ಪರಿಸರ ಪರಿಣಾಮ ಮೌಲ್ಯನಿರ್ಣಯ ವರದಿಗಾಗಿ ಕಾಯಲಾಗುತ್ತಿದೆ. ಹೆದ್ದಾರಿ ನಿರ್ಮಾಣವಾದರೆ ಪಕ್ಷಿಧಾಮಕ್ಕೆ ದೊಡ್ಡ ತೊಂದರೆಯಾಗುತ್ತದೆ ಎಂಬುದು ವನ್ಯಜೀವಿ ತಜ್ಞರು ಹಾಗೂ ಪರಿಸರಪ್ರೇಮಿಗಳ ವಾದ.

ಕರ್ನಾಟಕ ತನ್ನ ಜಲಮೂಲಗಳನ್ನು ರಕ್ಷಿಸುವಲ್ಲಿ ವಿಫಲವಾಗಿದೆ ಎಂದು ನೀತಿ ಆಯೋಗ ಬಹಳ ಹಿಂದೆಯೇ ವರದಿ ನೀಡಿದೆ. ಬೆಂಗಳೂರಿನ 106 ಕೆರೆಗಳಲ್ಲಿ 78 ಕೆರೆಗಳು ಜನವಸತಿ ಪ್ರದೇಶಗಳಿಂದ ಹೊಮ್ಮುವ ಘನತ್ಯಾಜ್ಯ ಮತ್ತು ಕೊಳಚೆ ನೀರಿನಿಂದ ಶುದ್ಧೀಕರಿಸಲಾರದಷ್ಟು ಹಾಳಾಗಿವೆ ಮತ್ತು ಜಲಚರಗಳ ಸಹಜ ಜೀವನಕ್ಕೆ ಅಡ್ಡಿಯಾಗಿವೆ. ಆಗಾಗ ನೊರೆಯುಬ್ಬಿಸಿ ಬೆಂಗಳೂರಿನ ಮಹಾನಗರ ಪಾಲಿಕೆ ಮತ್ತು ವಿಜ್ಞಾನಿಗಳಿಗೆ ಸವಾಲೊಡ್ಡುವ ಬೆಳ್ಳಂದೂರು ಕೆರೆ, ಕಾಯಿಲೆ ಬಿದ್ದಿರುವ ತರಿ ಭೂಮಿಯ ತಾಜಾ ಉದಾಹರಣೆಯಾಗಿದೆ. ಸೊಳ್ಳೆಗಳ ನಿರ್ಮೂಲನಕ್ಕೆಂದೇ ಕೆಲವು ಕೆರೆಗಳನ್ನು ವಸತಿ ಸಮುಚ್ಚಯ, ವ್ಯವಸಾಯ ಮತ್ತು ವಾಣಿಜ್ಯ ಚಟುವಟಿಕೆಗಳಿಗಾಗಿ ಬದಲಾಯಿಸಿದ ಉದಾಹರಣೆಗಳೂ ಇವೆ. ಜೀವವೈವಿಧ್ಯದ ಮ್ಯೂಸಿಯಂ ಎಂದೇ ಕರೆಯಲಾಗುವ ತರಿ ಭೂಮಿಗಳ ಮಹತ್ವ ಸಾರುವ ಒಂದೇ ಒಂದು ಪಾಠ ಶಾಲಾ ಪಠ್ಯಪುಸ್ತಕಗಳಲ್ಲಿ ಇಲ್ಲ.

ವಾಚಕರ ವಾಣಿ

ಸಾಲದ ಹೊರೆ ಹೆಚ್ಚಿಸುವ ಬಜೆಟ್

ಪ್ರಸಕ್ತ ಸಾಲಿನ ಕೇಂದ್ರ ಬಜೆಟ್‌ನಲ್ಲಿ ಸಾಲದ ಪ್ರಮಾಣ ಕಡಿಮೆ ಮಾಡುವ ಪ್ರಸ್ತಾವ ಇಲ್ಲ. ಹಿಂದಿನ ವರ್ಷದ ಬಜೆಟ್‌ನಲ್ಲಿ ₹ 14.21 ಲಕ್ಷ ಕೋಟಿ ಸಾಲದ ಪ್ರಸ್ತಾವ ಇತ್ತು. ಆದರೆ ಜನವರಿ 27ರ ಹೊತ್ತಿಗೆ ಬಜೆಟ್ ಅಂದಾಜಿನ ಶೇಕಡ 91ರಷ್ಟು ಸಾಲ ಮಾಡಿದೆ ಸರ್ಕಾರ. ಈ ವರ್ಷವೂ ಒಟ್ಟು ವರಮಾನಕ್ಕಿಂತ ವೆಚ್ಚ ಹೆಚ್ಚಿದೆ. ಅಂದರೆ ಈ ವರ್ಷವೂ ಸರ್ಕಾರ ಸಾಲ ತೆಗೆದುಕೊಳ್ಳುವುದು ದೊಡ್ಡ ಮಟ್ಟದಲ್ಲಿಯೇ ಇರಲಿದೆ. ವರ್ಷದ ಕೊನೆಯಲ್ಲಿ ವಾಸ್ತವಿಕ ಸಾಲವು ಬಜೆಟ್ ಅಂದಾಜಿಗಿಂತ ಹೆಚ್ಚಾಗಬಹುದು. ಸಾಲದ ಹೊರೆ ಏರಿಸಿ ಯಾವ ಆರ್ಥಿಕ ಕ್ಷೇತ್ರವನ್ನು ಅಭಿವೃದ್ಧಿಪಡಿಸಲಾಗುತ್ತಿದೆ, ಯಾವ ಪ್ರದೇಶಕ್ಕೆ ವಿನಿಯೋಗವಾಗುತ್ತಿದೆ ಎನ್ನುವುದೇ ವಿಶ್ಲೇಷಿಸಬೇಕಾದ ಸಂಗತಿ.

ಕರ್ನಾಟಕಕ್ಕೆ ಐಐಎಂಎಸ್, ವಿಶೇಷ ಹೂಡಿಕೆ ವಲಯ, ಬೆಂಗಳೂರಿನ ಮೂಲ ಸೌಕರ್ಯಗಳಿಗೆ ಅನುದಾನದಂತಹವುಗಳನ್ನು ರಾಜ್ಯದ ಜನ ಅಪೇಕ್ಷಿಸಿದ್ದರು. ಅವೆಲ್ಲ ಹುಸಿಯಾಗಿವೆ. ಕೆಲವು ವರ್ಷಗಳಿಂದ ರಾಜ್ಯ ಸರ್ಕಾರ ಹೇಳಿಕೊಂಡು ಬಂದ ಭದ್ರಾ ಮೇಲ್ದಂಡೆ ಯೋಜನೆಗೆ ಅನುದಾನ ಘೋಷಿಸಲಾಗಿದೆ. ಆದರೆ ಸಂಪೂರ್ಣ ಕೃಷ್ಣಾ ಯೋಜನೆಯನ್ನು ರಾಷ್ಟ್ರೀಯ ಯೋಜನೆಯೆಂದು ಘೋಷಿಸಿದ್ದರೆ ಅನುಕೂಲವಾಗುತ್ತಿತ್ತು. ಆದಾಯ ತೆರಿಗೆಯ ಮಿತಿ ಏರಿಸಿರುವುದರಿಂದ ಮಧ್ಯಮ ವರ್ಗಕ್ಕೆ ಅನುಕೂಲ. ಆದರೆ ಸಂಪನ್ಮೂಲ ಕ್ರೋಡೀಕರಣಕ್ಕೆ ತೊಂದರೆ ಆಗಲಿದೆ.

ಡಾ. ದೇವಿದಾಸ ಪ್ರಭು, ಭಟ್ಕಳ

ಶುಲ್ಕರಹಿತ ರಾಷ್ಟ್ರೀಯ ಮನರಂಜನಾ ದಿನ!

ಕೇಂದ್ರ ಸರ್ಕಾರವು ಬಜೆಟ್ ಮಂಡಿಸುವ ದಿನವನ್ನು ಶುಲ್ಕರಹಿತ ರಾಷ್ಟ್ರೀಯ ಮನರಂಜನಾ ದಿನವೆಂದು ಜನ ಎಂದೋ ತೀರ್ಮಾನಿಸಿದ್ದಾರೆ. ಅದೇ ರೀತಿ ರಾಜ್ಯ ಬಜೆಟ್ ಮಂಡನೆಯ ದಿನವನ್ನು ನಿಃಶುಲ್ಕ ರಾಜ್ಯ ಮನರಂಜನಾ ದಿನವೆಂದು ಪರಿಗಣಿಸಬಹುದಾಗಿದೆ. ಕಾರಣ, ಅಂದು ಆಡಳಿತ ಪಕ್ಷದವರೆಲ್ಲ ಅದನ್ನು ತಮ್ಮ ಭಾಷಾ ಪಾಂಡಿತ್ಯವನ್ನು ಬಳಸಿ ಏಕಪ್ರಕಾರವಾಗಿ ಕಂಡಾಬಟ್ಟೆ ಹೊಗಳುವುದನ್ನು ಮತ್ತು ವಿರೋಧ ಪಕ್ಷದವರೆಲ್ಲ ಅದನ್ನು ಅದೇ ರೀತಿ ತಮ್ಮ ಖಂಡನಾ ಶಬ್ದಕೋಶವನ್ನು ಬರಿದುಮಾಡುತ್ತ ಏಕಪ್ರಕಾರವಾಗಿ ಖಂಡಿಸುವುದನ್ನು ಕೇಳಿಸಿಕೊಳ್ಳುವ ದಿನವಾದ್ದರಿಂದ, ಅದು ಜನರ ಪಾಲಿಗೆ ಮನರಂಜನೆಯ ದಿನವಲ್ಲದೆ ಬೇರೆಯಲ್ಲ.

ಒಂದು ವೇಳೆ ಆಡಳಿತ ಪಕ್ಷದವರು ತಮ್ಮ ಅರ್ಥ ಸಚಿವರು ಮಂಡಿಸಿದ ಬಜೆಟ್‌ನ ನಕಾರಾತ್ಮಕ ಅಂಶಗಳನ್ನು ಎತ್ತಿಹೇಳಿದರೆ ಹಾಗೂ ವಿರೋಧ ಪಕ್ಷದವರು ಯಾರಾದರೂ ಆಡಳಿತ ಪಕ್ಷದ ಬಜೆಟ್‌ನ ಸಕಾರಾತ್ಮಕ ಅಂಶಗಳನ್ನು ಎತ್ತಿಹೇಳಿದರೆ ಅಂಥದ್ದನ್ನು ಪಕ್ಷವಿರೋಧಿ ಚಟುವಟಿಕೆ ಎಂದು ಪರಿಗಣಿಸಿ ಅವರನ್ನು ಪಕ್ಷದಿಂದ ಉಚ್ಚಾಟಿಸಿದರೂ ಆಶ್ಚರ್ಯವಿಲ್ಲ! ಇದು ಭಾರತದ ಪ್ರಗತಿಪರ ಪ್ರಜಾಪ್ರಭುತ್ವದ ಪರಿಸ್ಥಿತಿ. ಹಾಗಾಗಿಯೇ ಈ ರಾಜಕೀಯ ಮುಖಂಡರ ಪ್ರಶಂಸೆ ಮತ್ತು ಟೀಕೆಗಳನ್ನು ಯಾರೂ ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ ಮತ್ತು ಈ ಕಿವಿಯಲ್ಲಿ ಕೇಳಿ ಆ ಕಿವಿಯಲ್ಲಿ ಬಿಟ್ಟುಬಿಡುತ್ತಾರೆ ಎಂಬ ಕಟುಸತ್ಯವನ್ನು ಅವರು ತಿಳಿದುಕೊಳ್ಳುವುದು ಒಳ್ಳೆಯದು.

ಆರ್.ಲಕ್ಷ್ಮೀನಾರಾಯಣ, ಬೆಂಗಳೂರು

ಬೈಸಿಕಲ್ ಯೋಜನೆ ಪುನರಾರಂಭವಾಗಲಿ

ಸರ್ಕಾರಿ ಶಾಲಾ ಮಕ್ಕಳಿಗೆ ಬೈಸಿಕಲ್ ನೀಡುವುದನ್ನು ನಿಲ್ಲಿಸಿರುವುದು ಸರಿಯಲ್ಲ. ಈ ಯೋಜನೆಯಿಂದ ಸಣ್ಣ ಗ್ರಾಮ, ಗುಡ್ಡ, ಕಾಡಂಚಿನ ಊರುಗಳಿಂದ ಶಾಲೆಗೆ ಬರುವಂತಹ ಮಕ್ಕಳು ಸಮಯಕ್ಕೆ ಸರಿಯಾಗಿ ಶಾಲೆಗೆ ಹಾಜರಾಗಲು ತುಂಬಾ ಅನುಕೂಲವಾಗುತ್ತಿತ್ತು. ಇಂತಹ ಉಪಯುಕ್ತ ಯೋಜನೆಯನ್ನು ಕೈಬಿಟ್ಟಿದ್ದು ಎಷ್ಟರಮಟ್ಟಿಗೆ ಸರಿ ಎಂಬುದನ್ನು ಸರ್ಕಾರ ಸ್ವಯಂ ಪ್ರಶ್ನೆ ಮಾಡಿಕೊಳ್ಳಲಿ. ಇಂದಿಗೂ ಕೆಲ ಗ್ರಾಮಗಳಿಗೆ ಸರಿಯಾದ ಸಮಯಕ್ಕೆ ಬಸ್ ಸೌಲಭ್ಯ ಇಲ್ಲ. ಇಂತಹ ಸ್ಥಿತಿ ಇರುವುದರಿಂದ ಈ ಯೋಜನೆಯ ಪುನರಾರಂಭಕ್ಕೆ ಸರ್ಕಾರ ಮುಂದಾಗಬೇಕು.

ನಾಗರಾಜ್ ಮನ್ನಾಪುರಿ, ದೇವದುರ್ಗ

ಭಾಷಾ ನೀತಿ ರೂಪಿಸಬೇಕಿದೆ

ಚುನಾವಣೆ ಸಮೀಪಿಸುತ್ತಿದ್ದಂತೆ, ಕರ್ನಾಟಕ ಸರ್ಕಾರವು ತುಳುಭಾಷೆಯನ್ನು ರಾಜ್ಯದ ಎರಡನೇ ಅಧಿಕೃತ ಭಾಷೆಯನ್ನಾಗಿ ಘೋಷಿಸುವ ಸಂಬಂಧ ಅಧ್ಯಯನ ನಡೆಸಿ, ಶಿಫಾರಸಿನೊಂದಿಗೆ ವರದಿ ನೀಡಲು ಸಮಿತಿಯೊಂದನ್ನು ರಚಿಸಿದೆ. ತುಳು, ಕೊಡವ, ಭೋಜಪುರಿ, ರಾಜಸ್ಥಾನಿ, ಬಂಜಾರ ಮೊದಲಾದ 99 ಭಾಷೆಗಳು ಸಂವಿಧಾನದ ಎಂಟನೇ ಪರಿಚ್ಛೇದಕ್ಕೆ ಸೇರಲು ಹೋರಾಟ ನಡೆಸುತ್ತಿರುವಾಗ ಕರ್ನಾಟಕವು ಈ ತೀರ್ಮಾನವನ್ನು ತೆಗೆದುಕೊಂಡಿರುವುದರಿಂದ ಕೇಂದ್ರ ಸರ್ಕಾರ ಇದೀಗ ನಿರಾಳವಾಗಿದೆ. ಕೊಡವ ಭಾಷೆ ಅಲ್ಲಿಯೂ ಇಲ್ಲ, ಇಲ್ಲಿಯೂ ಇಲ್ಲ ಎಂಬಲ್ಲಿಗೆ ಬಂದು ನಿಂತಿದೆ.

ಸಂವಿಧಾನದ ವಿಧಿ 345ರ ಪ್ರಕಾರ, ರಾಜ್ಯಗಳು ಒಂದಕ್ಕಿಂತ ಹೆಚ್ಚು ಅಧಿಕೃತ ಭಾಷೆಗಳನ್ನು ಹೊಂದಬಹುದು. ಇದನ್ನು ಆಧರಿಸಿ, ತೆಲಂಗಾಣವು ತೆಲುಗುವಿನ ಜೊತೆಗೆ ಉರ್ದುವನ್ನು, ಬಿಹಾರವು ಬಿಹಾರಿ ಭಾಷೆಯ ಜೊತೆಗೆ ಮೈಥಿಲಿ ಮತ್ತು ಬಾಂಗ್ಲಾವನ್ನು, ಪಶ್ಚಿಮ ಬಂಗಾಳವು ಬಾಂಗ್ಲಾ ಜೊತೆಗೆ ಉರ್ದು, ಪಂಜಾಬಿ, ನೇಪಾಲಿ, ಒರಿಯಾ ಮತ್ತು ಹಿಂದಿಯನ್ನು, ಅಸ್ಸಾಂ ಸರ್ಕಾರವು ಅಸ್ಸಾಮಿ ಜೊತೆಗೆ ಬಂಗಾಲಿ ಮತ್ತು ಬೋಡೊವನ್ನು, ಮೇಘಾಲಯವು ಇಂಗ್ಲಿಷ್ ಜೊತೆಗೆ ಖಾಸೀ ಮತ್ತು ಗಾರೋವನ್ನು, ದೆಹಲಿ ಸರ್ಕಾರವು ಹಿಂದಿಯ ಜೊತೆಗೆ ಇಂಗ್ಲಿಷ್, ಪಂಜಾಬಿ ಮತ್ತು ಉರ್ದುವನ್ನು ಅಧಿಕೃತ ಭಾಷೆಗಳೆಂದು ಘೋಷಿಸಿವೆ. ವಿಧಿ 346ರ ಪ್ರಕಾರ ರಾಜ್ಯ ಮತ್ತು ಕೇಂದ್ರ ಸರ್ಕಾರದ ಹಾಗೂ ರಾಜ್ಯ– ರಾಜ್ಯಗಳ ನಡುವಣ ಸಂಪರ್ಕ ಭಾಷೆಯು ಯಾವುದೇ ಅಧಿಕೃತ ಭಾಷೆ ಆಗಬಹುದು. ವಿಧಿ 347ರ ಪ್ರಕಾರ, ರಾಜ್ಯವೊಂದರ ಬೇರೊಂದು ಅಧಿಕೃತ ಭಾಷೆಯೂ ಸಂಪರ್ಕ ಭಾಷೆಯಾಗಬಹುದು. ಹೀಗಾಗಿ ಭಾಷೆಗಳ ಸಬಲೀಕರಣದ ದೃಷ್ಟಿಯಿಂದ ಇದೊಂದು ಮಹತ್ವದ ಹೆಜ್ಜೆ. ಆದರೆ ಪ್ರಸ್ತುತ ಸರ್ಕಾರಕ್ಕೆ ಚುನಾವಣೆಯನ್ನು ಗೆಲ್ಲುವುದರ ಹೊರತಾಗಿ ಸಣ್ಣ ಭಾಷೆಗಳನ್ನು ಉಳಿಸುವ ಬಗ್ಗೆ ಕಳಕಳಿ ಇದೆಯೇ ಎಂಬುದು ಸಂಶಯ. ಕೊಡವ ಮತ್ತು ಕೊರಗ ಭಾಷೆಗಳು ಇಳಿಮುಖವಾಗಿವೆ. ಉರ್ದು ಅಕಾಡೆಮಿಯನ್ನು ಸರ್ಕಾರವೇ ಮುಚ್ಚಿದೆ. ಸಣ್ಣ ಭಾಷೆಗಳ ಸಮೀಕ್ಷೆಯೂ ನಡೆದಿಲ್ಲ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರವು ತನ್ನದೇ ಆದ ಒಂದು ಭಾಷಾ ನೀತಿಯನ್ನು ರೂಪಿಸಿ, ರಾಜ್ಯದೊಳಗೆ ಇರುವ 70ಕ್ಕೂ ಹೆಚ್ಚು ಭಾಷೆಗಳನ್ನು ಉಳಿಸಿ ಬೆಳೆಸಲು ಯೋಜನೆಗಳನ್ನು ರೂಪಿಸುವುದು ಅಗತ್ಯ.

ಪುರುಷೋತ್ತಮ ಬಿಳಿಮಲೆ, ನವದೆಹಲಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಭದ್ರಾ ಮೇಲ್ದಂಡೆಗೆ ₹5,300 ಕೋಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಹನಿ ನೀರಾವರಿ ಮೂಲಕ ಮಧ್ಯ ಕರ್ನಾಟಕ ಜಿಲ್ಲೆಗಳಿಗೆ ನೀರುಣಿಸುವ ಭದ್ರಾ ಮೇಲ್ದಂಡೆ ಯೋಜನೆಗೆ ₹5,300 ಕೋಟಿ ಅನುದಾನ ಪ್ರಕಟಿಸಲಾಗಿದೆ.

ಈ ಯೋಜನೆಯಲ್ಲಿ 29.90 ಟಿಎಂಸಿ ಅಡಿ ನೀರು (ತುಂಗಾ ನದಿಯಿಂದ 17.40 ಟಿಎಂಸಿ ಅಡಿ ಹಾಗೂ ಭದ್ರಾ ಜಲಾಶಯದಿಂದ 12.50 ಟಿಎಂಸಿ ಅಡಿ) ಬಳಕೆ ಮಾಡಲಾಗುತ್ತದೆ. ಚಿಕ್ಕಮಗಳೂರು, ಚಿತ್ರದುರ್ಗ, ತುಮಕೂರು ಹಾಗೂ ದಾವಣಗೆರೆ ಜಿಲ್ಲೆಗಳಿಗೆ ಸೂಕ್ಷ್ಮ ನೀರಾವರಿ ಮೂಲಕ ಸೌಲಭ್ಯ ಕಲ್ಪಿಸಲಾಗುತ್ತದೆ.

ತುಂಗಾ ನದಿಯಿಂದ 17.40 ಟಿಎಂಸಿ ಅಡಿ ನೀರನ್ನು ಎರಡು ಹಂತಗಳಲ್ಲಿ ಲಿಫ್ಟ್ ಮಾಡಿ ಭದ್ರಾ ಜಲಾಶಯಕ್ಕೆ ಹರಿಸಲಾಗುತ್ತದೆ. ಅಲ್ಲಿಂದ 29.90 ಟಿಎಂಸಿ ಅಡಿ ನೀರನ್ನು ಎರಡು ಹಂತಗಳಲ್ಲಿ ಲಿಫ್ಟ್ ಮಾಡಿ ಅಜ್ಜಂಪುರ ಸುರಂಗದವರೆಗೆ ಕೊಂಡೊಯ್ಯಲಾಗುತ್ತದೆ. ಬಳಿಕ ಚಿತ್ರದುರ್ಗ ಶಾಖಾ ಕಾಲುವೆ ಮತ್ತು ತುಮಕೂರು ಶಾಖಾ ಕಾಲುವೆಗಳಿಗೆ ನೀರು ಹರಿಸಲಾಗುತ್ತದೆ. ಈ ಯೋಜನೆಗಾಗಿ ನಾಲ್ಕು ಸ್ಥಳಗಳಲ್ಲಿ ನೀರು ಲಿಫ್ಟ್ ಮಾಡಲಾಗುತ್ತದೆ. ಈ ಯೋಜನೆಗೆ ಒಟ್ಟಾರೆ 7,720 ಎಕರೆಯ ಭೂಸ್ವಾಧೀನ ಮಾಡಬೇಕಿದ್ದು, ಇಲ್ಲಿವರೆಗೆ 3,922 ಎಕರೆಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ.

ಈ ಯೋಜನೆಗೆ ತಗಲುವ ವೆಚ್ಚ ₹21,473 ಕೋಟಿ. ಕೇಂದ್ರ ಸರ್ಕಾರದಿಂದ ₹9,675 ಕೋಟಿ ನೀಡಲು ಜಲಶಕ್ತಿ ಸಚಿವಾಲಯದ ಉನ್ನತಾಧಿಕಾರ ಸಮಿತಿ ಈಗಾಗಲೇ ಒಪ್ಪಿಗೆ ನೀಡಿದೆ. ಇದನ್ನು ರಾಷ್ಟ್ರೀಯ ಯೋಜನೆ ಎಂದು ಪರಿಗಣಿಸಲು ಕೇಂದ್ರ ಹಣಕಾಸು ಸಚಿವಾಲಯ ಒಪ್ಪಿಗೆ ನೀಡಿದೆ. ಈ ಯೋಜನೆಗೆ ರಾಷ್ಟ್ರೀಯ ಯೋಜನೆಯ ಮಾನ್ಯತೆ ಸಿಗಲು ಕೇಂದ್ರ ಸರ್ಕಾರದ ಸಚಿವ ಸಂಪುಟದ ಅನುಮೋದನೆ ಬಾಕಿ ಇದೆ.

ಈ ಯೋಜನೆಯ ₹13,507 ಕೋಟಿ ಮೊತ್ತದ ಕಾಮಗಾರಿಗಳನ್ನು ಗುತ್ತಿಗೆ ನೀಡಲಾಗಿದೆ. ಡಿಸೆಂಬರ್ ಅಂತ್ಯದ ವರೆಗೆ 6,717 ಕೋಟಿಯ ಆರ್ಥಿಕ ಪ್ರಗತಿ ಸಾಧಿಸಲಾಗಿದೆ.

ಯೋಜನೆಯ ಪ್ರಮುಖ ಅಂಶಗಳು

ಫಲಾನುಭವಿ ಜಿಲ್ಲೆಗಳು: ಚಿಕ್ಕಮಗಳೂರು (ತರೀಕೆರೆ, ಕಡೂರು), ಚಿತ್ರದುರ್ಗ (ಹೊಸದುರ್ಗ, ಹೊಳಲ್ಕೆರೆ, ಹಿರಿಯೂರು, ಚಿತ್ರದುರ್ಗ, ಚಳ್ಳಕೆರೆ, ಮೊಳಕಾಲ್ಮುರು), ದಾವಣಗೆರೆ (ಜಗಳೂರು), ತುಮಕೂರು (ಚಿಕ್ಕನಾಯನಹಳ್ಳಿ, ಪಾವಗಡ, ಶಿರಾ)

ನದಿ	ತುಂಗಾ ಮತ್ತು ಭದ್ರಾ/ಕೃಷ್ಣಾ ಕಣಿವೆ
ಫಲಾನುಭವಿ ಗ್ರಾಮಗಳು	787
ಪ್ರಯೋಜನ ಪಡೆಯುವ ಜನಸಂಖ್ಯೆ	74.26 ಲಕ್ಷ
ಹನಿ ನೀರಾವರಿಗೆ	21.90 ಟಿಎಂಸಿ ಅಡಿ
ಕೆರೆಗಳನ್ನು ತುಂಬಿಸಲು	6 ಟಿಎಂಸಿ ಅಡಿ
ವಾಣಿ ವಿಲಾಸ ಸಾಗರ ಜಲಾಶಯಕ್ಕೆ	2 ಟಿಎಂಸಿ ಅಡಿ
ನೀರಾವರಿಗೆ ಒಳಪಡುವ ಪ್ರದೇಶ	2,25,515 ಹೆಕ್ಟೇರ್
ನೀರನ್ನು ತುಂಬಿಸುವ ಕೆರೆಗಳ ಸಂಖ್ಯೆ	367

ಭದ್ರಾ ಮೇಲ್ದಂಡೆ ಯೋಜನೆಯಡಿ ಕಾಮಗಾರಿ ನಡೆಯುತ್ತಿರುವುದು

ಅರುಂಧತಿ, ಹಿದಾಯತ್ ಅಹಮದ್‌ಗೆ 'ಕಪ್ಪಣ್ಣ ಸಾಂಸ್ಕೃತಿಕ ಪ್ರಶಸ್ತಿ'

ಬೆಂಗಳೂರು: ಶ್ರೀಮಾತಾ ಚಾರಿಟಬಲ್ ಟ್ರಸ್ಟ್ ಮತ್ತು ಸೆಂಟರ್ ಸ್ಟೇಜ್ ಈ ವರ್ಷದಿಂದ ನೀಡುವ 'ಕಪ್ಪಣ್ಣ ಸಾಂಸ್ಕೃತಿಕ ಪ್ರಶಸ್ತಿ'ಗೆ ರಂಗಭೂಮಿ ಹಾಗೂ ಚಲನಚಿತ್ರ ಕಲಾವಿದೆ ಅರುಂಧತಿ ನಾಗ್, 'ಕಪ್ಪಣ್ಣ ಸಾಂಸ್ಕೃತಿಕ ಯುವ ಪ್ರಶಸ್ತಿ'ಗೆ ಜಾನಪದ ಕಲಾವಿದ ಹಿದಾಯತ್ ಅಹಮದ್ ಆಯ್ಕೆಯಾಗಿದ್ದಾರೆ.

ಫೆ. 4ರಂದು ತುಮಕೂರು ಜಿಲ್ಲೆಯ ಚಿಕ್ಕನಾಕನಹಳ್ಳಿಯ ಹುಳಿಯಾರ್‌ನಲ್ಲಿ ನಡೆಯುವ ಚಿಂತಕ ಶ್ರೀನಿವಾಸ ಜಿ. ಕಪ್ಪಣ್ಣ ಅವರ 75ನೇ ವರ್ಷದ ಜನ್ಮದಿನದ ಅಂಗವಾಗಿ 'ಕಪ್ಪಣ್ಣ-75 ಸಾಂಸ್ಕೃತಿಕ ಸಂಭ್ರಮ' ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಟ್ರಸ್ಟ್‌ನ ಕಾರ್ಯದರ್ಶಿ ಬಿ.ಎಸ್. ವಿದ್ಯಾರಣ್ಯ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಕಪ್ಪಣ್ಣ ಸಾಂಸ್ಕೃತಿಕ ಪ್ರಶಸ್ತಿಯು ₹50,000 ಮತ್ತು ಕಪ್ಪಣ್ಣ ಸಾಂಸ್ಕೃತಿಕ ಯುವ ಪ್ರಶಸ್ತಿಯು ₹25,000 ನಗದು ಬಹುಮಾನ ಒಳಗೊಂಡಿದೆ.

ಅತ್ಯಧಿಕ ಗ್ರ್ಯಾನ್ ಸ್ಲಾಮ್ ಪ್ರಶಸ್ತಿ ಜಯಗಳಿಸುವಲ್ಲಿ ನಡಾಲ್ ಅವರ ದಾಖಲೆ ಸರಿಗಟ್ಟಿದ ನಂತರವು ಆಟದ ಸಾಮರ್ಥ್ಯ ಉಳಿಸಿಕೊಂಡಿರುವ ನೊವಾಕ್ ಜೊಕೊವಿಕ್ ಟೆನಿಸ್ ಆಟದ ಇತಿಹಾಸದಲ್ಲಿಯೇ ಶ್ರೇಷ್ಠ ಆಟಗಾರ ಎಂದು ನೀವು ಭಾವಿಸುವಿರಾ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಮಾಹಿತಿ ಇಲ್ಲದೆ ಪತ್ರಿಕಾಗೋಷ್ಠಿ ನಡೆಸಿದ ನೈರುತ್ಯ ರೈಲ್ವೆ ಜಿಎಂ

ಹುಬ್ಬಳ್ಳಿ: ಕೇಂದ್ರ ಬಜೆಟ್‌ನಲ್ಲಿ ನೈರುತ್ಯ ರೈಲ್ವೆಗೆ ಎಷ್ಟು ಅನುದಾನ ನೀಡಲಾಗಿದೆ ಎಂಬ ಮಾಹಿತಿ ಇಲ್ಲದೆ ನೈರುತ್ಯ ವಲಯದ ರೈಲ್ವೆ ಪ್ರಧಾನ ವ್ಯವಸ್ಥಾಪಕ ಸಂಜೀವ್ ಕಿಶೋರ್ ಬುಧವಾರ ಪತ್ರಿಕಾಗೋಷ್ಠಿ ನಡೆಸಿದರು.

ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರ ಪತ್ರಿಕಾಗೋಷ್ಠಿ 4 ಗಂಟೆಗೆ ನಿಗದಿಯಾಗಿತ್ತು. ಅದು ಮುಗಿದ ನಂತರ ನೈರುತ್ಯ ರೈಲ್ವೆಗೆ ಸಿಕ್ಕ ಅನುದಾನದ ಕುರಿತು ಮಾಹಿತಿ ನೀಡಲು ಮಾಧ್ಯಮದವರಿಗೆ ಆಹ್ವಾನ ನೀಡಲಾಗಿತ್ತು.

'ರೈಲ್ವೆಗೆ ₹2.41 ಲಕ್ಷ ಕೋಟಿ ಅನುದಾನ ನೀಡಲಾಗಿದೆ. ಅದರಲ್ಲಿ ನೈರುತ್ಯ ರೈಲ್ವೆಗೆ ಎಷ್ಟು ಅನುದಾನ ಹಂಚಿಕೆ ಮಾಡಿದ್ದಾರೆ ಎಂಬ ಮಾಹಿತಿ ಇಲ್ಲ. ಇನ್ನೆರಡು ದಿನಗಳಲ್ಲಿ ರೈಲ್ವೆ ಇಲಾಖೆಯಿಂದ ಮಾಹಿತಿ ಬಂದ ನಂತರ ಪತ್ರಿಕಾಗೋಷ್ಠಿ ನಡೆಸಿ ತಿಳಿಸಲಾಗುವುದು' ಎಂದು ಸಂಜೀವ್ ಕಿಶೋರ್ ಹೇಳಿದರು.

'ರೈಲು ಮಾರ್ಗದ ದ್ವಿಪಥ ಕಾಮಗಾರಿ, ವಿದ್ಯುದ್ದೀಕರಣ, ಯಾರ್ಡ್‌ಗಳ ನವೀಕರಣ, ನಿಲ್ದಾಣಗಳ ಅಭಿವೃದ್ಧಿ ಸೇರಿದಂತೆ ವಿವಿಧ ಕಾಮಗಾರಿಗಳಿಗೆ ಅನುದಾನ ನಿರೀಕ್ಷಿಸಲಾಗಿದೆ' ಎಂದರು.

ವಿಜಯಪುರ ಜಿಲ್ಲೆ ಮುದ್ದೇಬಿಹಾಳ ತಾಲ್ಲೂಕಿನ ತಂಗಡಗಿಯಲ್ಲಿ ಬುಧವಾರ ಹಡಪದ ಅಪ್ಪಣ್ಣ ಸಮುದಾಯ ಭವನ ಉದ್ಘಾಟನೆ ಹಾಗೂ ಹಡಪದ ಸಮಾಜದ ರಾಜ್ಯಮಟ್ಟದ ಜನ ಜಾಗೃತಿ ಸಮಾವೇಶದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಜನತೆಗೆ ನಮಸ್ಕರಿಸಿದರು

ಹಡಪದ ಸಮಾಜ ಅಭಿವೃದ್ಧಿ ನಿಗಮ ಸ್ಥಾಪನೆ: ಬೊಮ್ಮಾಯಿ ಘೋಷಣೆ

ವಿಜಯಪುರ: 'ಹಡಪದ ಸಮಾಜ ಅಭಿವೃದ್ಧಿ ನಿಗಮ ಸ್ಥಾಪನೆ ಮಾಡಲಾಗುವುದು. ಕುಲ ಶಾಸ್ತ್ರೀಯ ಅಧ್ಯಯನ ಪೂರ್ಣಗೊಳಿಸಿ, ಸಮಾಜಕ್ಕೆ ನ್ಯಾಯ ಒದಗಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

ಮುದ್ದೇಬಿಹಾಳ ತಾಲ್ಲೂಕಿನ ತಂಗಡಗಿಯಲ್ಲಿ ಬುಧವಾರ ಹಡಪದ ಅಪ್ಪಣ್ಣ ಸಮುದಾಯ ಭವನ ಉದ್ಘಾಟನೆ, ನೂತನ ಕಟ್ಟಡಗಳ ಅಡಿಗಲ್ಲು ಸಮಾರಂಭ ಹಾಗೂ ಹಡಪದ ಸಮಾಜದ ರಾಜ್ಯಮಟ್ಟದ ಜನ ಜಾಗೃತಿ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

'ಶಿವಶರಣ ಹಡಪದ ಅಪ್ಪಣ್ಣ ಜನ್ಮ ಸ್ಥಳ ಮಸಬಿನಾಳ ಹಾಗೂ ಶಿವಶರಣೆ ಹಡಪದ ಲಿಂಗಮ್ಮ ಜನ್ಮಸ್ಥಳ ದೇಗಿನಾಳವನ್ನು ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿಸಲು ಪ್ರಾಧಿಕಾರದ ಮುಂದಿನ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗುವುದು' ಎಂದರು.

'ಹಡಪದ ಸಮಾಜದ ಮಠದ ಅಭಿವೃದ್ಧಿ ಕಾರ್ಯಕ್ಕೆ ಈಗಾಗಲೇ ಶಾಸಕ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ₹ 1 ಕೋಟಿ ಕೊಟ್ಟಿದ್ದಾರೆ. ನಾನು ₹ 3 ಕೋಟಿ ಅನುದಾನ ಕೊಟ್ಟಿದ್ದೇನೆ. ಇನ್ನೂ ಹೆಚ್ಚಿನ ಅನುದಾನ ನೀಡುತ್ತೇನೆ' ಎಂದು ಭರವಸೆ ನೀಡಿದರು.

ತಂಗಡಗಿ ಹಡಪದ ಅಪ್ಪಣ್ಣ ದೇವರ ಮಹಾಸಂಸ್ಥಾನಮಠದ ಅನ್ನದಾನ ಭಾರತಿ ಅಪ್ಪಣ್ಣ ಸ್ವಾಮೀಜಿ, 'ಹಡಪದ ಸಮಾಜವನ್ನು ಪ್ರವರ್ಗ 3ಬಿ ಮತ್ತು 2 ಎ ದಲ್ಲಿರುವ ಹಡಪದ ಸಮಾಜವನ್ನು ಪರಿಶಿಷ್ಟ ಜಾತಿಗೆ ಸೇರ್ಪಡೆ ಮಾಡಬೇಕು' ಎಂದು ಮನವಿ ಮಾಡಿದರು.

'ತಂಗಡಗಿಯಲ್ಲಿ ಸಮಾಜದ ಅಭಿವೃದ್ಧಿ ಕಾರ್ಯಗಳಿಗೆ ₹ 25 ಕೋಟಿ ಅನುದಾನ ನೀಡಬೇಕು' ಎಂದು ಮನವಿ ಮಾಡಿದರು.

ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ, ಶಾಸಕ ಎ.ಎಸ್.ಪಾಟೀಲ ನಡಹಳ್ಳಿ, ಶಾಸಕ ದೊಡ್ಡನಗೌಡ ಪಾಟೀಲ, ಮಾಜಿ ಸಚಿವ ಎಸ್. ಕೆ.ಬೆಳ್ಳುಬ್ಬಿ, ಸಮಾಜದ ಮುಖಂಡ ಇದ್ದರು.

5ನೇ ಬಾರಿಗೆ ಬಜೆಟ್ ಮಂಡಿಸಿದ ಹಣಕಾಸು ಸಚಿವೆ

ಧಾರವಾಡದ ಕಸೂತಿ ಸೀರೆಯುಟ್ಟ ನಿರ್ಮಲಾ

ಪ್ರಜಾವಾಣಿ ವಾರ್ತೆ

ಧಾರವಾಡ: ಜಿಲ್ಲೆಯ ನವಲಗುಂದದ ಕಸೂತಿ ಕಲೆಯಿರುವ ಕಡುಗೆಂಪು ಬಣ್ಣದ ಸೀರೆಯುಟ್ಟು ಸಂಸತ್ತಿಗೆ ಆಗಮಿಸಿದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು, ಬುಧವಾರ ತಮ್ಮ 5ನೇ ಬಜೆಟ್ ಮಂಡಿಸಿದ್ದು ವಿಶೇಷ.

ಸಚಿವೆ ಧರಿಸಿದ್ದ ಸೀರೆ ವಿನ್ಯಾಸಗೊಳಿಸಿದ್ದು, ಧಾರವಾಡದ ನಾರಾಯಣಪುರದ ಆರತಿ ಹಿರೇಮಠ ಮಾಲೀಕತ್ವದ ಆರತಿ ಕ್ರಾಫ್ಟ್‌ನ ಕುಶಲ ಕಲಾವಿದರು. ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ನವಲಗುಂದ ಕಸೂತಿ ಕಲೆ, ಸಾಂಸ್ಕೃತಿಕ ಶ್ರೀಮಂತಿಕೆ ಬಗ್ಗೆ ನಿರ್ಮಲಾ ಸೀತಾರಾಮನ್ ಅವರಿಗೆ ಕಾರ್ಯಕ್ರಮವೊಂದರಲ್ಲಿ ವಿವರಿಸಿದ್ದರು. ಅವರು ಸೀರೆ ಬಗ್ಗೆ ಆಸಕ್ತಿ ತೋರಿದ್ದರು.

ಜಿಲ್ಲಾಧಿಕಾರಿ ಗುರುದತ್ತ ಹೆಗಡೆ, ಕೈಮಗ್ಗ ಮತ್ತು ಜವಳಿ ಇಲಾಖೆ ಅಧಿಕಾರಿ ಸೈಯದ್ ನಯೀಮ್ ಅಹ್ಮದ್ ಮೂಲಕ ಕಸೂತಿ ಪರಿಣತರಾದ ಆರತಿ ಹಿರೇಮಠ ಅವರನ್ನು ಗುರುತಿಸಿ, ಸೀರೆ ತಯಾರಿಗೆ ಸೂಚಿಸಿದ್ದರು.

'ಕಡುಗೆಂಪು ಮತ್ತು ಗಾಢನೀಲಿ ಬಣ್ಣದ ಸೀರೆಗಳನ್ನು ಕಳುಹಿಸಲಾಗಿತ್ತು. ಬಜೆಟ್ ಮಂಡನೆಗೆ ಅಂದಾಜು 27 ಸಾವಿರ ರೂಪಾಯಿ ಬೆಲೆ ಬಾಳುವ ಕಡುಗೆಂಪು ಸೀರೆ ಆಯ್ಕೆ ಮಾಡಿಕೊಂಡಿದ್ದಾರೆ' ಎಂದು ಕಸೂತಿ ಪರಿಣತೆ ಆರತಿ ಸಂತಸ ವ್ಯಕ್ತಪಡಿಸಿದರು.

ಸೀರೆ ವಿಶೇಷ: ಕೈಮಗ್ಗದಲ್ಲಿ ನೇಯ್ದ ಇಳಕಲ್ ರೇಷ್ಮೆಸೀರೆಗೆ ಸಾಂಪ್ರದಾಯಿಕ ಧಾರವಾಡ ಕಸೂತಿ ಹಾಕಲಾಗಿದೆ. ಐದೂವರೆ ಮೀಟರ್ ಉದ್ದದ ಸೀರೆಗೆ ಚಿಕ್ಕಪರಾಸ್ ದಡಿಯಿದ್ದು, ತೇರು, ಗೋಪುರ, ನವಿಲು, ಕಮಲದ ಚಿತ್ರಗಳ ಕಸೂತಿ ಹಾಕಲಾಗಿದೆ.

ಸಾಂಪ್ರದಾಯಿಕವಾಗಿ ಆನೆ, ಗಿಳಿ, ನವಿಲಿನ ಚಿತ್ರಗಳನ್ನು ಬಳಸಲಾಗುತ್ತದೆ. ಆನೆಯ ವಿನ್ಯಾಸ ಹೊರತುಪಡಿಸಿ ಉಳಿದೆಲ್ಲ ವಿನ್ಯಾಸಗಳನ್ನೂ ಬಳಸಲಾಗಿದೆ.

32 ವರ್ಷಗಳಿಂದ ಕಸೂತಿ ಕ್ಷೇತ್ರದಲ್ಲಿ ತೊಡಗಿರುವ ಆರತಿ, ಸುಮಾರು 210 ಮಹಿಳೆಯರ ತಂಡ ಕಟ್ಟಿ, ಅವರಿಗೆ ಅಗತ್ಯವಿರುವ ಕಸೂತಿ ತರಬೇತಿ ನೀಡಿ, ಸ್ವಯಂ ಉದ್ಯೋಗ ನೀಡಿದ್ದಾರೆ. ಗ್ರಾಹಕರಿಂದ ಕಸೂತಿ ಸೀರೆ, ಶಲ್ಯ, ಉಡುಗೆಗಳ ಬೇಡಿಕೆ ಪಡೆಯುವ ಅವರು, ಕಸೂತಿ ಮಾಡಿ ತಮ್ಮ ಮಹಿಳಾ ಸಿಬ್ಬಂದಿ ಮನೆಗೆ ತೆರಳಿ, ಪರಿಕರ ಪೂರೈಸುತ್ತಾರೆ. ಸಿದ್ಧವಾದ ವಸ್ತುಗಳನ್ನು ತಾವೇ ಸಂಗ್ರಹಿಸುತ್ತಾರೆ.

> ನಮ್ಮೂರಿನ ಸೀರೆಯಲ್ಲಿ ಬಲಿಷ್ಠ ಭಾರತದ ಬಜೆಟ್ ಮಂಡಿಸುತ್ತಿರುವುದು ನಮ್ಮ ರಾಜ್ಯಕ್ಕೆ ಹೆಮ್ಮೆಯ ವಿಷಯ. ಕಸೂತಿ ಕಲೆಗೆ ಪ್ರೋತ್ಸಾಹ ನೀಡುತ್ತಿರುವುದು ಸಂತಸ ತಂದಿದೆ
> **ಆರತಿ ಹಿರೇಮಠ,** ಕಸೂತಿ ಕಲೆ ತಜ್ಞೆ

'ಆರೆಸ್ಸೆಸ್ ಬಲಪಂಥೀಯವೂ ಅಲ್ಲ, ಎಡಪಂಥೀಯವೂ ಅಲ್ಲ'

ಜೈಪುರ (ಪಿಟಿಐ): 'ರಾಷ್ಟ್ರೀಯ ಸ್ವಯಂಸೇವಕ ಸಂಘವು (ಆರೆಸ್ಸೆಸ್) ಬಲಪಂಥೀಯವೂ ಅಲ್ಲ. ಎಡಪಂಥೀಯ ಸಂಘಟನೆಯೂ ಅಲ್ಲ. ಸಂಘವು ಯಾವುದೇ ರಾಜಕೀಯ ಒಲವೂ ಇಲ್ಲದೆ ದೇಶದ ಹಿತಾಸಕ್ತಿಗಾಗಿ ಕೆಲಸ ಮಾಡುತ್ತದೆ' ಎಂದು ಆರೆಸ್ಸೆಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ತಿಳಿಸಿದ್ದಾರೆ.

ಬುಧವಾರ ಇಲ್ಲಿ ಹಮ್ಮಿಕೊಳ್ಳಲಾಗಿದ್ದ 'ರಾಷ್ಟ್ರೀಯ ಸ್ವಯಂಸೇವಕ ಸಂಘ–ನಿನ್ನೆ, ಇಂದು ಮತ್ತು ನಾಳೆ' ವಿಷಯದ ಕುರಿತು ಮಾತನಾಡಿದ ಅವರು, 'ದೇಶದಲ್ಲಿ ನೆಲೆಸಿರುವ ಎಲ್ಲಾ ನಾಗರಿಕರೂ ಹಿಂದೂಗಳು. ಅವರ ಆರಾಧನೆಯ ವಿಧಾನಗಳು ಬೇರೆ ಬೇರೆ ಆಗಿರಬಹುದು. ಆದರೆ ಎಲ್ಲರ ಡಿಎನ್‌ಎ ಒಂದೇ' ಎಂದಿದ್ದಾರೆ.

ಬಜೆಟ್– ಜನಪರ ಕಾರ್ಯಕ್ರಮಗಳ ರಾಷ್ಟ್ರವ್ಯಾಪಿ ಅಭಿಯಾನ: ಬಿಜೆಪಿ

ನವದೆಹಲಿ (ಪಿಟಿಐ): ಬಜೆಟ್‌ನಲ್ಲಿ ಘೋಷಿಸಿರುವ ಜನಪರ ಕಾರ್ಯಕ್ರಮಗಳ ಬಗ್ಗೆ ಜನರಿಗೆ ಅರಿವು ಮೂಡಿಸಲು ಬಿಜೆಪಿ 12 ದಿನಗಳ ರಾಷ್ಟ್ರವ್ಯಾಪಿ ಅಭಿಯಾನ ಪ್ರಾರಂಭಿಸಲಿದ್ದು, ಕೇಂದ್ರ ಸಚಿವರು ಹಾಗೂ ಬಿಜೆಪಿ ಆಡಳಿತ ರಾಜ್ಯಗಳ ಮುಖ್ಯಮಂತ್ರಿಗಳು ಪತ್ರಿಕಾಗೋಷ್ಠಿ ನಡೆಸಿ ಮಾಹಿತಿ ನೀಡುವರು ಎಂದು ಪಕ್ಷದ ಮುಖಂಡರು ತಿಳಿಸಿದ್ದಾರೆ.

ಈ ಅಭಿಯಾನವನ್ನು ಬಿಜೆಪಿಯ ಹಿರಿಯ ನಾಯಕ ಸುಶೀಲ್ ಮೋದಿ ಸಂಯೋಜಿಸಲಿದ್ದು, ಫೆ.12 ರಂದು ಮುಕ್ತಾಯಗೊಳ್ಳಲಿದೆ ಎಂದು ಮೂಲಗಳು ತಿಳಿಸಿವೆ.

ಖಜಾನೆ ಭರ್ತಿಗಾಗಿ ಖರ್ಚಿಗೆ ಉತ್ತೇಜನ

ಒಂದನೇ ಪುಟದಿಂದ...

ಇದು ಭಾರತದ ಜಿಡಿಪಿಯ ಶೇ 3.3ರಷ್ಟು. ಕಳೆದ ಸಾಲಿಗೆ ಹೋಲಿಸಿದರೆ ಇದನ್ನು ಶೇ 33ರಷ್ಟು ಹೆಚ್ಚಳ ಮಾಡಲಾಗಿದೆ. ಇದರಿಂದ ದೊಡ್ಡ ಮಟ್ಟದಲ್ಲಿ ಉದ್ಯೋಗ ಸೃಷ್ಟಿ ಆಗಲಿದೆ ಎಂಬುದು ಕೇಂದ್ರ ಸರ್ಕಾರದ ಲೆಕ್ಕಾಚಾರ.

ಈ ವರ್ಷ ₹18 ಲಕ್ಷ ಕೋಟಿಯಷ್ಟು ಸಾಲ ಮಾಡಲು ಪ್ರಸ್ತಾಪಿಸಲಾಗಿದೆ. ಇದರಿಂದಾಗಿ, ದೊಡ್ಡ ಮೊತ್ತವು ಸಾಲದ ಬಡ್ಡಿ ಪಾವತಿಗೆ ಹೋಗಲಿದೆ. ಈ ಮೊತ್ತ ₹10.79 ಲಕ್ಷ ಕೋಟಿಗಳಷ್ಟು. ರಾಜ್ಯ ಸರ್ಕಾರಗಳಿಗೆ ಒಕ್ಕೂಟ ಸರ್ಕಾರದಿಂದ ಸಂದಾಯ ಆಗಬೇಕಿರುವ ಮೊತ್ತ ₹18.62 ಲಕ್ಷ ಕೋಟಿಗಳಷ್ಟು.

ಕೋವಿಡ್ ಸಂಕಷ್ಟ ಕಾಲದಲ್ಲಿ ಗ್ರಾಮೀಣ ಜನರನ್ನು ಮೇಲೆತ್ತಿದ್ದ ಹಾಗೂ ಗ್ರಾಮೀಣ ಉದ್ಯೋಗ ಸೃಷ್ಟಿಯಲ್ಲಿ ಸಂಚಲನ ಉಂಟು ಮಾಡಿರುವ 'ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ'ಯ ಅನುದಾನವನ್ನು ಶೇ 32ರಷ್ಟು ಕಡಿಮೆ ಮಾಡಲಾಗಿದೆ. ಈ ಯೋಜನೆಗೆ 2021–22ರಲ್ಲಿ ₹89,154 ಕೋಟಿ ಮೀಸಲಿಡಲಾಗಿತ್ತು. 2023-24ರ ಸಾಲಿನಲ್ಲಿ ಅನುದಾನವನ್ನು ₹61,032 ಕೋಟಿಗೆ ಇಳಿಸಲಾಗಿದೆ. ಆಹಾರ ಸಬ್ಸಿಡಿ, ಎಲ್‌ಪಿಜಿ ಸೇರಿದಂತೆ ಹಲವು ಸಬ್ಸಿಡಿಗಳಿಗೆ ದೊಡ್ಡ ಪ್ರಮಾಣದಲ್ಲಿ ಕತ್ತರಿ ಪ್ರಯೋಗ ಮಾಡಲಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಬಂಡವಾಳ ಹಿಂದೆಗೆತದ ಮಂತ್ರ ಪಠಿಸುತ್ತಿದ್ದ ಸರ್ಕಾರವು ಈ ವರ್ಷ ಅದರ ಗಾತ್ರ, ಪ್ರಮಾಣಗಳ ಕುರಿತು ಮೌನಕ್ಕೆ ಶರಣಾಗಿದೆ. ರೈಲ್ವೆ, ವಿದ್ಯುತ್ ಕ್ಷೇತ್ರಗಳ ಖಾಸಗೀಕರಣದ ವಿಚಾರದಲ್ಲಿ ಸರ್ಕಾರವು ಮತ್ತೊಂದು ಹೆಜ್ಜೆ ಮುಂದಕ್ಕೆ ಇಟ್ಟಿದೆ. ಜತೆಗೆ, ರೈಲ್ವೆ ಕ್ಷೇತ್ರಕ್ಕೆ ₹2.40 ಲಕ್ಷ ಕೋಟಿಯಷ್ಟು ಮೀಸಲಿಡಲಾಗಿದೆ. ಇದು 2013–14ರ ಸಾಲಿಗಿಂತ ಒಂಬತ್ತು ಪಟ್ಟು ಹೆಚ್ಚು ಎಂದು ಹೇಳಿಕೊಂಡಿದೆ.

ಯುವಕರಿಗೆ ಉದ್ಯೋಗ ಸೃಷ್ಟಿ, ಅಭಿವೃದ್ಧಿ, ಸುಸ್ಥಿರ ಆರ್ಥಿಕ ವಾತಾವರಣ ಸೃಷ್ಟಿಸಲು ಏಳು ಆದ್ಯತಾ ಕ್ಷೇತ್ರಗಳನ್ನು ಗುರುತಿಸಿ ಬಲ ತುಂಬಲಾಗಿದೆ. ಎಲ್ಲರನ್ನೂ ಒಳಗೊಳ್ಳುವ ಅಭಿವೃದ್ಧಿ, ಮೂಲಸೌಕರ್ಯಗಳು ಹಾಗೂ ಹೂಡಿಕೆ, ಪರಿಸರ ಸಹ್ಯ ಬೆಳವಣಿಗೆ, ಯುವ ಶಕ್ತಿ, ಹಣಕಾಸು ವಲಯ, ಕಟ್ಟಕಡೆಯ ಫಲಾನುಭವಿಗೆ ಸೌಕರ್ಯ ಒದಗಿಸಲಾಗುತ್ತದೆ ಎಂಬ ಸಪ್ತರ್ಷಿ ಮಾರ್ಗವನ್ನು ನಿರ್ಮಲಾ ಸೀತಾರಾಮನ್ ಅವರು ತೋರಿಸಿದ್ದಾರೆ. ಸಿರಿಧಾನ್ಯವನ್ನು ಪ್ರೋತ್ಸಾಹಿಸಲು ಹಲವು ಉಪಕ್ರಮಗಳನ್ನು ಪ್ರಕಟಿಸಲಾಗಿದೆ. 50 ಹೊಸ ವಿಮಾನ ನಿಲ್ದಾಣಗಳನ್ನು ಆರಂಭಿಸಲಾಗುತ್ತದೆ ಎಂದು ಘೋಷಿಸಲಾಗಿದೆ. ಮಧ್ಯಪ್ರದೇಶ, ರಾಜಸ್ಥಾನ ಹಾಗೂ ಛತ್ತೀಸಗಡದ ಚುನಾವಣೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಬುಡಕಟ್ಟು ಸಮುದಾಯಗಳ ಏಳಿಗೆಗೆ ಹಲವು ಯೋಜನೆಗಳನ್ನು ಪ್ರಸ್ತಾಪಿಸಲಾಗಿದೆ.

ಬಡ್ಡಿರಹಿತ ಸಾಲ ಮತ್ತೊಂದು ವರ್ಷ ವಿಸ್ತರಣೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳಿಗೆ ನೀಡುವ 50 ವರ್ಷಗಳ ಬಡ್ಡಿರಹಿತ ಸಾಲವನ್ನು ಇನ್ನೂ ಒಂದು ವರ್ಷ ಮುಂದುವರಿಸಲಿದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಪ್ರಕಟಿಸಿದ್ದಾರೆ.

ಮೂಲಸೌಕರ್ಯ ಅಭಿವೃದ್ಧಿಗಾಗಿ ₹ 10 ಲಕ್ಷ ಕೋಟಿಗಳ ಅನುದಾನವನ್ನು ಒದಗಿಸಲಾಗಿದೆ. ಈ ಅನುದಾನ ಜಿಡಿಪಿಯ ಶೇ 3.3 ರಷ್ಟು ಆಗುತ್ತದೆ.

ಹೊಸದಾಗಿ ಸ್ಥಾಪಿಸಲಾದ ಮೂಲಸೌಕರ್ಯ ಹಣಕಾಸು ಸಚಿವಾಲಯವು ಹೆಚ್ಚಿನ ಖಾಸಗಿ ಹೂಡಿಕೆಯನ್ನು ಆಕರ್ಷಿಸಲು ಸಹಾಯ ಮಾಡುತ್ತದೆ. 'ಅಮೃತ ಕಾಲ'ಕ್ಕೆ ಪೂರಕವಾಗಿ ಮೂಲಸೌಕರ್ಯ ವರ್ಗೀಕರಣ ಮತ್ತು ಹಣಕಾಸು ಚೌಕಟ್ಟು ಮಾಡಲು ತಜ್ಞರ ಸಮಿತಿ ರಚಿಸಲಾಗುವುದು ಎಂದರು.

ಗ್ರ್ಯಾಚ್ಯುಟಿಗೆ ಒಪ್ಪಿಗೆ: ಅಂಗನವಾಡಿ ನೌಕರರ ಪ್ರತಿಭಟನೆ ಅಂತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರ್ಯಾಚ್ಯುಟಿ ವಿತರಣೆ ಹಾಗೂ ಶಿಕ್ಷಕರೆಂದು ಪರಿಗಣಿಸುವಂತೆ ಆಗ್ರಹಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಅಂಗನವಾಡಿ ನೌಕರರು ನಡೆಸುತ್ತಿದ್ದ ಪ್ರತಿಭಟನೆಯನ್ನು ಬುಧವಾರ ಹಿಂಪಡೆದಿದ್ದಾರೆ.

'ಸುಪ್ರೀಂ ಕೋರ್ಟ್ ತೀರ್ಪಿನಂತೆ ಗ್ರ್ಯಾಚ್ಯುಟಿ ಕಾಯ್ದೆ 1972ರ ಪ್ರಕಾರ ಗ್ರ್ಯಾಚ್ಯುಟಿ ನೀಡುವ ಕುರಿತು ಮುಖ್ಯಮಂತ್ರಿ ಅನುಮೋದನೆ ಮೇರೆಗೆ ಹಣಕಾಸು ಇಲಾಖೆ ಒಪ್ಪಿಗೆ ನೀಡಿದೆ. ಹೀಗಾಗಿ ಹೋರಾಟ ಹಿಂಪಡೆಯಲು ನಿರ್ಧರಿಸಲಾಗಿದೆ' ಎಂದು ರಾಜ್ಯ ಅಂಗನವಾಡಿ ನೌಕರರ ಸಂಘದ ಅಧ್ಯಕ್ಷೆ ಎಸ್.ವರಲಕ್ಷ್ಮಿ ಅವರು ತಿಳಿಸಿದ್ದಾರೆ.

ಶಾಲಾ ಪೂರ್ವ ಶಿಕ್ಷಣಕ್ಕಾಗಿ ಬೆಳಿಗ್ಗೆ 10ರಿಂದ ಮಧ್ಯಾಹ್ನ 1 ಗಂಟೆ ತನಕ ನಿರ್ದಿಷ್ಟ ಸಮಯ ಮೀಸಲಿರಿಸಿದ ಲಿಖಿತ ಆದೇಶ ನೀಡಿದೆ. ಮಿನಿ ಅಂಗನವಾಡಿ ಹಾಗೂ ಸಹಾಯಕಿಯರ ಪದೋನ್ನತಿ ಕುರಿತು ಲೋಪ–ದೋಷಗಳಿದ್ದ ಆದೇಶ ವಾಪಸ್ ಪಡೆದು ತಿದ್ದುಪಡಿ ಆದೇಶ ನೀಡಿದೆ. ಕಟ್ಟಡ ವೆಚ್ಚವನ್ನು ₹12 ಲಕ್ಷದಿಂದ ₹20 ಲಕ್ಷಕ್ಕೆ ಏರಿಕೆ ಮಾಡಲು ಒಪ್ಪಿದೆ. ಮಕ್ಕಳಿಗೆ ಶೂ, ಸಮವಸ್ತ್ರ ಹಾಗೂ ಮೂಲಸೌಕರ್ಯ ಹೆಚ್ಚಿಸಲು ಒಪ್ಪಿಗೆ ನೀಡಿದೆ ಎಂದು ಅವರು ವಿವರಿಸಿದ್ದಾರೆ.

ಅಂಗನವಾಡಿಗಳಲ್ಲಿ ಶಾಲಾಪೂರ್ವ ಶಿಕ್ಷಣ ಪಡೆದ ದೃಢೀಕರಣ ಪತ್ರ ನೀಡಲು ಸಮ್ಮತಿ ನೀಡಿದೆ. ಅಂಗನವಾಡಿ ನೌಕರರ ಆರೋಗ್ಯ ತಪಾಸಣೆ ಸೇರಿ ಇನ್ನುಳಿದ ಬೇಡಿಕೆಗಳ ಬಗ್ಗೆ ಅಧಿಕಾರಿಗಳು ಮಾತುಕತೆ ಸಂದರ್ಭದಲ್ಲಿ ಒಪ್ಪಿದ್ದಾರೆ. 10 ದಿನಗಳಿಂದ ಅಹೋರಾತ್ರಿ ನಡೆಸಿದ ಪ್ರತಿಭಟನೆಯನ್ನು ವಾಪಸ್ ಪಡೆಯಲಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಗುಂಡಣ್ಣ



ಬೆರಗಿನ ಬೆಳಕು
ಗುರುರಾಜ ಕರಜಗಿ

ನಿರಹಂಕೃತಿಯ ಕವಚ

ಬಿಟ್ಟೆನೆಲ್ಲವನೆಂಬ ಹೃದಯ ಶೋಷಣೆ ಬೇಡ |
ಕಟ್ಟಿಕೊಳ್ಳುವ ಶಿರ:ಪೀಡೆಯುಂ ಬೇಡ ||
ತೊಟ್ಟು ನಿರಹಂಕೃತಿಯ ಕವಚವನು ನೀಂ ಪೋರು |
ಮುಟ್ಟದಿಳೆಯಸಿ ನಿನ್ನ – ಮಂಕುತಿಮ್ಮ || 813 ||

ಪದ-ಅರ್ಥ: ಬಿಟ್ಟೆನೆಲ್ಲವನೆಂಬ = ಬಿಟ್ಟೆನು + ಎಲ್ಲವನು + ಎಂಬ, ಶಿರ:ಪೀಡೆ = ತಲೆನೋವು, ನಿರಹಂಕೃತಿಯ = ನಿರ್ + ಅಹಂಕೃತಿಯ(ಅಹಂಕಾರದ),ಪೋರು = ತೊಡು, ಮುಟ್ಟದಿಳೆಯಸಿ = ಮುಟ್ಟದು + ಇಳೆಯ(ಜಗತ್ತಿನ) + ಅಸಿ(ಖಡ್ಗ, ಕತ್ತಿ)

ವಾಚ್ಯಾರ್ಥ: ಎಲ್ಲವನ್ನೂ ಬಿಟ್ಟಿದ್ದೇನೆ ಎಂಬ ಹೃದಯ ಶೋಷಣೆ ಬೇಡ. ಎಲ್ಲವೂ ನನ್ನದೆ ಎಂದು ಕಟ್ಟಿಕೊಳ್ಳುವ ತಲೆನೋವೂ ಬೇಡ. ನನ್ನದೇನೂ ಇಲ್ಲ ಎನ್ನುವ ನಿರಹಂಕಾರದ ಕವಚವನ್ನು ತೊಟ್ಟರೆ ಜಗತ್ತಿನ ಕಷ್ಟಗಳ ಕತ್ತಿ ನಿನ್ನನ್ನು ತಾಗುವುದಿಲ್ಲ.

ವಿವರಣೆ: ಒಬ್ಬ ಮನುಷ್ಯ ಕರ್ನಾಟಕದ ನಗರವೊಂದರಲ್ಲಿ ವ್ಯವಹಾರ ಮಾಡಿಕೊಂಡು ಸುಖವಾಗಿದ್ದ. ಶ್ರೀಮಂತಿಕೆ, ಸುಂದರಳಾದ ಹೆಂಡತಿ, ಎರಡು ಪುಟ್ಟಮಕ್ಕಳೊಂದಿಗೆ ಹಾಯಾಗಿದ್ದ. ಒಂದು ದಿನ ಏನೆನ್ನಿಸಿತೋ, ಮನೆ ಬಿಟ್ಟು ಹಿಮಾಲಯಕ್ಕೆ ಹೋಗಿಬಿಟ್ಟ. ಅಲ್ಲಿಯೇ ಗುರುವೊಬ್ಬರನ್ನು ಪಡೆದು ಸನ್ಯಾಸಿಯಂತೆ ನೆಲೆಸಿಬಿಟ್ಟ. ಆರೆಂಟು ವರ್ಷಗಳು ಕಳೆದವು ಒಂದು ಬಾರಿ ಕನ್ನಡದ ಪ್ರವಾಸಿಗನೊಬ್ಬ ಹಿಮಾಲಯದ ಆ ಪ್ರದೇಶಕ್ಕೆ ಹೋದ. ಈ ಸನ್ಯಾಸಿಯನ್ನು ಕಂಡ. ಮಾತನಾಡುತ್ತಿರುವಾಗ ಈ ಪ್ರವಾಸಿ ಕನ್ನಡದವನೆಂದು ತಿಳಿದು ಸನ್ಯಾಸಿಗೆ ಸಂತೋಷ ನಿಮ್ಮದು ಯಾವ ಊರು ಎಂದು ಕೇಳಿದ. ಇವನು ಹೇಳಿದ. ಆಶ್ಚರ್ಯ! ಪ್ರವಾಸಿಯದೂ, ಸನ್ಯಾಸಿಯ ಊರೆ! ಕುತೂಹಲ ಗರಿಗೆದರಿತು. ಸನ್ಯಾಸಿ ತನ್ನ ಊರಿನ ಬಗ್ಗೆ, ತನ್ನ ಮನೆಯ ಬಗ್ಗೆ, ತನ್ನ ಹೆಂಡತಿ, ಮಕ್ಕಳು ಏನು ಮಾಡುತ್ತಿದ್ದಾರೆ ಎಂದು ಮತ್ತೆ ಮತ್ತೆ ಕೇಳಿದ. ಸನ್ಯಾಸಿಯ ಕಣ್ಣಲ್ಲಿಯ ಹೊಳಪು, ಆಸಕ್ತಿಗಳನ್ನು ಕಂಡು ಪ್ರವಾಸಿ ಹೇಳಿದ, "ಸ್ವಾಮಿ, ನೀವು ಮರಳಿ ನಿಮ್ಮೂರಿಗೆ ಹೋಗುವುದು ವಾಸಿ. ನೀವು ಮನೆ, ಹೆಂಡತಿ, ಮಕ್ಕಳನ್ನು ಬಿಟ್ಟು ಹಿಮಾಲಯಕ್ಕೆ ಬಂದಿರಿ ಆದರೆ ಅವು ನಿಮ್ಮನ್ನು ಬಿಟ್ಟೇ ಇಲ್ಲ. ಸುಮ್ಮನೇ ಏಕೆ ಎಲ್ಲವನ್ನೂ ಬಿಟ್ಟೆ ಎಂದುಕೊಂಡು ನಿಮ್ಮ ಹೃದಯಕ್ಕೆ ಮೋಸಮಾಡುತ್ತಿದ್ದೀರಿ?" ಇದೇ ಕಷ್ಟ. ಬಿಟ್ಟೆ ಎಂದುಕೊಂಡರೂ ಮನಸ್ಸಿನಲ್ಲಿ ಅದರ ಬಗ್ಗೆಯೇ ಕೊರಗುತ್ತಿರುವುದು ಹೃದಯಶೋಷಣೆ.

ಇದು ಒಂದು ಬಗೆಯಾದರೆ, ಇನ್ನೊಂದು ಬಗೆಯ ಜನರೂ ಇದ್ದಾರೆ. ಅವರು ಪ್ರಪಂಚದ ಚಿಂತೆಗಳನ್ನೆಲ್ಲ ತಮ್ಮ ತಲೆಯ ಮೇಲೆಯೇ ಹೊತ್ತಂತೆ ಒದ್ದಾಡಿ ಸಂಕಟಪಡುವವರು. ತಾವಿಲ್ಲದಿದ್ದರೆ ಪ್ರಪಂಚದ ಗತಿ ಏನು ಎಂದು ಆತಂಕಪಡುವವರು. ಅವರಿಗೆ ತಾವು ಹುಟ್ಟುವ ಮೊದಲೂ ಪ್ರಪಂಚವಿತ್ತು ಮತ್ತು ತಾವು ತೀರಿ ಹೋದ ಬಳಿಕವೂ ಪ್ರಪಂಚ ಹಾಗೆಯೇ ಇರುತ್ತದೆಂಬುದು ಸ್ಮರಣೆಗೆ ಬರುವುದಿಲ್ಲ. ಹಾಗಾದರೆ ಬದುಕುವುದು ಹೇಗೆ? ಬುದ್ಧ, ಮಹಾವೀರ, ಶಂಕರ, ಬಸವಣ್ಣ ಇವರೆಲ್ಲ ಪ್ರಪಂಚದಲ್ಲಿ ಕೊನೆಯವರೆಗೂ ಕಾರ್ಯೋನ್ಮುಖರಾಗಿಯೇ ಇದ್ದವರು. ಆದರೂ ಮಹಾತ್ಮರಾದರು. ಕಾರಣ ಇಷ್ಟೇ. ಅವರು ಮಾಡಿದ ಕಾರ್ಯ ಅವರಿಗಾಗಿಯೇ ಇರಲಿಲ್ಲ. ಸಮಾಜಕ್ಕೆ ಯಾವುದು ಒಳಿತೋ ಅದನ್ನು ಯಾವ ಪ್ರತಿಫಲಾಕ್ಷೆ ಇಲ್ಲದೆ ಮಾಡಿದರು. ಅಲ್ಲಿ ಯಾವ ಅಹಂಕಾರವೂ ಇರಲಿಲ್ಲ. ಈ ನಿರಹಂಕಾರದ ಕವಚವನ್ನು ಅವರೆಲ್ಲ ಧರಿಸಿದ್ದರಿಂದ ಪ್ರಪಂಚದ ನಡೆಗಳು ಅವರನ್ನು ಗಾಸಿ ಮಾಡಲಿಲ್ಲ. ಹಾಗೆಂದರೆ ಭೌತಿಕವಾಗಿ ಅವರಿಗೆ ತೊಂದರೆಗಳು ಬರಲೇ ಇಲ್ಲವೆ? ಬಂದವು, ಬೇಕಾದಷ್ಟು ಬಂದವು. ಆದರೆ ಅವು ಅವರ ಆತ್ಮಶಕ್ತಿಯನ್ನು ಕುಂದಿಸದೆ, ವೃದ್ಧಿಸಿದವು. ಅವರನ್ನು ಅಮರರನ್ನಾಗಿ ಮಾಡಿದವು.

ದಿನ ಭವಿಷ್ಯ
ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಫೆಬ್ರುವರಿ 2, 2023

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯನ ಶಿಶಿರ ಋತು ತಿಥಿ: ಮಾಘ ಶುಕ್ಲ ದ್ವಾದಶಿ ಗಂ. 16-27, ನಕ್ಷತ್ರ: ಆರ್ದ್ರಾ ಗಂ. 30-18 ಯೋಗ: ವೈಧೃತಿ ಗಂ. 12-12, ಕರಣ: ಬಾಲವ ಗಂ. 16-27, ಮಕರ ಮಾಸದ 19 ನೇ ದಿನ.
ರಾಹುಕಾಲ: ಮಧ್ಯಾಹ್ನ 01-30 –03-00
ಸೂರ್ಯೋದಯ: 07-01 ಸೂರ್ಯಾಸ್ತ : 06-28
ಮುಸ್ಲಿಂ ದಿನಾಂಕ: 10 ರಜಬ್ ದಿನ ವಿಶೇಷ : ಭೀಷ್ಮ ದ್ವಾದಶಿ, ಪಕ್ಷ ಪ್ರದೋಷ ಅದೃಷ್ಟ ಸಂಖ್ಯೆ : 3, 11

ಮೇಷ: ಮನಸ್ಸಿದ್ದರೆ ಮಾರ್ಗ ಎಂಬ ಮಾತು ನಿಮಗೆ ಅನ್ವಯಿಸುತ್ತದೆ. ಹಲವು ದಿನಗಳಿಂದ ಅನುಭವಿಸುತ್ತಿರುವ ಅನಾರೋಗ್ಯ ಸಮಸ್ಯೆ ಉಪಶಮನವಾಗುವುದು. ವೈವಾಹಿಕ ಜೀವನಕ್ಕೆ ಸಮಯ ಕೂಡಿಬರಲಿದೆ.

ವೃಷಭ: ಲೇಖಕರಿಗೆ ವಿಷಯ ಸಂಗ್ರಹಕ್ಕೆ ಬೇಕಾದ ವಾತಾವರಣ ಸಿಗುತ್ತದೆ ಈ ದಿನದಲ್ಲಿ ಬರೆಯುವ ಲೇಖನಕ್ಕೆ ಸರಸ್ವತಿಯ ಅನುಗ್ರಹ ಇದ್ದಂತೆ ಅನುಭವವಾಗಲಿದೆ. ವಿದ್ಯುತ್ ಉಪಕರಣಗಳ ಬಳಕೆಯಲ್ಲಿ ಜಾಗರೂಕತೆ ಮುಖ್ಯವಾಗುವುದು.

ಮಿಥುನ: ವಿದ್ಯಾರ್ಥಿಗಳಿಗೆ ಶ್ರೇಯಸ್ಸು, ಮೇಧಾಶಕ್ತಿ ಹೆಚ್ಚಲಿದೆ. ಆಟಿಕೆಗಳ ಅಥವಾ ಕ್ರೀಡಾ ವಸ್ತುಗಳ ವ್ಯಾಪಾರಿಗಳಿಗೆ ಲಾಭದಾಯಕ ಬೆಳವಣಿಗೆ. ಕೃಷಿ ಕೆಲಸದಲ್ಲಿ ಆಯುಧಗಳನ್ನು ಬಳಸುವಾಗ ಜಾಗ್ರತೆಯಿಂದ ಕೆಲಸ ಮಾಡಿ.

ಕರ್ಕಾಟಕ: ಹೊಸ ಹುದ್ದೆಯಲ್ಲಿ ಗೌರವ, ಸಂತೋಷ ಮತ್ತು ಹೊಸ ರೀತಿಯ ಅನುಭವ ದೊರೆಯುವುದು. ಮನೆಯಲ್ಲಿ ಗುರು-ಹಿರಿಯರ ಶುಭ ಆಶೀರ್ವಾದದಿಂದ ಮಂಗಳ ಕೆಲಸ ನಡೆಯಲಿದೆ.

ಸಿಂಹ: ಉದ್ಯೋಗದಲ್ಲಿ ಎದುರಾಗುವ ಆಯ್ಕೆಯಂಥ ಸಮಸ್ಯೆಗೆ ಈ ದಿನ ಉತ್ತರ ಕಂಡುಕೊಳ್ಳುವುದು ಕಷ್ಟವೆನಿಸುವುದು. ಮಾರ್ಗದರ್ಶಕರ ಸಲಹೆ ತೆಗೆದುಕೊಳ್ಳುವುದು ಉತ್ತಮ. ಶುಭಕ್ಕಾಗಿ ಮಹಾಗಣಪತಿಯನ್ನು ಆರಾಧಿಸಿ.

ಕನ್ಯಾ: ವೃತ್ತಿ ತರಬೇತಿ ಪಡೆದುಕೊಳ್ಳುವ ಅವಕಾಶ ಸಿಗುವುದು. ವ್ಯಾವಹಾರಿಕ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಮೃದು ಧೋರಣೆಯಿಂದ ಕೆಲವು ಮಂದಿ ನಿಮ್ಮ ವಿರುದ್ಧ ಧ್ವನಿ ಎತ್ತುವ ಸಾಧ್ಯತೆ ಇದೆ. ದೇವರು ಮೆಚ್ಚುವ ರೀತಿಯಲ್ಲಿ ವ್ಯವಹರಿಸಿ.

ತುಲಾ: ಕೋರ್ಟು ಕಚೇರಿಗಳ ವ್ಯವಹಾರದಲ್ಲಿ ವಿಳಂಬವಾದರು ಯಶಸ್ಸು ನಿಮ್ಮದಾಗಲಿದೆ. ಕಫ ಪ್ರಕೃತಿಯ ದೇಹ ಹೊಂದಿರುವ ನಿಮಗೆ ಉಸಿರಾಟಕ್ಕೆ ಸಂಬಂಧಿಸಿದಂತೆ ಆರೋಗ್ಯದಲ್ಲಿ ಏರು-ಪೇರು ಅನುಭವಕ್ಕೆ ಬರಲಿದೆ.

ವೃಶ್ಚಿಕ: ಹೃದಯದ ಭಾವನೆಯು ಒಳ್ಳೆಯ ಧ್ಯೇಯವನ್ನೇ ಹೊಂದಿದ್ದರೂ ಸಹಚರರಲ್ಲಿ ನೀವಾಡುವ ಮಾತುಗಳು ಭಿನ್ನಾಭಿಪ್ರಾಯ ಮೂಡಲು ಕಾರಣವಾಗುತ್ತದೆ. ಜನಸಂಪತ್ತು ಮುಖ್ಯವೆಂಬುದನ್ನು ಮರೆಯದಿರಿ.

ಧನು: ಅಧಿಕ ರಕ್ತದೊತ್ತಡದಿಂದ ಬಳಲುವಂತಾಗಬಹುದು. ಸೇವಿಸುವ ಆಹಾರದಲ್ಲಿ ನಿಯಮವಿರಲಿ. ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದಲ್ಲಿ ಬಿಡುವಿಲ್ಲದ ದಿನ. ಸಾಹಿತ್ಯ, ಕಾದಂಬರಿ ಅಧ್ಯಯನದಲ್ಲಿ ಆಸಕ್ತಿ ಹೆಚ್ಚುವುದು.

ಮಕರ: ಪ್ರಾಮಾಣಿಕತೆಗೆ ಸರಿಯಾದಂತಹ ಫಲಗಳು ಈ ದಿನ ದೊರೆಯುವುದು. ಸರಳ ಸ್ವಭಾವದಿಂದ ಇರುವ ನಿಮಗೆ ಸಂಬಂಧಿಕರಲ್ಲಿ ಗೌರವವು ಹೆಚ್ಚಾಗುವುದು. ನೂತನ ಕಟ್ಟಡಗಳ ನಿರ್ಮಾಣದ ಗುತ್ತಿಗೆ ಕೆಲಸ ಲಭಿಸುತ್ತದೆ.

ಕುಂಭ: ಅಧಿಕಾರಿಗಳು ನೀವಿಟ್ಟಿರುವ ಕರ್ತವ್ಯನಿಷ್ಠೆಯ ಬಗ್ಗೆ ಈ ದಿನ ಗಮನಿಸಲ್ಲಿದ್ದಾರೆ. ವ್ಯವಹಾರದಲ್ಲಿ ಯೋಚಿಸಿ ಮಾತನಾಡುವುದರಿಂದ ಸಮಸ್ಯೆಗಳಿಗೆ ಆಸ್ಪದಗಳಿರುವುದಿಲ್ಲ. ಧಾರ್ಮಿಕ ಕಾರ್ಯದಲ್ಲಿ ಆಸಕ್ತಿ ಮೂಡುವುದು.

ಮೀನ: ಕುಟುಂಬದ ಸಮಸ್ಯೆಗಳಿಂದ ಮುಕ್ತಿ ಕಾಣಲಿದ್ದೀರಿ. ರಫ್ತು ಉದ್ಯಮದವರಿಗೆ ಅಡೆತಡೆಗಳು ಉಂಟಾಗಬಹುದು. ಹಣಕಾಸು ಪರಿಸ್ಥಿತಿ ದುರ್ಬಲವಾಗುವುದರಿಂದ ಯಾವುದೇ ಕೆಲಸಗಳಿಂದ ದೂರವಿರುವುದು ಉತ್ತಮ.

ಪದಬಂಧ 5218 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಆರ್ಥಿಕ ನೆರವು (5)
3.ಕಾಸಿದ್ರೆ ಮಾತ್ರವೇ ಶಿವನ ನೆಲೆ! (3)
5. ಯಾವುದೇ ಅಪರಾಧವನ್ನು ಮಾಡದಿರುವವನು (5)
8. ಲಿಂಗ ವಚನ ವಿಭಕ್ತಿಗಳಿಗಾಗಿ ರೂಪ ಭೇದ ಹೊಂದದ ಶಬ್ದ (3)
9.ವನದ ಕೊನೆಗೆ ನಡೆಸಿದ ನವಬಾಳು (5)
12.ಅಳುತ್ತಲೇ ಹಿಸುಕಿದ್ದು ಬೆಂದಕ್ಕಿ ಕಾಳು (3)
13.ಈತ ಮಂದಿಗೆಲ್ಲಾ ಒಡೆಯ (5)
16.ಹುದುಗಿಟ್ಟ ಧನ (3)
17.ಒಂದುಗೂಡಿಸುವುದು (5)

ಮೇಲಿಂದ ಕೆಳಕ್ಕೆ
1.ರಕ್ತ ಹರಿಯುವ ನಾಳ (3)
2.ಸರಸದ ಮಾತುಕತೆ (3)
4.ಮಯನ ಬಳಿ ಕಳೆದ ಕಾಲ (3)
6.ಈಕೆ ಮನ್ಮಥನ ಪತ್ನಿ (2)
7.ಸಾಕ್ಷರನ ಬಳಿಯಲ್ಲಿರುವ ಅಸುರ (3)
8.ಆಹಾರವನ್ನು ಹೀಗೂ ಹೇಳುವರು (3)
9.ನಾಭಿ ಇಲ್ಲಿ ಕಾಣುತ್ತಿದೆ (3)
10.ದನದ ಹತ್ತಿರ ಕಾಣುತ್ತಿರುವ ಮುಖ (3)
11.ಹೆದರಿಕೆ ಹೀಗೆ ಬಂದಿದೆ (2)
12.ಅವನಿರುವ ಭೂಮಿಯಿದು (3)
14.ನಾಕದಲ್ಲಿ ತೂರಿಸಿರುವ ಮೂಗು (3)
15.ಕಣದಲ್ಲಿ ಆಗಿರುವ ಮದುವೆ (3)



5217ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಅದಿರು 4.ಹಕೀಮ
5.ಸಹಪಾಠಿ 6.ರಾಯಭಾರ 8.ತಿಲ
10.ರವಿ 13.ಜಮಖಾನ
14.ಸತ್ಯಭಾಮೆ 15.ಯಾಚಕ
16.ಯೌವ್ವನ

ಮೇಲಿಂದ ಕೆಳಕ್ಕೆ:
1.ಅಹಮಹಮಿಕೆ 2.ಅಮರಾವತಿ
3.ಉಪಾಯ 5.ಸರದಾರ
7.ಐತಿಹಾಸಿಕತೆ
9.ಲವಾಜಮೆ 11.ವಿಮಾನಯಾನ
12.ಪ್ರತ್ಯಯ

ಸುಡೊಕು 5604

	7			6			5	
2					5		6	
		1	2			4		9
		2					4	
4					6			
	1		3		2		7	
	2			1		8		
1			8					4
	8			3	7		1	

5603 ಸುಡೊಕು

7	9	2	5	3	1	4	6	8
4	1	5	6	8	7	3	2	9
6	8	3	4	9	2	1	5	7
5	3	4	7	1	9	6	8	2
1	2	6	8	5	4	7	9	3
8	7	9	2	6	3	5	4	1
9	4	7	3	2	5	8	1	6
3	6	1	9	4	8	2	7	5
2	5	8	1	7	6	9	3	4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಸಿರಿಧಾನ್ಯಕ್ಕೆ ಉತ್ತೇಜನ

'ಸಿರಿಧಾನ್ಯ'ಗಳ ಉತ್ಪಾದನೆಗೆ ಈ ಬಾರಿಯ ಬಜೆಟ್‌ನಲ್ಲಿ ಪ್ರೋತ್ಸಾಹ ನೀಡಲಾಗಿದೆ. ಹಣಕಾಸು ಸಚಿವೆ 'ಸಿರಿಧಾನ್ಯ'ವನ್ನು ಬಜೆಟ್‌ನಲ್ಲಿ 'ಶ್ರೀ ಅನ್ನ' ಎಂದು ಉಲ್ಲೇಖಿಸುವ ಮೂಲಕ ಅದರ ಮಹತ್ವವನ್ನು ಸಾರಿದ್ದಾರೆ.

ಭಾರತವು ಸಿರಿಧಾನ್ಯ ಉತ್ಪಾದನೆಯಲ್ಲಿ ಜಾಗತಿಕ ಮಟ್ಟದಲ್ಲಿ ಮೊದಲ ಸ್ಥಾನದಲ್ಲಿದ್ದು, ಎರಡನೇ ಅತಿ ದೊಡ್ಡ ರಫ್ತುದಾರ ದೇಶವಾಗಿದೆ. ರಾಗಿ, ಜೋಳ, ನವಣೆ, ಸಾಮೆ, ಕೊರಲೆ, ಸಜ್ಜೆ, ಹಾರಕ, ಬರಗು, ಊದಲು ಸೇರಿದಂತೆ ದೇಶದಾದ್ಯಂತ ಬೆಳೆಯುತ್ತಿರುವ ಸಿರಿಧಾನ್ಯಗಳ ಕೃಷಿಗೆ ಉತ್ತೇಜಿಸಲಾಗುತ್ತದೆ.

ಸಿರಿಧಾನ್ಯಗಳ ಸೇವನೆಯಿಂದ ಆರೋಗ್ಯ ಉತ್ತಮಗೊಳ್ಳುತ್ತದೆ. ಇವು ಶತಮಾನಗಳಿಂದ ನಮ್ಮ ಆಹಾರದ ಅವಿಭಾಜ್ಯ ಅಂಗವಾಗಿವೆ. ಇವುಗಳನ್ನು ಬೆಳೆಯುವ ಮೂಲಕ ದೇಶದ ಸಣ್ಣ ರೈತರು ಜನರ ಆರೋಗ್ಯ ಸುಧಾರಣೆಗೆ ಮಹತ್ವದ ಕೊಡುಗೆ ನೀಡುತ್ತಿರುವುದು ಹೆಮ್ಮೆಯ ಸಂಗತಿ ಎಂದು ಸಚಿವೆ ಹೇಳಿದ್ದಾರೆ.

ಭಾರತವನ್ನು 'ಸಿರಿಧಾನ್ಯ'ಗಳ (ಶ್ರೀ ಅನ್ನ) ಜಾಗತಿಕ ಉತ್ಪಾದನಾ ಕೇಂದ್ರವನ್ನಾಗಿ ರೂಪಿಸಲಾಗುವುದು. ಇದಕ್ಕಾಗಿ ಹೈದರಾಬಾದಿನ 'ಭಾರತೀಯ ಸಿರಿಧಾನ್ಯಗಳ ಸಂಶೋಧನಾ ಸಂಸ್ಥೆ'ಯನ್ನು (ಐಐಎಂಆರ್) 'ಸೆಂಟರ್ ಆಫ್ ಎಕ್ಸ್‌ಲೆನ್ಸ್' ಆಗಿ ಮೇಲ್ದರ್ಜೆಗೇರಿಸಲಾಗುವುದು. ಈ ಕೇಂದ್ರವು ಸಿರಿಧಾನ್ಯ ಉತ್ಪಾದನೆಗೆ ಇರುವ ಅತ್ಯುತ್ತಮ ವಿಧಾನ, ಸಂಶೋಧನೆ ಮತ್ತು ತಂತ್ರಜ್ಞಾನಗಳನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಹಂಚಿಕೊಳ್ಳುತ್ತದೆ ಎಂದಿದ್ದಾರೆ.

₹1.96 ಲಕ್ಷ ಕೋಟಿ
ಕೇಂದ್ರ ಗೃಹ ಸಚಿವಾಲಯಕ್ಕೆ

₹946 ಕೋಟಿ
ಕೇಂದ್ರ ತನಿಖಾ ದಳಕ್ಕೆ (ಸಿಬಿಐ)

₹1,900 ಕೋಟಿ
ವಿದ್ಯುನ್ಮಾನ ಮತಯಂತ್ರಗಳನ್ನು (ಇವಿಎಂ) ಖರೀದಿಸಲು ಕೇಂದ್ರ ಕಾನೂನು ಸಚಿವಾಲಯಕ್ಕೆ

ನೈಸರ್ಗಿಕ ಕೃಷಿ: 10 ಸಾವಿರ ಕೇಂದ್ರ

ಮುಂದಿನ ಮೂರು ವರ್ಷಗಳಲ್ಲಿ 1 ಕೋಟಿ ರೈತರಿಗೆ ನೈಸರ್ಗಿಕ ಕೃಷಿ ಪದ್ಧತಿ ಅಳವಡಿಸಿಕೊಳ್ಳುವಂತೆ ಉತ್ತೇಜಿಸಲು ಸಹಕಾರ ನೀಡಲಾಗುವುದು. ಇದಕ್ಕಾಗಿ 10 ಸಾವಿರ 'ಜೈವಿಕ- ಒಳಸುರಿ ಸಂಪನ್ಮೂಲ ಕೇಂದ್ರ'ಗಳನ್ನು (ಬಯೊ ಇನ್‌ಪುಟ್ ರಿಸೋರ್ಸ್ ಸೆಂಟರ್ಸ್) ಸ್ಥಾಪಿಸಲಾಗುವುದು. ರಾಷ್ಟ್ರ ಮಟ್ಟದಲ್ಲಿ ಸೂಕ್ಷ್ಮ ಪೋಷಕಾಂಶ ವಿತರಣಾ ಜಾಲವನ್ನು ರೂಪಿಸಲಾಗುವುದು.

ಕೇಂದ್ರ ಬಜೆಟ್ 2023-24

ಪ್ರಜಾವಾಣಿ
ಗುರುವಾರ, 2 ಫೆಬ್ರುವರಿ 2023

ಹೊಸ ಯೋಜನೆ ಘೋಷಣೆ

- ಪ್ರವಾಸೋದ್ಯಮ ಉತ್ತೇಜಿಸಲು 'ಚಾಲೆಂಜ್ ಮೋಡ್' ಮೂಲಕ 50 ಸ್ಥಳಗಳನ್ನು ಆಯ್ಕೆ ಮಾಡಲು ಸರ್ಕಾರ ನಿರ್ಧರಿಸಿದೆ

- 'ಒಂದು ಜಿಲ್ಲೆ ಒಂದು ಉತ್ಪನ್ನ'ಗಳು ಮತ್ತು ಜಿಐ ಉತ್ಪನ್ನಗಳ ಪ್ರಚಾರ ಹಾಗೂ ಮಾರಾಟಕ್ಕಾಗಿ ಯೂನಿಟಿ ಮಾಲ್‌ಗಳ ಸ್ಥಾಪನೆಗೆ ರಾಜ್ಯಗಳಿಗೆ ಉತ್ತೇಜನ

- ಪ್ರಾಚೀನ ಶಾಸನಗಳನ್ನು ಡಿಜಿಟಲ್ ರೂಪದಲ್ಲಿ ರಕ್ಷಿಸಿಡಲು ಡಿಜಿಟಲ್ ಎಪಿಗ್ರಫಿ ಮ್ಯೂಸಿಯಂ 'ಭಾರತ್ ಶೇರ್ಡ್ ರೆಪೊಸಿಟರಿ ಆಫ್ ಇನ್‌ಸ್ಕ್ರಿಪ್ಶನ್' ಸ್ಥಾಪನೆ

- ಜೌಗು ಪ್ರದೇಶಗಳ ಅತ್ಯುತ್ತಮ ಬಳಕೆ ಉತ್ತೇಜಿಸಲು ಮತ್ತು ಜೀವವೈವಿಧ್ಯತೆ ಹೆಚ್ಚಿಸಲು ಮುಂದಿನ 3 ವರ್ಷಗಳಲ್ಲಿ 'ಅಮೃತ್ ಧರೋಹರ್' ಯೋಜನೆ ಜಾರಿ

ಕೃಷಿ ಸಾಲದ ಗುರಿ ₹20 ಲಕ್ಷ ಕೋಟಿ

ಡಿಜಿಟಲ್ ಮೂಲಸೌಕರ್ಯ ವೃದ್ಧಿ, ಕೃಷಿ ವೇಗವರ್ಧಕ ನಿಧಿ ಸ್ಥಾಪನೆ

ಆತ್ಮನಿರ್ಭರ ತೋಟಗಾರಿಕಾ ಕ್ಲೀನ್ ಪ್ಲಾಂಟ್ ಯೋಜನೆಗೆ ₹ 2,200 ಕೋಟಿ

ಪಿ.ಎಂ ಮತ್ಸ್ಯ ಸಂಪದ ಯೋಜನೆಗೆ ₹ 6,000 ಕೋಟಿ ಹೂಡಿಕೆಯ ಗುರಿ

ಉದ್ದ ನೂಲಿನ ಹತ್ತಿಯ ಉತ್ಪಾದನೆಗೆ ಪಿಪಿಪಿ ಮಾದರಿ ಅಳವಡಿಕೆ

ನವದೆಹಲಿ (ಪಿಟಿಐ): ಪಶುಸಂಗೋಪನೆ, ಹೈನುಗಾರಿಕೆ ಮತ್ತು ಮೀನುಗಾರಿಕೆಯನ್ನು ಕೇಂದ್ರೀಕರಿಸಿ ಮುಂದಿನ ಹಣಕಾಸು ವರ್ಷದಲ್ಲಿ ಕೃಷಿ ಸಾಲದ ಗುರಿಯನ್ನು ₹ 20 ಲಕ್ಷ ಕೋಟಿಗೆ (ಶೇ 11ರಷ್ಟು ಏರಿಕೆ) ಹೆಚ್ಚಿಸುವುದಾಗಿ ಕೇಂದ್ರ ಸರ್ಕಾರ ಬುಧವಾರ ಘೋಷಿಸಿದೆ.

ಇದು ರೈತ ಸಮುದಾಯಕ್ಕೆ ಹೆಚ್ಚಿನ ಕೃಷಿ ಸಾಲವನ್ನು ಸಬ್ಸಿಡಿ ದರದಲ್ಲಿ ಒದಗಿಸುವ ಗುರಿಯನ್ನು ಹೊಂದಿದೆ.

ರೈತ ಕೇಂದ್ರಿತ ಪರಿಹಾರ ಕ್ರಮಗಳ ಭಾಗವಾಗಿ 'ಡಿಜಿಟಲ್ ಮೂಲಸೌಕರ್ಯ' ಅಭಿವೃದ್ಧಿ, 'ಅಗ್ರಿ ಸ್ಟಾರ್ಟ್‌ಅಪ್'ಗಳ ಉತ್ತೇಜನಕ್ಕೆ 'ಕೃಷಿ ವೇಗವರ್ಧಕ ನಿಧಿ' ಸ್ಥಾಪನೆ, ತೋಟಗಾರಿಕೆಯನ್ನು ಪ್ರೋತ್ಸಾಹಿಸಲು 'ಆತ್ಮನಿರ್ಭರ ತೋಟಗಾರಿಕಾ ಕ್ಲೀನ್ ಪ್ಲಾಂಟ್' ಸೇರಿದಂತೆ ಹಲವು ಮಹತ್ವದ ಯೋಜನೆಗಳನ್ನು ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ.

ಮೀನುಗಾರರು, ಮೀನು ಮಾರಾಟಗಾರರು ಹಾಗೂ ಈ ಕ್ಷೇತ್ರದ ಸೂಕ್ಷ್ಮ, ಸಣ್ಣ ಉದ್ಯಮಗಳ ಚಟುವಟಿಕೆಗಳನ್ನು ಮತ್ತಷ್ಟು ಸಕ್ರಿಯಗೊಳಿಸಿ, ಮಾರುಕಟ್ಟೆ ವಿಸ್ತರಿಸಲು 'ಪಿ.ಎಂ ಮತ್ಸ್ಯ ಸಂಪದ'ದಲ್ಲಿ ಹೊಸ ಉಪ ಯೋಜನೆಯನ್ನು ₹6,000 ಕೋಟಿ ಹೂಡಿಕೆಯ ಗುರಿಯೊಂದಿಗೆ ಜಾರಿಗೊಳಿಸಲಾಗುತ್ತದೆ.

ರೈತ ಕೇಂದ್ರಿತ ಪರಿಹಾರ ಕ್ರಮಗಳ ಭಾಗವಾಗಿ 'ಡಿಜಿಟಲ್ ಮೂಲಸೌಕರ್ಯ' ಅಭಿವೃದ್ಧಿಪಡಿಸಲಾಗುವುದು. ಇದು ಎಲ್ಲ ರೈತರಿಗೂ ಮುಕ್ತವಾಗಿ ದೊರೆಯುವಂತೆ ಮಾಡಲಾಗುವುದು. ರೈತರಿಗೆ ಅಗತ್ಯವಿರುವ ಬೆಳೆ ಯೋಜನೆಗಳ ಕುರಿತ ಸಮಗ್ರ ಮಾಹಿತಿಯನ್ನು ಇದು ಒದಗಿಸುತ್ತದೆ. ಬೆಳೆಗೆ ಅಗತ್ಯವಿರುವ ಬೀಜ, ರಸಗೊಬ್ಬರ, ಕೀಟನಾಶಕದ ಮಾಹಿತಿ, ಕೃಷಿ ಸಾಲ, ಬೆಳೆ ವಿಮೆ, ಬೆಳೆಯ ಅಂದಾಜು, ಮಾರುಕಟ್ಟೆಯ ಜ್ಞಾನ, 'ಅಗ್ರಿ- ಟೆಕ್' ಉದ್ಯಮಗಳು ಮತ್ತು 'ಸ್ಟಾರ್ಟ್‌ಅಪ್'ಗಳ ಸ್ಥಾಪನೆಗೆ ಪೂರಕ ಮಾಹಿತಿ ಇದರಿಂದ ಲಭ್ಯವಾಗುತ್ತದೆ.

ಗ್ರಾಮೀಣ ಭಾಗದ ಯುವ ಉದ್ಯಮಿಗಳಿಗೆ 'ಅಗ್ರಿ ಸ್ಟಾರ್ಟ್‌ಅಪ್'ಗಳನ್ನು ಆರಂಭಿಸಲು ಉತ್ತೇಜಿಸುವುದಕ್ಕೆ 'ಕೃಷಿ ವೇಗವರ್ಧಕ ನಿಧಿ' ಸ್ಥಾಪಿಸಲಾಗುವುದು. ರೈತರು ಎದುರಿಸುತ್ತಿರುವ ಸವಾಲುಗಳಿಗೆ ಹೊಸ ಮತ್ತು ಸುಲಭ ಪರಿಹಾರ ಒದಗಿಸುವ ಗುರಿಯನ್ನು ಈ ನಿಧಿ ಹೊಂದಿದೆ. ಇದು ಕೃಷಿ ಪದ್ಧತಿಯನ್ನು ಪರಿವರ್ತಿಸಲು, ಉತ್ಪಾದಕತೆ ಮತ್ತು ಲಾಭವನ್ನು ಹೆಚ್ಚಿಸಲು ಆಧುನಿಕ ತಂತ್ರಜ್ಞಾನಗಳನ್ನು ಒದಗಿಸುತ್ತದೆ.

ಹೆಚ್ಚು ಉದ್ದ ನೂಲಿನ ಹತ್ತಿಯ ಉತ್ಪಾದನೆ ವೃದ್ಧಿಸಲು ಸರ್ಕಾರಿ- ಖಾಸಗಿ ಸಹಭಾಗಿತ್ವದ (ಪಿಪಿಪಿ) ಮೂಲಕ 'ಕ್ಲಸ್ಟರ್' ಆಧಾರಿತ ವಿಧಾನವನ್ನು ಅಳವಡಿಸಿಕೊಳ್ಳಲಾಗು-ವುದು. ಈ ಮೂಲಕ ರೈತರು, ಸರ್ಕಾರ ಮತ್ತು ಉದ್ಯಮಗಳು ಸಂಬಂಧಿತ ವಸ್ತುಗಳ ಪೂರೈಕೆ, ವಿಸ್ತರಣೆ ಮತ್ತು ಮಾರುಕಟ್ಟೆ ಸಂಪರ್ಕ ವಿಷಯದಲ್ಲಿ ಜತೆಯಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಗುತ್ತದೆ.

ಅಧಿಕ ಮೌಲ್ಯದ ತೋಟಗಾರಿಕೆ ಬೆಳೆಗಳಿಗೆ ರೋಗಮುಕ್ತ, ಗುಣಮಟ್ಟದ ನೆಡು ಸಾಮಗ್ರಿಗಳನ್ನು ಲಭ್ಯವಾಗುವಂತೆ ಮಾಡಲು 'ಆತ್ಮನಿರ್ಭರ ಕ್ಲೀನ್ ಪ್ಲಾಂಟ್ ಕಾರ್ಯಕ್ರಮ' ರೂಪಿಸಲು ₹2,200 ಕೋಟಿ ಮೀಸಲಿಡಲಾಗುವುದು ಎಂದು ತಿಳಿಸಲಾಗಿದೆ.

ಪಿಎಂ ಪ್ರಣಾಮ್

ಭೂಮಿಯ ಫಲವತ್ತತೆ ಸಂರಕ್ಷಣೆ ಕುರಿತು ಅರಿವು ಮೂಡಿಸಲು 'ಪಿಎಂ- ಪ್ರಣಾಮ್' ಎಂಬ ಯೋಜನೆ ಆರಂಭಿಸಲಾಗುತ್ತಿದೆ. ಈ ಮೂಲಕ ಸಮತೋಲಿತ ರಸಗೊಬ್ಬರ ಬಳಕೆ ಮತ್ತು ಪರ್ಯಾಯ ಗೊಬ್ಬರಗಳ ಬಳಕೆಗೆ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು ಉತ್ತೇಜಿಸಲಾಗುತ್ತದೆ.

ರಾಜಕಾರಣಿಗಳು ಏನಂತಾರೆ?



ಭದ್ರಾ ಮೇಲ್ದಂಡೆ ಯೋಜನೆಗೆ ₹5,300 ಕೋಟಿ ನೀಡಿದ್ದು, ಬರಗಾಲ ಪೀಡಿತ ಪ್ರದೇಶವಾದ ಮಧ್ಯ ಕರ್ನಾಟಕಕ್ಕೆ ದೊಡ್ಡ ಕೊಡುಗೆ. ರೈತರಿಗೆ ಬಹಳಷ್ಟು ಒತ್ತು ನೀಡಿ ಅನುದಾನವನ್ನೂ ಒದಗಿಸಿದ್ದಾರೆ. ಯುವಕರಿಗೆ ಉದ್ಯೋಗ ನೀಡಲು ವಿಶೇಷ ಅನುದಾನ ಮೀಸಲಿಟ್ಟಿದ್ದಾರೆ. ಕೈಗಾರಿಕಾ ಅಭಿವೃದ್ಧಿ, ಮೂಲಸೌಕರ್ಯ ಅಭಿವೃದ್ದಿಗೆ, ರೈಲ್ವೆಗೆ ಅತಿ ಹೆಚ್ಚಿನ ಅನುದಾನ ಒದಗಿಸಲಾಗಿದೆ. ಪ್ರಧಾನಿ ಮೋದಿಯವರ 'ಸಬ್ ಕಾ ಸಾಥ್, ಸಬ್ ಕಾ ವಿಕಾಸ್' ಎನ್ನುವ ದೃಷ್ಟಿಯಿಂದ ಸಮಗ್ರ ಅಭಿವೃದ್ಧಿಗೆ ಒತ್ತು ನೀಡಲಾಗಿದೆ.

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಇದು ಹೊರಗೆ ಥಳುಕು, ಒಳಗೆ ಹುಳುಕಿನ ಬಜೆಟ್. ಕರ್ನಾಟಕಕ್ಕೆ ಮೋದಿ ಸರ್ಕಾರ ಉಂಡೆ ನಾಮ ಹಾಕಿದೆ. 25 ಜನ ನಾಲಾಯಕ್ ಬಿಜೆಪಿ ಸಂಸದರು ಕರ್ನಾಟಕದ ಹಿತಾಸಕ್ತಿಯನ್ನು ರಕ್ಷಿಸಿಲ್ಲ. ಮೇಕೆದಾಟು, ಮಹದಾಯಿ, ಕೃಷ್ಣಾ ಮೇಲ್ದಂಡೆ ಯೋಜನೆಗೆ ಒಂದೇ ಒಂದು ರೂಪಾಯಿಯನ್ನೂ ಕೊಟ್ಟಿಲ್ಲ. ಶ್ರೀಮಂತರಿಗಿಂತ ಬಡವರೇ ಹೆಚ್ಚು ತೆರಿಗೆಯನ್ನು ಪಾವತಿಸುವ ಗ್ರಹಚಾರಕ್ಕೆ ತುತ್ತಾಗಿದ್ದಾರೆ. 'ಅಮೀರ್ ಕೆ ಸಾಥ್ ಗರೀಬ್ ಕಾ ವಿನಾಶ್' ಎಂಬಂತಿದೆ ಬಜೆಟ್.

ಸಿದ್ದರಾಮಯ್ಯ, ವಿರೋಧ ಪಕ್ಷದ ನಾಯಕ



ಭದ್ರಾ ಮೇಲ್ದಂಡೆ ಯೋಜನೆಗೆ ಹಣ ಬಿಡುಗಡೆ ಆಗುವುದರ ಒಳಗೆ ಚುನಾವಣಾ ನೀತಿ ಸಂಹಿತೆ ಜಾರಿಯಾಗಲಿದೆ. ಇದು ಜನರನ್ನು ತಾತ್ಕಾಲಿಕವಾಗಿ ಮೆಚ್ಚಿಸಲು ಮಾಡಿದ ಘೋಷಣೆ. ಕೇಂದ್ರ ಘೋಷಣೆ ಮಾಡಿದ ಎಲ್ಲ ಯೋಜನೆಗಳು ಕಾಗದದಲ್ಲಿ ಮಾತ್ರ ಇರುತ್ತವೆ. 20-30 ವರ್ಷಗಳ ಹಿಂದೆ ಘೋಷಣೆ ಆಗಿರುವ ರೈಲ್ವೆ ಯೋಜನೆಗಳು ಇನ್ನೂ ಆಮೆಗತಿಯಲ್ಲಿ ನಡೆಯುತ್ತಿವೆ. ಕೇಂದ್ರ ಬಜೆಟ್ ಮೇಲೆ ನಂಬಿಕೆ ಇಲ್ಲ. ಕೇಂದ್ರದಿಂದ ಮೂಗಿಗೆ ತುಪ್ಪ ಸವರುವ ಕೆಲಸ ಆಗಿದೆ.

ಎಚ್.ಡಿ. ಕುಮಾರಸ್ವಾಮಿ
ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ದೇಶದ ಜ್ವಲಂತ ಸಮಸ್ಯೆಗಳಾದ ಹಣ ದುಬ್ಬರ, ನಿರುದ್ಯೋಗ ಮುಂತಾದವುಗಳನ್ನು ಪರಿಹರಿಸುವ ಆಯವ್ಯಯ ಮಂಡಿಸುವುದರಲ್ಲಿ ಕೇಂದ್ರವು ಸಂಪೂರ್ಣ ವಿಫಲವಾಗಿದೆ. ಉನ್ನತ ಶಿಕ್ಷಣ ಪಡೆದವರು ಕೂಡ ಸಣ್ಣ ಸಣ್ಣ ನೌಕರಿಗಳಲ್ಲಿ ತೊಡಗಿಕೊಂಡು ಜೀವನ ನಡೆಸುತ್ತಿದ್ದಾರೆ. ಅಗತ್ಯ ವಸ್ತುಗಳನ್ನು ಖರೀದಿಸಲು ಜನಸಾಮಾನ್ಯರು ಕಷ್ಟ ಪಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಕಾರ್ಪೊರೇಟ್ ಕಂಪನಿಗಳನ್ನು ಮೆಚ್ಚಿಸಲು ಜನಸಾಮಾನ್ಯರ ಹಿತವನ್ನು ಕಡೆಗಣಿಸಲಾಗಿದೆ

ಪೃಥ್ವಿ ರೆಡ್ಡಿ, ಅಧ್ಯಕ್ಷ, ಎಎಪಿ ರಾಜ್ಯ ಘಟಕ

'ನರೇಗಾ', ಗ್ರಾಮೀಣಾಭಿವೃದ್ಧಿ ಸಚಿವಾಲಯ ಅನುದಾನಕ್ಕೆ ಕತ್ತರಿ

ನವದೆಹಲಿ (ಪಿಟಿಐ): ಗ್ರಾಮೀಣ ಜನರಿಗೆ ಉದ್ಯೋಗದ ಖಾತ್ರಿ ನೀಡುವ ಮಹತ್ವದ 'ನರೇಗಾ' ಯೋಜನೆಗೆ 2023-24ರ ಬಜೆಟ್‌ನಲ್ಲಿ ಅನುದಾನ ಕಡಿತವಾಗಿದೆ. ಅಲ್ಲದೆ, ಗ್ರಾಮೀಣಾಭಿವೃದ್ಧಿ ಸಚಿವಾಲಯವು ಪ್ರಸಕ್ತ ಹಣಕಾಸು ವರ್ಷದಲ್ಲಿ ನಿರೀಕ್ಷೆ ಮಾಡಿದ್ದ ಅಂದಾಜು ವೆಚ್ಚಕ್ಕಿಂತಲೂ ಶೇ 13ರಷ್ಟು ಕಡಿಮೆ ಅನುದಾನ ಹಂಚಿಕೆಯಾಗಿದೆ.

ಗ್ರಾಮೀಣಾಭಿವೃದ್ಧಿ ಸಚಿವಾಲಯಕ್ಕೆ ಬಜೆಟ್‌ನಲ್ಲಿ ₹ 1,57,545 ಕೋಟಿ ಹಂಚಿಕೆಯಾಗಿದೆ. ನರೇಗಾ ಯೋಜನೆಗೆ ₹ 60 ಸಾವಿರ ಕೋಟಿ ಹಂಚಿಕೆಯಾಗಿದ್ದು ಇದು, ಕಳೆದ ಹಣಕಾಸು ವರ್ಷದ ಪರಿಷ್ಕೃತ ಅಂದಾಜು ವೆಚ್ಚಕ್ಕಿಂತ ಶೇ 32ರಷ್ಟು ಕಡಿಮೆಯಾಗಿದೆ.

ನರೇಗಾ ಯೋಜನೆಗೆ 2022-23ನೇ ಸಾಲಿನ ಬಜೆಟ್‌ನಲ್ಲಿ ಒಟ್ಟು ₹ 73 ಸಾವಿರ ಕೋಟಿ ಹಂಚಿಕೆ ಮಾಡಲಾಗಿತ್ತು. ಪರಿಷ್ಕೃತ ಅಂದಾಜಿನ ಪ್ರಕಾರ, ಈ ಮೊತ್ತ ನಂತರ ₹ 89,400 ಕೋಟಿಗೆ ಏರಿಕೆಯಾಗಿತ್ತು. ನರೇಗಾ ಯೋಜನೆಯಡಿ ಗ್ರಾಮೀಣ ಪ್ರದೇಶದಲ್ಲಿ ಪ್ರತಿ ಕುಟುಂಬದ ಕನಿಷ್ಠ ಒಬ್ಬರಿಗೆ ಕನಿಷ್ಠ 100 ದಿನ ಉದ್ಯೋಗದ ಖಾತ್ರಿ ನೀಡಲಾಗುತ್ತದೆ. ಈ ಯೋಜನೆಯಡಿ ಮೂರನೇ ಒಂದರಷ್ಟು ಉದ್ಯೋಗವನ್ನು ಮಹಿಳೆಯರಿಗೆ ನೀಡುವುದು ಕಡ್ಡಾಯವಾಗಿದೆ.

ಉಳಿದಂತೆ, ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಗೆ ಕಳೆದ ವರ್ಷ ಇದ್ದಂತೆ ₹ 19,000 ಕೋಟಿ ಹಂಚಿಕೆ ಮಾಡಲಾಗಿದೆ. ಅಜೀವಿಕಾ ಯೋಜನೆಗೆ ₹ 14,129 ಕೋಟಿ ಹಂಚಿಕೆಯಾಗಿದ್ದು, ಕಳೆದ ವರ್ಷದ ಪರಿಷ್ಕೃತ ಅಂದಾಜಿಗಿಂತಲೂ ಹೆಚ್ಚಾಗಿದೆ.

ಪ್ರಧಾನಮಂತ್ರಿ ಆವಾಸ್ ಯೋಜನೆ (ಗ್ರಾಮೀಣ) ಅನುದಾನವನ್ನು ₹ 54,487 ಕೋಟಿಗೆ ಏರಿಸಲಾಗಿದೆ. ಇದು, ಕಳೆದ ವರ್ಷ ₹ 48,422 ಕೋಟಿ ಇತ್ತು. ಆದರೆ, ಶ್ಯಾಮಪ್ರಸಾದ್ ಮುಖರ್ಜಿ ರುರ್ಬಾನ್ ಮಿಷನ್‌ಗೆ ಈ ಬಾರಿ ಯಾವುದೇ ಅನುದಾನ ನಿಗದಿಪಡಿಸಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಸಮಗ್ರ ಮೂಲಸೌಕರ್ಯ ಒದಗಿಸುವ ಸಮಗ್ರ ಯೋಜನೆಯ ಅನುಷ್ಠಾನ ಈ ಇದರ ಗುರಿಯಾಗಿದೆ.

ಬಡ್ಡಿ ಪಾವತಿಗೇ ಗರಿಷ್ಠ ವೆಚ್ಚ

2023-24ನೇ ಸಾಲಿನ ಬಜೆಟ್‌ನ ಒಟ್ಟು ವೆಚ್ಚದಲ್ಲಿ, ಸಾಲದ ಮೇಲಿನ ಬಡ್ಡಿ ಪಾವತಿಗೇ ಗರಿಷ್ಠ ಪ್ರಮಾಣದ ಆದಾಯವನ್ನು ವಿನಿಯೋಗಿಸಲಾಗುತ್ತಿದೆ

- ಒಟ್ಟು ಬಜೆಟ್ ವೆಚ್ಚದ ಶೇ 23.98ರಷ್ಟು ಮೊತ್ತವನ್ನು ಸಾಲದ ಮೇಲಿನ ಬಡ್ಡಿ ಪಾವತಿಗೆ ಮೀಸಲಿರಿಸಲಾಗಿದೆ
- ಕೇಂದ್ರ ಬಜೆಟ್‌ನಲ್ಲಿ ಎರಡನೇ ಅತಿಹೆಚ್ಚು ಅನುದಾನ ಪಡೆದದ್ದು ರಕ್ಷಣಾ ಸಚಿವಾಲಯ. ಒಟ್ಟು ಬಜೆಟ್ ವೆಚ್ಚದ ಶೇ 13.19ರಷ್ಟು ಮೊತ್ತವನ್ನು ರಕ್ಷಣಾ ಕ್ಷೇತ್ರಕ್ಕೆ ಅನುದಾನವಾಗಿ ನೀಡಲಾಗಿದೆ
- ಕೇಂದ್ರ ಬಜೆಟ್‌ನಲ್ಲಿ ಮೂರನೇ ಅತಿಹೆಚ್ಚು ಅನುದಾನ ಪಡೆದದ್ದು ಸಾರಿಗೆ ಸಚಿವಾಲಯ. ಒಟ್ಟು ಬಜೆಟ್ ವೆಚ್ಚದ ಶೇ 17.48ರಷ್ಟು ಮೊತ್ತವನ್ನು ಈ ಸಚಿವಾಲಯಕ್ಕೆ ಅನುದಾನವಾಗಿ ನೀಡಲಾಗಿದೆ
- ಶಿಕ್ಷಣ ಕ್ಷೇತ್ರಕ್ಕೆ ಒಟ್ಟು ಬಜೆಟ್‌ನ ಶೇ 2.50ರಷ್ಟು ಮೊತ್ತವನ್ನು ಮೀಸಲಿರಿಸಿದ್ದರೆ, ಆರೋಗ್ಯ ಕ್ಷೇತ್ರಕ್ಕೆ ಶೇ 1.97ರಷ್ಟು ಅನುದಾನವನ್ನಷ್ಟೇ ನೀಡಲಾಗಿದೆ



ಸಹಕಾರ ಕ್ಷೇತ್ರಕ್ಕೆ ತೆರಿಗೆ ವಿನಾಯಿತಿ

ನವದೆಹಲಿ (ಪಿಟಿಐ): ಸಹಕಾರಿ ಕ್ಷೇತ್ರದ ಬಲವರ್ಧನೆಗೆ ಕೇಂದ್ರ ಸರ್ಕಾರವು ಬುಧವಾರ ಬಜೆಟ್‌ನಲ್ಲಿ ಹಲವು ಉತ್ತೇಜನಕಾರಿ ಕ್ರಮಗಳನ್ನು ಘೋಷಿಸಿದೆ.

ಉತ್ಪಾದನೆ ಕೇಂದ್ರಿತ ಹೊಸ ಸಹಕಾರಿ ಸಂಘಗಳನ್ನು ಪ್ರೋತ್ಸಾಹಿಸಲು ತೆರಿಗೆಯಲ್ಲಿ ಶೇ 15ರಷ್ಟು ರಿಯಾಯಿತಿ, ಟಿಡಿಎಸ್ ಇಲ್ಲದೇ ₹3 ಕೋಟಿವರೆಗೆ ನಗದು ಹಿಂಪಡೆಯುವಂತಹ ಸೌಲಭ್ಯಗಳನ್ನು ಪ್ರಕಟಿಸಲಾಗಿದೆ.

ಸಹಕಾರ ಸಚಿವಾಲಯಕ್ಕೆ ಸರ್ಕಾರವು 2023-24ರಲ್ಲಿ ಒಟ್ಟು ₹1,150.38 ಕೋಟಿ ಅನುದಾನ ಮೀಸಲಿಟ್ಟಿದೆ. ಕಳೆದ ಬಾರಿ ₹1,624 .74 ಕೋಟಿ ಅನುದಾನ ನೀಡಲಾಗಿತ್ತು.

ಪ್ರಾಥಮಿಕ ಕೃಷಿ ಸಹಕಾರ ಸಂಘಗಳ ಸದಸ್ಯರು ಪಿಎಸಿಎಸ್ ಮತ್ತು ಪಿಸಿಎಆರ್‌ಡಿಬಿಎಸ್‌ನಲ್ಲಿ ಇಡುವ ನಗದು ಠೇವಣಿ ಮತ್ತು ಪಡೆಯುವ ನಗದು ಸಾಲದ ಮಿತಿಯನ್ನು ಗರಿಷ್ಠ ₹2 ಲಕ್ಷಕ್ಕೆ ಹೆಚ್ಚಿಸಿ ಬಜೆಟ್‌ನಲ್ಲಿ ಘೋಷಿಸಿದರು.

ಸಹಕಾರಿ ವಲಯದಲ್ಲಿ ಉತ್ಪಾದನೆಯ ಬೆಳವಣಿಗೆಯನ್ನು ಉತ್ತೇಜಿಸುವ ಸಲುವಾಗಿ, ಏಪ್ರಿಲ್ ನಂತರ ಹೊಸ ಸಹಕಾರ ಸೊಸೈಟಿ ಸ್ಥಾಪನೆಯಾದರೆ ಅವುಗಳಿಗೂ ಶೇ 15ರಷ್ಟು ತೆರಿಗೆ ರಿಯಾಯಿತಿ ಸೌಲಭ್ಯ ಲಭಿಸಲಿದೆ. ಆದರೆ, ಆ ಸೊಸೈಟಿಗಳು 2024ರ ಮಾರ್ಚ್ ಒಳಗೆ ಉತ್ಪಾದನೆ ಆರಂಭಿಸಿದರೆ ಮಾತ್ರ ಈ ತೆರಿಗೆ ರಿಯಾಯಿತಿ ಅನ್ವಯಿಸಲಿದೆ ಎಂದು ಸಚಿವೆ ಹೇಳಿದರು.

ಈವರೆಗೆ ಸಹಕಾರ ಸಂಘಗಳು ಇಲ್ಲದ ಪಂಚಾಯಿತಿ ಮತ್ತು ಹಳ್ಳಿಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಬಹು ಉದ್ದೇಶಿತ ಸಹಕಾರ ಸಂಘಗಳು, ಪ್ರಾಥಮಿಕ ಮೀನುಗಾರಿಕಾ ಸಂಘಗಳು ಹಾಗೂ ಹೈನುಗಾರಿಕೆ ಸಹಕಾರ ಸಂಘಗಳನ್ನು ಸ್ಥಾಪಿಸಲು ಸರ್ಕಾರ ಮುಂದಿನ ಐದು ವರ್ಷಗಳಲ್ಲಿ ಸೌಲಭ್ಯ ಒದಗಿಸಲಿದೆ ಎಂದು ಅವರು ಹೇಳಿದರು.

ಸಚಿವರ ವೇತನ, ಪ್ರವಾಸ ಭತ್ಯೆ ಸೇರಿ ವಿವಿಧ ಖರ್ಚು ವೆಚ್ಚಕ್ಕೆ ₹1,258 ಕೋಟಿ

ನವದೆಹಲಿ (ಪಿಟಿಐ): ಸಚಿವರ ವೇತನ, ಪ್ರವಾಸ, ವಿದೇಶಿ ಅತಿಥಿಗಳ ಮನರಂಜನೆ ಸೇರಿದಂತೆ ಕೇಂದ್ರ ಸಚಿವ ಸಂಪುಟದ ವಿವಿಧ ಕಚೇರಿಗಳ ವೆಚ್ಚಕ್ಕಾಗಿ ಈ ಬಾರಿಯ ಬಜೆಟ್‌ನಲ್ಲಿ ₹1,258.68 ಕೋಟಿ ಮೀಸಲಿಡಲಾಗಿದೆ.

ಈ ಮೊತ್ತದಲ್ಲಿ ಮಂತ್ರಿಗಳ ಪರಿಷತ್ತಿಗೆ ₹832.81 ಕೋಟಿ, ರಾಷ್ಟ್ರೀಯ ಭದ್ರತಾ ಮಂಡಳಿಯ ಸಚಿವಾಲಯಕ್ಕೆ ₹185.7 ಕೋಟಿ ಹಾಗೂ ಪ್ರಧಾನ ವೈಜ್ಞಾನಿಕ ಸಲಹೆಗಾರರ ಕಚೇರಿಗೆ ₹96.93 ಕೋಟಿ ಹಂಚಿಕೆ ಮಾಡಲಾಗಿದೆ.

ಪ್ರಧಾನ ಮಂತ್ರಿಗಳ ಕಾರ್ಯಾಲಯಕ್ಕೆ ₹62.65 ಕೋಟಿ ಹಾಗೂ ಕ್ಯಾಬಿನೆಟ್ ಸೆಕ್ರೆಟರಿಯೇಟ್‌ಗೆ ₹71.91 ಕೋಟಿ ಮೀಸಲಿಡಲಾಗಿದೆ.

ಕೃಷಿ ವಲಯದ ಬೆಳವಣಿಗೆಗೆ ವೇಗವರ್ಧಕ

ಈ ಬಾರಿಯ ಬಜೆಟ್‌ಗೆ ಸಂಬಂಧಿಸಿದಂತೆ ಮಾಧ್ಯಮಗಳಲ್ಲಿ ಎರಡು ಪ್ರಮುಖ ಸವಾಲುಗಳನ್ನು ಪ್ರಸ್ತಾಪಿಸಲಾಗಿತ್ತು. ನಿರುದ್ಯೋಗ ಮತ್ತು ಹಣದುಬ್ಬರ ವಿಷಯಗಳ ಕುರಿತು ಹಣಕಾಸು ಸಚಿವರ ಗಮನಸೆಳೆಯಲಾಗಿತ್ತು.

ಆದರೆ, ಕಳೆದ ಎರಡು ವರ್ಷಗಳಿಂದ ಕೃಷಿ ಕ್ಷೇತ್ರದ ಸಾಧನೆ ಸಾಮಾನ್ಯವಾಗಿತ್ತು. ಹೀಗಾಗಿ, ಸದ್ಯಕ್ಕೆ ಇದು ಪ್ರಮುಖ ಸವಾಲುಗಳನ್ನು ಎದುರಿಸುತ್ತಿರುವ ಕ್ಷೇತ್ರವಾಗಿಲ್ಲ. ರೈತರಿಗೆ ಪ್ರತಿ ವರ್ಷ ಮೂರು ಕಂತುಗಳಲ್ಲಿ ₹6 ಸಾವಿರ ನೀಡುವ 'ಪ್ರಧಾನಮಂತ್ರಿ ಕಿಸಾನ್ ಸಮ್ಮಾನ ನಿಧಿ' ಯೋಜನೆಯು ಈಗಾಗಲೇ 11.4 ಕೋಟಿ ರೈತರನ್ನು ತಲುಪಿದೆ.

ಬಜೆಟ್ ಭಾಷಣದಲ್ಲಿ ಕೃಷಿ ಕ್ಷೇತ್ರದ ಬಗ್ಗೆ ಹೆಚ್ಚು ವಿಷಯಗಳನ್ನು ಪ್ರಸ್ತಾಪಿಸಿಲ್ಲ. ಕೃಷಿ ಕ್ಷೇತ್ರವನ್ನು ಮತ್ತಷ್ಟು ಆಧುನಿಕ ತಂತ್ರಜ್ಞಾನದತ್ತ ಕೊಂಡೊಯ್ಯುವ ನಿಟ್ಟಿನಲ್ಲಿ ಡಿಜಿಟಲ್ ವೇದಿಕೆಯನ್ನು ಸೃಷ್ಟಿಸುವುದಾಗಿ ಘೋಷಿಸಲಾಗಿದೆ. 'ಕೃಷಿಗಾಗಿ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ' ಸ್ಥಾಪಿಸುವುದಾಗಿ ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ. ಇದು ಕೃಷಿಗೆ ಸಂಬಂಧಿಸಿದ ಚಟುವಟಿಕೆಗಳಿಗೆ ಅನುಕೂಲ ಕಲ್ಪಿಸಬಹುದು.



ವಿಶ್ಲೇಷಣೆ

ಆರ್.ಎಸ್. ದೇಶಪಾಂಡೆ

ಬಿತ್ತನೆ, ಬೆಳೆ ಪದ್ಧತಿ, ಮಾರುಕಟ್ಟೆ ವಿವರಗಳು ಮತ್ತು ಕೃಷಿ- ತಂತ್ರಜ್ಞಾನ ಆಧಾರಿತ ಉದ್ಯಮದ ಬೆಳವಣಿಗೆಗೆ ಪೂರಕವಾಗಬಹುದು. ಈ ತಂತ್ರಜ್ಞಾನವು ಮೊಬೈಲ್‌ನಲ್ಲಿ ಲಭ್ಯವಾಗಲಿದೆಯೇ ಎನ್ನುವುದು ಸ್ಪಷ್ಟವಾಗಿಲ್ಲ. ಒಂದು ವೇಳೆ, ಲಭ್ಯವಾಗುವುದಾದರೆ ಕೃಷಿಕರಿಗೆ ಬಹಳಷ್ಟು ಅನುಕೂಲಗಳಾಗಲಿವೆ. ಇದರಲ್ಲಿ ಒಂದು ತೊಡಕು ಕಾಣಿಸಿಕೊಳ್ಳಬಹುದು. ಭಾರತದಲ್ಲಿ ಭೂ ದಾಖಲೆಗಳನ್ನು ಸರಳವಾಗಿ ನಿರ್ವಹಿಸಿಲ್ಲ ಮತ್ತು ಸಮರ್ಪಕವಾಗಿ ಕಾಲಕ್ಕೆ ತಕ್ಕಂತೆ ಉನ್ನತೀಕರಿಸಿಲ್ಲ. ಇದರಿಂದಾಗಿ, ಈ ವಿಷಯದಲ್ಲಿ ಡಿಜಿಟಲ್ ವೇದಿಕೆಯನ್ನು ನಿರ್ವಹಿಸುವಲ್ಲಿ ಕಷ್ಟಕರವಾಗಬಹುದು.

'ಕೃಷಿ ವೇಗವರ್ಧಕ ನಿಧಿ' (ಎಎಎಫ್) ಸ್ಥಾಪಿಸುವ ಕುರಿತು ಮತ್ತೊಂದು ಮಹತ್ವದ ಘೋಷಣೆಯನ್ನು ಬಜೆಟ್‌ನಲ್ಲಿ ಮಾಡಲಾಗಿದೆ. ಕೃಷಿ ನವೋದ್ಯಮಗಳಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಈ ನಿಧಿಯನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಇದರಿಂದ, ಕೃಷಿಕರ ಸಮಸ್ಯೆಗಳಿಗೆ ಪರಿಹಾರ ರೂಪಿಸಲು ಮಹತ್ವದ ಹೆಜ್ಜೆಯಾಗಬಹುದು. 'ಎಎಎಫ್' ಅನ್ನು ಯಾವ ರೀತಿಯಲ್ಲಿ ಬಳಸಲಾಗುತ್ತದೆ ಮತ್ತು ಕೃಷಿಕರಿಗಾಗುವ ಪ್ರಯೋಜನಗಳ ಬಗ್ಗೆ ಮುಂದಿನ ದಿನಗಳಲ್ಲಿ ವಿಶ್ಲೇಷಿಸಬಹುದು.

ಕೃಷಿ ವಲಯಕ್ಕೆ ವೆಚ್ಚ ಮಾಡುವುದನ್ನು ಹೆಚ್ಚಿಸಲಾಗಿದೆ. ₹8 ಸಾವಿರ ಕೋಟಿಯಷ್ಟು ಮೊತ್ತವನ್ನು ಈ ವಲಯದಲ್ಲಿ ವೆಚ್ಚ ಮಾಡಲು ಉದ್ದೇಶಿಸಲಾಗಿದೆ. ಇದರಿಂದ, ಎಎಎಫ್‌ಗೂ ಸಾಕಷ್ಟು ಮೊತ್ತ ದೊರೆಯಲಿದೆ. ಹಣಕಾಸು ಸಚಿವರು ಬಜೆಟ್ ಭಾಷಣದಲ್ಲಿ ಹತ್ತಿ ಮತ್ತು ಸಿರಿಧಾನ್ಯಗಳಿಗೂ ಪ್ರಾಮುಖ್ಯತೆ ನೀಡುವುದಾಗಿ ಪ್ರಸ್ತಾಪಿಸಿದ್ದಾರೆ. ಹತ್ತಿ ಉತ್ಪಾದನೆ ಹೆಚ್ಚಿಸುವ ನಿಟ್ಟಿನಲ್ಲಿ ಇದು ಗಮನಾರ್ಹ ಅಂಶವಾಗಿದೆ. ಸರ್ಕಾರಿ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ದೊರೆಯುವ ಅನುದಾನದಲ್ಲಿ ಕ್ಲಸ್ಟರ್ ಆಧಾರಿತ ಹೊಸ ಯೋಜನೆಯನ್ನು ಘೋಷಿಸಲಾಗಿದೆ.

ಸಿರಿಧಾನ್ಯಗಳಿಗಾಗಿ ಭಾರತವನ್ನು ಜಾಗತಿಕ ಕೇಂದ್ರವನ್ನಾಗಿ ರೂಪಿಸುವ ನಿಟ್ಟಿನಲ್ಲಿ 'ಶ್ರೀ ಅನ್ನ' ಎಂದು ಮರುನಾಮಕರಣ ಮಾಡಲಾಗಿದೆ. ಆದರೆ, ಇದು ಯಾವ ರೀತಿ ಕಾರ್ಯನಿರ್ವಹಿಸಲಿದೆ ಎನ್ನುವ ಬಗ್ಗೆ ಸ್ಪಷ್ಟವಾದ ವಿವರಗಳು ಇಲ್ಲ. ಸಿರಿಧಾನ್ಯಗಳು ಮತ್ತು ಸಂಶೋಧನೆಗೆ ಮೀಸಲಾದ ಭಾರತೀಯ ಸಿರಿಧಾನ್ಯಗಳ ಸಂಶೋಧನೆ ಸಂಸ್ಥೆಯ ಜತೆಗೆ ಹೆಚ್ಚುವರಿಯಾಗಿ ಇನ್ನೊಂದು ಸಂಸ್ಥೆಯನ್ನು ಸ್ಥಾಪಿಸಲಾಗುತ್ತದೆಯೇ ಎನ್ನುವ ಬಗ್ಗೆ ಸ್ಪಷ್ಟತೆ ಇಲ್ಲ. ಹೊಸ ಸಂಸ್ಥೆಯು ಸಂಶೋಧನಾ ಪ್ರಬಂಧಗಳನ್ನು ಮಂಡಿಸಲು ಸೀಮಿತವಾಗಲಿದೆಯೇ ಅಥವಾ ಇಲ್ಲಿನ ಸಂಶೋಧನೆಗಳು ಕೃಷಿಕರ ಜಮೀನುಗಳಿಗೆ ತಲುಪಲಿವೆಯೇ ಎನ್ನುವ ಬಗ್ಗೆ ವಿವರ ಅಗತ್ಯವಿದೆ.

ದೇಶದಾದ್ಯಂತ 1930ರಲ್ಲಿ ಸ್ಥಾಪಿಸಲಾದ ಒಣ ಬೇಸಾಯ ಸಂಶೋಧನಾ ಕೇಂದ್ರದ ಕುರಿತ ನಮ್ಮ ಅನುಭವಗಳು ಇದಕ್ಕೆ ಕನ್ನಡಿ ಹಿಡಿದಿವೆ. ಒಣ ಬೇಸಾಯ ಸಂಶೋಧನಾ ಕೇಂದ್ರ ಸುತ್ತಮುತ್ತ ಪ್ರದೇಶದಲ್ಲೇ ರೈತರಿಗೆ ಸಿರಿಧಾನ್ಯಗಳ ಹೊಸ ತಳಿಗಳ ಬಗ್ಗೆ ಅಥವಾ ಹೊಸ ತಂತ್ರಜ್ಞಾನಗಳ ಬಗ್ಗೆ ಮಾಹಿತಿಯೇ ಇರಲಿಲ್ಲ. ಆಸಕ್ತಿದಾಯಕ ವಿಷಯ ಏನೆಂದರೆ, ಈ ಎಲ್ಲ ಘೋಷಣೆಗಳು ಕೆಲವು ವರ್ಷಗಳ ಬಳಿಕವೇ ಅನುಷ್ಠಾನಗೊಳ್ಳಲಿವೆ. ಹೀಗಾಗಿ, ಇಂತಹ ಸಂಸ್ಥೆಗಳಿಂದ ಅನುಕೂಲಗಳು ಸದ್ಯಕ್ಕೆ ದೊರೆಯುವುದಿಲ್ಲ. ಈ ವರ್ಷ ಇಂತಹ ಸಂಸ್ಥೆಗಳನ್ನು ಸ್ಥಾಪಿಸುವುದರಲ್ಲೇ ಸಮಯ ಕಳೆದು ಹೋಗುತ್ತದೆ.

ಹಣಕಾಸು ಸಚಿವರು ಕೃಷಿಗೆ ಪೂರಕವಾದ ಮೀನುಗಾರಿಕೆ ಮತ್ತು ತೋಟಗಾರಿಕೆಯಂತಹ ಇತರ ವಲಯಗಳ ಬಗ್ಗೆ ಹೆಚ್ಚು ಗಮನಹರಿಸಿದ್ದಾರೆ. ಇದು ಸ್ವಾಗತಾರ್ಹ ಬದಲಾವಣೆ. ಮೌಲ್ಯವರ್ಧಿತ ತೋಟಗಾರಿಕೆಗಳ ಬೆಳೆಗಳಿಗಾಗಿ ರೋಗ ಮುಕ್ತ ಸಸಿಗಳಿಗೆ ಆದ್ಯತೆ ನೀಡುವ ಯೋಜನೆಯನ್ನು ಪ್ರಕಟಿಸಿರುವುದು ಮಹತ್ವದ ಹೆಜ್ಜೆಯಾಗಿದೆ. ಈ ನಿಟ್ಟಿನಲ್ಲಿ ಸರ್ಕಾರ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ರೂಪಿಸಲಾಗುವ 'ಆತ್ಮನಿರ್ಭರ ಕ್ಲೀನ್ ಪ್ಲ್ಯಾಂಟ್ ಯೋಜನೆ' ಶ್ಲಾಘನೀಯ.

ಲೇಖಕರು: ಐಸೆಕ್ ಮಾಜಿ ನಿರ್ದೇಶಕ

ಮೆಟ್ರೊ ಯೋಜನೆಗಳಿಗೆ ₹19,518 ಕೋಟಿ

ನವದೆಹಲಿ (ಪಿಟಿಐ): ದೇಶದಾದ್ಯಂತ ಮೆಟ್ರೊ ಯೋಜನೆಗಾಗಿ ಒಟ್ಟು ₹19,518 ಕೋಟಿ ಅನುದಾನವನ್ನು ಬಜೆಟ್‌ನಲ್ಲಿ ಘೋಷಿಸಲಾಗಿದೆ. ಈ ಅನುದಾನದಲ್ಲಿ ಈಕ್ವಿಟಿಗಳ ಮೇಲಿನ ಹೂಡಿಕೆಯ ₹ 4,471 ಕೋಟಿ ಹಾಗೂ ಪೂರಕ ಸಾಲಕ್ಕೆ ನಿಗದಿತ ₹ 1,324 ಕೋಟಿ, ನೆರವಿನ ಮೂಲಕ ಒದಗಿಸಲಾಗುವ ₹ 13,723 ಕೋಟಿ ಸೇರಿದೆ.

2022–23ನೇ ಹಣಕಾಸು ವರ್ಷದಲ್ಲಿ ಮೆಟ್ರೊ ಯೋಜನೆಗಳಿಗೆ ₹ 19,130 ಕೋಟಿ ಹಂಚಿಕೆಯಾಗಿತ್ತು. ಆದರೆ, ಪರಿಷ್ಕೃತ ಅಂದಾಜಿನ ನಂತರ ಈ ಮೊತ್ತ ₹ 15,628 ಕೋಟಿಗೆ ಇಳಿಕೆಯಾಗಿತ್ತು. ರಾಷ್ಟ್ರ ರಾಜಧಾನಿ ವಲಯ ಸಾರಿಗೆ ನಿಗಮಕ್ಕೆ (ಎನ್‌ಸಿಆರ್‌ಟಿಸಿ) ಕೇಂದ್ರ ಸರ್ಕಾರ ₹ 3,596 ಕೋಟಿ ನಿಗದಿಪಡಿಸಿದೆ. ಇದು, ಕಳೆದ ಸಾಲಿನ ಬಜೆಟ್‌ಗೆ ಹೋಲಿಸಿದರೆ ಶೇ 23ರಷ್ಟು ಕಡಿಮೆಯಾಗಿದೆ.

ಹೆದ್ದಾರಿ ಪ್ರಾಧಿಕಾರಕ್ಕೆ ₹1.62 ಲಕ್ಷ ಕೋಟಿ

ನವದೆಹಲಿ (ಪಿಟಿಐ): ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ (ಎನ್‌ಎಚ್‌ಎಐ) 2023–24ನೇ ಸಾಲಿನ ಬಜೆಟ್‌ನಲ್ಲಿ ಅನುದಾನ ಏರಿಸಿದ್ದು, ₹ 1.62 ಲಕ್ಷ ಕೋಟಿ ನಿಗದಿಪಡಿಸಲಾಗಿದೆ. ಕಳೆದ ಸಾಲಿನ ಬಜೆಟ್‌ನಲ್ಲಿ ₹1.42 ಲಕ್ಷ ಕೋಟಿ ಘೋಷಿಸಲಾಗಿತ್ತು.

2023–24ನೇ ಸಾಲಿಗೆ ಹೆದ್ದಾರಿ ವಲಯಕ್ಕೆ ₹ 2.70 ಲಕ್ಷ ಕೋಟಿ ಅನುದಾನ ನೀಡಲಾಗಿದೆ. ಹೆದ್ದಾರಿ ವಲಯಕ್ಕೆ ಕಳೆದ ಬಜೆಟ್‌ನಲ್ಲಿ 1.99 ಲಕ್ಷ ಕೋಟಿ ನಿಗದಿಪಡಿಸಿದ್ದು, ಪರಿಷ್ಕೃತ ಅಂದಾಜಿನ ನಂತರ ಇದು ₹ 2.17 ಲಕ್ಷ ಕೋಟಿಗೆ ಏರಿಕೆಯಾಗಿತ್ತು.

ಹೆದ್ದಾರಿಗಳು ಮತ್ತು ಎಕ್ಸ್‌ಪ್ರೆಸ್ ಹೆದ್ದಾರಿಗಳನ್ನು ಅಭಿವೃದ್ಧಿ ಪಡಿಸುವ ಹೊಣೆಯನ್ನು ಎನ್‌ಎಚ್‌ಎಐ ಮತ್ತು ರಾಷ್ಟ್ರೀಯ ಹೆದ್ದಾರಿ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮವು ನಿರ್ವಹಿಸಲಿದೆ.

ಪ್ರಜಾವಾಣಿ
ಗುರುವಾರ, 2 ಫೆಬ್ರುವರಿ 2023

ಕೇಂದ್ರ ಬಜೆಟ್ 2023-24

ರೈಲು, ಮೂಲಸೌಕರ್ಯಕ್ಕೆ ವೇಗ

ಪ್ರಮುಖ ರೈಲುಗಳ 1,000 ಬೋಗಿಗಳಿಗೆ ಆಧುನಿಕ ಸ್ಪರ್ಶ

ವಂದೇ ಭಾರತ್ ವೇಗಕ್ಕೆ ಅನುಗುಣವಾಗಿ ಹಳಿಗಳ ನವೀಕರಣ

ಖಾಸಗಿ ಬಂಡವಾಳ ಆಕರ್ಷಿಸಲು ಮೂಲಸೌಕರ್ಯ ಹಣಕಾಸು ಕಾರ್ಯಾಲಯ

ಶಸ್ತ್ರಾಸ್ತ್ರ ಸೇರಿ ಸೇನಾ ಪರಿಕರಗಳ ಖರೀದಿಗೆ ₹1.62 ಲಕ್ಷ ಕೋಟಿ

ನವದೆಹಲಿ (ಪಿಟಿಐ): ರೈಲ್ವೆ ಸೇವೆ ಹಾಗೂ ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು ನೀಡಿರುವ ಕೇಂದ್ರ ಸರ್ಕಾರ 2023–24ನೇ ಸಾಲಿನ ಬಜೆಟ್‌ನಲ್ಲಿ ನಿರೀಕ್ಷೆಯಂತೆ ಈ ಕ್ಷೇತ್ರಗಳಿಗೆ ಹೆಚ್ಚಿನ ಅನುದಾನ ಹಂಚಿಕೆ ಮಾಡಿದೆ.

ರೈಲ್ವೆಗೆ ಒಟ್ಟು ₹ 2.60 ಲಕ್ಷ ಕೋಟಿ ಅನುದಾನ ನಿಗದಿ ಪಡಿಸಿದ್ದು, ಇದು ಈವರೆಗೆ ನಿಗದಿಪಡಿಸಿರುವ ಅತ್ಯಧಿಕ ಮೊತ್ತವಾಗಿದೆ.

ಪ್ರಯಾಣಿಕರ ಹೆಚ್ಚುತ್ತಿರುವ ನಿರೀಕ್ಷೆಗೆ ಅನುಗುಣವಾಗಿ ರಾಜಧಾನಿ, ಶತಾಬ್ದಿ, ತುರಂತೊ, ಹಮ್‌ಸಫರ್, ತೇಜಸ್ ಸೇರಿ ಪ್ರಮುಖ ರೈಲುಗಳ ಸುಮಾರು 1000 ಬೋಗಿಗಳ ನವೀಕರಣಗೊಳ್ಳಲಿವೆ. ಈ ಬೋಗಿಗಳಲ್ಲಿ ಹೆಚ್ಚಿನ ಸೌಲಭ್ಯ ಕಲ್ಪಿಸಿ, ಆಧುನಿಕ ರೂಪ ನೀಡಲಾಗುತ್ತದೆ. ಅತಿವೇಗದ ಸಂಚಾರದ ವಂದೇ ಭಾರತ್ ರೈಲು ಸೇವೆಯ ಆರಂಭದ ಹಿನ್ನೆಲೆಯಲ್ಲಿ ರೈಲು ಹಳಿಗಳ ಅಭಿವೃದ್ಧಿಗೆ ಆದ್ಯತೆ ನೀಡಲಾಗುತ್ತದೆ. ಈ ಉದ್ದೇಶಕ್ಕಾಗಿಯೇ ಬಜೆಟ್‌ನಲ್ಲಿ ₹ 17,296.84 ಕೋಟಿಯನ್ನು ನಿಗದಿಪಡಿಸಲಾಗಿದೆ. 2023–24ನೇ ಸಾಲಿನ ಬಜೆಟ್‌ನಲ್ಲಿ ರೈಲ್ವೆಗೆ ಒಟ್ಟು ₹ 2,60,200 ಕೋಟಿ ಹಂಚಿಕೆಯಾಗಿದೆ.

ಇದರಲ್ಲಿ 2.4 ಲಕ್ಷ ಕೋಟಿ ಸಾಮಾನ್ಯ ಆದಾಯ ಮೂಲದಿಂದ, ನಿರ್ಭಯ ನಿಧಿಯಿಂದ ₹ 200 ಕೋಟಿ, ಆಂತರಿಕ ಮೂಲದಿಂದ ಬರುವ ₹ 3000 ಕೋಟಿ ಸೇರಿದೆ. ಕಳೆದ ಬಜೆಟ್‌ನಲ್ಲಿ ₹ 2,42,892 ಕೋಟಿ ಹಂಚಿಕೆಯಾಗಿತ್ತು, ಈ ಬಾರಿ ಸ್ವಲ್ಪಮಟ್ಟಿಗೆ ಏರಿಕೆಯಾಗಿದೆ.

ಮೂಲಸೌಕರ್ಯಗಳಿಗೆ ₹ 10 ಲಕ್ಷ ಕೋಟಿ: ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯತೆ ನೀಡಿದ್ದು, ಈ ಕ್ಷೇತ್ರಕ್ಕೆ ಅನುದಾನವನ್ನು ಶೇ 33ರಷ್ಟು ಏರಿಸಲಾಗಿದೆ. ಜೊತೆಗೆ ಖಾಸಗಿ ಬಂಡವಾಳ ಆಕರ್ಷಿಸಲು ಮೂಲಸೌಕರ್ಯ ಹಣಕಾಸು ಕಾರ್ಯಾಲಯ ಆರಂಭಿಸುವ ತೀರ್ಮಾನವನ್ನು ಸರ್ಕಾರ ಪ್ರಕಟಿಸಿದೆ.

2023–24ನೇ ಹಣಕಾಸು ವರ್ಷದಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ₹ 10 ಲಕ್ಷ ಕೋಟಿ ನಿಗದಿಪಡಿಸಲಾಗಿದೆ. ಸರಕು ಸಾಗಣೆಗೆ ಒತ್ತು ನೀಡಿ ರೈಲ್ವೆ ಸಂಪರ್ಕ ವ್ಯವಸ್ಥೆ ಉತ್ತಮಪಡಿಸಲು 100 ನಿರ್ಣಾಯಕ ಸಾರಿಗೆ ಮೂಲಸೌಕರ್ಯ ಯೋಜನೆ ಕೈಗೆತ್ತಿಕೊಳ್ಳಲು ನಿರ್ಧರಿಸಲಾಗಿದೆ. ಕಲ್ಲಿದ್ದಲು, ರಸಗೊಬ್ಬರ, ಆಹಾರ ಪಡಿತರ ಸಾಗಣೆ ಕ್ಷೇತ್ರಗಳಿಗೆ ಆದ್ಯತೆ ನೀಡಿ ಮೂಲಸೌಕರ್ಯ ಅಭಿವೃದ್ಧಿಗೆ ಪ್ರಾರಂಭಿಕವಾಗಿ ₹ 75,000 ಕೋಟಿ ಹೂಡಿಕೆ ಆಗಲಿದೆ. ಇದರಲ್ಲಿ ಖಾಸಗಿ ಮೂಲದ ಹೂಡಿಕೆ ₹ 15,000 ಕೋಟಿಯೂ ಸೇರಿದೆ. ಈ ಮೊತ್ತವು ಜಿಡಿಪಿ ಶೇ 3.3ರಷ್ಟಾಗಿದೆ. ಸತತ ಮೂರನೇ ವರ್ಷ ಅನುದಾನ ಶೇ 33ರಷ್ಟು ಏರಿಕೆಯಾಗಿದೆ. ಮೂಲಭೂತ ಸೌಕರ್ಯಗಳ ಪರಿಣತರ ಸಮಿತಿ ಪರಿಶೀಲಿಸಲಿದ್ದು, 'ಅಮೃತ ಕಾಲ'ಕ್ಕೆ ಪೂರಕವಾಗಿ ಹಣಕಾಸು ಸ್ವರೂಪ ವರ್ಗೀಕರಿಸಿ ಶಿಫಾರಸು ಮಾಡಲಿದೆ.

ಉತ್ಪಾದಕತೆ ಸಾಮರ್ಥ್ಯ ವೃದ್ಧಿ ಮತ್ತು ಮೂಲ ಸೌಕರ್ಯಗಳ ಅಭಿವೃದ್ಧಿ ಹಾಗೂ ಉದ್ಯೋಗಾವಕಾಶ ಸೃಷ್ಟಿಗೆ ಪ್ರಾಮುಖ್ಯತೆ ನೀಡಲಿದ್ದು, ಈ ಉದ್ದೇಶ ಸಾಧನೆಗೆ ಬಜೆಟ್ ಘೋಷಣೆಗಳು ನೆರವಾಗುವ ಸಾಧ್ಯತೆ ಇದೆ.

ರಕ್ಷಣೆಗೆ ₹ 5.94 ಲಕ್ಷ ಕೋಟಿ, ಅಲ್ಪ ಏರಿಕೆ

ರಕ್ಷಣಾ ಕ್ಷೇತ್ರಕ್ಕೆ ಬಜೆಟ್‌ನಲ್ಲಿ ಒಟ್ಟು ₹ 5.94 ಲಕ್ಷ ಕೋಟಿ ನಿಗದಿಪಡಿಸಲಾಗಿದೆ. ಕಳೆದ ಬಜೆಟ್‌ನಲ್ಲಿ ₹ 5.25 ಲಕ್ಷ ಕೋಟಿ ಹಂಚಿಕೆಯಾಗಿತ್ತು. ಈ ಬಾರಿ ಅಲ್ಪಪ್ರಮಾಣದಲ್ಲಿ ಏರಿಕೆಯಾಗಿದೆ.

ಹೊಸ ಶಸ್ತ್ರಾಸ್ತ್ರಗಳು, ಯುದ್ಧವಿಮಾನ, ಹಡಗು ಮತ್ತು ಸೇನಾ ಪರಿಕರಗಳ ಖರೀದಿಗೆ ಒಟ್ಟು ₹ 1.62 ಲಕ್ಷ ಕೋಟಿ ಕಾಯ್ದಿರಿಸಲಾಗಿದೆ.

ಬಜೆಟ್‌ನ ಅಂದಾಜಿನ ಪ್ರಕಾರ, ರಕ್ಷಣಾ ಕ್ಷೇತ್ರಕ್ಕೆ ನಿಗಪಡಿಸಿರುವ ಒಟ್ಟು ಮೊತ್ತ ₹ 5,93,537 ಕೋಟಿ. ರಕ್ಷಣಾ ಸಚಿವಾಲಯದ (ನಾಗರಿಕ) ಬಂಡವಾಳ ವೆಚ್ಚ ₹ 8,774 ಕೋಟಿ ಆಗಿದೆ. ಪಿಂಚಣಿಯ ಉದ್ದೇಶಕ್ಕಾಗಿ ಪ್ರತ್ಯೇಕವಾಗಿ ₹ 1,38,205 ಕೋಟಿ ನಿಗದಿಪಡಿಸಲಾಗಿದೆ.

ಬಜೆಟ್ ಹೇಗಿದೆ? ಯಾರು ಏನೆಂದರು...

ಉದ್ಯೋಗ ಸೃಷ್ಟಿಸುವ ಮತ್ತು ಹಣದುಬ್ಬರ ತಡೆಯುವ ನಿಟ್ಟಿನಲ್ಲಿ 'ಮಿತ್ರ ಕಾಲ' ಬಜೆಟ್ ಯಾವುದೇ ಮುನ್ನೋಟ ಹೊಂದಿಲ್ಲ. ಭಾರತದ ಭವಿಷ್ಯವನ್ನು ರೂಪಿಸಲು ಕೇಂದ್ರ ಸರ್ಕಾರ ಮಾರ್ಗನಕ್ಷೆ ಹೊಂದಿಲ್ಲ ಎಂಬುದು ಇದರಿಂದ ಸಾಬೀತಾಗಿದೆ. ದೇಶದ ಒಟ್ಟು ಸಂಪತ್ತಿನ ಶೇ 40ರಷ್ಟು ಸಂಪತ್ತನ್ನು ಶೇ 1ರಷ್ಟು ಶ್ರೀಮಂತರು ಹೊಂದಿದ್ದಾರೆ. ಒಟ್ಟು ಸರಕು ಸೇವಾ ತೆರಿಗೆಯ (ಜಿಎಸ್‌ಟಿ) ಶೇ 64 ರಷ್ಟು ದೇಶದ ಶೇ 50ರಷ್ಟು ಬಡವರು ಪಾವತಿಸುತ್ತಿದ್ದಾರೆ. ಶೇ 42ರಷ್ಟು ಯುವಜನರು ನಿರುದ್ಯೋಗಿಗಳಾಗಿದ್ದಾರೆ. ಇದಾವುದರ ಬಗ್ಗೆಯೂ ಪ್ರಧಾನಿಗೆ ಚಿಂತೆಯಿಲ್ಲ.

ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

ಚುನಾವಣೆಗಳನ್ನು ಗಮನದಲ್ಲಿರಿಸಿ-ಕೊಂಡು ಕೇಂದ್ರ ಸರ್ಕಾರ ಬಜೆಟ್ ರೂಪಿಸಿದೆ. ಕರ್ನಾಟಕ ವಿಧಾನಸಭೆ ಚುನಾವಣೆ ಸನ್ನಿಹಿತವಾಗಿರುವುದರಿಂದ ಕರ್ನಾಟಕದ ನೀರಾವರಿ ಯೋಜನೆಗಳಿಗೆ ಹೆಚ್ಚುವರಿ ಅನುದಾನ ನೀಡಿರುವ ಕೇಂದ್ರ, ರಾಜಸ್ಥಾನದ ನೀರಾವರಿ ಯೋಜನೆಯನ್ನು ನಿರ್ಲಕ್ಷಿಸಿದೆ. ಎಂ–ನರೇಗಾದಂಥ ಜನಪರ ಯೋಜನೆಗಳ ಪ್ರಯೋಜನಗಳನ್ನು ತಗ್ಗಿಸಿರುವುದೇ ಈ ಬಜೆಟ್ ಬಡವರ, ಭೂಮಿರಹಿತ ರೈತರ ಮತ್ತು ಸಾಮಾನ್ಯ ಜನರ ವಿರೋಧಿ ಎಂಬುದಕ್ಕೆ ಸಾಕ್ಷಿ

ಅಶೋಕ್ ಗೆಹಲೋತ್, ರಾಜಸ್ಥಾನ ಮುಖ್ಯಮಂತ್ರಿ

ಕಳೆದ ವರ್ಷ ₹1.75 ಲಕ್ಷ ಕೋಟಿಗೂ ಹೆಚ್ಚು ಆದಾಯ ತೆರಿಗೆ ಪಾವತಿಸಿರುವ ಹೊರತಾಗಿಯೂ ದೆಹಲಿಗೆ ಕೇಂದ್ರ ಬಜೆಟ್‌ನಲ್ಲಿ ಕೇವಲ ₹ 325 ಕೋಟಿ ಅನುದಾನ ನೀಡಲಾಗಿದೆ. ದೆಹಲಿ ಜನರ ವಿಚಾರದಲ್ಲಿ ಕೇಂದ್ರ ಪುನಃ ಮಲತಾಯಿ ಧೋರಣೆ ಅನುಸರಿಸಿದೆ. ಈ ಬಜೆಟ್ ಹಣದುಬ್ಬರವನ್ನು ಹೆಚ್ಚಿಸುವಂತಿದೆ. ಶಿಕ್ಷಣಕ್ಕೆ ನೀಡಲಾಗಿರುವ ಅನುದಾನವನ್ನು ಶೇ 2.64ರಿಂದ ಶೇ 2.5ಕ್ಕೆ ಮತ್ತು ಆರೋಗ್ಯ ಕ್ಷೇತ್ರದ ಅನುದಾನವನ್ನು ಶೇ 2.2ರಿಂದ ಶೇ 1.98ಗೆ ಇಳಿಸಲಾಗಿದೆ. ಇದು ಅಪಾಯಕಾರಿ ಬೆಳವಣಿಗೆ

ಅರವಿಂದ ಕೇಜ್ರಿವಾಲ್, ದೆಹಲಿ ಮುಖ್ಯಮಂತ್ರಿ

ಈ ಸಾಲಿನ ಬಜೆಟ್ ದೇಶದ ರೈತರು, ಕೂಲಿ ಕಾರ್ಮಿಕರು, ಯುವಜನರು, ಮಹಿಳೆಯರು ಮತ್ತು ಉದ್ಯಮ ವರ್ಗಕ್ಕೆ ಭರವಸೆ ಬದಲು ನಿರಾಸೆ ಮೂಡಿಸಿದೆ. ಸುಮಾರು ಒಂದು ದಶಕ ಕಾಲ ಬಜೆಟ್ ಮಂಡಿಸಿದ ಅನುಭವ ಹೊಂದಿರುವ ಬಿಜೆಪಿಯು ಈ ಮೊದಲೂ ಸಾರ್ವಜನಿಕರಿಗೆ ಅನುಕೂಲವಾಗುವಂತಹ ಏನನ್ನೂ ನೀಡಿರಲಿಲ್ಲ. ಈ ಬಾರಿ ಅವರಿಂದ ಏನನ್ನು ನಿರೀಕ್ಷಿಸಬಹುದು? ದೇಶದಲ್ಲಿ ಹಣದುಬ್ಬರ, ನಿರುದ್ಯೋಗವನ್ನು ಮತ್ತಷ್ಟು ಹೆಚ್ಚಿಸುವಂತೆ ಈ ಬಜೆಟ್ ಇದೆ

ಅಖಿಲೇಶ್ ಯಾದವ್, ಸಮಾಜವಾದಿ ಪಕ್ಷದ ಮುಖ್ಯಸ್ಥ

ಪ್ರವಾಸೋದ್ಯಮ ಉತ್ತೇಜನಕ್ಕೆ ಆ್ಯಪ್

ನವದೆಹಲಿ (ಪಿಟಿಐ): ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವ ಸಲುವಾಗಿ ವಿವಿಧ ಯೋಜನೆಗಳಿಗೆ ಚಾಲನೆ ನೀಡಲಾಗುತ್ತದೆ. ಇದಕ್ಕಾಗಿ ಆ್ಯಪ್ ಅಭಿವೃದ್ಧಿಪಡಿಸಲಾಗಿದೆ. ಕನಿಷ್ಠ 50 ಪ್ರವಾಸಿ ತಾಣಗಳಿಗೆ ಸಂಬಂಧಿಸಿದ ಮಾಹಿತಿ ಈ ಆ್ಯಪ್‌ನಲ್ಲಿ ಸಿಗಲಿದೆ.

ಈ ತಾಣಗಳನ್ನು ಭೌತಿಕವಾಗಿಯಾಗಲಿ ಅಥವಾ ವರ್ಚುವಲ್ ಮೂಲಕ ವಾಗಲಿ ಸಂಪರ್ಕಿಸುವ ಅವಕಾಶ ಇರಲಿದೆ. ಜೊತೆಗೆ, ಪ್ರವಾಸಿ ಮಾರ್ಗ-ದರ್ಶಕರು, ಈ ತಾಣಗಳಲ್ಲಿ ಸಿಗುವ ಉತ್ತಮ ಗುಣಮಟ್ಟದ ಆಹಾರ, ಪ್ರವಾಸಿಗರ ಸುರಕ್ಷತೆ ಸೇರಿದಂತೆ ಉತ್ತಮ ಪ್ರವಾಸದ ಅನುಭೂತಿ ಸಿಗುವಂತೆ ಮಾಡುವುದೇ ಈ ಕಾರ್ಯಕ್ರಮದ ಉದ್ದೇಶವಾಗಿದೆ. ಪ್ರತಿಯೊಂದು ಪ್ರವಾಸಿ ತಾಣವನ್ನು ಕೇಂದ್ರ ವನ್ನಾಗಿಟ್ಟುಕೊಂಡು, ಅಲ್ಲಿ ಎಲ್ಲ ಸೌಲಭ್ಯಗಳು ಸಿಗುವಂತೆ ಅಭಿವೃದ್ಧಿಪಡಿಸಲಾಗುತ್ತದೆ.

ದೇಶದ ಮಧ್ಯಮ ವರ್ಗದ ಜನರು ಅಂತರ-ರಾಷ್ಟ್ರೀಯ ಪ್ರವಾಸಕ್ಕಿಂತ ದೇಶದಲ್ಲಿಯೇ ಇರುವ ಅದ್ಭುತ ತಾಣಗಳಿಗೆ ಪ್ರವಾಸ ಕೈಗೊಳ್ಳಬೇಕು. ಆ ಮೂಲಕ ದೇಶೀಯ ಪ್ರವಾಸೋದ್ಯಮ ಬೆಳೆಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಮನವಿ ಮಾಡಿದ್ದರು. ಈ ಹಿನ್ನೆಲೆಯಲ್ಲಿ, ಘೋಷಿಸಲಾಗಿರುವ 'ದೇಖೋ ಅಪ್ನಾ ದೇಶ್' ಎಂಬ ಕಾರ್ಯಕ್ರಮದ ಉದ್ದೇಶ ಈಡೇರಿಸಲು ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ.

'ರಾಜ್ಯಗಳ ಸಕ್ರಿಯ ಸಹಭಾಗಿತ್ವದಲ್ಲಿ ಪ್ರವಾಸೋದ್ಯಮದ ಪ್ರಚಾರ ಕಾರ್ಯ ಕೈಗೊಳ್ಳಲಾಗುತ್ತದೆ' ಎಂದು ಹಣಕಾಸು ಸಚಿವೆ ತಮ್ಮ ಬಜೆಟ್ ಭಾಷಣದಲ್ಲಿ ತಿಳಿಸಿದ್ದಾರೆ.

'ದೇಶೀಯ ಹಾಗೂ ವಿದೇಶಿ ಪ್ರವಾಸಿಗರನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಕರ್ಷಿಸಲಾಗುತ್ತದೆ. ಪ್ರವಾಸೋದ್ಯಮ ವಲಯವು ಯುವಜನರಿಗೆ ದೊಡ್ಡ ಸಂಖ್ಯೆಯಲ್ಲಿ ಉದ್ಯೋಗಾವ ಕಾಶ ಕಲ್ಪಿಸಲಿದೆ. ಸರ್ಕಾರಿ ಹಾಗೂ ಖಾಸಗಿ ಸಹಭಾಗಿತ್ವದಲ್ಲಿ ಪ್ರವಾಸೋದ್ಯಮದ ಪ್ರಚಾರ ಕಾರ್ಯವನ್ನು ತ್ವರಿತಗೊಳಿಸಲಾಗುತ್ತದೆ' ಎಂದಿದ್ದಾರೆ.



ಹಿಂಜರಿತವನ್ನು ಹಿಮ್ಮೆಟ್ಟಿಸೀತೇ ಬಂಡವಾಳ ವೆಚ್ಚ ಹೆಚ್ಚಳ?

ವಿಶ್ಲೇಷಣೆ

ಎ. ನಾರಾಯಣ

ಚುನಾವಣಾ ಕಾಲದ ಬಜೆಟ್ ಎನ್ನುವುದಕ್ಕಿಂತ ಮಿಗಿಲಾಗಿ ಈ ವರ್ಷದ ಬಜೆಟ್ ಅನ್ನು ನೋಡ-ಬೇಕಾಗಿರುವುದು ಜಾಗತಿಕ ಆರ್ಥಿಕ ಹಿನ್ನಡೆಯ ಹಿನ್ನೆಲೆಯಲ್ಲಿ. ಬಹಳ ಕಾಲದ ನಂತರ ಇದೇ ಮೊದಲಿಗೆ ಇಂತಹದ್ದೊಂದು ಪ್ರಪಂಚವ್ಯಾಪೀ ಆರ್ಥಿಕ ಬಿಕ್ಕಟ್ಟಿನ ಕರಿನೆರಳಿನಲ್ಲಿ ದೇಶದ ಆಯವ್ಯಯ ಮಂಡನೆಯಾಗುತ್ತಿರುವುದು. ಬಜೆಟ್ ಬಗ್ಗೆ ಹೇಳುವ ಮುನ್ನ ಈ ಹಿನ್ನೆಲೆಯ ಬಗ್ಗೆ ಸ್ವಲ್ಪ ಹೇಳಬೇಕಿದೆ.

ಆರ್ಥಿಕ ಮಹಾದುರಂತವೊಂದು ಅಪ್ಪಳಿಸಲಿದೆ ಎನ್ನುವ ಭಯದಲ್ಲಿ ದಿನ ಬೆಳಗಾದರೆ ದೊಡ್ಡ ದೊಡ್ಡ ಬಹುರಾಷ್ಟ್ರೀಯ ಕಂಪನಿಗಳು ಸಾವಿರ ಸಾವಿರ ಸಂಖ್ಯೆಯಲ್ಲಿ ನೌಕರಿ ಕಡಿತಗೊಳಿಸುತ್ತಿವೆ. ನೌಕರಿ ಉಳಿಸಿಕೊಂಡವರು ನಾಳೆ ನೌಕರಿ ಕಳೆದುಕೊಳ್ಳಬಹುದೇನೋ ಎಂಬ ಭೀತಿಯಿಂದ ಖರ್ಚುವೆಚ್ಚ ತಗ್ಗಿಸುತ್ತಿದ್ದಾರೆ. ಇದೇನೋ ಸಂಘಟಿತ ವಲಯದಲ್ಲಿರುವ ನೌಕರರ ತಲೆನೋವೆಂದು ಬಿಟ್ಟುಬಿಡುವ ಹಾಗಿಲ್ಲ. ಯಾಕೆಂದರೆ, ಸಂಘಟಿತ ವಲಯದವರು ವೆಚ್ಚ ಮಾಡುವುದು ಕಡಿಮೆಯಾದರೆ ಮನೆಗೆಲಸ-ದವರಿಂದ ಹಿಡಿದು, ಮನೆ ಕಟ್ಟುವ ಕಾರ್ಮಿಕರ ತನಕದ ಅಸಂಘಟಿತರನ್ನೂ ಅದು ಬಾಧಿಸಿ ಜಾಗತಿಕ ಆರ್ಥಿಕ ಹಿಂಜರಿಕೆ ಮನೆ ಮನೆಯ ವ್ಯಥೆಯಾಗುತ್ತಿರುವ ಸನ್ನಿವೇಶವನ್ನು ಎದುರು ನೋಡುತ್ತಿರುವ ಕಾಲದ ಬಜೆಟ್ ಇದು. ಸಾಲದಕ್ಕೆ ಈ ಪರಿಸ್ಥಿತಿಯಲ್ಲೂ ನೌಕರಿ ಮತ್ತು ಆದಾಯ ಉಳಿಸಿಕೊಂಡವರನ್ನು ಬೆಲೆಯೇರಿಕೆಯ (ಹಣದುಬ್ಬರದ) ಬವಣೆ ಬೇರೆ ಕಾಡುತ್ತಿದೆ. ಈ ಎಲ್ಲಾ ಆತಂಕಗಳಿಂದಾಗಿ, ಬಜೆಟ್‌ನಲ್ಲಿ ಏನಿರಬಹುದೆಂಬ ನಿರೀಕ್ಷೆ ಈ ಬಾರಿ ಎಂದಿಗಿಂತಲೂ ಹೆಚ್ಚಿತ್ತು. 'ಬೂಸ್ಟರ್ ಬಜೆಟ್' ಒಂದರ ಅಗತ್ಯವಿದೆ ಎಂದು ಆರ್ಥಿಕ ಹಿಂಜರಿಕೆಯ ಬಗ್ಗೆ ಪರಿಣತಿ ಹೊಂದಿದವರು ಹೇಳುತ್ತಿದ್ದರು.

ಅರ್ಥ ವ್ಯವಸ್ಥೆಯಲ್ಲಿ ಸರ್ವ ವಿಧದ ಬೇಡಿಕೆ ಹೆಚ್ಚುವಂತೆ ಮಾಡಿ ಭಾರತವನ್ನು ಜಾಗತಿಕ ಆರ್ಥಿಕ ಹಿಂಜರಿತದಿಂದ ಪಾರುಮಾಡುವ ಸೂತ್ರವನ್ನು ಈ ವರ್ಷದ ಬಜೆಟ್‌ನಲ್ಲಿ ಕಾಣಬಹುದು. ಮಧ್ಯಮ ವರ್ಗದವರಿಗೆ ನೀಡಿದ ಆದಾಯ ತೆರಿಗೆಯ ಕೆಲ ರಿಯಾಯಿತಿಯಿಂದ ಹಿಡಿದು, ಪ್ರಧಾನ ಮಂತ್ರಿ ವಸತಿ ಯೋಜನೆಗೆ ಅನುದಾನ ಹೆಚ್ಚಿಸಿದ್ದರಿಂದ ಹಿಡಿದು, ರೈಲ್ವೆ ವ್ಯವಸ್ಥೆಯ ಸುಧಾರಣೆಗೆ ದೊಡ್ಡ ಮಟ್ಟದಲ್ಲಿ ವೆಚ್ಚ ಮಾಡಲು ಹೊರಟಿರುವು ದರಿಂದ ಹಿಡಿದು ಪ್ರವಾಸೋದ್ಯಮದ ಉತ್ತೇಜ ನದಿಂದ ಹಿಡಿದು, ಬಂಡವಾಳ ವೆಚ್ಚವನ್ನು (capex) ಬರೋಬ್ಬರಿ ಶೇಕಡಾ 33ರಷ್ಟು ಹೆಚ್ಚಿಸಿರುವ ಕ್ರಮಗಳೆಲ್ಲಾ ಈ ಸೂತ್ರದ ಪ್ರಕಾರವೇ ಇವೆ. ಆದಾಯ ತೆರಿಗೆಯ ರಿಯಾಯಿತಿಯು ಬೇಡಿಕೆ ಹೆಚ್ಚಿಸುವುದಕ್ಕಿಂತ ಮಧ್ಯಮ ವರ್ಗಕ್ಕೆ ಹಣದುಬ್ಬರ ಏರಿಕೆಯಿಂದ ಆಗಿರುವ ಹೊಡೆತದಲ್ಲಿ ಖರ್ಚು ವೆಚ್ಚ ಸರಿತೂಗಿಸಲಷ್ಟೇ ನೆರವಾಗಬಹುದು. ಬೇಡಿಕೆ ಹೆಚ್ಚದಿದ್ದರೂ, ಕುಸಿಯದಂತೆ ನೋಡಿಕೊಳ್ಳುವ ಲೆಕ್ಕಾಚಾರ ಇಲ್ಲಿದೆ. ಬಂಡವಾಳ ವೆಚ್ಚದ ಹೆಚ್ಚಳದ ಗುರಿ ಮಾತ್ರ ಜಾಗತಿಕ ಹಿಂಜರಿಕೆ ಭಾರತವನ್ನು ಬಾಧಿಸದಿರಲಿ ಎನ್ನುವ ಮುನ್ನೆಚ್ಚರಿಕೆಯಿಂದ ಕೈಗೊಂಡ ಕ್ರಮಗಳಲ್ಲಿ ಎದ್ದು ಕಾಣುವಂತದ್ದು. ಒಟ್ಟು ₹10 ಲಕ್ಷ ಕೋಟಿ ಬಂಡವಾಳ ವೆಚ್ಚಕ್ಕಾಗಿ ಸಾಲದ ಹೊರೆ ಇನ್ನಷ್ಟು ಹೆಚ್ಚುತ್ತಿದೆ ನಿಜ. ಒಂದು ಲೆಕ್ಕದಲ್ಲಿ ಅದು ಅನಿವಾರ್ಯ. ಯಾಕೆಂದರೆ, ಬಜೆಟ್ ಒಂದು ರೀತಿ ಹಗ್ಗದ ಮೇಲೆ ಮಾಡುವ ಸಮತೋಲನ. ಇನ್ನೊಂದು ರೀತಿಯಲ್ಲಿ ಪಕ್ಕಾ ಜೂಜಾಟ. ಸಮತೋಲನದ ಆಟ ಯಾಕೆಂದರೆ, ಒಂದನ್ನು ಹೆಚ್ಚು ಮಾಡಿದರೆ ಇನ್ನೊಂದನ್ನು ಕಳೆದುಕೊಳ್ಳುವ ಪಡೆದುಕೊಳ್ಳುವ ಆಟ. ಯಾಕೆಂದರೆ, ಕಳೆದುಕೊಳ್ಳಲು ಸಿದ್ಧವಿಲ್ಲದೆ ಏನನ್ನೂ ಪಡೆದುಕೊಳ್ಳಲು ಆಗುವುದಿಲ್ಲ. ಈಗ ಸರ್ಕಾರ ಬಂಡವಾಳ ವೆಚ್ಚವನ್ನು ಹೆಚ್ಚಿಸಲಿದೆ. ಇದರಿಂದಾಗಿ, 2014ರ ನಂತರ ಕುಂಠಿತಗೊಂಡಿರುವ ಖಾಸಗಿ ಬಂಡವಾಳ ವೆಚ್ಚವನ್ನೂ ಹೆಚ್ಚಿಸುಹು-ದೆಂಬ ಲೆಕ್ಕಾಚಾರವಿದೆ. ಈಗಿರುವ ಪರಿಸ್ಥಿತಿಯಲ್ಲಿ ಸರ್ಕಾರ ತನ್ನ ಬಂಡವಾಳ ವೆಚ್ಚ ಹೆಚ್ಚಿ-ಸಬೇಕೆಂದರೆ ಅದನ್ನು ಸಾಲ ಮಾಡುವ ಮೂಲಕವೇ ಮಾಡಬೇಕು. ಸರ್ಕಾರ ಹೆಚ್ಚು ಸಾಲ ಮಾಡಲು ಹೊರಟಾಗ ಖಾಸಗಿಯವರಿಗೆ ಸಾಲ ದುಬಾರಿಯಾಗುತ್ತದೆ. ಹಾಗೆ ಆದರೆ ಖಾಸಗಿ ಬಂಡವಾಳ ವೆಚ್ಚ ಹೆಚ್ಚುವುದಕ್ಕೆ ಬದಲು ಕಡಿಮೆಯಾಗಿ 'ಇದ್ದದ್ದೂ ಹೋದೀತು ಮದ್ದಿನ ಗುಣದಿಂದ' ಎಂಬಂತಾಗುವ ಸಾಧ್ಯತೆ ಇದೆ. ಆದರೆ ಹಾಗೆ ಆಗಲಾರದು ಎನ್ನುವುದು ಆರ್ಥಿಕ ಆಶಾವಾದ ಅಥವಾ ಆಶಾವಾದೀ ಆರ್ಥಿಕತೆ. ಈ ಆಶಾವಾದ ಹಿಂದಿನ ಆರ್ಥಿಕ ತರ್ಕ ಹೀಗಿದೆ: 'ಸರ್ಕಾರಿ ಬಂಡವಾಳ ವೆಚ್ಚ ಹೆಚ್ಚು ಮಾಡುವ ಮೂಲಕ ಕೈಗೊಳ್ಳುವ ಬೃಹತ್ತಾದ ಯೋಜನೆಗಳಿಂದಾಗಿ ತಳಮಟ್ಟದಲ್ಲಿ (downstream) ಸರಕುಗಳಿಗೆ ಮತ್ತು ಸೇವೆಗಳಿಗೆ ಬೇಡಿಕೆ ಸೃಷ್ಟಿಯಾಗುತ್ತದೆ. ಈ ಬೇಡಿಕೆಯ ಪೂರೈಕೆ ಖಾಸಗಿ ಕ್ಷೇತ್ರದಿಂದ ಆಗಬೇಕಿರುವ ಕಾರಣ ಖಾಸಗಿ ಬಂಡವಾಳ ಹೂಡಿಕೆ ಕೂಡಾ ಹೆಚ್ಚುತ್ತದೆ. ಜತೆಗೆ ಬಂಡವಾಳ ವೆಚ್ಚದಿಂದ ಅರ್ಥವ್ಯವಸ್ಥೆ ದೀರ್ಘಾವಧಿಯಲ್ಲಿ ಹೆಚ್ಚು ಸದೃಢವಾಗುವಾಗ ಈಗ ಹೆಚ್ಚುವರಿಯಾಗಿ ಮಾಡಿದ ಸಾಲವನ್ನು ಮರುಪಾವತಿಸಲು ಸಾಧ್ಯವಾಗುತ್ತದೆ'. ಈ ತರ್ಕದ ಹಿನ್ನೆಲೆಯಲ್ಲೇ ಹೆಚ್ಚು ಸಾಲ ಮಾಡು ವಾಗಲೂ, ಮುಂದಿನ ವರ್ಷಕ್ಕೆ ನಿರೀಕ್ಷಿತ ವಿತ್ತೀಯ ಕೊರತೆಯನ್ನು ಶೇ 5.9ರಷ್ಟೇ ಕಾಣಿಸಿದ್ದು. ಈ ವರ್ಷ ಅದು ಅಂದಾಜು ಶೇ 6.4ರಷ್ಟಿದೆ.

ಇವೆಲ್ಲಕ್ಕಿಂತ ಇತ್ತೀಚೆಗಿನ ವರ್ಷಗಳಲ್ಲಿ, ಅದು ಚುನಾವಣಾ ವರ್ಷ ಆಗಿರಲಿ ಅಥವಾ ಆಗದಿರಲಿ, ಸರ್ಕಾರಗಳ ಪಾಲಿಗೆ ಬಜೆಟ್ ಎನ್ನುವುದು ಹೇಗಾದರೂ ಮಾಡಿ ಒಂದು ದಿನದ ಮಟ್ಟಿಗೆ ಎಲ್ಲಾ ವರ್ಗದವರಿಗೂ ಹಿತಾನುಭವ ಆಗುವಂತೆ ಮಾಡುವ ಒಂದು ಕಸರತ್ತು. ಅದನ್ನು ಈ ವರ್ಷದ ಬಜೆಟ್ ಕೂಡಾ ಚೆನ್ನಾಗಿಯೇ ಮಾಡಿದೆ. ಬಜೆಟ್ ಎನ್ನುವುದು ವರ್ಷವಿಡೀ ಚಾಲ್ತಿಯಲ್ಲಿರುತ್ತದೆ. ಆದರೆ ಬಜೆಟ್‌ನಲ್ಲಿ ಹೇಳಿರುವುದರ ಮೇಲೆ ಮಾಧ್ಯಮ ಮತ್ತು ಜನರ ಗಮನವಿರುವುದು ಒಂದೇ ದಿನ. ಬಜೆಟ್ ಮಾಡುವಲ್ಲಿ ಸರ್ಕಾರಕ್ಕಿ-ರುವ ಅನುಕೂಲ ಎಂದರೆ ಇಂದೊಂದೇ. ಇದರ ಜತೆಗೆ, ಅಂಕಿ-ಅಂಶಗಳು ತಮ್ಮೆಲ್ಲಾ ಪಾವಿತ್ರ್ಯ ಮತ್ತು ವಿಶ್ವಾಸಾರ್ಹತೆಯನ್ನು ಕಳೆದುಕೊಂಡ ಕಾಲದಲ್ಲಿ ನಿಂತು ನಾವು ಸರ್ಕಾರದ ಮಿಗತೆ, ಕೊರತೆ, ಹೆಚ್ಚಳ, ಕಡಿತದ ಲೆಕ್ಕಾಚಾರಗಳನ್ನು ಓದುತ್ತಿರುತ್ತೇವೆ.

ಬಜೆಟ್‌ನಲ್ಲಿ ಕಂಡುಬರುವ ಇನ್ನೊಂದು ಮುಖ್ಯ ಅಂಶ ಎಂದರೆ ಸರ್ವ ಸಮಸ್ಯೆ ಗಳಿಗೂ ಉತ್ಪಾದನೆಯ ಹೆಚ್ಚಳವೇ (growth) ಪರಿಹಾರವೆಂದು ಭಾವಿಸಿ ಹಂಚಿಕೆಗೆ (redistribution) ಅಥವಾ ಸಾಮಾಜಿಕ ವೆಚ್ಚಕ್ಕೆ (social spending) ಕಡಿಮೆ ಒತ್ತು ನೀಡಿರುವುದು. ಮುಂಚೂಣಿ ಯೋಜನೆಯಾಗಿರುವ ಮಹಾತ್ಮಾ ಗಾಂಧಿ ಉದ್ಯೋಗ ಖಾತರಿ ಯೋಜನೆಗೆ ಹಿಂದಿನ ಎಲ್ಲಾ ವರ್ಷಗಳಿಗಿಂತಲೂ ಕಡಿಮೆ ಅನುದಾನ ನೀಡಿರುವುದು ಇದಕ್ಕೊಂದು ಸಾಕ್ಷಿ.

ಲೇಖಕ: ಪ್ರಾಧ್ಯಾಪಕರು, ಅಜೀಮ್ ಪ್ರೇಮ್‌ಜಿ ವಿಶ್ವವಿದ್ಯಾಲಯ

ಪ್ರಮುಖ ಅಂಶಗಳು

- ಪ್ರಧಾನ ಮಂತ್ರಿ ಆವಾಸ್ ಯೋಜನೆಯ (ಪಿಎಂಎವೈ) ಗಾತ್ರವನ್ನು ₹ 79,000 ಕೋಟಿಗೆ ಹೆಚ್ಚಿಸಲಾಗಿದೆ. ಈ ಯೋಜನೆಗೆ ನೀಡುವ ಅನುದಾನವನ್ನು ಶೇ 66ರಷ್ಟು ಹೆಚ್ಚಿಸಿದಂತಾಗಿದೆ.

- ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಧಿ ಮಾದರಿಯಲ್ಲಿಯೇ ನಗರ ಮೂಲ ಸೌಕರ್ಯ ಅಭಿವೃದ್ಧಿ ನಿಧಿ ಸ್ಥಾಪನೆ. ನ್ಯಾಷನಲ್ ಹೌಸಿಂಗ್ ಬ್ಯಾಂಕ್ ಈ ನಿಧಿಯನ್ನು ನಿರ್ವಹಣೆ ಮಾಡಲಿದೆ



- ನಗರ ಪ್ರದೇಶಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಗಾಗಿ ಪ್ರತಿ ವರ್ಷ ₹ 10 ಸಾವಿರ ಕೋಟಿ ವೆಚ್ಚ

- ಬುಡಕಟ್ಟು ಜನರ ಸಾಮಾಜಿಕ–ಆರ್ಥಿಕ ಸ್ಥಿತಿ ಸುಧಾರಣೆಗೆ ₹ 15 ಸಾವಿರ ಕೋಟಿ ವೆಚ್ಚದಲ್ಲಿ 'ಪಿಎಂ ನಿರ್ದಿಷ್ಟ ದುರ್ಬಲ ಬುಡಕಟ್ಟು ಗುಂಪುಗಳ' ಅಭಿವೃದ್ಧಿ ಕಾರ್ಯಕ್ರಮ.

- ದಂಡದ ಮೊತ್ತ ಹಾಗೂ ಜಾಮೀನಿನ ಹಣ ಪಾವತಿಸಲು ಅಸಮರ್ಥರಾಗಿರುವ, ಜೈಲುಗಳಲ್ಲಿರುವ ಬಡವರಿಗೆ ಹಣಕಾಸು ನೆರವು

- 'ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನೆ' (ಪಿಎಂಜಿಕೆಎವೈ) ಅಡಿ ಬಡವರಿಗೆ ಉಚಿತವಾಗಿ ಆಹಾರಧಾನ್ಯಗಳನ್ನು ಪೂರೈಸುವುದಕ್ಕೆ ಜನವರಿ 1ರಿಂದ ಚಾಲನೆ ನೀಡಲಾಗಿದೆ. ಈ ಯೋಜನೆಯನ್ನು ₹ 2 ಲಕ್ಷ ಕೋಟಿ ವೆಚ್ಚದಲ್ಲಿ ಅನುಷ್ಠಾನ

47 ಲಕ್ಷ ಯುವಜನರಿಗೆ ಕಲಿಕಾ ನೆರವು

ನವದೆಹಲಿ: ದೇಶದ ಯುವಜನತೆಯ ಆರ್ಥಿಕತೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಹಾಗೂ ಅವರ ಕನಸುಗಳನ್ನು ನನಸಾಗಿಸುವ ಮೂಲಕ 'ಅಮೃತ ಪೀಳಿಗೆ' ಸೃಷ್ಟಿಸಲು ಕಲಿಕಾ (ಅಪ್ರೆಂಟಿಸ್‌ಶಿಪ್) ಯೋಜನೆಯನ್ನು ಕೇಂದ್ರ ಸರ್ಕಾರ ಜಾರಿಗೊಳಿಸಲಿದೆ.

'ಪ್ಯಾನ್-ಇಂಡಿಯಾ ನ್ಯಾಷನಲ್ ಅಪ್ರೆಂಟಿಸ್‌ಶಿಪ್ ಪ್ರಮೋಷನ್ ಸ್ಕೀಮ್' ಅಡಿಯಲ್ಲಿ 3 ವರ್ಷಗಳಲ್ಲಿ 47 ಲಕ್ಷ ಯುವಕರಿಗೆ ಸ್ಟೈಫಂಡ್ ನೀಡುವುದಾಗಿ ಘೋಷಿಸಲಾಗಿದೆ.

ಪ್ರಧಾನ ಮಂತ್ರಿ ಕೌಶಲ ವಿಕಾಸ 4.0 ಯೋಜನೆಯಡಿ ಮುಂದಿನ ಮೂರು ವರ್ಷಗಳಲ್ಲಿ ಲಕ್ಷಾಂತರ ಯುವಕರಿಗೆ ಕೌಶಲ, ಉದ್ಯೋಗ, ಉದ್ಯಮ ಪಾಲುದಾರಿಕೆ ಕುರಿತ ವಿವಿಧ ತರಬೇತಿಯನ್ನು ನೀಡಲಾಗುವುದು. ಕೋರ್ಸ್‌ಗಳ ಜೊತೆಗೆ ಕೌಶಲ ಮೂಡಿಸಲಾಗುವುದು ಎಂದು ತಿಳಿಸಲಾಗಿದೆ.

ಈ ಹೊಸ ಯೋಜನೆಯಡಿಯಲ್ಲಿ ಕೋಡಿಂಗ್, ರೊಬೊಟಿಕ್ಸ್, ಮೆಕಾಟ್ರಾನಿಕ್ಸ್, ಐಒಟಿ, 3ಡಿ ಪ್ರಿಂಟಿಂಗ್, ಡ್ರೋನ್‌ಗಳು ಮತ್ತು ಮೃದು ಕೌಶಲಗಳಂತಹ ಕೋರ್ಸ್‌ಗಳನ್ನು ಜಾರಿಗೆ ತರಲಾಗುವುದು.

ಸ್ಟಾರ್ಟ್ ಅಪ್: ತೆರಿಗೆ ವಿನಾಯಿತಿ ವಿಸ್ತರಣೆ

ನವದೆಹಲಿ (ಪಿಟಿಐ): ಅರ್ಹ ಯುವ ಉದ್ಯಮಿಗಳಿಗೆ ಸ್ಟಾರ್ಟ್‌ಅಪ್ ಆರಂಭಿಸಲು ನೀಡಲಾಗುತ್ತಿದ್ದ ಆದಾಯ ತೆರಿಗೆ ವಿನಾಯಿತಿ ಅವಕಾಶವನ್ನು 2024 ರ ಮಾರ್ಚ್ 31 ರವರೆಗೆ ವಿಸ್ತರಿಸಲು ಸರ್ಕಾರ ಬುಧವಾರ ಪ್ರಸ್ತಾಪಿಸಿದೆ.

ಹತ್ತು ವರ್ಷಗಳ ಅವಧಿವರೆಗೂ ನಷ್ಟವನ್ನು ಮುಂದುವರಿಸಿಕೊಂಡು ಹೋಗುವ ಸ್ಟಾರ್ಟ್ ಅಪ್‌ಗಳಿಗೂ ಅನ್ವಯಿಸಲು ನಿಯಮ ಸಡಿಸಲಾಗುವುದು ಎಂದು ಹಣಕಾಸು ಸಚಿವೆ ಹೇಳಿದರು.

2023ರ ಮಾರ್ಚ್ 31ಕ್ಕೂ ಮೊದಲು ಆರಂಭಗೊಂಡ ಅರ್ಹ ಸ್ಟಾರ್ಟ್‌ಅಪ್‌ಗ-ಳಿಗೆ ಸಂಯೋಜನೆಯಿಂದ ಹತ್ತು ವರ್ಷಗಳಲ್ಲಿ ಸತತ ಮೂರು ವರ್ಷಗಳವರೆಗೆ ತೆರಿಗೆ ಪ್ರೋತ್ಸಾಹ ನೀಡಲಾಗಿದೆ.

2016ರ ಏಪ್ರಿಲ್ 1 ರಂದು ಅಥವಾ ನಂತರ ಸಂಯೋಜಿತವಾದ ಸ್ಟಾರ್ಟ್‌ಅ-ಪ್‌ಗಳು ಆದಾಯ ತೆರಿಗೆ ವಿನಾಯಿತಿಗೆ ಅರ್ಜಿ ಸಲ್ಲಿಸಬಹುದು.

ಅಂತರ ಸಚಿವಾಲಯದ ಮಂಡಳಿ ಪ್ರಮಾಣಪತ್ರ ನೀಡಲಾದ ಮಾನ್ಯತೆ ಪಡೆದ ಸ್ಟಾರ್ಟ್‌ಅಪ್‌ಗಳು ಸಂಯೋಜನೆಗೊಂಡ ನಂತರ 10 ವರ್ಷಗಳಲ್ಲಿ ಸತತ ಮೂರು ವರ್ಷಗಳವರೆಗೆ ಆದಾಯ ತೆರಿಗೆಯಿಂದ ವಿನಾಯಿತಿ ನೀಡಲಾಗುತ್ತದೆ. ದೇಶದಲ್ಲಿ ಸ್ಟಾ-ರ್ಟ್‌ಅಪ್‌ಗಳನ್ನು ಉತ್ತೇಜಿಸಲು ಸರ್ಕಾರವು ಹಲವಾರು ಕ್ರಮಗಳನ್ನು ಕೈಗೊಂಡಿದೆ.

2022ರ ನವೆಂಬರ್ ವರೆಗೆ 84,000 ಕ್ಕೂ ಹೆಚ್ಚು ಸ್ಟಾರ್ಟ್‌ಅಪ್‌ಗಳು ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆಯಲ್ಲಿ (ಡಿಪಿಐಐಟಿ) ನೋಂದಾಯಿಸ-ಲ್ಪಟ್ಟಿವೆ. ಇವು ಸ್ಟಾರ್ಟ್‌ಅಪ್ ಇಂಡಿಯಾ ಉಪಕ್ರಮದ ಅಡಿ ಘೋಷಿಸಲಾದ ಆದಾಯ ತೆರಿಗೆ ಸೇರಿದಂತೆ ಕೆಲವು ತೆರಿಗೆ ಪ್ರೋತ್ಸಾಹಕಗಳನ್ನು ಪಡೆಯಬಹುದು.

ಬುಡಕಟ್ಟು ಸಮುದಾಯಗಳ ಆರ್ಥಿಕ ಸ್ಥಿತಿ ಸುಧಾರಣೆಗೆ ಯೋಜನೆ

ನವದೆಹಲಿ (ಪಿಟಿಐ): 'ಪ್ರಾಚೀನ ಬುಡಕಟ್ಟು ಸಮುದಾಯದಲ್ಲಿನ ದುರ್ಬಲ ಪಂಗಡಗಳ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಯ ಸುಧಾರಣೆಗೆ ಯೋಜನೆಯೊಂದನ್ನು ಜಾರಿಗೊಳಿಸಿದ್ದೇವೆ' ಎಂದು ಹಣಕಾಸು ಸಚಿವೆ ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ.

ಪ್ರಧಾನ ಮಂತ್ರಿಯವರ ದುರ್ಬಲ ಬುಡಕಟ್ಟು ಪಂಗಡಗಳ (ಪಿಎಂ–ಪಿವಿಟಿಜಿ) ಅಭಿವೃದ್ಧಿ ಮಿಷನ್ ಅನ್ನು ಮುಂದಿನ ಮೂರು ವರ್ಷಗಳಲ್ಲಿ ಅನುಷ್ಠಾನಗೊಳಿಸುವುದಕ್ಕಾಗಿ ₹15 ಸಾವಿರ ಕೋಟಿ ಮೀಸಲಿಡಲಾಗಿದೆ.

ಈ ಯೋಜನೆಯ ಅಡಿಯಲ್ಲಿ ದುರ್ಬಲ ಬುಡಕಟ್ಟು ಸಮುದಾಯದ ಪಂಗಡಗಳಿಗೆ ಮನೆ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗುತ್ತದೆ. ಹಾಡಿಗಳಲ್ಲಿ ನೈರ್ಮಲ್ಯಕ್ಕೆ ಒತ್ತು ನೀಡಲಾಗುತ್ತದೆ.

ಕೇಂದ್ರ ಬಜೆಟ್ 2023-24

ಅಭಿವೃದ್ಧಿ, ಸುಸ್ಥಿರತೆ ಹಾಗೂ ಉದ್ಯೋಗ ಸೃಷ್ಟಿಯತ್ತ ಗಮನ ಹರಿಸಿರುವ ಅಭಿವೃದ್ಧಿಪರ ಬಜೆಟ್ ಇದು. ₹ 10 ಲಕ್ಷ ಕೋಟಿ ಬಂಡವಾಳ ವೆಚ್ಚ ಸಾರ್ವಕಾಲಿಕ ಗರಿಷ್ಠವಾದುದು. ಸರ್ಕಾರ ಜನಪ್ರಿಯ ಕಾರ್ಯಕ್ರಮಗಳಿಗೆ ಆದ್ಯತೆ ನೀಡುವುದರ ಜೊತೆಗೆ ನವೋದ್ಯಮ, ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ, ಪ್ರವಾಸೋದ್ಯಮಕ್ಕೆ, ಹಸಿರು ಇಂಧನಕ್ಕೆ, ಯುವಶಕ್ತಿಗೆ ಮತ್ತು ಮಹಿಳಾ ಉದ್ಯಮಿಗಳಿಗೆ ಪ್ರೋತ್ಸಾಹಕ ಕ್ರಮಗಳನ್ನು ಪ್ರಕಟಿಸಿದೆ.

ಎಂ.ಗಣೇಶ್ ಕಾಮತ್, ಅಧ್ಯಕ್ಷ, ಕೆನರಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ

ಶಿಕ್ಷಣ, ಯುವಜನರಿಗೆ ಉದ್ಯೋಗ ಮತ್ತು ಕೌಶಲಾಭಿವೃದ್ಧಿಗೆ ಹೆಚ್ಚು ಒತ್ತು ನೀಡಲಾಗಿದೆ. ಡಿಜಿಟಲ್ ಮೂಲಕ ನಾಗರಿಕರ ಕೌಶಲ ಹೆಚ್ಚಿಸಲು ಉದ್ದೇಶಿಸಲಾಗಿದೆ. ಪಿಎಂ ಇ-ವಿದ್ಯಾದ 'ಒಂದು ತರಗತಿ ಒಂದು ಟಿವಿ ಚಾನೆಲ್' ಕಾರ್ಯಕ್ರಮವನ್ನು 200 ಟಿವಿ ಚಾನೆಲ್‌ಗಳಿಗೆ ವಿಸ್ತರಿಸುವುದು ಉತ್ತಮ ನಿರ್ಣಯ. ಡಿಜಿಟಲ್ ಶಿಕ್ಷಣದ ಮೂಲಕ ಉತ್ತಮ ಗುಣಮಟ್ಟದ ಇ-ಕಂಟೆಂಟ್ ಅಭಿವೃದ್ಧಿ ಮತ್ತು ಸಾರ್ವತ್ರಿಕ ಶಿಕ್ಷಣಕ್ಕಾಗಿ ಡಿಜಿಟಲ್ ವಿಶ್ವವಿದ್ಯಾಲಯದ ಸ್ಥಾಪನೆಯಿಂದ ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆ ಸಾಧ್ಯವಾಗಲಿದೆ.

ಸುಮಾ ಟಿ.ಹೊಸಮನಿ, ಅರ್ಥಶಾಸ್ತ್ರ ಉಪನ್ಯಾಸಕಿ, ಮಾನ್ವಿ

ಮತ್ಸ್ಯ ಸಂಪದ ಯೋಜನೆ ಅಡಿ ಸಾಗರ ಆಹಾರ ಉತ್ಪನ್ನ, ಮೀನು ಮಾರುಕಟ್ಟೆ ವಿಸ್ತರಣೆಗೆ ₹6 ಸಾವಿರ ಕೋಟಿ ಮೀಸಲಿಟ್ಟಿರುವುದು ಸ್ವಾಗತಾರ್ಹ. ಆದರೆ ಕೇಂದ್ರ ಸರ್ಕಾರದ ದೃಷ್ಟಿಕೋನ ಕೇವಲ ಬಂಡವಾಳಶಾಹಿಗಳಿಗೆ ಉತ್ತೇಜನ ನೀಡುವುದೇ ಆಗಿದೆ. ಯೋಜನೆ ಸಾಂಪ್ರದಾಯಿಕ ಮೀನುಗಾರರಿಗೆ ಅನುಕೂಲ ಒದಗಿಸದೆ ಕೋಟ್ಯಂತರ ರೂಪಾಯಿ ಬಂಡವಾಳ ಹೂಡುವ ಉದ್ಯಮಿಗಳಿಗೆ ಮಾತ್ರ ಅನುಕೂಲ ಕಲ್ಪಿಸಿದ್ದನ್ನು ಈಗಾಗಲೇ ನೋಡಿದ್ದೇವೆ.

ರಾಜು ತಾಂಡೇಲ, ಅಧ್ಯಕ್ಷ, ಉತ್ತರ ಕನ್ನಡ ಜಿಲ್ಲೆ ಮೀನು ಮಾರಾಟಗಾರರ ಸಹಕಾರ ಫೆಡರೇಷನ್

ಕೇಂದ್ರ ಬಜೆಟ್ ಕೃಷಿ ವಿರೋಧಿಯಾಗಿದ್ದು, ಕಾರ್ಪೊರೇಟ್ ಶಕ್ತಿಗಳ ಪರವಾಗಿದೆ. ಕೃತಕ ಬುದ್ಧಿಮತ್ತೆಯನ್ನು ಕೃಷಿ ಕ್ಷೇತ್ರಕ್ಕೆ ಅಳವಡಿಸುವುದರಿಂದ ಅನಾಹುತಗಳಾಗುತ್ತವೆ. ಈ ತಂತ್ರಜ್ಞಾನದಿಂದ ಈಗಾಗಲೇ ಹತ್ತಿ ಬೆಳೆಗಾರರಿಗೆ ತೊಂದರೆಯಾಗಿದೆ. ಹಲವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಬಡವರು, ಮಧ್ಯಮ ವರ್ಗದವರು, ಕೂಲಿ ಕಾರ್ಮಿಕರಿಗೆ ಪ್ರಯೋಜನವಿಲ್ಲದ ಬಜೆಟ್. ಕೃಷಿ ಕ್ಷೇತ್ರಕ್ಕೆ ₹ 20 ಲಕ್ಷ ಕೋಟಿ ಸಾಲ ಏನೇನೂ ಸಾಲದು. ರೈತರಿಗೆ ಬಡ್ಡಿರಹಿತ ಸಾಲ ಸೌಲಭ್ಯ ನೀಡಬೇಕು.

ಬಡಗಲಪುರ ನಾಗೇಂದ್ರ, ರಾಜ್ಯ ರೈತ ಸಂಘದ ಅಧ್ಯಕ್ಷ

ಏಕಲವ್ಯ ಶಾಲೆ: 38 ಸಾವಿರ ಶಿಕ್ಷಕರ ನೇಮಕ

ನವದೆಹಲಿ (ಪಿಟಿಐ): ಶಿಕ್ಷಣ ಸುಧಾರಣೆ ನಿಟ್ಟಿನಲ್ಲಿ, ಶಿಕ್ಷಕರ ನೇಮಕ, ಶಿಕ್ಷಕರ ತರಬೇತಿ, ಉತ್ಕೃಷ್ಟತಾ ಕೇಂದ್ರಗಳ ಸ್ಥಾಪನೆ, ನರ್ಸಿಂಗ್ ಕಾಲೇಜು ಸ್ಥಾಪನೆ, ಅನುದಾನ ಹೆಚ್ಚಳದಂತಹ ಕೆಲವು ಕ್ರಮಗಳನ್ನು ಕೇಂದ್ರ ಸರ್ಕಾರ ಈ ಬಾರಿಯ ಬಜೆಟ್‌ನಲ್ಲಿ ಪ್ರಸ್ತಾಪಿಸಿದೆ.

ದೇಶದ 740 ಏಕಲವ್ಯ ಮಾದರಿ ವಸತಿ ಶಾಲೆಗಳಿಗೆ ಮುಂದಿನ 3 ವರ್ಷಗಳಲ್ಲಿ 38 ಸಾವಿರ ಶಿಕ್ಷಕರು ಹಾಗೂ ಸಿಬ್ಬಂದಿಯನ್ನು ನೇಮಕಾತಿ ಮಾಡಿಕೊಳ್ಳಲು ಸರ್ಕಾರ ನಿರ್ಧರಿಸಿದೆ. ಈ ಶಾಲೆಗಳಲ್ಲಿ 3.5 ಲಕ್ಷ ಬುಡಕಟ್ಟು ಮಕ್ಕಳು ಓದುತ್ತಿದ್ದಾರೆ. ಶಿಕ್ಷಕರಿಗೆ ಸುಧಾರಿತ ಮಾದರಿಯ ತರಬೇತಿ ನೀಡುವುದಕ್ಕೆ ಬಜೆಟ್‌ನಲ್ಲಿ ಒತ್ತು ನೀಡಲಾಗಿದೆ.

157 ಹೊಸ ನರ್ಸಿಂಗ್ ಕಾಲೇಜುಗಳನ್ನು ಸ್ಥಾಪಿಸುವ ಪ್ರಸ್ತಾವವನ್ನು ಸರ್ಕಾರ ಮುಂದಿರಿಸಿದೆ. ಈಗಾಗಲೇ ಇರುವ 157 ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲೇ ಇವು ಸ್ಥಾಪನೆಯಾಗಲಿವೆ. ವೈದ್ಯಕೀಯ ಸಾಧನಗಳ ಸಂಶೋಧನೆ ಮತ್ತು ಅಭಿವೃದ್ಧಿಗೆ ನುರಿತ ಮಾನವ ಸಂಪನ್ಮೂಲ ಒದಗಿಸುವ ನಿಟ್ಟಿನಲ್ಲಿ ಬಹುಶಿಸ್ತೀಯ ಕೋರ್ಸ್‌ಗಳನ್ನು ಪರಿಚಯಿಸಲು ಸರ್ಕಾರ ನಿರ್ಧರಿಸಿದೆ. ಭವಿಷ್ಯದ ವೈದ್ಯಕೀಯ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲು ಇದರಿಂದ ಸುಲಭವಾಗಲಿದೆ.

ಕೃತಕ ಬುದ್ಧಿಮತ್ತೆಗೆ (ಎಐ) ಸಂಬಂಧಿಸಿದ ಮೂರು ಉತ್ಕೃಷ್ಟತಾ ಕೇಂದ್ರಗಳು ಉನ್ನತ ಶೈಕ್ಷಣಿಕ ಸಂಸ್ಥೆಗಳಲ್ಲಿ ಆರಂಭವಾಗಲಿವೆ. ಖಾಸಗಿಯವರ ಸಹಭಾಗಿತ್ವದಲ್ಲಿ ಕೃಷಿ, ಸುಸ್ಥಿರ ನಗರ, ಆರೋಗ್ಯ ಕ್ಷೇತ್ರಗಳಲ್ಲಿ ಅಂತರ್‌ಶಿಸ್ತೀಯ ಸಂಶೋಧನೆ ಮತ್ತು ಅಪ್ಲಿಕೇಷನ್‌ಗಳ ಅಭಿವೃದ್ಧಿ ಕೆಲಸಗಳು ನಡೆಯಲಿವೆ.

5ಜಿ ತಂತ್ರಜ್ಞಾನ ಆಧರಿತ ಅಪ್ಲಿಕೇಷನ್‌ಗಳನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿ 100 ಪ್ರಯೋಗಾಲಯಗಳನ್ನು ಸ್ಥಾಪಿಸಲಾಗುತ್ತದೆ. ಬ್ಯಾಂಕ್‌ಗಳು, ಉದ್ಯಮಗಳು ಮೊದಲಾದ ಪ್ರಾಧಿಕಾರಗಳ ಸಹಯೋಗದಲ್ಲಿ ಅಪ್ಲಿಕೇಷನ್ ಅಭಿವೃದ್ಧಿ ಕಾರ್ಯಗಳು ನಡೆಯಲಿವೆ. ಸ್ಮಾರ್ಟ್ ತರಗತಿಗಳು, ಕೃಷಿ, ಸಾರಿಗೆ, ಆರೋಗ್ಯ ಸೇರಿದಂತೆ ವಿವಿಧ ವಲಯಗಳಿಗೆ ಸಂಬಂಧಿಸಿದ ಆ್ಯಪ್‌ಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ. ಪ್ರಯೋಗಾಲಯಗಳಲ್ಲಿ ಕೃತಕವಾಗಿ ವಜ್ರ ತಯಾರಿಕೆ ಬಗ್ಗೆ ಯಾವುದಾದರೂ ಒಂದು ಐಐಟಿಯಲ್ಲಿ ಐದು ವರ್ಷ ಸಂಶೋಧನೆ ನಡೆಸಲು ಅನುದಾನ ಒದಗಿಸಲು ನಿರ್ಧರಿಸಲಾಗಿದೆ.

ರಾಷ್ಟ್ರೀಯ ಡಿಜಿಟಲ್ ಗ್ರಂಥಾಲಯ

ಕೋವಿಡ್ ಅವಧಿಯಲ್ಲಿ ವಿದ್ಯಾರ್ಥಿಗಳ ಕಲಿಕೆಗೆ ಆಗಿರುವ ಹಿನ್ನಡೆಯನ್ನು ಪರಿಗಣಿಸಿರುವ ಸರ್ಕಾರ, ಮಕ್ಕಳಿಗಾಗಿ 'ರಾಷ್ಟ್ರೀಯ ಡಿಜಿಟಲ್ ಗ್ರಂಥಾಲಯ' ಸ್ಥಾಪಿಸುವ ಘೋಷಣೆ ಮಾಡಿದೆ. ಎಲ್ಲ ಭಾಷೆ, ಪ್ರಕಾರಗಳ ಗುಣಮಟ್ಟದ ಪುಸ್ತಕಗಳು ಇಲ್ಲಿ ಲಭ್ಯವಾಗಲಿವೆ. ಡಿಜಿಟಲ್ ಗ್ರಂಥಾಲಯಗಳ ಸೌಲಭ್ಯ ಮಕ್ಕಳಿಗೆ ದೊರಕಿಸುವ ನಿಟ್ಟಿನಲ್ಲಿ ವಾರ್ಡ್ ಮತ್ತು ಪಂಚಾಯಿತಿ ಮಟ್ಟದಲ್ಲಿ ಭೌತಿಕ ಸ್ವರೂಪದ ಗ್ರಂಥಾಲಯ ತೆರೆಯಲು ರಾಜ್ಯಗಳನ್ನು ಪ್ರೋತ್ಸಾಹಿಸಲಾಗುವುದು ಎಂದು ಸರ್ಕಾರ ಹೇಳಿದೆ. ಶಾಲಾ ಪಠ್ಯಕ್ರಮಕ್ಕೆ ಹೊರತಾದ ಇಂಗ್ಲಿಷ್ ಹಾಗೂ ಪ್ರಾದೇಶಿಕ ಭಾಷೆಗಳ ಗ್ರಂಥಗಳನ್ನು ನ್ಯಾಷನಲ್ ಬುಕ್ ಟ್ರಸ್ಟ್, ಚಿಲ್ಡ್ರನ್ಸ್ ಬುಕ್ ಟ್ರಸ್ಟ್ ಹಾಗೂ ಇತರೆ ಸಂಸ್ಥೆಗಳು ಒದಗಿಸಲಿವೆ.

ಯೋಜನೆಗಳು ಆಕರ್ಷಕ: ಗುರಿ ತಲುಪುವತ್ತ ಇರಲಿ ಚಿತ್ತ



ವಿಶ್ಲೇಷಣೆ

ರಾಜೇಶ್ವರಿ ಯು.ಆರ್.

ವಾರ್ಷಿಕ ಬಜೆಟ್ ಮಂಡಿಸಿದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು, ಕೇಂದ್ರ ಬಜೆಟ್ ಎಲ್ಲರಿಗೂ ಪ್ರಯೋಜನಕಾರಿಯಾಗಲಿದೆ, ವಿಶೇಷವಾಗಿ ಮಹಿಳೆಯರು, ಯುವಕರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ರೈತರ ಮೇಲೆ ಕೇಂದ್ರೀಕರಿಸುತ್ತದೆ ಎಂದು ಹೇಳಿದ್ದಾರೆ. ಅಂತರ್ಗತ ಬೆಳವಣಿಗೆಯು ಈ ಬಜೆಟ್‌ನ ಪ್ರಮುಖ ಅಂಶವಾಗಿದೆ. ಕೃಷಿ ವೇಗವರ್ಧಕಗಳು ಮತ್ತು ಮಹಿಳೆಯರಿಗೆ ಸ್ವಸಹಾಯ ಗುಂಪುಗಳ (ಎಸ್‌ಎಚ್‌ಜಿ) ಮೂಲಕ ಸಿಗುವ ಬೆಂಬಲವು ಗ್ರಾಮೀಣ ಯುನಿಕಾರ್ನ್‌ಗಳನ್ನು ಹುಟ್ಟುಹಾಕಿ ಬೆಳೆಸಲು ಸಹಾಯ ಮಾಡುತ್ತದೆ ಹಾಗೂ ಉದ್ಯಮಶೀಲತೆಯನ್ನು ಉತ್ತೇಜಿಸುತ್ತದೆ. ಆರ್ಥಿಕ ಸ್ಥಿರತೆ, ತಂತ್ರಜ್ಞಾನ ಚಾಲಿತ ಬೆಳವಣಿಗೆ ಮತ್ತು ಉದ್ಯೋಗದ ಮೇಲೆ ಸರ್ಕಾರವು ಹೆಚ್ಚಿನ ಗಮನ ಹೊಂದಿದೆ ಎಂಬುದಕ್ಕೆ ಇದು ಸೂಚನೆಯಾಗಿದೆ.

ಮಹಿಳೆಯರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸುವ ಆದ್ಯತೆಯ ಯೋಜನೆಗಳಲ್ಲಿ ರಾಷ್ಟ್ರೀಯ ಜೀವನೋಪಾಯ ಮಿಷನ್‌ಗೆ ಪ್ರಾಮುಖ್ಯತೆ ನೀಡಲಾಗಿದೆ. ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ ಗ್ರಾಮೀಣ ಮಹಿಳೆಯರನ್ನು 81 ಲಕ್ಷ ಸ್ವಸಹಾಯ ಗುಂಪುಗಳಾಗಿ ಸಜ್ಜುಗೊಳಿಸುವ ಮೂಲಕ ಗಮನಾರ್ಹ ಯಶಸ್ಸು ಸಾಧಿಸಿದೆ. ಸಾವಿರಾರು ಸದಸ್ಯರನ್ನು ಹೊಂದಿರುವ ದೊಡ್ಡ ಉತ್ಪಾದಕ ಉದ್ಯಮಗಳನ್ನು ಸ್ಥಾಪಿಸುವ ಮೂಲಕ ಎಸ್‌ಎಚ್‌ಜಿಗಳು ಆರ್ಥಿಕ ಸಬಲೀಕರಣದ ಮುಂದಿನ ಹಂತವನ್ನು ತಲುಪುವ ಗುರಿಯನ್ನು ಈ ಬಜೆಟ್ ಹೊಂದಿದೆ. ಇದನ್ನು ವೃತ್ತಿಪರವಾಗಿ ನಿರ್ವಹಿಸಲಾಗುವುದು ಎಂದು ನಿರ್ಮಲಾ ಸೀತಾರಾಮನ್ ಅವರು ತಮ್ಮ ಬಜೆಟ್‌ನಲ್ಲಿ ಹೇಳಿದ್ದಾರೆ.

ಈ ಯೋಜನೆ ಕಚ್ಚಾ ವಸ್ತುಗಳ ನಿರ್ವಹಣೆ, ಉತ್ತಮ ವಿನ್ಯಾಸ, ಗುಣಮಟ್ಟ, ಬ್ರ್ಯಾಂಡಿಂಗ್ ಮತ್ತು ಉತ್ಪನ್ನಗಳ ಮಾರುಕಟ್ಟೆಗೆ ಸಹಾಯ ಮಾಡುತ್ತದೆ. ಇದರ ಮೂಲಕ ಅವರು ದೊಡ್ಡ ಗ್ರಾಹಕ ಮಾರುಕಟ್ಟೆಗೆ ಸೇವೆ ಸಲ್ಲಿಸಲು ಸಾಧ್ಯವಾಗುತ್ತದೆ. ಇದರ ಜತೆಗೆ ಮಹಿಳೆಯರಿಗಾಗಿ ಸಣ್ಣ ಉಳಿತಾಯ ಯೋಜನೆ ಘೋಷಿಸಿದ್ದಾರೆ. ಈ ಯೋಜನೆಯನ್ನು ಮಹಿಳಾ ಸಮ್ಮಾನ್ ಉಳಿತಾಯ ಪ್ರಮಾಣಪತ್ರ ಎಂದು ಕರೆಯಲಾಗುವುದು ಮತ್ತು ಇದು ಮಾರ್ಚ್ 2025 ರವರೆಗೆ ಲಭ್ಯವಿರುತ್ತದೆ. ಈ ಯೋಜನೆ 2 ವರ್ಷಗಳ ಅವಧಿ ಹೊಂದಿರುತ್ತದೆ. ಶೇ 7.5ರಷ್ಟು ಬಡ್ಡಿದರ ನೀಡುತ್ತದೆ. ಸುಮಾರು 66.2 ಕೋಟಿ ಮಹಿಳಾ ಜನಸಂಖ್ಯೆಯೊಂದಿಗೆ, ಭಾರತದ ಸಾಧನೆಯ ಮಟ್ಟವು ಪ್ರಾದೇಶಿಕ ಶ್ರೇಯಾಂಕಗಳ ಮೇಲೆ ಅವಲಂಬಿತವಾಗಿದೆ. ಡಿಜಿಟಲ್ ಸಾಕ್ಷರತೆ, ಕೌಶಲ ತರಬೇತಿ, ಕಾರ್ಮಿಕ ವರ್ಗದಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಉತ್ತೇಜಿಸುವುದರ ಜತೆಗೆ ಮಹಿಳೆಯರ ವಿರುದ್ಧದ ಕೌಟುಂಬಿಕ ಹಿಂಸಾಚಾರ, ವೇತನ ಅಂತರ ಕಡಿಮೆ ಮಾಡುವಂತೆ ಈ ಯೋಜನೆಗಳು ನೋಡಿಕೊಳ್ಳಬೇಕಾಗಿದೆ.

ಹೆಚ್ಚುತ್ತಿರುವ ನಿರುದ್ಯೋಗ, ಶೈಕ್ಷಣಿಕ ವೆಚ್ಚಗಳು, ಉತ್ತಮ ಆರೋಗ್ಯ ಸೌಲಭ್ಯಗಳ ಅಗತ್ಯತೆಯೊಂದಿಗೆ, ಈ ಬಜೆಟ್ ಯುವಜನರ ಸಮಸ್ಯೆಗಳಿಗೆ ಸ್ವಲ್ಪಮಟ್ಟಿಗೆ ಪರಿಹಾರ ನೀಡಲು ಪ್ರಯತ್ನಿಸಿದೆ. ದೇಶದ ಜನಸಂಖ್ಯೆಯ ಶೇ 65ರಷ್ಟು ಜನರು 35 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿದ್ದು, ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸುವುದು ಬಹು ಮುಖ್ಯ. ಹೊಸ ಶಿಕ್ಷಣ ನೀತಿಯ ಅನುಷ್ಠಾನವು ಕೌಶಲ ಅಭಿವೃದ್ಧಿ ಮತ್ತು ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಅತ್ಯಂತ ಪ್ರಮುಖ ಹೆಜ್ಜೆಯಾಗಿದೆ.

ಯುವ ಸಬಲೀಕರಣ ಮತ್ತು ಉದ್ಯೋಗ ಸೃಷ್ಟಿಯತ್ತ ಗಮನ ಹರಿಸಿದಾಗ, ಮುಂದಿನ ಮೂರು ವರ್ಷಗಳಲ್ಲಿ ಲಕ್ಷಾಂತರ ಯುವಕರಿಗೆ ಕೌಶಲಗಳನ್ನು ಒದಗಿಸಲು ಪ್ರಧಾನ ಮಂತ್ರಿ ಕೌಶಲ್ ವಿಕಾಸ್ ಯೋಜನೆ 4.0 ಘೋಷಿಸಲಾಗಿದೆ. ಇದು ಉದ್ಯೋಗದ ತರಬೇತಿ, ಉದ್ಯಮ ಪಾಲುದಾರಿಕೆ ಮತ್ತು ಕೈಗಾರಿಕೆಗಳ ಅಗತ್ಯಗಳನ್ನು ಕೇಂದ್ರೀಕರಿಸುತ್ತದೆ. ಇದು ಉದ್ಯಮ 4.0ಗಾಗಿ ಕೋಡಿಂಗ್, ಕೃತಕ ಬುದ್ಧಿಮತ್ತೆ, ರೋಬೋಟಿಕ್ಸ್, ಮೆಕಾಟ್ರಾನಿಕ್ಸ್, ತ್ರೀಡಿ ಪ್ರಿಂಟಿಂಗ್, ಡ್ರೋನ್ ಮತ್ತು ಇತರ ಸಾಫ್ಟ್ ಸ್ಕಿಲ್‌ಗಳಂತಹ ಹೊಸ-ಯುಗದ ಕೋರ್ಸ್‌ಗಳನ್ನು ಸಹ ಒದಗಿಸುತ್ತದೆ.

ಅಂತರರಾಷ್ಟ್ರೀಯ ಅವಕಾಶಗಳಿಗಾಗಿ ದೇಶದ ಯುವಜನತೆಯನ್ನು ಸಜ್ಜುಗೊಳಿಸಲು, ವಿವಿಧ ರಾಜ್ಯಗಳಲ್ಲಿ 30 ಕೌಶಲ ಕೇಂದ್ರಗಳನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ. ಮುಂದಿನ ಮೂರು ವರ್ಷಗಳಲ್ಲಿ 47 ಲಕ್ಷ ಯುವಕರಿಗೆ ಸ್ಟೈಫಂಡ್ ಬೆಂಬಲ ಒದಗಿಸುವ ಪ್ಯಾನ್-ಇಂಡಿಯಾ ರಾಷ್ಟ್ರೀಯ ಅಪ್ರೆಂಟಿಸ್‌ಶಿಪ್ ಪ್ರಚಾರ ಯೋಜನೆಯನ್ನು ಹೊರತರುವ ಕೇಂದ್ರದ ಯೋಜನೆಗಳನ್ನು ಸಚಿವರು ಹಂಚಿಕೊಂಡಿದ್ದಾರೆ.

ಇವೆಲ್ಲದರ ನಡುವೆಯೂ, ಭಾರತದಲ್ಲಿ ಮಹಿಳಾ ಮತ್ತು ಯುವ ಸಬಲೀಕರಣವು ಹಲವು ವಿಭಿನ್ನ ಅಂಶಗಳ ಮೇಲೆ ಅವಲಂಬಿತವಾಗಿದೆ. ಸಬಲೀಕರಣದ ನೀತಿಗಳು ರಾಷ್ಟ್ರೀಯ, ರಾಜ್ಯ ಮತ್ತು ಸ್ಥಳೀಯ (ಪಂಚಾಯಿತಿ) ಹಂತಗಳಲ್ಲಿ ಹಲವು ವಲಯಗಳಲ್ಲಿ ಅಸ್ತಿತ್ವದಲ್ಲಿವೆ. ಆದರೆ, ಸಮುದಾಯಮಟ್ಟದಲ್ಲಿ ನೀತಿ ಅನುಷ್ಠಾನ ಮತ್ತು ವಾಸ್ತವದ ನಡುವೆ ಗಮನಾರ್ಹ ಅಂತರಗಳಿವೆ. ಬಜೆಟ್ ಹೊಸ ಯೋಜನೆ ಗಳನ್ನು ಪರಿಚಯಿಸುವುದರ ಮೇಲೆ ಮಾತ್ರ ಗಮನಹರಿಸದೆ, ಫಲಾನುಭವಿಗಳಿಗೆ ತಲುಪುವಂತೆ ಯೋ ಜನೆಗಳ ಅನುಷ್ಠಾನದತ್ತ ಗಮನ ಹರಿಸುವುದು ಅವಶ್ಯಕವಾಗಿದೆ.

(ಲೇಖಕರು ಸಹ ಪ್ರಾಧ್ಯಾಪಕಿ, ಅರ್ಥಶಾಸ್ತ್ರ ವಿಭಾಗ, ಕ್ರೈಸ್ಟ್ ಯೂನಿವರ್ಸಿಟಿ, ಬೆಂಗಳೂರು)

ಶುದ್ಧ ಇಂಧನ: ದಿಟ್ಟ ಹೆಜ್ಜೆ

ನವದೆಹಲಿ: ವಾತಾವರಣಕ್ಕೆ ಸೇರುತ್ತಿರುವ ಇಂಗಾಲದ ಪ್ರಮಾಣವನ್ನು 2070ರೊಳಗೆ ಶೂನ್ಯಕ್ಕಿಳಿಸುವ ಗುರಿಯನ್ನು ದೇಶ ಹೊಂದಿದೆ. ಇದಕ್ಕಾಗಿ ದಿಟ್ಟ ಹೆಜ್ಜೆ ಇಟ್ಟಿದ್ದು, ಈ ಬಾರಿಯ ಬಜೆಟ್‌ನಲ್ಲಿ ಕೇಂದ್ರ ಸರ್ಕಾರವು, ಹಸಿರು ಇಂಧನ ಉತ್ಪಾದನೆಯ 'ಗ್ರೀನ್ ಗ್ರೋಥ್'ಗೆ ಹೆಚ್ಚಿನ ಆದ್ಯತೆ ನೀಡಿದೆ.

ಹಸಿರು ಇಂಧನ, ಹಸಿರು ವಿದ್ಯುತ್, ಹಸಿರು ಕೃಷಿ, ಹಸಿರು ಕಟ್ಟಡಗಳು ಮತ್ತು ಹಸಿರು ಉಪಕರಣಗಳು, ವಿವಿಧ ಆರ್ಥಿಕ ಕ್ಷೇತ್ರಗಳಲ್ಲಿ ಇಂಧನ ದಕ್ಷ ಬಳಕೆಯ ನೀತಿಗಳ ಅನುಷ್ಠಾನಕ್ಕಾಗಿ ಹಲವು ಯೋಜನೆಗಳನ್ನು ಜಾರಿಗೆ ತರಲಾಗುತ್ತಿದೆ. 'ಗ್ರೀನ್ ಗ್ರೋಥ್' ಪ್ರಯತ್ನಗಳು ಇಂಗಾಲದ ತೀವ್ರತೆ ತಗ್ಗಿಸಲಿವೆ. ಜತೆಗೆ ಹಸಿರು ಉದ್ಯೋಗಾವಕಾಶಗಳ ಸೃಷ್ಟಿ ಮತ್ತು ಆರ್ಥಿಕತೆಗೆ ದೊಡ್ಡ ಪ್ರಮಾಣದ ಕೊಡುಗೆ ನೀಡಲಿವೆ ಎನ್ನುವುದನ್ನು ಬಜೆಟ್‌ನಲ್ಲಿ ಪ್ರಮುಖವಾಗಿ ಪ್ರಸ್ತಾಪಿಸಲಾಗಿದೆ.

ಪ್ರಧಾನಿ ಮೋದಿ ಅವರ 'LiFE' ಅಥವಾ ಪರಿಸರಕ್ಕಾಗಿ ಜೀವನಶೈಲಿ (ಲೈಫ್‌ಸ್ಟೈಲ್ ಫಾರ್ ಎನ್ವಿರಾನ್‌ಮೆಂಟ್) ದೃಷ್ಟಿಕೋನವು ಪರಿಸರ ಪ್ರಜ್ಞೆಯ ಜೀವನಶೈಲಿ ರೂಢಿಸಿಕೊಳ್ಳಲು ಉತ್ತೇಜನ ನೀಡುತ್ತದೆ. ಹಸಿರು ಕೈಗಾರಿಕೆ ಮತ್ತು ಆರ್ಥಿಕ ಪರಿವರ್ತನೆಗೆ ಭಾರತ 2070ರ ವೇಳೆಗೆ ಶೂನ್ಯ ಇಂಗಾಲ ಹೊರಸೂಸುವಿಕೆಯ ಗುರಿ ಸಾಧಿಸಲು 'ಪಂಚಾಮೃತ' ಯೋಜನೆಗೆ ಆದ್ಯತೆ ನೀಡಿದೆ.

'ಗ್ರೀನ್ ಗ್ರೋಥ್'ನಲ್ಲಿ ಯಾವುದಕ್ಕೆ ಆದ್ಯತೆ

- ನ್ಯಾಷನಲ್ ಗ್ರೀನ್ ಹೈಡ್ರೋಜನ್ ಮಿಷನ್‌ನಡಿ 2030ರ ವೇಳೆಗೆ ವಾರ್ಷಿಕ 5 ಎಂಎಂಟಿ ಹಸಿರು ಇಂಧನ ಉತ್ಪಾದನೆ ಗುರಿ ಹೊಂದಲಾಗಿದೆ. ಇಂಗಾಲದ ತೀವ್ರತೆ, ಪಳೆಯುಳಿಕೆ ಇಂಧನ ಆಮದು ಅವಲಂಬನೆ ತಗ್ಗಿಸಲು ₹19,700 ಕೋಟಿ ಅನುದಾನ
- ಇಂಧನ ಪರಿವರ್ತನೆ, ಇಂಗಾಲ ಹೊರಸೂಸುವಿಕೆ ಶೂನ್ಯಕ್ಕಿಳಿಸುವುದು, ಇಂಧನ ಭದ್ರತೆಗಾಗಿ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಮೂಲಕ ₹35,000 ಕೋಟಿ ಆದ್ಯತೆಯ ಬಂಡವಾಳ ಹೂಡಿಕೆ
- ಸುಸ್ಥಿರ ಆರ್ಥಿಕಾಭಿವೃದ್ಧಿಗಾಗಿ 4,000 ಎಂಡಬ್ಲ್ಯುಎಚ್ ಸಾಮರ್ಥ್ಯದ ಬ್ಯಾಟರಿ ವಿದ್ಯುತ್ ಶೇಖರಣಾ ವ್ಯವಸ್ಥೆಗಳಿಗೆ ಬೆಂಬಲ
- ನವೀಕರಿಸಬಹುದಾದ 13 ಗಿಗಾ ವಾಟ್ ಇಂಧನ ಅಂತರರಾಜ್ಯ ಪ್ರಸರಣ ವ್ಯವಸ್ಥೆಯ ಗ್ರಿಡ್ ಲಡಾಖ್‌ನಲ್ಲಿ ಸ್ಥಾಪನೆ. ಇದಕ್ಕಾಗಿ ₹20,700 ಕೋಟಿ ಬಂಡವಾಳ ಹೂಡಿಕೆ, ಇದರಲ್ಲಿ ₹8,300 ಕೋಟಿ ಕೇಂದ್ರದ ಪಾಲು
- ಸುಸ್ಥಿರ ಪರಿಸರಕ್ಕಾಗಿ ಪರಿಸರ (ಸಂರಕ್ಷಣೆ) ಕಾಯ್ದೆಯಡಿ ಸ್ಥಳೀಯಾಡಳಿತ, ಕಂಪನಿಗಳು ಮತ್ತು ವ್ಯಕ್ತಿಗತವಾಗಿ ಹೆಚ್ಚುವರಿ ಸಂಪನ್ಮೂಲ ಕ್ರೋಡೀಕರಿಸಿ ಗ್ರೀನ್ ಕ್ರೆಡಿಟ್ ಪ್ರೋಗ್ರಾಂ ಅನುಷ್ಠಾನ
- ಜೈವಿಕ ಅನಿಲ/ಸಿಎನ್‌ಜಿಗೆ ಹಾಕಿರುವ ಜಿಎಸ್‌ಟಿಗೆ ಸಮಾನವಾಗಿ, ಹಸಿರು ಇಂಧನ ಉತ್ತೇಜಿಸಲು ಬ್ಲೆಂಡೆಡ್ ಕಂಪ್ರೆಸ್ಡ್ ನೈಸರ್ಗಿಕ ಅನಿಲದ ಮೇಲೆ ಕೇಂದ್ರ ಅಬಕಾರಿ ತೆರಿಗೆ ವಿನಾಯಿತಿ ಇಂದಿನಿಂದಲೇ (ಫೆ.2) ಜಾರಿ

'ಮಿಷನ್ ಟು ಸಿಕಲ್ ಸೆಲ್ ಅನೀಮಿಯಾ'

ದೇಶದಲ್ಲಿ 2047ರ ಒಳಗೆ ರಕ್ತಹೀನತೆ ಕಾಯಿಲೆ ನಿರ್ಮೂಲನೆಗೆ 'ಮಿಷನ್ ಟು ಸಿಕಲ್ ಸೆಲ್ ಅನೀಮಿಯಾ' ಯೋಜನೆಯನ್ನು ಬಜೆಟ್‌ನಲ್ಲಿ ಘೋಷಿಸಲಾಗಿದೆ. ಈ ಯೋಜನೆಯಡಿ, ರಕ್ತಹೀನತೆ ಕಾಯಿಲೆ ಪೀಡಿತ ಗಿರಿಜನ ಪ್ರದೇಶಗಳಲ್ಲಿ 40 ವರ್ಷದವರೆಗಿನ ಒಟ್ಟು 7 ಕೋಟಿ ಜನರನ್ನು ತಪಾಸಣೆ ನಡೆಸುವ ಮತ್ತು ಜಾಗೃತಿ ಮೂಡಿಸುವ ಗುರಿ ಇದೆ. ಅಲ್ಲದೆ, ಈ ಬಾರಿ ಆರೋಗ್ಯ ವಲಯಕ್ಕೆ ಕಳೆದ ಬಾರಿಗಿಂತ (₹79,145 ಕೋಟಿ) ಶೇ 13ರಷ್ಟು ಅನುದಾನ ಹೆಚ್ಚಿಸಿದ್ದು, ಇದರಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ₹86,175 ಕೋಟಿ, ಆರೋಗ್ಯ ಸಂಶೋಧನಾ ಇಲಾಖೆಗೆ ₹2,980 ಕೋಟಿ ಹಂಚಿಕೆ ಮಾಡಲಾಗಿದೆ. ಆಯುಷ್ ಸಚಿವಾಲಯಕ್ಕೆ ಈ ಬಾರಿ ಶೇ 28ರಷ್ಟು ಅನುದಾನ ಹೆಚ್ಚಿಸಲಾಗಿದೆ

ಫಾರ್ಮಾ ಇನೊವೇಶನ್

ಜಂಟಿ ಸಂಶೋಧನೆ ಮತ್ತು ಆವಿಷ್ಕಾರಗಳನ್ನು ಉತ್ತೇಜಿಸಲು ಸಾರ್ವಜನಿಕ ಮತ್ತು ಖಾಸಗಿ ವೈದ್ಯಕೀಯ ಕಾಲೇಜುಗಳ ಅಧ್ಯಾಪಕರು, ಖಾಸಗಿ ವಲಯದ ಸಂಶೋಧಕರು ಮತ್ತು ಅಭಿವೃದ್ಧಿ ತಂಡಗಳಿಗೆ ಸಂಶೋಧನೆಗೆ ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯ (ಐಸಿಎಂಆರ್) ಆಯ್ದ ಪ್ರಯೋಗಾಲಯಗಳಲ್ಲಿ ಸೌಲಭ್ಯಗಳು ಲಭ್ಯವಾಗಲಿವೆ. ಔಷಧ ಕ್ಷೇತ್ರದಲ್ಲಿ ಸಂಶೋಧನೆ ಮತ್ತು ನಾವೀನ್ಯತೆಯನ್ನು ಉತ್ತೇಜಿಸಲು ಈ ಯೋಜನೆಯನ್ನು ಘೋಷಿಸಲಾಗಿದೆ. ಇದು ನಿರ್ದಿಷ್ಟವಾಗಿ ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ಹೂಡಿಕೆ ಮಾಡಲು ಉದ್ಯಮಗಳನ್ನು ಪ್ರೋತ್ಸಾಹಿಸಲಿದೆ.

50 ವಿಮಾನ ನಿಲ್ದಾಣ ಪುನಶ್ಚೇತನ

ದೇಶದಲ್ಲಿ ಪ್ರಾದೇಶಿಕ ವಾಯು ಸಂಪರ್ಕ ಸುಧಾರಿಸಲು 50 ಹೆಚ್ಚುವರಿ ವಿಮಾನ ನಿಲ್ದಾಣಗಳು, ಹೆಲಿಪೋರ್ಟ್‌ಗಳು, ವಾಟರ್ ಏರೋಡ್ರೋಮ್‌ಗಳನ್ನು ಪುನಶ್ಚೇತನಗೊಳಿಸಲಾಗುವುದು ಎಂದು ಸರ್ಕಾರ ತಿಳಿಸಿದೆ. ಕೆಲ ವರ್ಷಗಳಿಂದ ಪ್ರಾದೇಶಿಕ ವಾಯು ಸಂಪರ್ಕ ಹೆಚ್ಚಿಸಲು ಸರ್ಕಾರ ವಿವಿಧ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಅಲ್ಲದೇ ಬಂದರುಗಳು, ಕಲ್ಲಿದ್ದಲು, ಉಕ್ಕು, ರಸಗೊಬ್ಬರ ಮತ್ತು ಆಹಾರ ಧಾನ್ಯ ವಲಯಗಳ ಸಂಪರ್ಕಕ್ಕಾಗಿ 100 ಸಾರಿಗೆ ಮೂಲಸೌಕರ್ಯ ಯೋಜನೆಗಳನ್ನು ಗುರುತಿಸಲಾಗಿದೆ. ಖಾಸಗಿ ಮೂಲಗಳಿಂದ ₹15,000 ಕೋಟಿ ಸೇರಿದಂತೆ ₹75,000 ಕೋಟಿ ಹೂಡಿಕೆಯೊಂದಿಗೆ ಅವುಗಳನ್ನು ಆದ್ಯತೆಯ ಮೇರೆಗೆ ಕೈಗೊಳ್ಳಲಾಗುವುದು. ಬಜೆಟ್‌ನಲ್ಲಿ ವಿಮಾನಯಾನ, ರೈಲ್ವೆ ಮತ್ತು ಹೆದ್ದಾರಿ ಸೇರಿ ಸಾರಿಗೆ ವಲಯಕ್ಕೆ ₹5.17ಲಕ್ಷ ಕೋಟಿ ಅನುದಾನ ಹಂಚಿಕೆ ಮಾಡಲಾಗಿದೆ.

ವಿಶ್ವಕರ್ಮ ಕೌಶಲ ಸಮ್ಮಾನ್

ಶತಮಾನಗಳಿಂದಲೂ ಸಾಂಪ್ರದಾಯಿಕವಾಗಿ ಕರಕುಶಲ ವಸ್ತುಗಳನ್ನು ತಯಾರಿಸುತ್ತಿರುವ ಕುಶಲಕರ್ಮಿಗಳಿಗೆ ತಮ್ಮ ಉತ್ಪನ್ನಗಳ ಗುಣಮಟ್ಟ ಸುಧಾರಿಸಲು, ಕೆಲಸದ ವ್ಯಾಪ್ತಿಯನ್ನು ಹೆಚ್ಚಿಸಲು ಪಿ.ಎಂ ವಿಶ್ವಕರ್ಮ ಕೌಶಲ ಸಮ್ಮಾನ್ ಯೋಜನೆಯನ್ನು ಪರಿಚಯಿಸಲಾಗಿದೆ. ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ (ಎಂಎಸ್‌ಎಂಇ) ಸರಪಳಿಯೊಂದಿಗೆ ಕುಶಲಕರ್ಮಿಗಳನ್ನು ಸಂಯೋಜಿಸುವ ಗುರಿಯನ್ನು ಈ ಯೋಜನೆ ಹೊಂದಿದೆ. ಯೋಜನೆಯು ಕುಶಲಕರ್ಮಿಗಳಿಗೆ ಹಣಕಾಸಿನ ನೆರವು ಮಾತ್ರವಲ್ಲ ಸುಧಾರಿತ ಕೌಶಲ ತರಬೇತಿ, ಆಧುನಿಕ ಜ್ಞಾನ, ಸ್ಥಳೀಯ ಮತ್ತು ಜಾಗತಿಕ ಮಾರುಕಟ್ಟೆಗಳೊಂದಿಗೆ ಸಂಪರ್ಕ, ಡಿಜಿಟಲ್ ಪಾವತಿಗಳು, ಸಾಮಾಜಿಕ ಭದ್ರತೆ ಒದಗಿಸಲಿದೆ . ಇದರಿಂದ ಪರಿಶಿಷ್ಟ ಜಾತಿ, ಪಂಗಡಗಳು, ಒಬಿಸಿ, ಮಹಿಳೆಯರು ಮತ್ತು ದುರ್ಬಲರಿಗೆ ಪ್ರಯೋಜನವಾಗಲಿದೆ.

ಮಹಿಳಾ ಅಭಿವೃದ್ಧಿಗೆ ಅನುದಾನ ಹೆಚ್ಚಳ

ಬಜೆಟ್‌ನಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯಕ್ಕೆ ₹25,448.75 ಕೋಟಿ ಅನುದಾನವನ್ನು ಮೀಸಲಿಡಲಾಗಿದೆ. ಈ ಪೈಕಿ ಸಕ್ಷಮ್ ಅಂಗನವಾಡಿ ಮತ್ತು ಪೋಷಣ್ 2.0 ಯೋಜನೆಗಳಿಗೆ ₹20, 554.31 ಕೋಟಿ ಮೀಸಲಿಡಲಾಗಿದೆ. ವಾತ್ಸಲ್ಯ ಯೋಜನೆಗೆ ₹1,472 ಕೋಟಿ ಮತ್ತು ಮಿಷನ್ ಶಕ್ತಿ ಯೋಜನೆಗೆ ₹3,143 ಕೋಟಿ ಅನುದಾನ ನೀಡಲಾಗಿದೆ. 2022–23ನೇ ಸಾಲಿನಲ್ಲಿ ಸಚಿವಾಲಯಕ್ಕೆ ₹25,172 ಕೋಟಿ ಅನುದಾನ ಮೀಸಲಿಡಲಾಗಿತ್ತು. ಇದಕ್ಕೆ ಹೋಲಿಸಿದರೆ 2023–24ನೇ ಸಾಲಿನಲ್ಲಿ ಹೆಚ್ಚುವರಿ ₹267 ಕೋಟಿ ಅನುದಾನ ಒದಗಿಸಲಾಗಿದೆ.

ಪಿಎಂಎಸ್‌ಎಸ್‌ವೈ 2 ಉಪ ಯೋಜನೆಗಳಾಗಿ ವಿಂಗಡಣೆ

ಪ್ರಧಾನ್ ಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆಯನ್ನು (ಪಿಎಂಎಸ್‌ಎಸ್‌ವೈ) ಹೊಸ ಹಣಕಾಸು ವರ್ಷದಿಂದ ಜಾರಿಗೆ ಬರುವಂತೆ ಎರಡು ಉಪ ಯೋಜನೆಗಳಾಗಿ ವಿಭಜಿಸಲಾಗಿದೆ. ಮೊದಲನೆಯದು ಪಿಎಂಎಸ್‌ಎಸ್‌ವೈ; ಇದಕ್ಕೆ ₹3,365 ಕೋಟಿ ಅನುದಾನ, ಎರಡನೆಯದು 22 ಹೊಸ ಎಐಐಎಂಎಸ್ (ಏಮ್ಸ್) ಸ್ಥಾಪನಾ ವೆಚ್ಚದ ಯೋಜನೆ; ಇದಕ್ಕಾಗಿ ₹6,835 ಕೋಟಿ ಅನುದಾನ ಹಂಚಿಕೆಯಾಗಿದೆ. ನ್ಯಾಷನಲ್ ಹೆಲ್ತ್ ಮಿಷನ್‌ಗೆ ₹29,085.26 ಕೋಟಿ, ಪ್ರಧಾನ್ ಮಂತ್ರಿ ಜನ್ ಆರೋಗ್ಯ ಯೋಜನೆಗೆ (ಪಿಎಂ–ಜೆಎವೈ) ₹7,200 ಕೋಟಿ, ನ್ಯಾಷನಲ್ ಹೆಲ್ತ್ ಡಿಜಿಟಲ್ ಮಿಷನ್‌ಗೆ ₹341.02 ಕೋಟಿ, ನ್ಯಾಷನಲ್ ಟೆಲಿ ಮೆಂಟಲ್ ಹೆಲ್ತ್ ಪ್ರೋಗ್ರಾಮ್‌ಗೆ ₹133.73 ಕೋಟಿ, ಆರೋಗ್ಯ ವಲಯದ ಸ್ವಾಯತ್ತ ಸಂಸ್ಥೆಗಳಿಗೆ ₹17,322.55 ಕೋಟಿ ಅನುದಾನ ಹಂಚಿಕೆಯಾಗಿದೆ.

₹89,155 ಕೋಟಿ
ಆರೋಗ್ಯವಲಯಕ್ಕೆ ಅನುದಾನ

₹3,647.50 ಕೋಟಿ
ಆಯುಷ್ ವಲಯಕ್ಕೆ ಅನುದಾನ

₹2,359.58 ಕೋಟಿ
ಐಸಿಎಂಆರ್‌ಗೆ ಮೀಸಲಿಟ್ಟ ಅನುದಾನ

ಮಹಿಳೆಯರಿಗೆ ಹೊಸ ಉಳಿತಾಯ ಯೋಜನೆ

ನವದೆಹಲಿ: ಎರಡು ವರ್ಷಗಳ ಕಾಲ ಶೇ 7.5ರಷ್ಟು ಸ್ಥಿರ ಬಡ್ಡಿಯೊಂದಿಗೆ ಮಹಿಳೆಯರಿಗಾಗಿ 'ಮಹಿಳಾ ಸಮ್ಮಾನ್ ಉಳಿತಾಯ ಪ್ರಮಾಣಪತ್ರ' ಎನ್ನುವ ಹೊಸ ಉಳಿತಾಯ ಯೋಜನೆಯನ್ನು ಕೇಂದ್ರ ಸರ್ಕಾರ ಬಜೆಟ್‌ನಲ್ಲಿ ಘೋಷಿಸಿದೆ.

ಸ್ವಾತಂತ್ರ್ಯದ ಅಮೃತ ಮಹೋತ್ಸವ ನೆನಪಿಗಾಗಿ ಈ ಯೋಜನೆಯನ್ನು ಮಹಿಳೆಯರಿಗೆ ಕೊಡುಗೆ ರೂಪದಲ್ಲಿ ನೀಡಲಾಗಿದೆ. ಒಂದು ಅವಧಿ ಮಾತ್ರ ಇರುವ ಯೋಜನೆ (2023–2025) ಅಡಿಯಲ್ಲಿ ಮಹಿಳೆ ಅಥವಾ ಹೆಣ್ಣು ಮಗುವಿನ ಹೆಸರಿನಲ್ಲಿ ಗರಿಷ್ಠ ₹ 2 ಲಕ್ಷ ಮೊತ್ತದ ಹಣವನ್ನು ಠೇವಣಿಯಾಗಿ ಇರಿಸಬಹುದು. ಭಾಗಶಃ ಹಿಂಪಡೆಯುವ ಸೌಲಭ್ಯವೂ ಯೋಜನೆಯಲ್ಲಿದೆ.

'ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ ದೀನ್‌ದಯಾಳ್ ಅಂತ್ಯೋದಯ ಯೋಜನೆ, ರಾಷ್ಟ್ರೀಯ ಜೀವನೋಪಾಯ ಮಿಷನ್ ಅಡಿ ಯಲ್ಲಿ 81 ಲಕ್ಷ ಸ್ವ-ಸಹಾಯ ಮಹಿಳಾ ಗುಂಪುಗಳನ್ನು ರಚಿಸಲಾಗಿದೆ. ಹಲವು ಸಾವಿರ ಸದಸ್ಯರನ್ನು ಹೊಂದಿರುವ ದೊಡ್ಡ ಉತ್ಪಾದಕ ಉದ್ಯಮಗಳು ಅಥವಾ ಸಮೂಹಗಳ ರಚನೆಯ ಮೂಲಕ ಈ ಗುಂಪುಗಳನ್ನು ಆರ್ಥಿಕ ಸಬಲೀಕರಣದ ಮುಂದಿನ ಹಂತ ತಲುಪಲು ಸಕ್ರಿಯಗೊಳಿಸಲಾಗುವುದು' ಎಂದು ತಿಳಿಸಿದೆ.

'ಪಿಎಂ-ಕಿಸಾನ್ ಸಮ್ಮಾನ್ ನಿಧಿ ಅಡಿಯಲ್ಲಿ ಸಣ್ಣ ರೈತರಿಗೆ ₹ 2.25 ಲಕ್ಷ ಕೋಟಿಗೂ ಹೆಚ್ಚು ಆರ್ಥಿಕ ನೆರವು ನೀಡಲಾಗಿದೆ. ಈ ಯೋಜನೆಯಡಿ ಸುಮಾರು 3 ಕೋಟಿ ರೈತ ಮಹಿಳೆಯರಿಗೆ ₹ 54 ಸಾವಿರ ಕೋಟಿ ಒದಗಿಸಲಾಗಿದೆ' ಎಂದೂ ತಿಳಿಸಿದೆ.

ಕೇಂದ್ರ ಬಜೆಟ್ 2023-24

ಆನ್‌ಲೈನ್ ಆಟ: ಗಳಿಕೆಗೆ ಶೇ 30 ತೆರಿಗೆ

ನವದೆಹಲಿ (ಪಿಟಿಐ): ಆನ್‌ಲೈನ್ ಆಟಗಳಲ್ಲಿ ಗೆಲುವು ಸಾಧಿಸಿದವರಿಗೆ ಸಿಗುವ ಮೊತ್ತಕ್ಕೆ ಶೇಕಡ 30ರಷ್ಟು ತೆರಿಗೆ ವಿಧಿಸುವ ಪ್ರಸ್ತಾವನೆಯು 2023-24ನೇ ಸಾಲಿನ ಕೇಂದ್ರ ಬಜೆಟ್‌ನಲ್ಲಿದೆ. ಅಲ್ಲದೆ, ಈಗ ಚಾಲ್ತಿಯಲ್ಲಿ ಇರುವ ಮಿತಿಯಾಗಿರುವ ₹ 10 ಸಾವಿರವನ್ನು ತೆಗೆದುಹಾಕುವ ಪ್ರಸ್ತಾವ ಕೂಡ ಇದೆ.

ಆನ್‌ಲೈನ್ ಆಟಗಳಿಗೆ ಸಂಬಂಧಿಸಿದ, ಮೂಲದಲ್ಲಿ ತೆರಿಗೆ ಕಡಿತದ (ಟಿಡಿಎಸ್) ನಿಯಮಗಳಲ್ಲಿ ಎರಡು ಹೊಸ ಅಂಶಗಳನ್ನು ಸೇರಿಸುವ ಪ್ರಸ್ತಾವವು ಬಜೆಟ್‌ನಲ್ಲಿ ಇದೆ. ಹಣಕಾಸು ವರ್ಷವೊಂದರಲ್ಲಿ ಆನ್‌ಲೈನ್ ಆಟದಲ್ಲಿ ಗೆಲ್ಲುವ ಮೂಲಕ ಪಡೆಯುವ ಹಣಕ್ಕೆ ಶೇ 30ರಷ್ಟು ತೆರಿಗೆ ಹಾಗೂ ಈಗ ತೆರಿಗೆಗೆ ಪರಿಗಣಿಸುವ ₹ 10 ಸಾವಿರದ ಮಿತಿಯನ್ನು ತೆಗೆಯಲಾಗುವುದು ಎಂದು ಈ ಪ್ರಸ್ತಾವನೆಗಳು ಹೇಳುತ್ತವೆ.

ಆಟ ಆಡಿದವರು ತಮ್ಮ ಖಾತೆಯಿಂದ ಹಣವನ್ನು ಹಿಂಪಡೆಯದೆ ಇದ್ದರೆ, ಹಣಕಾಸು ವರ್ಷದ ಕೊನೆಯಲ್ಲಿ ಟಿಡಿಎಸ್ ಕಡಿತ ಮಾಡಲಾಗುತ್ತದೆ.

'ಆನ್‌ಲೈನ್ ಆಟದ ಸೇವೆ ಒದಗಿಸುವ ಕೆಲವು ಕಂಪನಿಗಳು ಗೆದ್ದವರಿಗೆ ನೀಡುವ ಮೊತ್ತವನ್ನು ₹ 10 ಸಾವಿರಕ್ಕಿಂತ ಕಡಿಮೆ ಇರಿಸುತ್ತಿದ್ದುದು ಗಮನಕ್ಕೆ ಬಂದಿತ್ತು. ಹಾಗೆ ಮಾಡುವ ಮೂಲಕ ಅವು ಈ ಮೊತ್ತವನ್ನು ಟಿಡಿಎಸ್ ವ್ಯಾಪ್ತಿಯಿಂದ ಹೊರಕ್ಕೆ ಇರಿಸುತ್ತಿದ್ದವು. ಹೀಗಾಗಿ ಈ ಮಿತಿಯನ್ನು ತೆಗೆಯುವ ತೀರ್ಮಾನ ಮಾಡಲಾಗಿದೆ' ಎಂದು ಕೇಂದ್ರ ರೆವಿನ್ಯು ಕಾರ್ಯದರ್ಶಿ ಸಂಜಯ್ ಮಲ್ಹೋತ್ರ ಅವರು ಬಜೆಟ್ ಮಂಡನೆ ನಂತರ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಆನ್‌ಲೈನ್ ಆಟಗಳ ಉದ್ಯಮವು ಭಾರತದಲ್ಲಿ ಭಾರಿ ಪ್ರಮಾಣದಲ್ಲಿ ಬೆಳೆದಿದೆ. 2025ರ ಸುಮಾರಿಗೆ ಈ ಉದ್ಯಮದ ವಹಿವಾಟು ಮೊತ್ತವು ₹ 40 ಸಾವಿರ ಕೋಟಿಗೆ ತಲುಪುವ ಅಂದಾಜು ಇದೆ. ಆನ್‌ಲೈನ್ ಆಟಗಳಿಗೆ ಸರಕು ಮತ್ತು ಸೇವಾ ತೆರಿಗೆ ವ್ಯವಸ್ಥೆ (ಜಿಎಸ್‌ಟಿ) ಅಡಿಯಲ್ಲಿ ತೆರಿಗೆ ವಿಧಿಸುವುದು ಹಾಗೂ ಆದಾಯ ತೆರಿಗೆ ವಿಧಿಸುವುದು ಸರ್ಕಾರಗಳ ಮಟ್ಟದಲ್ಲಿ ಪರಿಶೀಲನೆಗೆ ಕೂಡ ಒಳಗಾಗಿದೆ ಎಂದು ತೆರಿಗೆ ತಜ್ಞ ಸುದಿನ್ ಸಬ್ನಿಸ್ ಹೇಳಿದ್ದಾರೆ.

'ಈಗ ಇಂತಹ ಆಟಗಳ ಮೂಲಕ ಗೆದ್ದುಕೊಂಡ ಮೊತ್ತಕ್ಕೆ ತೆರಿಗೆಯನ್ನು ಕಡಿತ ಮಾಡುವ ಪ್ರಸ್ತಾವನೆಯು ಬಜೆಟ್‌ನಲ್ಲಿ ಇದೆ' ಎಂದು ಅವರು ವಿವರಿಸಿದ್ದಾರೆ.

ಚಿನ್ನ: ಬಂಡವಾಳ ವೃದ್ಧಿ ತೆರಿಗೆ ವಿನಾಯಿತಿ

ಭೌತಿಕ ಚಿನ್ನವನ್ನು ಎಲೆಕ್ಟ್ರಾನಿಕ್ ರೂಪಕ್ಕೆ ಪರಿವರ್ತಿಸಿಕೊಂಡರೆ ಅದಕ್ಕೆ ಬಂಡವಾಳ ವೃದ್ಧಿ ತೆರಿಗೆ ಪಾವತಿ ಮಾಡಬೇಕಿಲ್ಲ ಎಂದು ಕೇಂದ್ರ ಹೇಳಿದೆ.

'ಭೌತಿಕ ಚಿನ್ನವನ್ನು ಎಲೆಕ್ಟ್ರಾನಿಕ್ ಗೋಲ್ಡ್ ರಿಸಿಪ್ಟ್ (ಇಜಿಆರ್) ಆಗಿ ಪರಿವರ್ತಿಸಿಕೊಂಡರೆ ಅಥವಾ ಇಜಿಆರ್ ಅನ್ನು ಭೌತಿಕ ಚಿನ್ನವನ್ನಾಗಿ ಪರಿವರ್ತಿಸಿಕೊಂಡರೆ ಅದಕ್ಕೆ ಬಂಡವಾಳ ವೃದ್ಧಿ ತೆರಿಗೆ ಅನ್ವಯವಾಗುವುದಿಲ್ಲ' ಎಂದು ಬಜೆಟ್‌ನಲ್ಲಿ ಹೇಳಲಾಗಿದೆ.

ಇದರಿಂದಾಗಿ ಡಿಜಿಟಲ್ ಚಿನ್ನದ ಮೇಲಿನ ಹೂಡಿಕೆಗೆ ಉತ್ತೇಜನ ಸಿಗುತ್ತದೆ ಎಂದು ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ಇಜಿಆರ್ ಅನ್ನು ಡಿ-ಮ್ಯಾಟ್ ಖಾತೆಗಳಲ್ಲಿ ಇರಿಸಿಕೊಳ್ಳಬಹುದು. ಇಜಿಆರ್ ಖರೀದಿ ಹಾಗೂ ಮಾರಾಟ ಮೊದಲು ಆರಂಭವಾಗಿದ್ದು ಮುಂಬೈ ಷೇರುಪೇಟೆಯಲ್ಲಿ.



ಎಂಎಸ್‌ಎಂಇಗಳಿಗೆ ಸಾಲ ಖಾತರಿ ಯೋಜನೆ ನವೀಕರಿಸಿರುವುದು ಸ್ವಾಗತಾರ್ಹ. ಆದರೆ, ಉದ್ಯೋಗ ಸೃಷ್ಟಿಯಲ್ಲಿ ಪ್ರಮುಖ ಪಾತ್ರ ವಹಿಸುವ ಉದ್ಯಮಕ್ಕೆ ಇನ್ನೂ ಹೆಚ್ಚಿನ ನೆರವಿನ ಅಗತ್ಯ ಇದೆ. ಬಂಡವಾಳ ಕೊರತೆಯಿಂದ ಬಳಲುತ್ತಿರುವ ಉದ್ಯಮಕ್ಕೆ ಕೈಗೆಟಕುವ ದರದಲ್ಲಿ ಮೇಲಾಧಾರ ರಹಿತ ಸಾಲ ಪಡೆಯಲು ಅವಕಾಶ ಕಲ್ಪಿಸಬಹುದಿತ್ತು. ಎಂಎಸ್‌ಎಂಇಗಳಿಗೆ ಡಿಜಿ ಲಾಕರ್ ವ್ಯವಸ್ಥೆಯ ವಿಸ್ತರಣೆ ಮತ್ತು 42 ಕಾನೂನುಗಳಿಗೆ ತಿದ್ದುಪಡಿ ಮಾಡುವ ಜನ್ ವಿಶ್ವಾಸ್ ಮಸೂದೆಯ ಪ್ರಸ್ತಾವವು ಉದ್ಯಮಕ್ಕೆ ಅನುಕೂಲ ಮಾಡಿಕೊಡಲಿದೆ

ಕೆ.ಎನ್. ನರಸಿಂಹಮೂರ್ತಿ, ಕಾಸಿಯಾ ಅಧ್ಯಕ್ಷ

ಸಿರಿಧಾನ್ಯ ಆಧಾರಿತ ಉತ್ಪನ್ನಗಳಿಗೆ ಸರ್ಕಾರ ಬೆಂಬಲ ನೀಡಿದೆ. ಆದರ ಜೊತೆಗೆ ಸಿರಿಧಾನ್ಯ ಆಧಾರಿತ ಉತ್ಪನ್ನಗಳಿಗೆ ಸಂಬಂಧಿಸಿದ ಪೂರಕ ಕೈಗಾರಿಕೆಗಳನ್ನೂ ಬೆಂಬಲಿಸಬೇಕು. ರಾಜ್ಯ ರಾಜಧಾನಿ ಅಥವಾ ಪ್ರವಾಸಿ ತಾಣದಲ್ಲಿ ಏಕತಾ ಮಾಲ್ ಸ್ಥಾಪನೆ, ಗಡಿ ಗ್ರಾಮಗಳಲ್ಲಿ ಪ್ರವಾಸೋದ್ಯಮ ಕೇಂದ್ರಗಳ ಸ್ಥಾಪನೆಗೆ ನಿರ್ಧರಿಸಲಾಗಿದೆ. ಇದರಿಂದ ಪ್ರವಾಸೋದ್ಯಮಕ್ಕೆ ಬೆಂಬಲ ಸಿಗಲಿದೆ. ವ್ಯಾಪಾರ ನಡೆಸುವುದನ್ನು ಇನ್ನಷ್ಟು ಸುಲಭಗೊಳಿಸಲು ಕೆಲವೊಂದು ಅಂಗೀಕಾರಗಳನ್ನು ತೆಗೆದುಹಾಕುತ್ತಿರುವುದು ಉತ್ತಮ ಕ್ರಮ

ಬಿ.ವಿ. ಗೋಪಾಲ್ ರೆಡ್ಡಿ, ಎಫ್‌ಕೆಸಿಸಿಐ ಅಧ್ಯಕ್ಷ

ಬಂಡವಾಳ ವೆಚ್ಚ ಹೆಚ್ಚು ಮಾಡಿರುವುದು ಅರ್ಥ ವ್ಯವಸ್ಥೆಯಲ್ಲಿ ಬೆಳವಣಿಗೆಗೆ ಇಂಬು ಕೊಡಲಿದೆ. ಇದರಿಂದ ಆಟೊಮೊಬೈಲ್ ಉದ್ಯಮದ ಮೇಲೆ ಒಳ್ಳೆಯ ಪರಿಣಾಮ ಆಗಲಿದೆ. ವೈಯಕ್ತಿಕ ತೆರಿಗೆ ವಿನಾಯಿತಿಯನ್ನು ಹೆಚ್ಚಿಸಿ ಜನರ ಕೈಯಲ್ಲಿ ಇನ್ನಷ್ಟು ಹಣ ಇರುವಂತೆ ಮಾಡಿರುವುದರ ಪರಿಣಾಮವಾಗಿ ಮಾರುಕಟ್ಟೆಯಲ್ಲಿ ಖರೀದಿ ಹೆಚ್ಚಲಿದೆ, ಬೇಡಿಕೆಯೂ ಹೆಚ್ಚಾಗಲಿದೆ.

ವಿನೋದ್ ಅಗರ್ವಾಲ್, ಅಧ್ಯಕ್ಷ, ಭಾರತೀಯ ಆಟೊಮೊಬೈಲ್ ತಯಾರಕರ ಸಂಘ

ಇದು ಪ್ರಗತಿಪರ ಹಾಗೂ ಬೆಳವಣಿಗೆ ಆಧಾರಿತ ಬಜೆಟ್. ರೈತರು, ಯುವಕರು, ಮಹಿಳೆಯರು ಮತ್ತು ತಳವರ್ಗದ ಜನರಲ್ಲಿ ಪರಿವರ್ತನೆ ತರುವಂತೆ ಇದೆ ಈ ಬಜೆಟ್. ಕೃಷಿ ವಲಯದಲ್ಲಿ ನವೋದ್ಯಮಗಳಿಗೆ ಉತ್ತೇಜನ, ಕೃಷಿಗೆ ಸಾಲ ನೀಡುವ ಗುರಿಯನ್ನು ಹೆಚ್ಚಿಸಿರುವುದು ಗ್ರಾಮೀಣ ಅರ್ಥ ವ್ಯವಸ್ಥೆಗೆ ಪೂರಕವಾಗಿವೆ. ಬಂಡವಾಳ ವೆಚ್ಚ ಏರಿಕೆ, ಭೌತಿಕ, ಡಿಜಿಟಲ್ ಹಾಗೂ ಸಾಮಾಜಿಕ ಮೂಲಸೌಕರ್ಯಕ್ಕೆ ಹೆಚ್ಚಿನ ಗಮನ, ಪ್ರವಾಸೋದ್ಯಮಕ್ಕೆ ಒತ್ತು... ಇವೆಲ್ಲ ವಿಕಾಸ ಹೊಂದಿದ ಭಾರತ ನಿರ್ಮಾಣಕ್ಕೆ ಕೊಡುಗೆ ನೀಡಲಿವೆ.

ಸಂಜೀವ್ ಪುರಿ, ಅಧ್ಯಕ್ಷ, ಐಟಿಸಿ ಲಿಮಿಟೆಡ್

ರೂಪಾಯಿ ಜಮೆ ಮತ್ತು ವೆಚ್ಚ (ಪೈಸೆಗಳಲ್ಲಿ)



ಆದಾಯ ತೆರಿಗೆ ಇಳಿಕೆ ತಂತ್ರ, ಮತ ಗಳಿಕೆಯ ಮಂತ್ರ

ವಿಶ್ಲೇಷಣೆ

ಪ್ರಮೋದ ಶ್ರೀಕಾಂತ ದೈತೋಟ

ಹಿಂದೆಯೇ ಜಾರಿಗೆ ಬಂದಿರುವ 'ಹೊಸ ತೆರಿಗೆ ದರ ಪದ್ಧತಿ'ಯನ್ನು ಆದಾಯ ತೆರಿಗೆ ಪಾವತಿಸುವ ಇನ್ನಷ್ಟು ಮಂದಿ ಆಯ್ಕೆ ಮಾಡಿಕೊಳ್ಳಲಿ ಎಂಬ ಉದ್ದೇಶದಿಂದ ಮೂಲ ತೆರಿಗೆಯ ಗರಿಷ್ಠ ಆದಾಯ ವಿನಾಯಿತಿ ಮೊತ್ತವನ್ನು ಈ ಬಾರಿ ₹ 2.50 ಲಕ್ಷದಿಂದ ₹ 3.00 ಲಕ್ಷಕ್ಕೆ ಹೆಚ್ಚು ಮಾಡಲಾಗಿದೆ. ಹೊಸ ತೆರಿಗೆ ದರ ಪದ್ಧತಿ ಆಯ್ಕೆ ಮಾಡಿಕೊಂಡವರಿಗೆ ಇದು ಬಹಳಷ್ಟು ಪ್ರಯೋಜನ ನೀಡಲಿದೆ. ಗರಿಷ್ಠ ತೆರಿಗೆ ದರ ಶೇಕಡ 30 ಆಗಿರುವುದರಿಂದ, ಹೆಚ್ಚೆಂದರೆ ₹ 15,000ದಷ್ಟು ಮೂಲ ತೆರಿಗೆಯನ್ನು ಉಳಿಸುವ ಅವಕಾಶವಿದೆ.

ಆದಾಯ ತೆರಿಗೆ ಪಾವತಿದಾರರ ಪಾಲಿಗೆ, ಹೊಸ ತೆರಿಗೆ ದರ ಪದ್ಧತಿಯು ಇನ್ನು ಮುಂದೆ ಸಹಜವಾಗಿ ಅನ್ವಯವಾಗಲಿದೆ. ಅಂದರೆ, ನೀವು ಉದ್ಯೋಗ ಮಾಡುವ ಸಂಸ್ಥೆ ಅಥವಾ ಕಂಪನಿಗೆ ನಿಮ್ಮ ಆಯ್ಕೆಯ ತೆರಿಗೆ ಪದ್ಧತಿಯನ್ನು (ಹಳೆಯದೋ ಅಥವಾ ಹೊಸದೋ ಎಂಬುದನ್ನು) ಮೊದಲೇ ತಿಳಿಸದೆ ಇದ್ದಲ್ಲಿ ಅವರು ಹೊಸ ಆದಾಯ ತೆರಿಗೆ ದರ ಪದ್ಧತಿಯನ್ನೇ ನಿಮ್ಮ ಆಯ್ಕೆ ಎಂದು ತಿಳಿದುಕೊಂಡು ಅದಕ್ಕೆ ಅನುಗುಣವಾಗಿ ನಿಮ್ಮ ಆದಾಯಕ್ಕೆ ತೆರಿಗೆ ಕಡಿತಗೊಳಿಸಬಹುದಾಗಿದೆ. ಹೀಗಾಗಿ ಹಳೆಯ ಪದ್ಧತಿಯಲ್ಲಿ ನಿಮಗೆ ಹೆಚ್ಚಿನ ತೆರಿಗೆ ಉಳಿತಾಯಕ್ಕೆ ಅವಕಾಶವಿದ್ದರೂ ನಿಮ್ಮ ಆಯ್ಕೆಯನ್ನು ಮೊದಲೇ ನಿರ್ಧರಿಸದಿದ್ದರೆ ಉದ್ಯೋಗದಾತರಿಂದ ಹೆಚ್ಚಿನ ತೆರಿಗೆ ಕಡಿತ ಆಗಬಹುದಾದ ಸಂಭವ ಇದೆ. ಹೀಗಾಗಿ, ಆದಾಯ ತೆರಿಗೆ ಪಾವತಿದಾರರು ತಮಗೆ ಇಷ್ಟವಾದ ತೆರಿಗೆ ಪದ್ಧತಿಯ ಆಯ್ಕೆಯ ವಿಚಾರದಲ್ಲಿ ಹೆಚ್ಚಿನ ನಿಗಾ ವಹಿಸುವುದು ಅಗತ್ಯ.

ಹಳೆಯ ತೆರಿಗೆ ದರ ಪದ್ಧತಿ ಆಯ್ಕೆ ಮಾಡಿದವರಿಗೆ, ತೆರಿಗೆಗೆ ಒಳಪಡುವ ಆದಾಯ ₹ 5 ಲಕ್ಷದೊಳಗಿದ್ದರೆ, ಲಭ್ಯವಿರುವ ತೆರಿಗೆ ವಿನಾಯಿತಿಯು ಸೆಕ್ಷನ್ 87 ಎ ಅಡಿ ₹ 12,500 ಅಥವಾ ಸಂಪೂರ್ಣ ತೆರಿಗೆ ಮೊತ್ತ ಆಗಿದೆ. ಈ ಸೆಕ್ಷನ್ ಅಡಿ, ಹೊಸ ತೆರಿಗೆ ದರ ಪದ್ಧತಿಯನ್ನು ಆಯ್ಕೆ ಮಾಡಿಕೊಂಡವರು ₹ 7 ಲಕ್ಷದವರೆಗಿನ ಆದಾಯಕ್ಕೆ ತೆರಿಗೆ ತೆರಬೇಕಾಗಿಲ್ಲ ಎಂದು ಬಜೆಟ್ ಹೇಳಿದೆ. ಅಂದರೆ ಹೊಸ ತೆರಿಗೆ ದರ ಪದ್ಧತಿಯ ಅಡಿ ₹ 25,000 ತನಕ ಬರುವ ತೆರಿಗೆಗೆ ಸಂಪೂರ್ಣ ವಿನಾಯಿತಿ ಇದೆ. ಹೊಸ ತೆರಿಗೆ ಪದ್ಧತಿಯನ್ನು ಇನ್ನಷ್ಟು ಜನಪ್ರಿಯ ಆಗಿಸುವ ಉದ್ದೇಶ ಇಲ್ಲಿದೆ. ತೆರಿಗೆ ಪಾವತಿದಾರರು ತಮ್ಮ ತೆರಿಗೆಯ ಎಷ್ಟಾಗಬಹುದು ಎಂಬುದನ್ನು ಎರಡೂ ಪದ್ಧತಿಗಳ ಅಡಿಯಲ್ಲಿ ಸರಿಯಾಗಿ ಲೆಕ್ಕ ಹಾಕಿ ಸೂಕ್ತ ತೆರಿಗೆ ಪದ್ಧತಿಯನ್ನು ಆಯ್ಕೆ ಮಾಡಬಹುದು.

ಹೊಸ ತೆರಿಗೆ ದರ ಪದ್ಧತಿಯಲ್ಲಿನ ತೆರಿಗೆ ಹಂತಗಳನ್ನು ಬದಲಾಯಿಸಲಾಗಿದೆ. ಮೊದಲೇ ಹೇಳಿದಂತೆ ತೆರಿಗೆ ವಿನಾಯಿತಿ ಮೊತ್ತ ಹೆಚ್ಚಿಸಲಾಗಿದೆ. ಹೀಗಿದ್ದರೂ, ಹೊಸ ತೆರಿಗೆ ಹಾಗೂ ಹಳೆಯ ತೆರಿಗೆ ಪದ್ಧತಿಯ ನಡುವೆ ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬ ವಿಚಾರವು ಅನೇಕರ ಪಾಲಿಗೆ ಸವಾಲಾಗಿ ಪರಿಣಮಿಸಲಿದೆ. ಕಾರಣ, ಹಳೆಯ ತೆರಿಗೆ ದರ ಪದ್ಧತಿಯಲ್ಲಿ ಅನೇಕ ಬಗೆಯ ತೆರಿಗೆ ವಿನಾಯಿತಿಗಳನ್ನು ಪರಿಗಣಿಸಲು ಅವಕಾಶ ಇದೆ. ಉದಾಹರಣೆಗೆ, ಸೆಕ್ಷನ್ 10ರ ಅಡಿ ಸಿಗುವ ಮನೆ ಬಾಡಿಗೆ ವಿನಾಯಿತಿ, ರಜಾ ಪ್ರವಾಸದ ವಿನಾಯಿತಿ, ಮಕ್ಕಳ ವಿದ್ಯಾಭ್ಯಾಸ ಭತ್ಯೆ, ಹಾಸ್ಟೆಲ್ ಭತ್ಯೆ ಇತ್ಯಾದಿ. ಇವಲ್ಲದೆ, ಮನೆ ಸಾಲದ ಮೇಲಿನ ಬಡ್ಡಿ, ಮಕ್ಕಳ ಶಾಲಾ ಶಿಕ್ಷಣಕ್ಕಾಗಿ ಪಾವತಿಸುವ ಶುಲ್ಕ, ಪಿಎಫ್ ಮತ್ತು ಜೀವ ವಿಮಾ ಯೋಜನೆಗಳಲ್ಲಿ ತೊಡಗಿಸಿದ ಮೊತ್ತ ಇತ್ಯಾದಿಗಳ ಮೇಲೆಯೂ ಆದಾಯ ತೆರಿಗೆ ವಿನಾಯಿತಿ ಪಡೆಯುವ ಅವಕಾಶ ಹಳೆಯ ತೆರಿಗೆ ದರ ಪದ್ಧತಿಯಲ್ಲಿ ಇದೆ.

ಎನ್‌ಪಿಎಸ್‌ನಲ್ಲಿ ತೊಡಗಿಸುವ ಮೊತ್ತ, ಆರೋಗ್ಯ ವಿಮೆ, ಯಾವುದೇ ದೇಣಿಗೆ ಮೊತ್ತಕ್ಕೂ ತೆರಿಗೆ ವಿನಾಯಿತಿ ಸಿಗುತ್ತದೆ. ಆದರೆ ಹೊಸ ಪದ್ಧತಿಯ ಅಡಿ ಇಂತಹ ಅವಕಾಶವಿಲ್ಲ. ಆದರೆ, ವೇತನದಾರರಿಗೆ ₹ 50,000ದ ಸ್ಟ್ಯಾಂಡರ್ಡ್ ಡಿಡಕ್ಷನ್ ಹಾಗೂ ಕೌಟುಂಬಿಕ ಪಿಂಚಣಿ ಪಡೆಯುವ ತೆರಿಗೆದಾರರಿಗೆ ₹ 15,000ದ ತನಕದ ವಿನಾಯಿತಿ ಕೊಟ್ಟಿರುವುದು ವಿಶೇಷ. ಇವೆರಡನ್ನು ಹೊರತುಪಡಿಸಿದರೆ, ಉಳಿದ ಯಾವುದೇ ವಿನಾಯಿತಿಗಳು ಹೊಸ ತೆರಿಗೆ ವ್ಯವಸ್ಥೆಯ ಅಡಿಯಲ್ಲಿ ಇರುವುದಿಲ್ಲ ಎಂಬುದು ಗಮನಿಸಬೇಕಾದ ಅಂಶ. ಹೀಗಾಗಿ, ಎಲ್ಲ ವಿನಾಯಿತಿಗಳ ಪ್ರಯೋಜನವನ್ನು ತುಲನೆ ಮಾಡಿ ಲೆಕ್ಕ ಹಾಕಿದಾಗಲಷ್ಟೇ ತೆರಿಗೆದಾರರು ತಮಗೆ ಸರಿಯಾದ ತೆರಿಗೆ ದರ ಪದ್ಧತಿ ಆಯ್ಕೆ ಮಾಡಿಕೊಳ್ಳಬಹುದು.

ಹಿರಿಯ ನಾಗರಿಕರ ಉಳಿತಾಯ ಯೋಜನೆಯ ಅಡಿ ಪ್ರಸ್ತುತ ಶೇ 8ರ ಬಡ್ಡಿ ದರದಲ್ಲಿ ₹ 15 ಲಕ್ಷದವರೆಗೆ ಹೂಡಿಕೆಗೆ ಅವಕಾಶವಿದೆ. ಈ ಮಿತಿಯನ್ನು ₹ 30 ಲಕ್ಷಕ್ಕೆ ಹೆಚ್ಚಿಸಿದ್ದು ಹೆಚ್ಚಿನ ಹೂಡಿಕೆಗೆ ಅವಕಾಶ ಹಾಗೂ ನಿವೃತ್ತಿ ಬದುಕಿಗೆ ಹೆಚ್ಚಿನ ಆದಾಯ ಒದಗಿಸಿಕೊಡಲಿದೆ. ಈ ಯೋಜನೆಯಲ್ಲದೆ, ಮಾಸಿಕ ಬಡ್ಡಿ ಆದಾಯ ಆಧರಿಸಿ ಬದುಕುವ ಹಿರಿಯ ನಾಗರಿಕರಿಗೆ ಗರಿಷ್ಠ ₹ 4.5 ಲಕ್ಷದವರೆಗೆ ಮಾತ್ರ ಹೂಡಿಕೆ ಮಾಡುವ ಅವಕಾಶ ಅಂಚೆ ಇಲಾಖೆಯ ತಿಂಗಳ ಆದಾಯ ಯೋಜನೆಯಲ್ಲಿ ಇದುವರೆಗೆ ಇತ್ತು. ಇನ್ನು ಮುಂದೆ ₹ 9 ಲಕ್ಷದವರೆಗೆ ಹೂಡಿಕೆ ಮಾಡಲು ಇಲ್ಲಿ ಅವಕಾಶ ಕಲ್ಪಿಸಲಾಗಿದೆ. ಜಂಟಿ ಖಾತೆಯಲ್ಲಿ ₹ 15 ಲಕ್ಷದವರೆಗೆ ಹೂಡಿಕೆ ಮಾಡಲು ಇನ್ನು ಮುಂದೆ ಅವಕಾಶ ಸಿಗಲಿದೆ (ಇದು ಈವರೆಗೆ ₹ 9 ಲಕ್ಷ ಆಗಿತ್ತು). ಈ ಎರಡೂ ಕ್ರಮಗಳು ಸ್ವಾಗತಾರ್ಹ. ಒಟ್ಟಿನಲ್ಲಿ, ಚುನಾವಣೆಯ ಮೇಲೆ ಒಂದು ಕಣ್ಣಿಟ್ಟೇ ತೆರಿಗೆ ವಿನಾಯಿತಿಯನ್ನು ಒಂದಿಷ್ಟು ಹೆಚ್ಚಿಸಲಾಗಿದೆ.

ಲೇಖಕ: ಲೆಕ್ಕಪರಿಶೋಧಕ

> ಹಳೆಯ ಪದ್ಧತಿಯಲ್ಲಿ ನಿಮಗೆ ಹೆಚ್ಚಿನ ತೆರಿಗೆ ಉಳಿತಾಯಕ್ಕೆ ಅವಕಾಶವಿದ್ದರೂ ನಿಮ್ಮ ಆಯ್ಕೆಯನ್ನು ಮೊದಲೇ ನಿರ್ಧರಿಸದಿದ್ದರೆ ಉದ್ಯೋಗದಾತರಿಂದ ಹೆಚ್ಚಿನ ತೆರಿಗೆ ಕಡಿತ ಆಗಬಹುದಾದ ಸಂಭವ ಇದೆ.

ಷೇರು ವಿಕ್ರಯ: ಉಲ್ಲೇಖವೇ ಇಲ್ಲ

2023-24ನೇ ಹಣಕಾಸು ವರ್ಷದಲ್ಲಿ ಸರ್ಕಾರಿ ಸ್ವಾಮ್ಯದ ಕಂಪನಿಗಳ ಖಾಸಗೀಕರಣ ಅಥವಾ ಷೇರು ಮಾರಾಟ ಮಾಡುವ ಬಗ್ಗೆ ಬಜೆಟ್‌ನಲ್ಲಿ ಪ್ರತ್ಯೇಕ ಉಲ್ಲೇಖ ಮಾಡಿಲ್ಲ.

ಈ ಹಿಂದೆ ಬಜೆಟ್‌ನ ಬಂಡವಾಳ ವೆಚ್ಚದಲ್ಲಿ ಇತರೆ ವೆಚ್ಚಗಳ ಅಡಿಯಲ್ಲಿ ಷೇರು ವಿಕ್ರಯವನ್ನು ಪ್ರತ್ಯೇಕವಾಗಿ ತೋರಿಸಲಾಗುತ್ತಿತ್ತು. 2023-24ನೇ ಬಜೆಟ್ ದಾಖಲೆಗಳ ಪ್ರಕಾರ, ಪ್ರಸಕ್ತ ಹಣಕಾಸು ವರ್ಷಕ್ಕೆ ಇತರೆ ಬಂಡವಾಳ ವೆಚ್ಚಗಳ ಪರಿಷ್ಕೃತ ಅಂದಾಜನ್ನು ₹ 60 ಸಾವಿರ ಕೋಟಿಗೆ ನಿಗದಿಪಡಿಸಲಾಗಿದೆ. 2022-23ರ ಬಜೆಟ್ ಅಂದಾಜಿನಲ್ಲಿ ₹ 65 ಸಾವಿರ ಕೋಟಿ ನಿಗದಿಪಡಿಸಲಾಗಿತ್ತು.

ಏಪ್ರಿಲ್ 1ರಿಂದ ಆರಂಭ ಆಗಲಿರುವ ಹಣಕಾಸು ವರ್ಷಕ್ಕೆ ಇತರೆ ಬಂಡವಾಳ ವೆಚ್ಚಗಳಿಗೆ ₹ 61 ಸಾವಿರ ಕೋಟಿ ನಿಗದಿ ಮಾಡಲಾಗಿದೆ.

ಮುಂದಿನ ಹಣಕಾಸು ವರ್ಷದಲ್ಲಿ ಶಿಪ್ಪಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ, ಎನ್‌ಎಂಡಿಸಿ ಸ್ಟೀಲ್ ಲಿಮಿಟೆಡ್, ಬಿಇಎಂಎಲ್, ಎಚ್‌ಎಲ್‌ಎಲ್ ಲೈಫ್‌ಕೇರ್, ಕಂಟೈನರ್ ಕಾರ್ಪೊರೇಷನ್ ಆಫ್ ಇಂಡಿಯಾ ಮತ್ತು ವೈಜಾಗ್ ಸ್ಟೀಲ್ ಕಂಪನಿಗಳನ್ನು ಖಾಸಗೀಕರಣ ಮಾಡಲು ಸರ್ಕಾರ ಯೋಜನೆ ರೂಪಿಸಿದೆ.

ಕೇಂದ್ರ ಸರ್ಕಾರವು ಸತತ ನಾಲ್ಕನೇ ವರ್ಷದಲ್ಲಿಯೂ ಷೇರುವಿಕ್ರಯದ ಗುರಿ ತಲುಪುವಲ್ಲಿ ವಿಫಲವಾಗಿದೆ.

2022-23ನೇ ಹಣಕಾಸು ವರ್ಷದಲ್ಲಿ ಷೇರು ವಿಕ್ರಯದ ಮೂಲಕ ₹ 65 ಸಾವಿರ ಕೋಟಿ ಸಂಗ್ರಹಿಸುವ ಗುರಿಯನ್ನು ಸರ್ಕಾರ ಹೊಂದಿದೆ. ಆದರೆ, ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣಾ ಇಲಾಖೆಯ (ಡಿಐಪಿಎಎಂ) ಜಾಲತಾಣದಲ್ಲಿ ಇರುವ ಮಾಹಿತಿಯ ಪ್ರಕಾರ, ಕೇಂದ್ರೋದ್ಯಮಗಳಲ್ಲಿನ (ಸಿಪಿಎಸ್‌ಇ) ಷೇರುಗಳನ್ನು ಮಾರಾಟ ಮಾಡುವ ಮೂಲಕ ಸರ್ಕಾರವು ಈವರೆಗೆ ₹ 31,100 ಕೋಟಿ ಬಂಡವಾಳವನ್ನು ಮಾತ್ರವೇ ಸಂಗ್ರಹಿಸಿದೆ.

₹ 48 ಸಾವಿರ ಕೋಟಿ ಲಾಭಾಂಶ: ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ), ಸರ್ಕಾರಿ ವಲಯದ ಬ್ಯಾಂಕ್‌ಗಳು ಮತ್ತು ಹಣಕಾಸು ಸಂಸ್ಥೆಗಳಿಂದ 2023-24ನೇ ಹಣಕಾಸು ವರ್ಷದಲ್ಲಿ ಲಾಭಾಂಶದ ರೂಪದಲ್ಲಿ ₹ 48 ಸಾವಿರ ಕೋಟಿ ಪಡೆಯುವ ನಿರೀಕ್ಷೆಯನ್ನು ಕೇಂದ್ರ ಹೊಂದಿದೆ. ಹಿಂದಿನ ಹಣಕಾಸು ವರ್ಷಕ್ಕೆ ಹೋಲಿಸಿದರೆ ಶೇ 17ರಷ್ಟು ಹೆಚ್ಚಾಗಲಿದೆ.

2022-23ನೇ ಹಣಕಾಸು ವರ್ಷದಲ್ಲಿ ಲಾಭಾಂಶದ ರೂಪದಲ್ಲಿ ₹40,953 ಕೋಟಿ ಸಂಗ್ರಹಿಸುವ ಗುರಿಯನ್ನು ಸರ್ಕಾರ ಇಟ್ಟುಕೊಂಡಿದೆ. ಇದು ಬಜೆಟ್‌ನಲ್ಲಿ ಅಂದಾಜು ಮಾಡಿದ್ದ ₹ 73,948 ಕೋಟಿಗಿಂತ ಕಡಿಮೆ.

2022ರ ಮೇನಲ್ಲಿ ನಡೆದ ಆರ್‌ಬಿಐ ಆಡಳಿತ ಮಂಡಳಿ ಸಭೆಯಲ್ಲಿ ಕೇಂದ್ರ ಸರ್ಕಾರಕ್ಕೆ ₹ 30,307 ಕೋಟಿ ಲಾಭಾಂಶ ನೀಡಲು ಒಪ್ಪಿಗೆ ನೀಡಿದೆ. ಬಜೆಟ್ ದಾಖಲೆಗಳ ಪ್ರಕಾರ, ಸರ್ಕಾರಿ ಕಂಪನಿಗಳು ಮತ್ತು ಇತರೆ ಹೂಡಿಕೆಗಳ ಮೂಲಕ ಸರ್ಕಾರಕ್ಕೆ ₹ 43 ಸಾವಿರ ಕೋಟಿ ಲಾಭಾಂಶ ಬಂದಿದೆ.

ಹಿರಿಯರ ಠೇವಣಿ ಮಿತಿ ಹೆಚ್ಚಳ

ಹಿರಿಯ ನಾಗರಿಕರಿಗೆ ಈ ಬಾರಿಯ ಬಜೆಟ್‌ನಲ್ಲಿ ಒಂದಿಷ್ಟು ಕೊಡುಗೆ ನೀಡಲಾಗಿದೆ. ಹಿರಿಯ ನಾಗರಿಕರ ಉಳಿತಾಯ ಯೋಜನೆಯ ಠೇವಣಿ ಮಿತಿಯನ್ನು ₹ 15 ಲಕ್ಷದಿಂದ ₹ 30 ಲಕ್ಷಕ್ಕೆ ಹೆಚ್ಚಿಸಲಾಗಿದೆ. ತಿಂಗಳ ಆದಾಯ ಖಾತೆ ಯೋಜನೆಯ ಠೇವಣಿ ಮಿತಿಯನ್ನು ಸಹ ಈಗಿರುವ ₹ 4.5 ಲಕ್ಷದಿಂದ ₹ 9 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಜಂಟಿ ಖಾತೆ ಹೊಂದಿರುವವರಿಗೆ ಠೇವಣಿ ಮಿತಿಯು ₹ 15 ಲಕ್ಷ ಇರಲಿದೆ. ಸದ್ಯ ₹ 9 ಲಕ್ಷ ಮಾತ್ರ ಇದೆ.

ಎಂಎಸ್‌ಎಂಇಗೆ ನೆರವು

ಕಿರು, ಸಣ್ಣ ಮತ್ತು ಮಧ್ಯಮ ಗಾತ್ರದ (ಎಂಎಸ್‌ಎಂಇ) ಉದ್ದಿಮೆಗಳಿಗಾಗಿ ಸಾಲ ಖಾತರಿ ಯೋಜನೆಯ ₹ 9 ಸಾವಿರ ಕೋಟಿ ಮೊತ್ತದ ಪರಿಷ್ಕೃತ ಕಾರ್ಯಕ್ರಮ ಜಾರಿಗೊಳಿಸಲಾಗಿದೆ.

ಆರ್ಥಿಕ ಸ್ಥಿರತೆ ಸಾಧಿಸುವ ಮತ್ತು ಅರ್ಹರಿಗೆ ಸುಲಭವಾಗಿ ಸಾಲ ಸಿಗುವಂತೆ ಮಾಡುವ ಉದ್ದೇಶದಿಂದ ಕೇಂದ್ರ ಸರ್ಕಾರವು ನ್ಯಾಷನಲ್ ಫೈನಾನ್ಶಿಯಲ್ ಇನ್‌ಫರ್ಮೇಷನ್ ರಿಜಿಸ್ಟ್ರಿ ಸ್ಥಾಪಿಸಲು ಮುಂದಾಗಿದೆ.

ವಿವಾದ್ ಸೆ ವಿಶ್ವಾಸ್-2

ವಾಣಿಜ್ಯ ವಿಷಯಗಳಿಗೆ ಸಂಬಂಧಿಸಿದ ವ್ಯಾಜ್ಯಗಳನ್ನು ಬಗೆಹರಿಸಲು ವಿವಾದ್ ಸೆ ವಿಶ್ವಾಸ್-2 ಎನ್ನುವ ಮತ್ತೊಂದು ಯೋಜನೆಯನ್ನು ಸರ್ಕಾರ ಜಾರಿಗೆ ತರಲು ಮುಂದಾಗಿದೆ. ಈಗಾಗಲೇ ಜಾರಿಯಲ್ಲಿ ಇರುವ ವಿವಾದ್ ಸೆ ವಿಶ್ವಾಸ್ ಯೋಜನೆಯ ಅಡಿ ನೇರ ತೆರಿಗೆಗೆ ಸಂಬಂಧಿಸಿದ ವ್ಯಾಜ್ಯಗಳನ್ನು ಇತ್ಯರ್ಥಪಡಿಸಲಾಗುತ್ತಿದೆ.

ಸಾಲ ಮಿತಿ ಹೆಚ್ಚಳ

ಏಪ್ರಿಲ್ 1ರಿಂದ ಆರಂಭ ಆಗಲಿರುವ 2023-24ನೇ ಹಣಕಾಸು ವರ್ಷದಲ್ಲಿ ಕೇಂದ್ರ ಸರ್ಕಾರವು ದಾಖಲೆಯ ₹ 15.4 ಲಕ್ಷ ಕೋಟಿ ಸಾಲ ಪಡೆಯಲು ಮುಂದಾಗಿದೆ. ಇದು 2023ರ ಮಾರ್ಚ್ 31ಕ್ಕೆ ಕೊನೆಗೊಳ್ಳಲಿರುವ ಪ್ರಸಕ್ತ ಹಣಕಾಸು ವರ್ಷಕ್ಕೆ ನಿಗದಿಪಡಿಸಿರುವ ₹ 14.21 ಲಕ್ಷ ಕೋಟಿಗೂ ಹೆಚ್ಚಿನದ್ದಾಗಿದೆ.

ಸಾಲಪತ್ರಗಳನ್ನು ಮಾರಾಟ ಮಾಡುವ ಮೂಲಕ ಮಾರುಕಟ್ಟೆಯಿಂದ ₹ 11.8 ಲಕ್ಷ ಕೋಟಿ ಸಂಗ್ರಹಿಸಲಾಗುವುದು. ಉಳಿದ ಮೊತ್ತವು ಸಣ್ಣ ಉಳಿತಾಯ ಮತ್ತು ಇತರೆ ಮೂಲಗಳಿಂದ ಬರಲಿದೆ. ಸರಾಸರಿ ಸಾಲ ಸಂಗ್ರಹವು ₹ 15.4 ಲಕ್ಷ ಕೋಟಿ ಆಗಲಿದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಬಜೆಟ್ ಭಾಷಣದಲ್ಲಿ ತಿಳಿಸಿದ್ದಾರೆ.

2022-23ನೇ ಹಣಕಾಸು ವರ್ಷದಲ್ಲಿ ಜನವರಿ 27ರವರೆಗೆ ಕೇಂದ್ರವು ₹ 12.93 ಲಕ್ಷ ಕೋಟಿ ಸಾಲ ಸಂಗ್ರಹ ಮಾಡಿದೆ. ಇದು ಬಜೆಟ್ ಅಂದಾಜಿನ ಶೇ 91ರಷ್ಟು ಆಗಿದೆ.

47.8 ಕೋಟಿ ಜನ್ ಧನ್ ಖಾತೆ

ವಿತ್ತೀಯ ಸೇರ್ಪಡೆಯ ಭಾಗವಾಗಿ ಜಾರಿಗೆ ತಂದಿರುವ ಜನ್‌ಧನ್ ಯೋಜನೆಯ ಅಡಿ ಈವರೆಗೆ 47.8 ಕೋಟಿ ಖಾತೆಗಳನ್ನು ತೆರೆಯಲಾಗಿದೆ.

2014ರ ಆಗಸ್ಟ್ 28ರಂದು ಯೋಜನೆಗೆ ಚಾಲನೆ ನೀಡಲಾಗಿದ್ದು, ಉಳಿತಾಯ ಮತ್ತು ಠೇವಣಿ ಖಾತೆಗಳು, ಸಾಲ, ವಿಮೆ ಮತ್ತು ಪಿಂಚಣಿಯಂತಹ ಹಣಕಾಸು ಸೇವೆಗಳನ್ನು ಕಡಿಮೆ ಬೆಲೆಗೆ ಸಿಗುವಂತೆ ಮಾಡುವ ಯೋಜನೆ ಇದಾಗಿದೆ.

ವಿತ್ತೀಯ ಕೊರತೆ ಶೇ 5.9

2023-24ನೇ ಹಣಕಾಸು ವರ್ಷಕ್ಕೆ ವಿತ್ತೀಯ ಕೊರತೆಯನ್ನು ಜಿಡಿಪಿಯ ಶೇ 5.9ಕ್ಕೆ ತಗ್ಗಿಸಲು ಕೇಂದ್ರ ಸರ್ಕಾರ ಉದ್ದೇಶಿಸಿದೆ. 2022-23ನೇ ಹಣಕಾಸು ವರ್ಷಕ್ಕೆ ವಿತ್ತೀಯ ಕೊರತೆಯು ಶೇ 6.4ರಷ್ಟು ಇರಲಿದೆ ಎಂದು ಸಚಿವೆ ನಿರ್ಮಲಾ ಹೇಳಿದ್ದಾರೆ. 2025-26ರ ವೇಳೆಗೆ ವಿತ್ತೀಯ ಕೊರತೆಯನ್ನು ಶೇ 4.5ಕ್ಕೆ ತಗ್ಗಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ಟೆಲಿಕಾಂಗೆ ನೆರವು

ದೂರಸಂಪರ್ಕ ಮತ್ತು ಅಂಚೆ ಇಲಾಖೆ ಯೋಜನೆಗಳಿಗೆ ಕೇಂದ್ರ ಸರ್ಕಾರವು ಬಜೆಟ್‌ನಲ್ಲಿ ₹1.23 ಲಕ್ಷ ಕೋಟಿ ಅನುದಾನವನ್ನು ನೀಡಿದೆ. ಒಟ್ಟು ಅನುದಾನದಲ್ಲಿ ದೂರಸಂಪರ್ಕ ಇಲಾಖೆಗೆ ₹97,579 ಕೋಟಿ ನೀಡಲಾಗಿದೆ. ಇದರಲ್ಲಿ ಸರ್ಕಾರಿ ಸ್ವಾಮ್ಯದ ಬಿಎಸ್‌ಎನ್‌ಎಲ್ ಇದೇ ವರ್ಷದಲ್ಲಿ 4ಜಿ ಮತ್ತು 5ಜಿ ಸೇವೆಗಳನ್ನು ಜಾರಿಗೊಳಿಸುವ ನಿರೀಕ್ಷೆ ಇದ್ದು, ಅದಕ್ಕಾಗಿ ₹52,937 ಕೋಟಿ ಬಂಡವಾಳ ಸೇರಿದೆ. ಅಂಚೆ ಯೋಜನೆಗಳಿಗೆ ₹25,814 ಕೋಟಿ ಮೀಸಲಿಡಲಾಗಿದೆ. ಇದರಲ್ಲಿ ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್‌ಗೆ ₹250 ಕೋಟಿ ಸಹ ಸೇರಿಕೊಂಡಿದೆ.

ಸಬ್ಸಿಡಿ ಮೊತ್ತ ಇಳಿಕೆ

ಆಹಾರ, ರಸಗೊಬ್ಬರ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಸಬ್ಸಿಡಿ ಮೊತ್ತವನ್ನು2023-24ನೇ ಹಣಕಾಸು ವರ್ಷಕ್ಕೆ ₹ 3.75 ಲಕ್ಷ ಕೋಟಿಗೆ ನಿಗದಿಪಡಿಸಲಾಗಿದೆ. 2022-23ಕ್ಕೆ ನಿಗದಿಪಡಿಸಿರುವ ಪರಿಷ್ಕೃತ ಮೊತ್ತ ₹ 5.21 ಲಕ್ಷ ಕೋಟಿಗೆ ಹೋಲಿಸಿದರೆ ಸಬ್ಸಿಡಿ ಶೇ 28ರಷ್ಟು ಕಡಿಮೆ ಆಗಿದೆ. ಇದರಿಂದಾಗಿ ಒಟ್ಟು ಸಬ್ಸಿಡಿಯಲ್ಲಿ ರಸಗೊಬ್ಬರ ಸಬ್ಸಿಡಿ ₹ 2.25 ಲಕ್ಷ ಕೋಟಿಯಿಂದ ₹ 1.75 ಲಕ್ಷ ಕೋಟಿಗೆ ಇಳಿಕೆ ಆಗಲಿದೆ. ಪೆಟ್ರೋಲಿಯಂ ಸಬ್ಸಿಡಿ ₹ 9,179 ಕೋಟಿಯಿಂದ ₹ 2,257 ಕೋಟಿಗೆ ತಗ್ಗಲಿದೆ. ಆಹಾರ ಸಬ್ಸಿಡಿ ₹ 2.87 ಲಕ್ಷ ಕೋಟಿಯಿಂದ ₹ 1.97 ಲಕ್ಷ ಕೋಟಿಗೆ ಇಳಿಕೆ ಆಗುವ ಅಂದಾಜು ಮಾಡಲಾಗಿದೆ. 2022-23ರಲ್ಲಿ ಆಹಾರ ಸಬ್ಸಿಡಿ ಮೊತ್ತವು ₹ 2.88 ಲಕ್ಷ ಕೋಟಿಯಿಂದ ₹ 2.87 ಲಕ್ಷ ಕೋಟಿಗೆ ಇಳಿಕೆ ಆಗಲಿದೆ. ಆದರೆ, ರಸಗೊಬ್ಬರ ಸಬ್ಸಿಡಿ ₹ 1.53 ಲಕ್ಷ ಕೋಟಿಯಿಂದ ₹ 2.25 ಲಕ್ಷ ಕೋಟಿಗೆ ಹೆಚ್ಚಾಗಲಿದೆ. ಪೆಟ್ರೋಲಿಯಂ ಸಬ್ಸಿಡಿ ಸಹ ₹ 3,422 ಕೋಟಿಯಿಂದ ₹ 9,179 ಕೋಟಿಗೆ ಏರಿಕೆ ಆಗುವ ಅಂದಾಜು ಮಾಡಲಾಗಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

SAD DEMISE
Prabhakar V Khanolkar
6 Jun 1933 to 1 Feb 2023
It is with great sadness that we announce the demise of our loving father.
We love you and will always miss your presence.
You have taught us to never give up and live life to the fullest.
Inserted by :
Kalpana and family members
Jyotsna and family members
Vandana and family members



ಬಜೆಟ್‌ಗೆ ಷೇರುಪೇಟೆ ಮಿಶ್ರ ಪ್ರತಿಕ್ರಿಯೆ

ಮುಂಬೈ (ಪಿಟಿಐ): ಬುಧವಾರ ಮಂಡನೆಯಾದ ಕೇಂದ್ರ ಬಜೆಟ್‌ಗೆ ದೇಶದ ಷೇರುಪೇಟೆಗಳು ಮಿಶ್ರ ಪ್ರತಿಕ್ರಿಯೆ ನೀಡಿವೆ. ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿ ದರ ಕುರಿತು ಯಾವ ತೀರ್ಮಾನ ಕೈಗೊಳ್ಳಬಹುದು ಎಂಬ ಬಗ್ಗೆಯೂ ಹೂಡಿಕೆದಾರರು ಗಮನ ಇರಿಸಿದ್ದರು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 158 ಅಂಶ ಏರಿಕೆ ಕಂಡಿದೆ. ದಿನದ ವಹಿವಾಟಿನ ನಡುವಿನಲ್ಲಿ ಸೆನ್ಸೆಕ್ಸ್ 1,223 ಅಂಶಗಳಷ್ಟು ಏರಿಕೆ ಕಂಡಿತ್ತು. ಆದರೆ, ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 45 ಅಂಶ ಇಳಿಕೆ ಕಂಡಿದೆ.

'ಬೇಡಿಕೆ ಹೆಚ್ಚಿಸುವುದಕ್ಕೆ ಆದ್ಯತೆ ನೀಡಿರುವ ಹಾಗೂ ಬಂಡವಾಳ ವೆಚ್ಚವನ್ನು ಹೆಚ್ಚಿಸುವ ಈ ಬಜೆಟ್ ಮಾರುಕಟ್ಟೆಯಲ್ಲಿ ಆಶಾವಾದವನ್ನು ಹೆಚ್ಚು ಮಾಡಿತ್ತು. ಆದರೆ ಅದಾನಿ ಸಮೂಹಕ್ಕೆ ಸಂಬಂಧಿಸಿದ ಬೆಳವಣಿಗೆಗಳು ಹಾಗೂ ಫೆಡರಲ್ ರಿಸರ್ವ್ ಸಭೆಯ ಕಡೆಗಿನ ಗಮನವು ಮಾರುಕಟ್ಟೆಯಲ್ಲಿನ ತೇಜಿ ಸ್ಥಿತಿಯನ್ನು ತಗ್ಗಿಸಿದವು' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

'ಜೀವ ವಿಮಾ ವಲಯದ ಕಂಪನಿಗಳ ಷೇರುಗಳು ಹೆಚ್ಚು ಕುಸಿದವು. ಏಕೆಂದರೆ, ಹೊಸ ತೆರಿಗೆ ದರ ಪದ್ಧತಿಗೆ ಹೆಚ್ಚಿನ ಆದ್ಯತೆ ಸಿಕ್ಕಿರುವುದರಿಂದ ತೆರಿಗೆ ಉಳಿತಾಯಕ್ಕೆ ಜೀವ ವಿಮೆ ಖರೀದಿಸುವುದು ಹೆಚ್ಚು ಆಕರ್ಷಕವಾಗಿ ಇರುವುದಿಲ್ಲ ಎಂಬುದು ಇದಕ್ಕೆ ಕಾರಣ' ಎಂದು ಅವರು ಹೇಳಿದ್ದಾರೆ.

'ಬಂಡವಾಳ ವೃದ್ಧಿ ತೆರಿಗೆ ವಿಚಾರದಲ್ಲಿ ಯಾವ ಬದಲಾವಣೆಯನ್ನೂ ಮಾಡದೆ ಇರುವುದು ಮಾರುಕಟ್ಟೆಗಳ ಪಾಲಿಗೆ ಒಳ್ಳೆಯ ವಿಚಾರ' ಎಂದು ಸ್ಯಾಮ್ಕೊ ಸೆಕ್ಯುರಿಟೀಸ್‌ನ ಸಂಶೋಧನಾ ವಿಶ್ಲೇಷಕ ಸಂಜಯ್ ಮೂರ್ಜಾನಿ ಹೇಳಿದ್ದಾರೆ.

ಅದಾನಿ ಎಂಟರ್‌ಪ್ರೈಸಸ್ ಶೇ 28ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಅದಾನಿ ಸಮೂಹದ ಕಂಪನಿಗಳ ಷೇರುಮೌಲ್ಯ ಬುಧವಾರ ಕುಸಿತ ಕಂಡಿದೆ. ಕಳೆದ ಐದು ವಹಿವಾಟು ದಿನಗಳಲ್ಲಿ ಸಮೂಹದ ಕಂಪನಿಗಳ ಒಟ್ಟು ಮಾರುಕಟ್ಟೆ ಬಂಡವಾಳ ಮೌಲ್ಯವು ₹ 7 ಲಕ್ಷ ಕೋಟಿಗಿಂತ ಹೆಚ್ಚಿನ ಕುಸಿತ ಕಂಡಿದೆ.

ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆಯು ಅದಾನಿ ಸಮೂಹದ ಕುರಿತು ವರದಿಯನ್ನು ಪ್ರಕಟಿಸಿದ ನಂತರದಲ್ಲಿ ಸಮೂಹದ ಕಂಪನಿಗಳ ಷೇರು ಮೌಲ್ಯ ಕುಸಿತ ಕಾಣುತ್ತಿದೆ. ಬುಧವಾರದ ವಹಿವಾಟಿನ ಕೊನೆಯಲ್ಲಿ, ಸಮೂಹದ ಎಲ್ಲ ಕಂಪನಿಗಳ ಷೇರುಮೌಲ್ಯವು ಕುಸಿತ ಕಂಡಿದೆ.

ಅದಾನಿ ಎಂಟರ್‌ಪ್ರೈಸಸ್ ಶೇ 28.45ರಷ್ಟು, ಅದಾನಿ ಪೋರ್ಟ್ಸ್ ಆ್ಯಂಡ್ ಸ್ಪೆಷನ್ ಎಕನಾಮಿಕ್ ಜೋನ್ ಶೇ 19.69ರಷ್ಟು, ಅದಾನಿ ಟೋಟಲ್ ಗ್ಯಾಸ್ ಶೇ 10ರಷ್ಟು, ಅದಾನಿ ಗ್ರೀನ್ ಎನರ್ಜಿ ಶೇ 5.78ರಷ್ಟು, ಅದಾನಿ ವಿಲ್ಮರ್ ಶೇ 4.99ರಷ್ಟು, ಅದಾನಿ ಪವರ್ ಶೇ 4.98ರಷ್ಟು, ಅದಾನಿ ಟ್ರಾನ್ಸ್‌ಮಿಷನ್ ಶೇ 2.46ರಷ್ಟು ಇಳಿಕೆ ಕಂಡಿವೆ. ಅಂಬುಜಾ ಸಿಮೆಂಟ್ಸ್ ಶೇ 16.56ರಷ್ಟು, ಎಸಿಸಿ ಶೇ 6.34ರಷ್ಟು ಹಾಗೂ ಎನ್‌ಡಿಟಿವಿ ಶೇ 4.98ರಷ್ಟು ಕುಸಿದಿವೆ.

ಅಮೆರಿಕ: ಭಾರತ ಮೂಲದ ನಿಕ್ಕಿ ಹ್ಯಾಲೆ ಸ್ಪರ್ಧೆ?

ವಾಷಿಂಗ್ಟನ್ (ಪಿಟಿಐ): ಅಮೆರಿಕನ್ ರಿಪಬ್ಲಿಕನ್ ಪಕ್ಷದ ನಾಯಕಿ ಭಾರತ ಮೂಲದ ನಿಕ್ಕಿ ಹ್ಯಾಲೆ ಅವರು ಮುಂಬರುವ ಅಧ್ಯಕ್ಷೀಯ ಚುನಾವಣೆಯಲ್ಲಿ ಸ್ಪರ್ಧಿಸುವ ಸಾಧ್ಯತೆ ಇದ್ದು, ಈ ಕುರಿತು ಇದೇ 15ರಂದು ನಿರ್ಧಾರ ಪ್ರಕಟಿಸಲಿದ್ದಾರೆ.

ಒಂದು ವೇಳೆ ನಿಕ್ಕಿ ಹ್ಯಾಲೆ ಅವರು ಸ್ಪರ್ಧೆಗೆ ಇಳಿದದ್ದೇ ಆದರೆ ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ನಿಕ್ಕಿ ಅವರು ಮೊದಲ ಎದುರಾಳಿಯಾಗುವ ಸಾಧ್ಯತೆ ಇದೆ.

51 ವರ್ಷದ ನಿಕ್ಕಿ ಹ್ಯಾಲೆ ಅವರು ಸೌತ್ ಕೆರೊಲಿನಾಕ್ಕೆ ಎರಡು ಬಾರಿ ಗವರ್ನರ್ ಆಗಿದ್ದರು. ಅಲ್ಲದೆ, ವಿಶ್ವಸಂಸ್ಥೆಗೆ ಅಮೆರಿಕದ ಮಾಜಿ ರಾಯಭಾರಿಯೂ ಆಗಿದ್ದರು.

'ನಿಕ್ಕಿ ಅವರು ತಮ್ಮ ಯೋಜನೆಗಳ ಕುರಿತು ಸೂಚಿಸುವ ವಿಡಿಯೊವೊಂದನ್ನು ಈ ವಾರ ಬಿಡುಗಡೆ ಮಾಡಬಹುದು' ಎಂದು 'ವಾಷಿಂಗ್ಟನ್ ಪೋಸ್ಟ್' ವರದಿ ಮಾಡಿದೆ.

ಮುಂಬರಲಿರುವ ಅಧ್ಯಕ್ಷೀಯ ಚುನಾವಣೆಯಲ್ಲಿ ತಾವು ಭಾಗವಹಿಸುವುದಾಗಿ ಟ್ರಂಪ್ ಅವರು ಕಳೆದ ವರ್ಷವೇ ಘೋಷಿಸಿದ್ದರು.

ನಿಕ್ಕಿ ಅವರ ಬಾಲ್ಯದ ಹೆಸರು ನಿಮ್ರತಾ ರಾಂಧವ. ಅವರ ತಂದೆ ಅಜಿತ್ ಸಿಂಗ್ ರಾಂಧವ ಪಂಜಾಬ್ ಕೃಷಿ ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರ್ ಆಗಿದ್ದರು. ಅವರ ತಾಯಿ ರಾಜ್ ಕೌರ್ ರಾಂಧವರ ದೆಹಲಿ ವಿಶ್ವವಿದ್ಯಾಲಯದಿಂದ ಕಾನೂನು ಪದವಿ ಪಡೆದಿದ್ದರು. ದಂಪತಿ ಮೊದಲಿಗೆ ಕೆನಡಕ್ಕೆ ವಲಸೆ ಹೋಗಿ, 1960ರ ದಶಕದಲ್ಲಿ ಅಮೆರಿಕಕ್ಕೆ ಬಂದು ನೆಲೆಸಿದ್ದರು.

ಚಿನ್ನ ₹ 1,090 ಹೆಚ್ಚಳ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ಚಿನ್ನದ ದರ 10 ಗ್ರಾಂಗೆ ₹ 1,090ರಷ್ಟು ಏರಿಕೆ ಕಂಡು ₹ 57,942ರಂತೆ ಮಾರಾಟವಾಯಿತು. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಏರಿಕೆ ಕಂಡಿರುವುದೇ ಇದಕ್ಕೆ ಕಾರಣ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ. ಬೆಳ್ಳಿ ಧಾರಣೆ ಕೆ.ಜಿಗೆ ₹ 1,947ರಷ್ಟು ಹೆಚ್ಚಾಗಿ ₹ 67,950ಕ್ಕೆ ತಲುಪಿತು.

ಬಾಂಬ್ ದಾಳಿ: 17 ಶಂಕಿತರ ಬಂಧನ

ಪೆಶಾವರ/ಇಸ್ಲಾಮಾಬಾದ್ (ಪಿಟಿಐ): ಪೆಶಾವರ ಮಸೀದಿಯಲ್ಲಿ ಸೋಮವಾರ ನಡೆದ ಆತ್ಮಾಹುತಿ ಬಾಂಬ್ ದಾಳಿ ಪ್ರಕರಣಕ್ಕೆ ಸಂಬಂಧಿಸಿದಂತೆ 17 ಶಂಕಿತರನ್ನು ಬಂಧಿಸಲಾಗಿದೆ.

ಸ್ಫೋಟದಲ್ಲಿ 97 ಮಂದಿ ಪೊಲೀಸರು ಸೇರಿ 101 ಮಂದಿ ಸಾವನ್ನಪ್ಪಿದ್ದರು. ತೆಹ್ರೀಕ್-ಎ-ತಾಲಿಬಾನ್ ಪಾಕಿಸ್ತಾನ ಉಗ್ರ ಸಂಘಟನೆ ಆತ್ಮಾಹುತಿ ದಾಳಿಯ ಹೊಣೆಯನ್ನು ಹೊತ್ತುಕೊಂಡಿದೆ.

ಐಎಎಫ್ ಉಪ ಮುಖ್ಯಸ್ಥರಾಗಿ ಎ.ಪಿ. ಸಿಂಗ್ ಅಧಿಕಾರ ಸ್ವೀಕಾರ

ನವದೆಹಲಿ (ಪಿಟಿಐ): ಏರ್ ಮಾರ್ಷಲ್ ಎ.ಪಿ. ಸಿಂಗ್ ಅವರು ಭಾರತೀಯ ವಾಯುಪಡೆಯ ಉಪ ಮುಖ್ಯಸ್ಥರಾಗಿ ಬುಧವಾರ ಅಧಿಕಾರ ವಹಿಸಿಕೊಂಡರು. ಎ.ಪಿ. ಸಿಂಗ್ ಅವರು 5 ಸಾವಿರ ಗಂಟೆಗಳ ವಿಮಾನ ಚಾಲನಾ ಅನುಭವ ಹೊಂದಿದ್ದಾರೆ. ಈ ಮುನ್ನ ಏರ್ ಮಾರ್ಷಲ್ ಸಂದೀಪ್ ಸಿಂಗ್ ಅವರು ಉಪ ಮುಖ್ಯಸ್ಥರಾಗಿದ್ದರು. ಮಂಗಳವಾರ ನಿವೃತ್ತಿ ಹೊಂದಿದ್ದರು.

ನ್ಯಾಷನಲ್ ಡಿಫೆನ್ಸ್ ಅಕಾಡೆಮಿ, ಡಿಫೆನ್ಸ್ ಸರ್ವಿಸಸ್ ಸ್ಟಾಫ್ ಕಾಲೇಜ್ ಮತ್ತು ನ್ಯಾಷನಲ್ ಡಿಫೆನ್ಸ್ ಕಾಲೇಜಿನ ಹಳೆಯ ವಿದ್ಯಾರ್ಥಿಯಾಗಿರುವ ಎ.ಪಿ. ಸಿಂಗ್ ಅವರು, ಭಾರತೀಯ ವಾಯುಪಡೆಗೆ 1984ರ ಡಿಸೆಂಬರ್ 21ರಂದು ನೇಮಕವಾಗಿದ್ದರು. ಸಿಂಗ್ ಅವರು ವಾಯುಪಡೆ ವಿಮಾನ ಬೋಧಕ ಮತ್ತು ಪ್ರಾಯೋಗಿಕ ಪರೀಕ್ಷಾ ಪೈಲಟ್ ಆಗಿದ್ದು, ವಿವಿಧ ಸ್ಥಿರ ಮತ್ತು ರೋಟರಿ ವಿಂಗ್ ವಿಮಾನಗಳಲ್ಲಿ 5,000 ಗಂಟೆಗಳ ಚಾಲನಾ ಅನುಭವವನ್ನು ಹೊಂದಿದ್ದಾರೆ.

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕು ಕ ಆಧಿಕಾರಿಗಳ ಕಾರ್ಯಲಯ, ಕಲಬುರಗಿ ತಾ.ಜಿ. ಕಲಬುರಗಿ
ಇ-ಮೇಲ್ : dhogulbarga@gmail.com ಫೋನ ಸಂಖ್ಯೆ : 08472-278619

ಸಂಖ್ಯೆ:ಸಿಬ್ಬಂದಿ/ಅ/ಕೆ.ಕೆ.ಆರ್.ಡಿ.ಬಿ/ಸಿಆರ್/03/2022-23 ದಿನಾಂಕ: 30.01.2023

"ಅಲ್ಪಾವಧಿ ಟೆಂಡರ ಪ್ರಕಟಣೆ"

ಟೆಂಡರ್ ಮಾಹಿತಿ ಈ ಕೆಳಗಿನಂತಿದೆ. (ವೆಬ್‌ಸೈಟ್: http:/eproc.karnataka.gov.in)
1) ವರ್ಕ ಕೋಡ್ : KLB 216233154, 2) ಟೆಂಡರ್ ವಿವರ : ಅಫಜಲಪೂರ ಪಟ್ಟಣದ ಅಫಜಲಪೂರ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ 12 ಬೆಡ್ ಅಳವಡಿಸುವ ಐ.ಸಿ.ಯು ನಿರ್ಮಾಣಕ್ಕೆ ಬೇಕಾಗುವ ಮೂಲಭೂತ ಸೌಕರ್ಯ ಒದಗಿಸುವುದು, 3) ಟೆಂಡರ್ ಮೊತ್ತ : **196.93** ಲಕ್ಷ, 4) ಷರಾ :-
1) ಟೆಂಡರ್ ಸಲ್ಲಿಸುವ ಪ್ರಾರಂಭ ದಿನಾಂಕ : **30.01.2023,** 2) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **08.02.2023** ಸಾಯಂಕಾಲ 05.00 ಗಂಟೆಗೆ, 3) ಟೆಂಡರ್ ತಾಂತ್ರಿಕ ಬಿಡ್ಡು ತೆರೆಯುವ ದಿನಾಂಕ: **09.02.2023** ರಂದು ಸಂಜೆ 05.00 ಗಂಟೆಗೆ, 4) ಟೆಂಡರ್ ಆರ್ಥಿಕ ಬಿಡ್: ತಾಂತ್ರಿಕ ಬಿಡ್ಡಿನಲ್ಲಿ ಅರ್ಹರಿರುವ ಗುತ್ತಿಗೆದಾರರ ಆರ್ಥಿಕ ಬಿಡ್ಡುಗಳನ್ನು ಮಾತ್ರ **10.02.2023** ಪರಿಶೀಲಿಸುವುದು. 5) ಟೆಂಡರ್ ಒಟ್ಟು ಮೊತ್ತ : ರೂ. **196.93** ಲಕ್ಷ, 6) ಟೆಂಡರ್‌ನ ಇ.ಎಂ.ಡಿ: **2.5 %**, 7) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ, ಕಲಬುರಗಿ. ದೂರವಾಣಿ ಸಂಖ್ಯೆ : 08472-278619
ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕೆಳಕಂಡ ಅಧಿಕಾರಿಯವರನ್ನು ಸಂಪರ್ಕಿಸಬಹುದು.

ಸಹಿ/- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/1194/ಎಂ.ಸಿ.&ಎ/2022-23

ಕರ್ನಾಟಕ ಸರ್ಕಾರ – ಧಾರ್ಮಿಕ ದತ್ತಿ ಇಲಾಖೆ
ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನ
ನಂಜನಗೂಡು, ಮೈಸೂರು ಜಿಲ್ಲೆ
ದೂರವಾಣಿ : 08221-226245 E-Mail ID : sstnanjangud@gmail.com

ಸಂಖ್ಯೆ : ಎಸ್‌ಎಸ್‌ಟಿ/ತೀರ್ಥಬಾಟಲ್/ಸಿಆರ್-5/2022-23 ದಿನಾಂಕ : 01-02-2023

ಇ-ಟೆಂಡರ್ ಪ್ರಕಟಣೆ

ನಂಜನಗೂಡು ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯದ 2023-24ನೇ ಸಾಲಿನ ಶ್ರೀ ಶ್ರೀಯವರ ದೇವಾಲಯಕ್ಕೆ ಅಗತ್ಯವಾದ ತೀರ್ಥದ ಬಾಟಲುಗಳು ಹಾಗೂ 250 ಎಂ.ಎಲ್. 750 ಎಂ.ಎಲ್. ಕಂಟೈನರ್ಸ್‌ಗಳನ್ನು ಸರಬರಾಜು ಮಾಡಲು ಇ-ಪ್ರೊಕ್ಯೂರ್‌ಮೆಂಟ್ ಇ-ಟೆಂಡರ್‌ಯುಡಿಯಲ್ಲಿ ಟೆಂಡರ್ ಕರೆಯಲಾಗಿದೆ. ಆಸಕ್ತರು ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ (http.eproc.karnataka.gov.in) ಮೂಲಕ ಸಲ್ಲಿಸಬಹುದಾಗಿದೆ. ಟೆಂಡರ್ ದಾಖಲೆಗಳಲ್ಲಿ ತಿಳಿಸಿರುವಂತೆ (Technical Bid/ Qualification Criteria) ದ ಮೂಲಕ ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸುವುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯಿಂದ ಹಾಗೂ ದೂರವಾಣಿ ಮೂಲಕ ಮಾಹಿತಿ ಪಡೆಯಬಹುದಾಗಿದೆ.

ಕ್ರ.ಸಂ.	ಟೆಂಡರ್‌ನ ವಿವರ	ಟೆಂಡರ್‌ಗೆ ಅಂದಾಜಿಸಲಾದ ಮೊಬಲಗು	ಇ.ಎಂ.ಡಿ. ಮೊತ್ತ
1.	2023-24ನೇ ಸಾಲಿನ ನಂಜನಗೂಡು ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯಕ್ಕೆ ಬೇಕಾಗುವ ಉತ್ತಮ ಗುಣಮಟ್ಟದ 250, 750 ಎಂ.ಎಲ್. ಕಂಟೈನರ್‌ಗಳನ್ನು ದೇವಾಲಯದ ಇಂಡೆಂಟ್‌ಗೆ ಅನುಗುಣವಾಗಿ ಸರಬರಾಜು ಮಾಡುವ ಗುತ್ತಿಗೆ ಹಕ್ಕಿನ ಬಗ್ಗೆ.	–	25,000/–
2.	2023-24ನೇ ಸಾಲಿಗೆ ನಂಜನಗೂಡು ಶ್ರೀಕಂಠೇಶ್ವರಸ್ವಾಮಿ ದೇವಾಲಯಕ್ಕೆ ಬೇಕಾಗುವ ಉತ್ತಮ ಗುಣಮಟ್ಟದ ತೀರ್ಥದ ಬಾಟಲ್‌ಗಳನ್ನು ದೇವಸ್ಥಾನಕ್ಕೆ ದೇವಾಲಯದ ಇಂಡೆಂಟ್‌ಗೆ ಅನುಗುಣವಾಗಿ ಸರಬರಾಜು ಮಾಡುವ ಗುತ್ತಿಗೆ ಹಕ್ಕಿನ ಬಗ್ಗೆ.	–	25,000/–

ಇ-ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಇ-ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿದೆ.

1.	ಇ-ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ :	02-02-2023	ರ ನಂತರ
2.	ಇ-ಟೆಂಡರ್ ಸಲ್ಲಿಸುವ ಕೊನೆ ದಿನಾಂಕ ಮತ್ತು ಸಾಲ	15-02-2023	ಸಂಜೆ 5.00 ಗಂಟೆಯವರೆಗೆ
3.	ಇ-ಟೆಂಡರ್‌ನ್ನು ತೆರೆಯುವ ದಿನಾಂಕ ಮತ್ತು ಕಾಲ	17-02-2023	11.00 A.M.ನಂತರ

ಕಾರ್ಯನಿರ್ವಾಹಕ ಅಧಿಕಾರಿಗಳು,
ಶ್ರೀ ಕಂಠೇಶ್ವರಸ್ವಾಮಿ ದೇವಸ್ಥಾನ, ನಂಜನಗೂಡು

ಕರ್ನಾಟಕ ಸರ್ಕಾರ
ಗಣಿ ಮತ್ತು ಭೂವಿಜ್ಞಾನ ಇಲಾಖೆ
#49, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560 001.
ಇ–ಮೇಲ್: dir-mines@karnataka.gov.in

ಸಂ: ಡಿಎಂಜಿ–17012/9/2022/2022–23 ದಿನಾಂಕ: 31.01.2023
ಸಿ.ನಂ: 747347

ಅಧಿಸೂಚನೆ ಮತ್ತು ಟೆಂಡರ್ ಆಹ್ವಾನಿಸುವ ಪ್ರಕಟಣೆ
"3 ಚಿನ್ನದ ಬ್ಲಾಕ್ ಗಳಿಗೆ ಸಂಯೋಜಿತ ಪರವಾನಗಿ ನೀಡಲು ಬಿಡ್‌ಗಳ ಆಹ್ವಾನ"

Mines and Minerals (Development and Regulation) Act 1957ರ ಸೆಕ್ಷನ್ 11 ಅಡಿಯಲ್ಲಿ ಪ್ರದತ್ತ ವಾದ ಅಧಿಕಾರದಂತೆ ಮತ್ತು the Minerals (Evidence of Mineral Contents) Rules, 2015 and the Mineral (Auction) Rules, 2015 ರ ಪ್ರಕಾರ ಮತ್ತು ಅದರಡಿಯಾದ ತಿದ್ದುಪಡಿಗಳ ಅನುಗುಣವಾಗಿ ಕರ್ನಾಟಕ ಸರಕಾರವು ಹರಾಜಿನ ಮೂಲಕ ಸಂಯೋಜಿತ ಪರವಾನಗಿ ನೀಡಲು 3 ಚಿನ್ನದ ಬ್ಲಾಕ್ ಗಳ 'ಎರಡನೇ ಪ್ರಯತ್ನ'ವನ್ನು ನಡೆಸುತ್ತಿದೆ ಮತ್ತು ಈ ಮೂಲಕ ವಿದ್ಯುನ್ಮಾನ ಹರಾಜಿಗೆ ಟೆಂಡರ್ ಗಳನ್ನು ಆಹ್ವಾನಿಸಿದೆ.

ಹರಾಜಿನ ಮೂಲಕ ಸಂಯೋಜಿತ ಪರವಾನಗಿಗಾಗಿ ಖನಿಜ ಬ್ಲಾಕ್‌ಗಳ ಪಟ್ಟಿ:

S. No.	Name of the block	District	Mineral	Concession Area (in Sq. Km)	Tender fee
1.	Sirigiri Gold Block	Ballari	Gold	25.10	INR 2,00,000/- + 18% GST
2.	Basavanagudda Gold Block	Tumakuru & Chitradurga	Gold	25.019	INR 2,00,000/- + 18% GST
3.	Uduvalli Gold Block	Chitradurga	Gold	6.75	INR 2,00,000/- + 18% GST

ಟೆಂಡರ್ ದಾಖಲೆಯಲ್ಲಿ ನಮೂದಿಸಿರುವ ಅರ್ಹತೆಗಳನ್ನು ಹೊಂದಿರುವ ಯಾವುದೇ ವ್ಯಕ್ತಿ, ಸಂಸ್ಥೆ, ಕಂಪನಿಯು ಹರಾಜಿನಲ್ಲಿ ಭಾಗವಹಿಸಬಹುದಾಗಿರುತ್ತದೆ. ಮೇಲಿನ ಪಟ್ಟಿಯಲ್ಲಿ ತಿಳಿಸಿರುವ ಬ್ಲಾಕ್‌ಗಳಿಗೆ ಸಂಬಂಧಿಸಿದಂತೆ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಆಹ್ವಾನಿಸಲಾಗಿದೆ. ಆನ್‌ಲೈನ್‌ನಲ್ಲಿ ಸಲ್ಲಿಸಬೇಕಾದ ತಾಂತ್ರಿಕ ಬಿಡ್‌ಗಳ ಹೊರತಾಗಿ, ಬಿಡ್ಡುದಾರರು ತಮ್ಮ ತಾಂತ್ರಿಕ ಬಿಡ್‌ಗಳ ಮೂಲ ಭೌತಿಕ ಪ್ರತಿಗಳನ್ನು ಟೆಂಡರ್ ಆಹ್ವಾನಿಸುವ ಪ್ರಾಧಿಕಾರಕ್ಕೆ ಅಂದರೆ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರಿಗೆ ಸಲ್ಲಿಸಬೇಕಾಗುತ್ತದೆ.

ಅರ್ಹತಾ ನಿಬಂಧನೆಗಳು, ನಿಯಮ ಹಾಗೂ ನಿಬಂಧನೆಗಳು, ಎಲೆಕ್ಟ್ರಾನಿಕ್ ಹರಾಜಿನಲ್ಲಿ ಭಾಗವಹಿಸಬೇಕಾದ ದಿನಾಂಕ ಮತ್ತು ಸಮಯಗಳ ವಿವರಗಳನ್ನು ಟೆಂಡರ್ ದಸ್ತಾವೇಜಿನಲ್ಲಿ ನೀಡಲಾಗಿರುತ್ತದೆ. ಟೆಂಡರ್ ದಸ್ತಾವೇಜುಗಳು, ಪ್ರಕಟಣೆಗಳು, ನವೀಕರಣಗಳು ಮತ್ತು ಇ–ಹರಾಜು ಪ್ರಕ್ರಿಯೆಗೆ ಸಂಬಂಧಿಸಿದ ಇತರೆ ವಿವರಗಳು ಎಂಎಸ್‌ಟಿಸಿ ನಿಯಮಿತದ ವೆಬ್‌ಸೈಟ್ (https://www.mstcecommerce.com/auctionhome/mlcl/index.jsp) ನಲ್ಲಿ ಮಾತ್ರ ಎಲೆಕ್ಟ್ರಾನಿಕ್ ರೂಪದಲ್ಲಿ ಲಭ್ಯವಾಗುವುದು.

ಆಸಕ್ತಿಯುಳ್ಳ ಮತ್ತು ಅರ್ಹ ಬಿಡ್ಡುದಾರರು ಮೇಲ್ಕಂಡ ವೆಬ್‌ಸೈಟ್‌ನಲ್ಲಿ ನೊಂದಣಿ ಮಾಡಿಕೊಳ್ಳಬೇಕು. ಇ–ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ನೊಂದಣಿ ಮಾಡಿಕೊಂಡ ಬಿಡ್ಡುದಾರರು ಲಾಗಿನ್ ಐಡಿ ಮತ್ತು ಪಾಸ್‌ವರ್ಡ್‌ಗಳನ್ನು ಪಡೆಯಬಹುದು. ಟೆಂಡರ್ ದಸ್ತಾವೇಜು ಮಾದರಿ ಮತ್ತು ಬ್ಲಾಕ್‌ನ ಕುರಿತಾದ ಸಾರಾಂಶಗಳು ಎಂಎಸ್‌ಟಿಸಿ ನಿಯಮಿತದ ವೆಬ್‌ಸೈಟ್ (https://www.mstcecommerce.com/ auctionhome/mlcl/index.jsp) ನಲ್ಲಿ ಉಚಿತವಾಗಿ ಲಭ್ಯವಿದೆ. ಬಿಡ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ನೊಂದಣಿ ಮಾಡಿಕೊಂಡ ಬಿಡ್ಡುದಾರರು ಟೆಂಡರ್ ದಸ್ತಾವೇಜಿನಲ್ಲಿ ಸೂಚಿಸಿರುವ ಹಣ + ಜಿಎಸ್‌ಟಿ ಪಾವತಿಸುವ ಮೂಲಕ ಸಂಬಂಧಪಟ್ಟ ಗಣಿ ಬ್ಲಾಕ್ನ ಟೆಂಡರ್ ದಸ್ತಾವೇಜುಗಳನ್ನು ಎಂಎಸ್‌ಟಿಸಿ ನಿಯಮಿತದ ವೆಬ್‌ಸೈಟ್‌ನಿಂದ ಪಡೆಯಬಹುದು.

ಟೆಂಡರ್ ದಸ್ತಾವೇಜನ್ನು ಖರೀದಿಸುವಲ್ಲಿ ಶೇಕಡ 18 ರಷ್ಟು ಜಿಎಸ್‌ಟಿ ಅನ್ವಯಿಸುತ್ತದೆ. ಅನ್ವಯಿಸುವ ಜಿ.ಎಸ್.ಟಿಯನ್ನು ಟೆಂಡರ್ ನಲ್ಲಿ ಭಾಗವಹಿಸಲು ಇಚ್ಛಿಸುವ ಬಿಡ್ಡುದಾರರು ಪಾವತಿಸತಕ್ಕದ್ದು. ಅನ್ವಯವಾಗುವ ಜಿಎಸ್‌ಟಿಯನ್ನು ರಿವರ್ಸ್ ಚಾರ್ಜ್ ಕಾರ್ಯವಿಧಾನದಡಿಯಲ್ಲಿ ಸಂಭಾವ್ಯ ಬಿಡ್ಡರ್ ಸ್ವತಃ ಪಾವತಿಸಬೇಕಾಗುತ್ತದೆ. ಅನ್ವಯವಾಗುವ ಜಿ.ಎಸ್.ಟಿಯನ್ನು ಪಾವತಿಸುವುದು ಬಿಡ್ಡುದಾರರದ್ದೇ ಕಾನೂನಾತ್ಮಕ ಮತ್ತು ಶಾಸನಬದ್ಧ ಹೊಣೆಯಾಗಿರುತ್ತದೆ. ಈ ಸಂಬಂಧ ಇಲಾಖೆ ಅಥವಾ ಎಂ.ಎಸ್.ಟಿ.ಸಿ ಯು ಭಾದ್ಯರಾಗುವುದಿಲ್ಲ.

ಟೆಂಡರ್ ದಸ್ತಾವೇಜುಗಳ ಮಾರಾಟವು ದಿನಾಂಕ: 01.02.2023 ರಿಂದ ಪ್ರಾರಂಭವಾಗುತ್ತದೆ. ದಿನಾಂಕ: 20.03.2023 ಟೆಂಡರ್ ಮಾರಾಟದ ಕೊನೆಯ ದಿನವಾಗಿರುತ್ತದೆ. ತಾಂತ್ರಿಕ ಹಾಗೂ ಬಿಡ್ ಮೊತ್ತ ನಮೂದಿಸಿದ ಪ್ರಸ್ತಾವನೆಯನ್ನು ಎಂ.ಎಸ್.ಟಿ.ಸಿ ವೆಬ್‌ಸೈಟ್‌ನಲ್ಲಿ ದಿನಾಂಕ: 27.03.2023 ರ 17.00 ಗಂಟೆಗೆ ಅಥವಾ ಅದಕ್ಕೂ ಮುಂಚಿತವಾಗಿ ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್‌ಗಳ ಮೂಲ ಭೌತಿಕ ಪ್ರತಿಗಳನ್ನು ಟೆಂಡರ್ ಆಹ್ವಾನಿಸುವ ಪ್ರಾಧಿಕಾರಕ್ಕೆ ಅಂದರೆ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ ಇವರಿಗೆ ದಿನಾಂಕ: 27.03.2023 ರ 17.00 ಗಂಟೆಗೆ ಅಥವಾ ಅದಕ್ಕೂ ಮುಂಚಿತವಾಗಿ ಸಲ್ಲಿಸಬೇಕಾಗುತ್ತದೆ.

ಸಹಿ/–
ನಿರ್ದೇಶಕರು,
DIPR/CP/4411/Zenkar/2022-23

ಕರ್ನಾಟಕ ಸರ್ಕಾರ
ಗಣಿ ಮತ್ತು ಭೂವಿಜ್ಞಾನ ಇಲಾಖೆ
#49, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560 001.
ಇ–ಮೇಲ್: dir-mines@karnataka.gov.in

ಸಂ: ಡಿಎಂಜಿ–17012/23/2021/2022–23 ದಿನಾಂಕ: 31.01.2023
ಸಿ.ನಂ: 655620

ಅಧಿಸೂಚನೆ ಮತ್ತು ಟೆಂಡರ್ ಆಹ್ವಾನಿಸುವ ಪ್ರಕಟಣೆ
"5 ಚಿನ್ನದ ಬ್ಲಾಕ್ ಗಳಿಗೆ ಸಂಯೋಜಿತ ಪರವಾನಗಿ ನೀಡಲು ಬಿಡ್‌ಗಳ ಆಹ್ವಾನ"

Mines and Minerals (Development and Regulation) Act 1957ರ ಸೆಕ್ಷನ್ 11 ಅಡಿಯಲ್ಲಿ ಪ್ರದತ್ತ ವಾದ ಅಧಿಕಾರದಂತೆ ಮತ್ತು the Minerals (Evidence of Mineral Contents) Rules, 2015 and the Mineral (Auction) Rules, 2015 ರ ಪ್ರಕಾರ ಮತ್ತು ಅದರಡಿಯಾದ ತಿದ್ದುಪಡಿಗಳ ಅನುಗುಣವಾಗಿ ಕರ್ನಾಟಕ ಸರಕಾರವು ಹರಾಜಿನ ಮೂಲಕ ಸಂಯೋಜಿತ ಪರವಾನಗಿ ನೀಡಲು 5 ಚಿನ್ನದ ಬ್ಲಾಕ್ ಗಳ 'ಎರಡನೇ ಪ್ರಯತ್ನ'ವನ್ನು ನಡೆಸುತ್ತಿದೆ ಮತ್ತು ಈ ಮೂಲಕ ವಿದ್ಯುನ್ಮಾನ ಹರಾಜಿಗೆ ಟೆಂಡರ್ ಗಳನ್ನು ಆಹ್ವಾನಿಸಿದೆ.

ಹರಾಜಿನ ಮೂಲಕ ಸಂಯೋಜಿತ ಪರವಾನಗಿಗಾಗಿ ಖನಿಜ ಬ್ಲಾಕ್‌ಗಳ ಪಟ್ಟಿ:

S. No.	Name of the block	District	Mineral	Concession Area (in Sq. Km)	Tender fee
1.	Mududi Gold Block	Hassan	Gold	40.00	INR 2,00,000/- + 18% GST
2.	Kanivehalli Gold Block	Davangere & Vijayanagara	Gold	30.78	INR 2,00,000/- + 18% GST
3.	Kakol Gold Block	Haveri	Gold	29.06	INR 2,00,000/- + 18% GST
4.	Maruthipura Gold Block	Dharwad and Haveri	Gold	28.92	INR 2,00,000/- + 18% GST
5.	Katanahatti Gold Block	Chitradurga	Gold	25.22	INR 2,00,000/- + 18% GST

ಟೆಂಡರ್ ದಾಖಲೆಯಲ್ಲಿ ನಮೂದಿಸಿರುವ ಅರ್ಹತೆಗಳನ್ನು ಹೊಂದಿರುವ ಯಾವುದೇ ವ್ಯಕ್ತಿ, ಸಂಸ್ಥೆ, ಕಂಪನಿಯು ಹರಾಜಿನಲ್ಲಿ ಭಾಗವಹಿಸಬಹುದಾಗಿರುತ್ತದೆ. ಮೇಲಿನ ಪಟ್ಟಿಯಲ್ಲಿ ತಿಳಿಸಿರುವ ಬ್ಲಾಕ್‌ಗಳಿಗೆ ಸಂಬಂಧಿಸಿದಂತೆ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಆಹ್ವಾನಿಸಲಾಗಿದೆ. ಆನ್‌ಲೈನ್‌ನಲ್ಲಿ ಸಲ್ಲಿಸಬೇಕಾದ ತಾಂತ್ರಿಕ ಬಿಡ್‌ಗಳ ಹೊರತಾಗಿ, ಬಿಡ್ಡುದಾರರು ತಮ್ಮ ತಾಂತ್ರಿಕ ಬಿಡ್‌ಗಳ ಮೂಲ ಭೌತಿಕ ಪ್ರತಿಗಳನ್ನು ಟೆಂಡರ್ ಆಹ್ವಾನಿಸುವ ಪ್ರಾಧಿಕಾರಕ್ಕೆ ಅಂದರೆ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರಿಗೆ ಸಲ್ಲಿಸಬೇಕಾಗುತ್ತದೆ.

ಅರ್ಹತಾ ನಿಬಂಧನೆಗಳು, ನಿಯಮ ಹಾಗೂ ನಿಬಂಧನೆಗಳು, ಎಲೆಕ್ಟ್ರಾನಿಕ್ ಹರಾಜಿನಲ್ಲಿ ಭಾಗವಹಿಸಬೇಕಾದ ದಿನಾಂಕ ಮತ್ತು ಸಮಯಗಳ ವಿವರಗಳನ್ನು ಟೆಂಡರ್ ದಸ್ತಾವೇಜಿನಲ್ಲಿ ನೀಡಲಾಗಿರುತ್ತದೆ. ಟೆಂಡರ್ ದಸ್ತಾವೇಜುಗಳು, ಪ್ರಕಟಣೆಗಳು, ನವೀಕರಣಗಳು ಮತ್ತು ಇ–ಹರಾಜು ಪ್ರಕ್ರಿಯೆಗೆ ಸಂಬಂಧಿಸಿದ ಇತರೆ ವಿವರಗಳು ಎಂಎಸ್‌ಟಿಸಿ ನಿಯಮಿತದ ವೆಬ್‌ಸೈಟ್ (https://www.mstcecommerce.com/auctionhome/mlcl/index.jsp) ನಲ್ಲಿ ಮಾತ್ರ ಎಲೆಕ್ಟ್ರಾನಿಕ್ ರೂಪದಲ್ಲಿ ಲಭ್ಯವಾಗುವುದು.

ಆಸಕ್ತಿಯುಳ್ಳ ಮತ್ತು ಅರ್ಹ ಬಿಡ್ಡುದಾರರು ಮೇಲ್ಕಂಡ ವೆಬ್‌ಸೈಟ್‌ನಲ್ಲಿ ನೊಂದಣಿ ಮಾಡಿಕೊಳ್ಳಬೇಕು. ಇ–ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ನೊಂದಣಿ ಮಾಡಿಕೊಂಡ ಬಿಡ್ಡುದಾರರು ಲಾಗಿನ್ ಐಡಿ ಮತ್ತು ಪಾಸ್‌ವರ್ಡ್‌ಗಳನ್ನು ಪಡೆಯಬಹುದು. ಟೆಂಡರ್ ದಸ್ತಾವೇಜು ಮಾದರಿ ಮತ್ತು ಬ್ಲಾಕ್‌ನ ಕುರಿತಾದ ಸಾರಾಂಶಗಳು ಎಂಎಸ್‌ಟಿಸಿ ನಿಯಮಿತದ ವೆಬ್‌ಸೈಟ್ (https://www.mstcecommerce.com/ auctionhome/mlcl/index.jsp) ನಲ್ಲಿ ಉಚಿತವಾಗಿ ಲಭ್ಯವಿದೆ. ಬಿಡ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ನೊಂದಣಿ ಮಾಡಿಕೊಂಡ ಬಿಡ್ಡುದಾರರು ಟೆಂಡರ್ ದಸ್ತಾವೇಜಿನಲ್ಲಿ ಸೂಚಿಸಿರುವ ಹಣ + ಜಿಎಸ್‌ಟಿ ಪಾವತಿಸುವ ಮೂಲಕ ಸಂಬಂಧಪಟ್ಟ ಗಣಿ ಬ್ಲಾಕ್ನ ಟೆಂಡರ್ ದಸ್ತಾವೇಜುಗಳನ್ನು ಎಂಎಸ್‌ಟಿಸಿ ನಿಯಮಿತದ ವೆಬ್‌ಸೈಟ್‌ನಿಂದ ಪಡೆಯಬಹುದು.

ಟೆಂಡರ್ ದಸ್ತಾವೇಜನ್ನು ಖರೀದಿಸುವಲ್ಲಿ ಶೇಕಡ 18 ರಷ್ಟು ಜಿಎಸ್‌ಟಿ ಅನ್ವಯಿಸುತ್ತದೆ. ಅನ್ವಯಿಸುವ ಜಿ.ಎಸ್.ಟಿಯನ್ನು ಟೆಂಡರ್ ನಲ್ಲಿ ಭಾಗವಹಿಸಲು ಇಚ್ಛಿಸುವ ಬಿಡ್ಡುದಾರರು ಪಾವತಿಸತಕ್ಕದ್ದು. ಅನ್ವಯವಾಗುವ ಜಿಎಸ್‌ಟಿಯನ್ನು ರಿವರ್ಸ್ ಚಾರ್ಜ್ ಕಾರ್ಯ ವಿಧಾನದಡಿಯಲ್ಲಿ ಸಂಭಾವ್ಯ ಬಿಡ್ಡರ್ ಸ್ವತಃ ಪಾವತಿಸಬೇಕಾಗುತ್ತದೆ. ಅನ್ವಯವಾಗುವ ಜಿ.ಎಸ್.ಟಿಯನ್ನು ಪಾವತಿಸುವುದು ಬಿಡ್ಡುದಾರರದ್ದೇ ಕಾನೂನಾತ್ಮಕ ಮತ್ತು ಶಾಸನಬದ್ಧ ಹೊಣೆಯಾಗಿರುತ್ತದೆ. ಈ ಸಂಬಂಧ ಇಲಾಖೆ ಅಥವಾ ಎಂ.ಎಸ್.ಟಿ.ಸಿ ಯು ಭಾದ್ಯರಾಗುವುದಿಲ್ಲ.

ಟೆಂಡರ್ ದಸ್ತಾವೇಜುಗಳ ಮಾರಾಟವು ದಿನಾಂಕ: 01.02.2023 ರಿಂದ ಪ್ರಾರಂಭವಾಗುತ್ತದೆ. ದಿನಾಂಕ: 20.03.2023 ಟೆಂಡರ್ ಮಾರಾಟದ ಕೊನೆಯ ದಿನವಾಗಿರುತ್ತದೆ. ತಾಂತ್ರಿಕ ಹಾಗೂ ಬಿಡ್ ಮೊತ್ತ ನಮೂದಿಸಿದ ಪ್ರಸ್ತಾವನೆಯನ್ನು ಎಂ.ಎಸ್.ಟಿ.ಸಿ ವೆಬ್‌ಸೈಟ್‌ನಲ್ಲಿ ದಿನಾಂಕ: 27.03.2023 ರ 17.00 ಗಂಟೆಗೆ ಅಥವಾ ಅದಕ್ಕೂ ಮುಂಚಿತವಾಗಿ ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್‌ಗಳ ಮೂಲ ಭೌತಿಕ ಪ್ರತಿಗಳನ್ನು ಟೆಂಡರ್ ಆಹ್ವಾನಿಸುವ ಪ್ರಾಧಿಕಾರಕ್ಕೆ ಅಂದರೆ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ ಇವರಿಗೆ ದಿನಾಂಕ: 27.03.2023 ರ 17.00 ಗಂಟೆಗೆ ಅಥವಾ ಅದಕ್ಕೂ ಮುಂಚಿತವಾಗಿ ಸಲ್ಲಿಸಬೇಕಾಗುತ್ತದೆ.

ಸಹಿ/–
ನಿರ್ದೇಶಕರು,
DIPR/CP/4412/Zenkar/2022-23

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ
Part-Time Jobs
ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ತಕ್ಷಣ: 9611224633/ 9611225344
ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ತಕ್ಷಣ: 9611225388/ 9611225266
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.
Drivers
ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ : 18000- 20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

General
ತಕ್ಷಣ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಆನ್‌ಲೈನ್‌ಗಳಿಗೆ SSLC,PUC,Degree - Diplomaದವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,000 -56,000/- ವಸತಿಯೂಟದೊಂದಿಗೆ 9035520339/ 9036125229
ಪಾಂಪ್ಲೆಟ್ ಹಂಚಲು ಹುಡುಗರು ಬೇಕಾಗಿದ್ದಾರೆ. ಬೆಳಿಗ್ಗೆ8.00ರಿಂದ ಸಂಜೆ 8.00ರವರೆಗೆ ಕೆಲಸ. ಸಂಬಳ:13000 ವಸತಿ ಸೌಲಭ್ಯವಿದೆ, ಬನಶಂಕರಿ, ಬೆಂಗಳೂರು. 9620444460
Hospital & Medical Jobs
ಬೇಕಾಗಿದ್ದಾರೆ ಅನುಭವವಿರುವ/ ಇಲ್ಲದಿರುವ ಯುವತಿಯರು, ಮಹಿಳೆಯರು, ವಿಧವೆ, ವಿಚ್ಛೆದಿತಿಯರು ನಮ್ಮ ಸಂಸ್ಥೆಯಲ್ಲಿ ಉಳಿದುಕೊಂಡು ಕೆಲಸ ಮಾಡುವವರು ತಕ್ಷಣವೇ ಸಂಪರ್ಕಿಸಿ: 7483960098, 9035113222
Wanted
WORK FROM HOME: ವಾರಕ್ಕೆ 10,000 ಸಂಪಾದನೆ, ಟೈಪಿಂಗ್ ವರ್ಕ್, 10th Pass, Mobile/ Laptop ಇದ್ದರೆ ಸಾಕು. 8904838273

ವೈಯಕ್ತಿಕ
Change of Name
CHANGE OF NAME
I, VENKATESH HARIJAN, Residing at F-17, Krushi Nagar, Ward no. 3, Dharwad, U.A.S Dharwad, Bengaluru-580005, have changed my name to MOHAMMED AYAAN & religion from Hindu to Muslim, vide affidavit dated 05.11.2018, before Notary C.V. Earappa, Bangalore.
ಭವಿಷ್ಯ
Astrology
ಸ್ತ್ರೀ_ವಶೀಕರಣ, ಪುರುಷ ವಶೀಕರಣ, ಮಾಟಮಂತ್ರ, ಶತ್ರುನಾಶ, ಏನೇ ಸಮಸ್ಯೆಗಳಿದ್ದರೂ, 3 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ. ಉಚಿತ ಭವಿಷ್ಯ, ಖಚಿತ ಪರಿಹಾರ, ರೈತರ ಸಮಸ್ಯೆಗಳಿಗೆ ತಾಯತ ಮಾಡಿಕೊಡುತ್ತಾರೆ. ಸಂಪರ್ಕಿಸಿ: ಕೇರಳದ ಪ್ರಖ್ಯಾತ ಜ್ಯೋತಿಷ್ಯರು, ಪಂಡಿತ್ ಸುಮಂತ್ ಕುಮಾರ್, 8722756967.
ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ:ಭವಿಷ್ಯ:ಖಚಿತ:ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171
★||ಶ್ರೀಕ್ಷೇತ್ರ ಧರ್ಮಸ್ಥಳದಿಂದ||★ ನೇರಪರಿಹಾರ ಉಚಿತ_ಸಲಹೆ ಖಚಿತ ಪರಿಹಾರ ನಿಮ್ಮಸಮಸ್ಯೆ ಏನೇಯಿರಲಿ ಎಷ್ಟೇಕಠಿಣವಾಗಿರಲಿ 3ದಿನದಲ್ಲಿ ಪರಿಹಾರ ಶತಸಿದ್ಧ. ಸಂಪರ್ಕಿಸಿ: ಮಂಜುನಾಥ್‌ಭಟ್ 9880522577
ಸ್ತ್ರೀವಶೀಕರಣ, ಪುರುಷವಶೀಕರಣ, ಪ್ರೀತಿಪ್ರೇಮ, ಇಷ್ಟಪಟ್ಟವರು ನಿಮ್ಮಂತಾಗಲು 11ಗಂಟೆಗಳಲ್ಲಿ, ಸ್ತ್ರೀಯರಿಗೆ ಕಡಿಮೆ ಖರ್ಚಿನಲ್ಲಿ ಪರಿಹಾರ. 9844174018
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರವಾಸ
Travel
02.03.2023 ರಿಂದ 6 ದಿನಗಳು ದುಬೈ,ಅಬುಧಾಬಿ ಶಾಪಿಂಗ್ ಫೆಸ್ಟಿವಲ್ ಸ್ಪೆಷಲ್. 05.05.2023 ರಿಂದ 7/10 ದಿನಗಳು ಥೈಲ್ಯಾಂಡ್ ಮಲೇಶಿಯಾ,ಸಿಂಗಾಪುರ್ ಬ್ಯಾಂಕಾಕ್ ಪಟ್ಟಾಯ ಕೊಲಾಲಾಂಪುರ. 02.04.2023 ರಿಂದ 6 ದಿನಗಳು ಕಲ್ಕತ್ತಾ,ಭುವನೇಶ್ವರ್ ಪೂರಿಜಗನ್ನಾಥ್ ಕೋನಾರ್ಕ್. 11.04.2023 ರಿಂದ 8/10 ದಿನಗಳು ನೇಪಾಳ ಪಶುಪತಿನಾಥ ಮುಕ್ತಿನಾಥ ಕಾಟ್ಮಂಡು ಪೋಕ್ರಾ,ಲುಂಬಿನಿ ಗೋರಕ್‌ಪುರ್. 29.04.2023 ರಿಂದ 6/8 ದಿನಗಳು ಕಾಶಿ,ಗಯಾ, ಪ್ರಯಾಗ,ಅಯೋಧ್ಯ ನೈಮಿಶರಣ್ಯ ಹಾಗು ಚಾರ್‌ಧಾಮ್ ಅಮರನಾಥ್ ಗ್ರೂಪ್ ಪ್ರವಾಸಗಳಿಗಾಗಿ ಸಂಪರ್ಕಿಸಿ: ತತ್ವಮಸಿ ಟೂರ್ಸ್ 7795787484 9480158233
ಹೆಸರಾಂತ ಪ್ರವಾಸಿ ಸಂಸ್ಥೆಯಿಂದ: ಮಾಘ ಸ್ನಾನ ಪ್ರಯುಕ್ತ 02.02.2023 26.02.2023 06.03.2023 ಅಲಹಾಬಾದ್ ಕಾಶಿ,ಬುದ್ಧಗಯಾ. 11.02.2023 ಮಹಾಶಿವರಾತ್ರಿ ನೇಪಾಳ ಪಶುಪತಿನಾಥ್ ದರ್ಶನ. 26.02.2023 ಸೋಮನಾಥ ದ್ವಾರಕಾ ನಿಷ್ಕಳಂಕ ಮಾಹದೇವ,ಓಂಕಾರೇಶ್ವರ್ ಮಂಹಾಕಾಳೇಶ್ವರ್. 17.04.2023 23.04.2023 ಚಾರ್ಧಾಮ್ ಸಮೇತ ಪ್ರವಾಸ. ಏಪ್ರಿಲ್ ಮೇ ಜೂನ್ ತಿಂಗಳಲ್ಲಿ ಉತ್ತರ ಭಾರತ ಪ್ರವಾಸಗಳಿಗೆ ಸಂಪರ್ಕಿಸಿ. ಏಷ್ಯನ್ ಟ್ರಾವಲ್ ಏಜೆನ್ಸಿ ಬೆಂಗಳೂರು-4. 26574131 8317446683 9686708171
02.03.2023 ರಿಂದ 15 ದಿನಗಳ ವಿಮಾನದಲ್ಲಿ ಉಜ್ಜಯಿನಿ ಮಹಾಕಾಳೇಶ್ವರ್ ಅಷ್ಟಜ್ಯೋತಿರ್ಲಿಂಗ ಪ್ರವಾಸ. 27.03.2023 ರಿಂದ 10/18 ದಿನಗಳ ನೇಪಾಳ ಮುಕ್ತಿನಾಥ ಕಾಶಿ,ಗಯಾ ಕೊಲ್ಕತ್ತಾ,ಪುರಿ ಕೋನಾರ್ಕ್ ಭುವನೇಶ್ವರ್. 27.04.2023 ರಿಂದ 14 ದಿನಗಳ ಚಾರ್‌ಧಾಮ್ ಪ್ರವಾಸ. ಸಂಪರ್ಕಿಸಿ: ಏಷ್ಯನ್ ಟೂರ್ಸ್ ಅಂಡ್ ಟ್ರಾವಲ್ಸ್, ತ್ಯಾಗರಾಜನಗರ ಬೆಂಗಳೂರು70. 9342287551 8050629305
★ಶ್ರೇಯಸ್ ಟೂರ್ಸ್★ 26.02.2023 7ದಿನಗಳು ಕಾಶಿ ನೈಮಿಷ್ಯಾರಣ್ಯಾ,ಅಯೋಧ್ಯ ಪ್ರಯಾಗ ಗಯಾ ಬುದ್ಧಗಯಾ, ಸೀತಾಮಡು.20.02.2023 11ದಿನಗಳು ಚಂದೀಗಢ್,ಸಿಮ್ಲಾ ಕುಲುಮನಾಲಿ 5ದೇವಿಯರು ವೈಷ್ಣೋದೇವಿ,ಅಮೃತಸರ್ ವಾಘಗಡಿ,ಕುರುಕ್ಷೇತ್ರ., 04.03.2023 10ದಿನಗಳು ಅಖಂಡ ನೇಪಾಳ ರಾಷ್ಟ್ರಪ್ರವಾಸ (ಮುಕ್ತಿನಾಥ ಸಹಿತ) 25.03.2023,15.04.2023 06.05.2023 21/16/13ದಿನಗಳು ಈಶಾನ್ಯ ರಾಜ್ಯಗಳ(ಸೆವೆನ್‌ಸಿಸ್ಟರ್ಸ ಪ್ರವಾಸ)ಅಸ್ಸಾಂ, ಅರುಣಾಚಲ, ನಾಗಲ್ಯಾಂಡ್,ಮಣಿಪುರ ತ್ರಿಪುರ ಮೇಘಾಲಯ,ಮಿಝೋರಾಂ. 8073824856, 6366322639, 9206979202
★07.02.2023 16ದಿನಗಳು★ 95ದಿವ್ಯದೇಶಂಪ್ರವಾಸ. 04.03.2023, 11.04.2023 8/13ದಿನಗಳು ಕಾಶಿ ಪ್ರವಾಸ, 20.04.2023 7ದಿನಗಳು ವೈಷ್ಣೋದೇವಿ, ಅಮೃತಸರ್ ಪ್ರವಾಸ.27.04.2023 16ದಿನಗಳು ಕಾಶಿ,ನೇಪಾಳ,ಮುಕ್ತಿನಾಥ ಜನಕಪುರ್ ಪ್ರವಾಸ.ಆರ್.ಗಾಂಧಿ ಟೂರ್ಸ್(ರಿ) 9902433500/ 9945445809/ 26760367
15.03.2023 6ದಿನಗಳು ವಿಮಾನದಲ್ಲಿ,A/c Busನಲ್ಲಿ ಕಾಶಿ,ಗಯಾ, ಬೋಧಗಯಾ ಅಯೋಧ್ಯ ಅಲಹಾಬದ್,(ಕೆಲವೇ ಸೀಟುಗಳಿವೆ)28000/ ಪ್ರತಿತಿಂಗಳು ಅಂಡಮಾನ್ ಹವಳದ್ವೀಪ ಹಡಗು/ವಿಮಾನದಲ್ಲಿ. Royal_Package "ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್" 9845560219/ 9739847429.
Pilgrimage Tours
ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 23/02/23 ದೆಹಲಿ,ವೈಷ್ಣೋದೇವಿ, ಅಮೃತಸರ್,ವಾಘಬೋರ್ಡರ್, ಧರ್ಮಶಾಲಾ, ಪಂಚ ಶಕ್ತಿಪೀಠ.08/02/23 ಕಾಶಿ,ಅಯೋಧ್ಯ.09/03/23ನೇ ಪಾಳ,ಮುಕ್ತಿನಾಥ್.17/04/23 ಜಾರ್ಖಂಡ್ ಬಾಬಾ ವೈದ್ಯನಾಥ ಜ್ಯೋತಿರ್ಲಿಂಗ,ಕೋಲ್ಕತಾ,ಗಂಗಾಸಾಗರ,ಭುವನೇಶ್ವರ, ಪೂರಿ.04/03/23 ಗುಜರಾತ್, ಎಂ.ಪಿ 9591017782/9880621353

Book Your Classifieds Ads
Online Log in to
dhclassifieds.com
Contact :
9845114560 : 9731810277
9901641752 : 9886213331
080 - 45557163 / 164
DH DECCAN HERALD ಪ್ರಜಾವಾಣಿ

ಟಿಟಿ: ಯಶಸ್ವಿನಿ–ಅನರ್ಘ್ಯಾಗೆ ಕಂಚು

ಕಂಚಿನ ಪದಕಗಳೊಂದಿಗೆ ಅನರ್ಘ್ಯಾ ಮಂಜುನಾಥ್ ಮತ್ತು ಯಶಸ್ವಿನಿ ಘೋರ್ಪಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಯಶಸ್ವಿನಿ ಘೋರ್ಪಡೆ ಮತ್ತು ಅನರ್ಘ್ಯಾ ಮಂಜುನಾಥ್ ಅವರು ಖೇಲೊ ಇಂಡಿಯಾ ಯೂತ್ ಕ್ರೀಡಾಕೂಟದ ಟೇಬಲ್ ಟೆನಿಸ್ ಸ್ಪರ್ಧೆಯಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದಾರೆ.

ಮಧ್ಯಪ್ರದೇಶದ ಭೋಪಾಲ್‌ನಲ್ಲಿ ನಡೆಯುತ್ತಿರುವ ಕೂಟದಲ್ಲಿ ಬುಧವಾರ ನಡೆದ ಮಹಿಳಾ ಡಬಲ್ಸ್‌ನ ಕಂಚಿನ ಪದಕದ ಪ್ಲೇಆಫ್‌ನಲ್ಲಿ ಕರ್ನಾಟಕದ ಆಟಗಾರ್ತಿಯರು 8-11, 13-11, 9-11, 11-4, 11-9ರಿಂದ ಹರಿಯಾಣದ ಸುಹಾನಾ ಸೈನಿ ಮತ್ತು ಪ್ರಿತೋಕಿ ಚಕ್ರವರ್ತಿ ಅವರನ್ನು ಸೋಲಿಸಿದರು.

ಕ್ವಾರ್ಟರ್‌ಫೈನಲ್‌ನಲ್ಲಿ ಯಶಸ್ವಿನಿ–ಅನರ್ಘ್ಯಾ 11-7, 11-6, 11-9ರಿಂದ ತಮಿಳುನಾಡಿನ ಶ್ರೀಯಾ ಆನಂದ್ ಮತ್ತು ನೇಹಲ್ ವೆಂಕಟಸ್ವಾಮಿ ವಿರುದ್ಧ ಗೆದ್ದಿದ್ದರು.

ನಾಲ್ಕರ ಘಟ್ಟದ ಪಂದ್ಯದಲ್ಲಿ ಮಹಾರಾಷ್ಟ್ರದ ಪ್ರೀತಾ ವರ್ತಿಕರ್–ಜೆನ್ನಿಫರ್ ವರ್ಗೀಸ್ 11-7, 11-4, 11-8ರಿಂದ ಯಶಸ್ವಿನಿ– ಅನರ್ಘ್ಯಾ ಅವರನ್ನು ಸೋಲಿಸಿದ್ದರು.


ಇಂದಿನ ಹೈಲೈಟ್‌ಗಾಗಿ ಇಲ್ಲಿ
ಸ್ಕ್ಯಾನ್ ಮಾಡಿ

ಕ್ರೀಡಾ ಕ್ಷೇತ್ರಕ್ಕೆ ಒಟ್ಟು ₹ 3,397.32 ಕೋಟಿ ಹಂಚಿಕೆ

ಖೇಲೊ ಇಂಡಿಯಾಗೆ ₹ 1,045 ಕೋಟಿ

ಕೇಂದ್ರ ಬಜೆಟ್ 2023-24

ನವದೆಹಲಿ (ಪಿಟಿಐ): ಏಷ್ಯನ್ ಗೇಮ್ಸ್ ಮತ್ತು 2024ರ ಪ್ಯಾರಿಸ್ ಒಲಿಂಪಿಕ್ಸ್‌ಗೆ ಭಾರತದ ಅಥ್ಲೀಟ್‌ಗಳು ಸಿದ್ಧಗೊಳ್ಳುತ್ತಿರುವ ಈ ಹಣಕಾಸು ವರ್ಷದಲ್ಲಿ ಕ್ರೀಡಾ ಕ್ಷೇತ್ರಕ್ಕೆ ಕೇಂದ್ರ ಬಜೆಟ್‌ನಲ್ಲಿ ಕಳೆದ ಬಾರಿಗಿಂತ ₹ 723.97 ಹೆಚ್ಚುವರಿ ಮೊತ್ತ ತೆಗೆದಿರಿಸಲಾಗಿದೆ.

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬುಧವಾರ ಘೋಷಿಸಿದ ಬಜೆಟ್‌ನಲ್ಲಿ ಕ್ರೀಡೆಗೆ ₹ 3,397.32 ಕೋಟಿ ಮೊತ್ತ ಘೋಷಿಸಿದ್ದಾರೆ.

2022–23ರ ಹಣಕಾಸು ವರ್ಷದಲ್ಲಿ ಕ್ರೀಡೆಗೆ ಮೊದಲು ₹ 3,062.60 ಕೋಟಿ ಘೋಷಣೆ ಮಾಡಲಾಗಿತ್ತು. ಬಳಿಕ ಅದನ್ನು ₹ 2,673.35 ಕೋಟಿಗೆ ಕಡಿತ ಮಾಡಲಾಗಿತ್ತು. ಹ್ಯಾಂಗ್‌ಜೌ ಏಷ್ಯನ್ ಗೇಮ್ಸ್ ಮುಂದೂಡಿಕೆಯಾದದ್ದು ನಿಗದಿತ ಮೊತ್ತದಲ್ಲಿ ಕಡಿತ ಮಾಡಲು ಪ್ರಮುಖ ಕಾರಣಗಳಲ್ಲಿ ಒಂದಾಗಿತ್ತು.

ಸರ್ಕಾರದ ಪ್ರಮುಖ ಕಾರ್ಯಕ್ರಮವಾದ ‘ಖೇಲೊ ಇಂಡಿಯಾ‘ಗೆ ಈ ಬಾರಿ ₹ 1,045 ಕೋಟಿ ಹಂಚಿಕೆ ಮಾಡಲಾಗಿದೆ. ಕಳೆದ ಬಾರಿ ಈ ಮೊತ್ತ ₹ 606 ಕೋಟಿ ಇತ್ತು.

ಕ್ರೀಡಾಪಟುಗಳಿಗೆ ರಾಷ್ಟ್ರೀಯ ಶಿಬಿರ, ಇನ್ನಿತರ ಸೌಲಭ್ಯಗಳು ಮತ್ತು ಕೋಚ್‌ಗಳ ನೇಮಕ ಪ್ರಕ್ರಿಯೆಯ ಮೇಲ್ವಿಚಾರಣೆ ವಹಿಸುವ ಭಾರತ ಕ್ರೀಡಾ ಪ್ರಾಧಿಕಾರಕ್ಕೆ (ಎಸ್‌ಎಐ) ಕಳೆದ ಬಾರಿಗಿಂತ ₹ 36.09 ಕೋಟಿ ಹೆಚ್ಚುವರಿ ಮೊತ್ತ ನೀಡಲಾಗಿದೆ. ಈ ಬಾರಿ ಎಸ್‌ಎಐಗೆ ₹ 785.52 ಕೋಟಿ ತೆಗೆದಿರಿಸಲಾಗಿದೆ.

ರಾಷ್ಟ್ರೀಯ ಕ್ರೀಡಾ ಫೆಡರೇಷನ್‌ಗಳಿಗೆ (ಎನ್‌ಎಸ್‌ಎಫ್) ನೀಡುವ ಮೊತ್ತವನ್ನು ₹ 45 ಕೋಟಿಗೆ ಹೆಚ್ಚಿಸಲಾಗಿದೆ. ಕಳೆದ ಬಾರಿ ₹ 280 ಕೋಟಿ ನೀಡಲಾಗಿದ್ದರೆ, ಈ ಬಾರಿ ₹ 325 ಕೋಟಿ ಮೊತ್ತ ಒದಗಿಸಲಾಗಿದೆ.

ನೇರ ಹಂಚಿಕೆ: ರಾಷ್ಟ್ರೀಯ ಉದ್ದೀಪನಾ ಮದ್ದು ಸೇವನೆ ತಡೆ ಘಟಕ (ನಾಡಾ) ಮತ್ತು ರಾಷ್ಟ್ರೀಯ ಮದ್ದು ಸೇವನೆ ಪರೀಕ್ಷಾ ಪ್ರಯೋಗಾಲಯಕ್ಕೆ (ಎನ್‌ಡಿಟಿಎಲ್) ಈ ಹಿಂದೆ ಭಾರತ ಕ್ರೀಡಾ ಪ್ರಾಧಿಕಾರದ ಮೂಲಕ ಅನುದಾನ ಹಂಚಿಕೆ ಮಾಡಲಾಗುತ್ತಿತ್ತು. ಆದರೆ ಈ ಬಾರಿ ನೇರವಾಗಿ ಇಲಾಖೆಯಿಂದಲೇ ಹಂಚಿಕೆಯಾದ ಮೊತ್ತವನ್ನು ಈ ಸಂಸ್ಥೆಗಳು ಪಡೆಯಲಿವೆ.

ಈ ಬಾರಿ ನಾಡಾಗೆ ₹ 21.73 ಕೋಟಿ, ಎನ್‌ಡಿಟಿಎಲ್‌ಗೆ ₹ 19.50 ಕೋಟಿ ಮೀಸಲಿರಿಸಲಾಗಿದೆ. ರಾಷ್ಟ್ರೀಯ ಕ್ರೀಡಾ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಗೆ ₹ 13 ಕೋಟಿ ತೆಗೆದಿರಿಸಲಾಗಿದೆ.

ಟಿ20: ಶುಭಮನ್ ಚೊಚ್ಚಲ ಶತಕ

ಪಾಂಡ್ಯ ಆಲ್‌ರೌಂಡ್ ಆಟ; ನ್ಯೂಜಿಲೆಂಡ್ ವಿರುದ್ಧ ಸರಣಿ ಜಯಿಸಿದ ಭಾರತ

ಅಹಮದಾಬಾದ್ (ಪಿಟಿಐ): ಯುವ ಬ್ಯಾಟರ್ ಶುಭಮನ್ ಗಿಲ್ ಟಿ20 ಕ್ರಿಕೆಟ್‌ನಲ್ಲಿ ತಮ್ಮ ಚೊಚ್ಚಲ ಶತಕ ದಾಖಲಿಸಿದರು.

ಇದರಿಂದಾಗಿ ಭಾರತ ತಂಡವು 168 ರನ್‌ಗಳಿಂದ ನ್ಯೂಜಿಲೆಂಡ್ ಎದುರು ಗೆದ್ದಿತು. 2–1ರಿಂದ ಸರಣಿಯನ್ನು ಗೆದ್ದುಕೊಂಡಿತು.

ಇದರೊಂದಿಗೆ ಟಿ20 ಕ್ರಿಕೆಟ್‌ನಲ್ಲಿ ಗರಿಷ್ಠ ರನ್‌ಗಳ ಅಂತರದಲ್ಲಿ ಗೆದ್ದ ತನ್ನ ಸಾಧನೆಯನ್ನು ಉತ್ತಮಪಡಿಸಿಕೊಂಡಿತು. 2018ರಲ್ಲಿ ಭಾರತ ತಂಡವು ಡಬ್ಲಿನ್‌ನಲ್ಲಿ ಐರ್ಲೆಂಡ್ ಎದುರು 143 ರನ್‌ಗಳ ಅಂತರದಿಂದ ಗೆದ್ದಿತ್ತು.

ಮೊಟೇರಾದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಬುಧವಾರ ನಡೆದ ನ್ಯೂಜಿಲೆಂಡ್ ಎದುರಿನ ಮೂರನೇ ಟಿ20 ಪಂದ್ಯದಲ್ಲಿ ಶುಭಮನ್ (126; 63ಎ) ಅಜೇಯ ಶತಕ ಗಳಿಸಿದರು. ಇದರಿಂದಾಗಿ ಭಾರತ ತಂಡವು 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 234 ರನ್ ಗಳಿಸಿತು. ಅದಕ್ಕುತ್ತರವಾಗಿ ಕಿವೀಸ್ ಬಳಗವು 12.1 ಓವರ್‌ಗಳಲ್ಲಿ 66 ರನ್ ಗಳಿಸಿ ಆಲೌಟ್ ಆಯಿತು.

ಟಾಸ್ ಗೆದ್ದ ಭಾರತದ ನಾಯಕ ಹಾರ್ದಿಕ್ ಪಾಂಡ್ಯ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡರು. ಆದರೆ ತಂಡದ ಆರಂಭ ಚೆನ್ನಾಗಿರಲಿಲ್ಲ. ಇಶಾನ್ ಕಿಶನ್ ಅವರನ್ನು 2ನೇ ಓವರ್‌ನಲ್ಲಿಯೇ ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದ ಮೈಕಲ್ ಬ್ರೇಸ್‌ವೆಲ್ ಸಂಭ್ರಮಿಸಿದರು.

ಆದರೆ ಕಿವೀಸ್ ಬಳಗದ ಸಂತಸಕ್ಕೆ ಶುಭಮನ್ ಅಡ್ಡಿಯಾದರು. ಬೌಲರ್‌ಗಳಿಗೆ ಬೆವರಿಳಿಸಿದರು. ತಮಗೆ ಲಭಿಸಿದ ಮೂರು ಜೀವದಾನಗಳನ್ನು(5.6, 17.3 ಹಾಗೂ 18.3 ನೇ ಓವರ್‌ಗಳಲ್ಲಿ ಫೀಲ್ಡರ್‌ಗಳು ಕ್ಯಾಚ್ ಕೈಚೆಲ್ಲಿದ್ದರು) ಸಮರ್ಥವಾಗಿ ಬಳಸಿಕೊಂಡರು.

ಗಿಲ್ ಅವರು ರಾಹುಲ್ ತ್ರಿಪಾಠಿ (44; 22ಎ) ಜೊತೆಗೆ 80 ರನ್ ಗಳಿಸಿದರು. 200ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದರು.

9ನೇ ಓವರ್‌ನಲ್ಲಿ ತ್ರಿಪಾಠಿ ವಿಕೆಟ್ ಗಳಿಸಿದ ಸ್ಪಿನ್ನರ್ ಈಶ್ ಸೋಧಿ ಜೊತೆಯಾಟ ಮುರಿದರು.

ಕ್ರೀಸ್‌ಗೆ ಬಂದ ಸೂರ್ಯಕುಮಾರ್ ಯಾದವ್ ಬೀಸಾಟ ಆರಂಭಿಸಿದರು. ಒಂದೆಡೆ ಗಿಲ್, ಇನ್ನೊಂದೆಡೆ ಸೂರ್ಯನ ಆರ್ಭಟಕ್ಕೆ ಬೌಲರ್‌ಗಳು ಸುಸ್ತಾದರು. ಸೂರ್ಯ 2 ಸಿಕ್ಸರ್ ಮತ್ತು ಒಂದು ಬೌಂಡರಿ ಸಹಿತ 24 ರನ್‌ಗಳನ್ನು ಗಳಿಸಿದರು. ಮೂರನೇ ವಿಕೆಟ್ ಜೊತೆಯಾಟದಲ್ಲಿ ಇಬ್ಬರೂ 38 ರನ್ ಸೇರಿಸಿದರು.

ಸೂರ್ಯ ವಿಕೆಟ್ ಪತನವಾದ ನಂತರವೂ ಗಿಲ್ ವೇಗ ಕುಂದಲಿಲ್ಲ. ಕ್ರೀಸ್‌ಗೆ ಬಂದ ಹಾರ್ದಿಕ್ ಕೂಡ ಅಬ್ಬರಿಸಿದರು.

ಗಿಲ್, 97 ರನ್ ಗಳಿಸಿದ್ದ ಗಿಲ್ ಬೌಂಡರಿ ಬಾರಿಸುವ ಮೂಲಕ ಶತಕದ ಗಡಿ ಮುಟ್ಟಿದರು. ಕೇವಲ 54 ಎಸೆತಗಳಲ್ಲಿ ಈ ಸಾಧನೆ ಮಾಡಿದರು. ನಂತರವೂ ಅಬ್ಬರಿಸಿದರು. ಚೆಂಡನ್ನು ಸಿಕ್ಸರ್‌ಗೆತ್ತುವಲ್ಲಿ ಮಗ್ನರಾದರು.

ಇದರೊಂದಿಗೆ ಮೂರು ಮಾದರಿಗಳಲ್ಲಿಯೂ ಶತಕ ಬಾರಿಸಿದ ಬ್ಯಾಟರ್‌ಗಳ ಸಾಲಿಗೆ ಸೇರಿದರು. ಈ ಹಿಂದೆ ಸುರೇಶ್ ರೈನಾ, ರೋಹಿತ್ ಶರ್ಮಾ, ಕೆ.ಎಲ್. ರಾಹುಲ್ ಮತ್ತು ವಿರಾಟ್ ಕೊಹ್ಲಿ ಈ ಸಾಧನೆ ಮಾಡಿದ್ದಾರೆ.

ಈಚೆಗೆ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಶುಭಮನ್ ದ್ವಿಶತಕ ಹೊಡೆದಿದ್ದರು.

ನಂತರ ಬೌಲರ್‌ಗಳೂ ಮಿಂಚಿದರು. ಹಾರ್ದಿಕ್ (16ಕ್ಕೆ4), ಅರ್ಷದೀಪ್ ಸಿಂಗ್ 16ಕ್ಕೆ2, ಉಮ್ರಾನ್ ಮಲಿಕ್ 9ಕ್ಕೆ2 ಹಾಗೂ ಶಿವಂ ಮಾವಿ 12ಕ್ಕೆ2 ವಿಕೆಟ್ ಗಳಿಸಿದರು.

ಟ್ರೋಫಿಯೊಂದಿಗೆ ಹಾರ್ದಿಕ್ ಪಾಂಡ್ಯ

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 234 (ಶುಭಮನ್ ಗಿಲ್ ಔಟಾಗದೆ 126, ರಾಹುಲ್ ತ್ರಿಪಾಠಿ 44, ಸೂರ್ಯ ಕುಮಾರ್ ಯಾದವ್ 24, ಹಾರ್ದಿಕ್ ಪಾಂಡ್ಯ 30, ಮೈಕಲ್ ಬ್ರೇಸ್‌ವೆಲ್ 8ಕ್ಕೆ1, ಈಶ್ ಸೋಧಿ 34ಕ್ಕೆ1). ನ್ಯೂಜಿಲೆಂಡ್: 12.1 ಓವರ್‌ಗಳಲ್ಲಿ 66 (ಡೆರಿಲ್ ಮಿಚೆಲ್ 35, ಮಿಚೆಲ್ ಸ್ಯಾಂಟನರ್ 13; ಹಾರ್ದಿಕ್ ಪಾಂಡ್ಯ 16ಕ್ಕೆ 4, ಅರ್ಷದೀಪ್ ಸಿಂಗ್ 16ಕ್ಕೆ 2, ಉಮ್ರಾನ್ ಮಲಿಕ್ 9ಕ್ಕೆ 2, ಶಿವಂ ಮಾವಿ 12ಕ್ಕೆ 2). ಫಲಿತಾಂಶ: ಭಾರತಕ್ಕೆ 168 ರನ್‌ಗಳ ಜಯ

ರಣಜಿ ಕ್ರಿಕೆಟ್: ಕರ್ನಾಟಕಕ್ಕೆ 358 ರನ್‌ಗಳ ಮುನ್ನಡೆ; ನಾಲ್ವರ ಅರ್ಧಶತಕ

ಶ್ರೇಯಸ್ ಬ್ಯಾಟಿಂಗ್ ಸೊಬಗು

• ಗಿರೀಶ ದೊಡ್ಡಮನಿ

ಕರ್ನಾಟಕದ ಶ್ರೇಯಸ್ ಗೋಪಾಲ್ ಬ್ಯಾಟಿಂಗ್ ಸೊಬಗು – ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌ಜಿ.

ಬೆಂಗಳೂರು: ಕರ್ನಾಟಕದ ಆರಂಭಿಕ ಬ್ಯಾಟಿಂಗ್ ಜೋಡಿ ಆರ್. ಸಮರ್ಥ್ ಮತ್ತು ಮಯಂಕ್ ಅಗರವಾಲ್ ಅವರು ತಮ್ಮ ಶತಕದ ಸನಿಹ ಎಡವಿದರು. ದೇವದತ್ತ ಪಡಿಕ್ಕಲ್ ಮತ್ತು ನಿಕಿನ್ ಜೋಸ್ ತಮ್ಮ ಅರ್ಧಶತಕಗಳನ್ನು ಮೂರಂಕಿಯಾಗಿ ಪರಿವರ್ತಿಸುವಲ್ಲಿ ವಿಫಲರಾದರು.

ಆದರೆ, ಆರನೇ ಕ್ರಮಾಂಕದ ಬ್ಯಾಟರ್ ಶ್ರೇಯಸ್ ಗೋಪಾಲ್ (ಬ್ಯಾಟಿಂಗ್ 103; 153ಎ, 4X13, 6X1) ಅವರಿಗೆ ಶತಕ ದಾಖಲಿಸುವ ಅದೃಷ್ಟ ಒಲಿಯಿತು. ಈ ಎಲ್ಲ ಬ್ಯಾಟರ್‌ಗಳ ಆಟವನ್ನು ಕಡಿವಾಣ ಹಾಕುವ ಉತ್ತರಾಖಂಡದ ಪ್ರಯತ್ನಗಳು ಫಲ ನೀಡಲಿಲ್ಲ. ಸತ್ವವಿಲ್ಲದ ಬೌಲಿಂಗ್‌ಗೆ ದಂಡ ತೆರಬೇಕಾಯಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಕ್ವಾರ್ಟರ್‌ಫೈನಲ್ ಮೇಲೆ ಕರ್ನಾಟಕ ಸಂಪೂರ್ಣ ಹಿಡಿತ ಸಾಧಿಸಿದೆ. ಮೊದಲ ದಿನವಾದ ಮಂಗಳವಾರ ಮೊದಲ ಇನಿಂಗ್ಸ್‌ನಲ್ಲಿ ಏಳು ರನ್‌ಗಳ ಮುನ್ನಡೆ ಪಡೆದಿತ್ತು. ಬುಧವಾರ ದಿನದಾಟದ ಕೊನೆಗೆ ಮುನ್ನಡೆಯು 358 ರನ್‌ಗಳಿಗೇರಿತು. ತಂಡವು 116 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 474 ರನ್ ಗಳಿಸಿತು. ಶ್ರೇಯಸ್ ಹಾಗೂ ಬಿ.ಆರ್. ಶರತ್ (ಬ್ಯಾಟಿಂಗ್ 23) ಕ್ರೀಸ್‌ನಲ್ಲಿದ್ದಾರೆ. ಪಂದ್ಯದಲ್ಲಿ ಇನ್ನೂ ಮೂರು ದಿನಗಳ ಆಟ ಬಾಕಿ ಇದೆ.

ಮೊದಲ ದಿನದಂದು ಉತ್ತರಾಖಂಡ ತಂಡವು ಮೊದಲು ಬ್ಯಾಟ್ ಮಾಡಿತ್ತು. ವೆಂಕಟೇಶ್ ದಾಳಿಗೆ ತತ್ತರಿಸಿದ್ದ ಉತ್ತರಾಖಂಡವು 116 ರನ್‌ಗಳಿಗೆ ಆಲೌಟ್ ಆಗಿತ್ತು. ಅದೇ ದಿನದಾಟದ ಅಂತ್ಯಕ್ಕೆ ಈ ಮೊತ್ತ ಚುಕ್ತಾ ಮಾಡಿದ್ದ ಆತಿಥೇಯ ನಾಯಕ ಮಯಂಕ್ ಮತ್ತು ಸಮರ್ಥ್ ಕ್ರೀಸ್‌ನಲ್ಲಿ ಉಳಿದಿದ್ದರು.

ಆದರೆ ಬುಧವಾರ ಮಯಂಕ್ (83; 109ಎ) ಹಾಗೂ ಆರ್. ಸಮರ್ಥ್ (82; 108ಎ) ಅವಸರಪಟ್ಟು ಔಟಾದರು. ಎರಡೂ ವಿಕೆಟ್‌ಗಳನ್ನು ಅಭಯ್ ನೇಗಿ ಕಬಳಿಸಿದರು. ಇವರಿಬ್ಬರು ಮೊದಲ ವಿಕೆಟ್ ಜೊತೆಯಾಟದಲ್ಲಿ 159 ರನ್ ಸೇರಿಸಿದರು.

ಆದರೆ ಈ ದಿನದ ಆಟದಲ್ಲಿ ಶತಕ ಗಳಿಸುವ ಭರವಸೆಯನ್ನು ಹೆಚ್ಚು ಮೂಡಿಸಿದ್ದ ಆಟಗಾರ ನಿಕಿನ್ ಜೋಸ್‌ಗೆ ಮತ್ತೆ ಅದೃಷ್ಟ ಕೈಕೊಟ್ಟಿತು. ತಮಗಿಂತಲೂ ಮೊದಲೇ ಕ್ರೀಸ್‌ಗೆ ಬಂದಿದ್ದ ದೇವದತ್ತ ಪಡಿಕ್ಕಲ್‌ಗಿಂತಲೂ ವೇಗವಾಗಿ ಅರ್ಧಶತಕ ದಾಟಿದ ನಿಕಿನ್ ಭೋಜನ ವಿರಾಮದ ನಂತರ ಔಟಾದರು. ಕೆಲಹೊತ್ತಿನ ನಂತರ 69 ರನ್ ಗಳಿಸಿದ್ದ ದೇವದತ್ತ ಕೂಡ ಪೆವಿಲಿಯನ್ ಸೇರಿದರು.

ಮನೀಷ್ ಪಾಂಡೆ ಜೊತೆಗೂಡಿದ ಶ್ರೇಯಸ್ ಚೆಂದದ ಬ್ಯಾಟಿಂಗ್ ಮಾಡಿದರು. ತಂಡದ ಮುಖ್ಯ ಸ್ಪಿನ್ ಬೌಲರ್ ಆಗಿರುವ ಶ್ರೇಯಸ್ ಇತ್ತೀಚಿನ ದಿನಗಳಲ್ಲಿ ಬ್ಯಾಟಿಂಗ್‌ನಲ್ಲಿಯೇ ಹೆಚ್ಚು ಮಿಂಚಿದ್ದಾರೆ.

ಕಳೆದ ತಿಂಗಳು ಅವರು ರಾಜಸ್ಥಾನ ಎದುರಿನ ಪಂದ್ಯದಲ್ಲಿ 95 ರನ್ ಗಳಿಸಿದ್ದರು. ಆದರೆ ಇಲ್ಲಿ ದಿನದಾಟದ ಕೊನೆಯ ಎಸೆತದಲ್ಲಿ ಶತಕ ಪೂರೈಸಿದರು. ಚೆಂಡನ್ನು ಬೌಂಡರಿಗೆ ಡ್ರೈವ್ ಮಾಡಿದ ಅವರು ಹೆಲ್ಮೆಟ್ ತೆಗೆದು ಬ್ಯಾಟ್ ಎತ್ತಿ ಸಂಭ್ರಮಿಸಿದರು. ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಇದು ಅವರ ಐದನೇ ಶತಕ. ಶ್ರೇಯಸ್ ಅವರು ನುರಿತ ಬ್ಯಾಟರ್ ನಂತೆ ಸ್ವೀಪ್, ಡ್ರೈವ್ ಮತ್ತು ಕಟ್‌ಗಳನ್ನು ಆಡಿದರು.

’ತಂಡಕ್ಕೆ ಕಾಣಿಕೆ ನೀಡುವುದು ಸಂತಸದ ವಿಷಯ. ಬ್ಯಾಟಿಂಗ್‌ನಲ್ಲಿ ಪರಿಣತಿ ಗಳಿಸಲು ಹೆಚ್ಚು ಅಭ್ಯಾಸ ಮಾಡಿರುವೆ. ಅದರ ಫಲ ಈಗ ಲಭಿಸಿದೆ‘ ಎಂದು ಶ್ರೇಯಸ್ ಪಂದ್ಯದ ನಂತರ ಹೇಳಿದರು.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಉತ್ತರಾಖಂಡ: 116 (55.4 ಓವರ್‌ಗಳಲ್ಲಿ) ಕರ್ನಾಟಕ: 5ಕ್ಕೆ474 (116 ಓವರ್‌ಗಳಲ್ಲಿ)

ಸಮರ್ಥ್ ಸಿ ಅಖಿಲ್‌ಸಿಂಗ್ ಬಿ ಅಭಯ್ 82 (108ಎ, 4X11), ಮಯಂಕ್ ಸಿ ಜೀವನಜ್ಯೋತ್ ಬಿ ಅಭಯ್ 83 (109ಎ, 4X12, 6X1), ದೇವದತ್ತ ಸಿ ಜೀವನಜ್ಯೋತ್ ಬಿ ಮಿಶ್ರಾ 69 (121ಎ, 4X8, 6X1), ನಿಕಿನ್ ಸಿ ಅಭಯ್ ಬಿ ಮಿಶ್ರಾ 62 (100ಎ, 4X12), ಮನೀಷ್ ಸಿ ಅಭಯ್ ಬಿ ಮಿಶ್ರಾ 39 (73ಎ, 4X4), ಶ್ರೇಯಸ್ ಬ್ಯಾಟಿಂಗ್ 103 (153ಎ, 4X13, 6X1), ಶರತ್ ಬ್ಯಾಟಿಂಗ್ 23 (39ಎ, 4X3)

ಇತರ 13(ಲೆಗ್‌ಬೈ 3, ವೈಡ್ 3, ನೋಬಾಲ್ 7)

ವಿಕೆಟ್ ಪತನ: 1–159 (ಮಯಂಕ್ ಅಗರವಾಲ್; 32.5), 2–182 (ಆರ್. ಸಮರ್ಥ್; 40.1), 3–300 (ನಿಕಿನ್ ಜೋಸ್;69.4), 4–307 (ದೇವದತ್ತ ಪಡಿಕ್ಕಲ್;73.3), 5–415 (ಮನೀಷ್ ಪಾಂಡೆ; 99.5)

ಬೌಲಿಂಗ್: ದೀಪಕ್ ಧಪೋಲಾ 23–4–85–0, ಅಭಯ್ ನೇಗಿ 22–5–82–2, ನಿಖಿಲ್ ಕೊಹ್ಲಿ 13–0–82–0, ಸ್ವಪ್ನಿಲ್ ಸಿಂಗ್ 17–0–78–0, ಮಯಂಕ್ ಮಿಶ್ರಾ 31–5–98–3, ದಿಕ್ಷಾಂಶು ನೇಗಿ 6–0–30–0, ಅವನೀಶ್ ಸುಧಾ 4–0–16–0

ಇನಿಂಗ್ಸ್‌ನಲ್ಲಿ ದಾಖಲಾದ ಶತಕದ ಜೊತೆಯಾಟ

ವಿಕೆಟ್	ರನ್	ಎಸೆತ	ಜೋಡಿ
1	159	201	ಸಮರ್ಥ್–ಮಯಂಕ್ ಅಗರವಾಲ್
3	118	180	ನಿಕಿನ್ ಜೋಸ್–ದೇವದತ್ತ ಪಡಿಕ್ಕಲ್
5	108	158	ಮನೀಷ್ ಪಾಂಡೆ–ಶ್ರೇಯಸ್ ಗೋಪಾಲ್

ಎಡಗೈನಿಂದ ಬ್ಯಾಟ್ ಮಾಡಿದ ಹನುಮ

ಮಧ್ಯಪ್ರದೇಶದ ವಿರುದ್ಧದ ಪಂದ್ಯದಲ್ಲಿ ಆಂಧ್ರ ತಂಡದ ನಾಯಕ, ಬಲಗೈ ಬ್ಯಾಟರ್ ಹನುಮ ವಿಹಾರಿ ಅವರು ಎಡಗೈನಿಂದ ಬ್ಯಾಟಿಂಗ್ ಮಾಡಿ ಗಮನಸೆಳೆದರು. ಅವರು 27 ರನ್ ಗಳಿಸಿದರು.

ಕ್ವಾರ್ಟರ್ ಫೈನಲ್ ಸ್ಕೋರ್:ಇಂದೋರ್: ಆಂಧ್ರ: 127.1 ಓವರ್‌ಗಳಲ್ಲಿ 379 (ರಿಕಿ ಭುಯ್ 149, ಕರಣ್ ಶಿಂದೆ 110, ಅನುಭವ್ ಅಗರವಾಲ್ 72ಕ್ಕೆ4) ಮಧ್ಯಪ್ರದೇಶ: 41 ಓವರ್‌ಗಳಲ್ಲಿ 4ಕ್ಕೆ144 (ಶುಭಂ ಶರ್ಮಾ 51, ಹಿಮಾಂಶು ಮಂತ್ರಿ 22,ಕೆ.ವಿ. ಸಸಿಕಾಂತ್ 37ಕ್ಕೆ2)

ಕೋಲ್ಕತ್ತ: ಮೊದಲ ಇನಿಂಗ್ಸ್: ಜಾರ್ಖಂಡ್: 66.2 ಓವರ್‌ಗಳಲ್ಲಿ 173. ಬಂಗಾಳ: 81 ಓವರ್‌ಗಳಲ್ಲಿ 5ಕ್ಕೆ238 (ಅಭಿಮನ್ಯು ಈಶ್ವರನ್ 77, ಸುದೀಪ್ ಕುಮಾರ್ 68, ಸುಪ್ರಿಯೊ ಚಕ್ರವರ್ತಿ 68ಕ್ಕೆ2)

ರಾಜ್‌ಕೋಟ್:ಸೌರಾಷ್ಟ್ರ: 87 ಓವರ್‌ಗಳಲ್ಲಿ 303. ಪಂಜಾಬ್: 91 ಓವರ್‌ಗಳಲ್ಲಿ 5ಕ್ಕೆ327 (ಪ್ರಭಸಿಮ್ರನ್ ಸಿಂಗ್ 126, ನಮನ್ ಧೀರ್ 131, ಮನದೀಪ್ ಸಿಂಗ್ ಬ್ಯಾಟಿಂಗ್ 39 ಯುವರಾಜ್‌ಸಿಂಹ 58ಕ್ಕೆ2)

ಫುಟ್‌ಬಾಲ್ ಆಟಗಾರ ಪರಿಮಲ್ ಡೇ ನಿಧನ

ಪರಿಮಲ್ ಡೇ

ಕೋಲ್ಕತ್ತ (ಪಿಟಿಐ): ಭಾರತ ಫುಟ್‌ಬಾಲ್ ತಂಡದ ಮಾಜಿ ಮಿಡ್‌ಫೀಲ್ಡರ್ ಪರಿಮಲ್ ಡೇ (81) ಬುಧವಾರ ಇಲ್ಲಿ ನಿಧನರಾದರು. ವಯೋಸಹಜ ಕಾಯಿಲೆಗಳಿಂದ ಅವರು ಬಳಲುತ್ತಿದ್ದರು.

ಪರಿಮಲ್ ಅವರು 1966ರಲ್ಲಿ ಮರ್ಡೆಕಾ ಕಪ್ ಗೆದ್ದ ಭಾರತ ತಂಡದ ಸದಸ್ಯರಾಗಿದ್ದರು.

1960ರ ದಶಕದಲ್ಲಿ ಕೌಶಲಯುತ ಆಟಗಾರನಾಗಿದ್ದ ಪರಿಮಲ್, ರಾಷ್ಟ್ರೀಯ ತಂಡದ ಪರ ಐದು ಪಂದ್ಯಗಳಲ್ಲಿ ಆಡಿದ್ದರು. ಕ್ವಾಲಾಲಂಪುರದಲ್ಲಿ ನಡೆದಿದ್ದ ಮರ್ಡೆಕಾ ಕಪ್ ಟೂರ್ನಿಯಲ್ಲಿ ತಂಡವು ಪದಕ ಗೆಲ್ಲುವಲ್ಲಿ ಅವರ ಪಾತ್ರ ಪ್ರಮುಖವಾಗಿತ್ತು. ಆ ಟೂರ್ನಿಯಲ್ಲಿ ಅವರು ತಮ್ಮ ಏಕೈಕ ಗೋಲು ಗಳಿಸಿದ್ದರು.

ಈಸ್ಟ್ ಬೆಂಗಾಲ್ ತಂಡದಲ್ಲಿ ಆಡಿದ್ದ ಅವರು ಡುರಾಂಡ್ ಕಪ್, ರೋವರ್ಸ್ ಕಪ್ ಇನ್ನಿತರ ಟೂರ್ನಿಗಳಲ್ಲಿ ಕಣಕ್ಕಿಳಿದಿದ್ದರು.

ಸಂತೋಷ್ ಟ್ರೋಫಿ ಟೂರ್ನಿ ಗೆದ್ದ (1962, 1969) ಬಂಗಾಳ ತಂಡದ ಪರವೂ ಆಡಿದ್ದರು.

ಥಾಯ್ಲೆಂಡ್ ಓಪನ್ ಬ್ಯಾಡ್ಮಿಂಟನ್ ಟೂರ್ನಿ

2ನೇ ಸುತ್ತಿಗೆ ಪ್ರಣೀತ್, ಕಿರಣ್

ಬಿ.ಸಾಯಿ ಪ್ರಣೀತ್– ಎಎಫ್‌ಪಿ ಚಿತ್ರ

ಬ್ಯಾಂಕಾಕ್ (ಪಿಟಿಐ): ಭಾರತದ ಬಿ.ಸಾಯಿ ಪ್ರಣೀತ್ ಮತ್ತು ಕಿರಣ್ ಜಾರ್ಜ್ ಅವರು ಥಾಯ್ಲೆಂಡ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಎರಡನೇ ಸುತ್ತಿಗೆ ಲಗ್ಗೆಯಿಟ್ಟಿದ್ದಾರೆ.

ಇಲ್ಲಿ ನಡೆಯುತ್ತಿರುವ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಸೆಣಸಾಟದಲ್ಲಿ ಬುಧವಾರ ಪ್ರಣೀತ್ 21-13, 21-14ರಿಂದ ಡೆನ್ಮಾರ್ಕ್‌ನ ಮ್ಯಾಡ್ಸ್ ಕ್ರಿಸ್ಟೊಫರ್ಸನ್ ಅವರನ್ನು ಪರಾಭವಗೊಳಿಸಿದರು. 31 ನಿಮಿಷಗಳಲ್ಲಿ ಈ ಹಣಾಹಣಿ ಮುಕ್ತಾಯವಾಯಿತು.

ಸಿಂಗಲ್ಸ್ ವಿಭಾಗದ ಮತ್ತೊಂದು ಹಣಾಹಣಿಯಲ್ಲಿ ಕಿರಣ್ ಕಠಿಣ ಪೈಪೋಟಿ ನೀಡಿ ಜಯಿಸಿದರು. ಭಾರತದ ಆಟಗಾರ 21-17, 19-21, 23-21ರಿಂದ ಚೀನಾ ತೈಪೆಯ ಲೀ ಚಿಯಾ ಹಾವೊ ಅವರನ್ನು ಮಣಿಸಿದರು.

ಸಮೀರ್ ವರ್ಮಾ, ಪ್ರಿಯಾಂಶು ರಾಜಾವತ್ ಮತ್ತು ಮಿಥುನ್ ಮಂಜುನಾಥ್ ಅವರು ಮೊದಲ ಸುತ್ತಿನ ಇನ್ನುಳಿದ ಸಿಂಗಲ್ಸ್ ವಿಭಾಗದ ಪಂದ್ಯಗಳಲ್ಲಿ ಸೋಲನುಭವಿಸಿದರು.

ಸಮೀರ್ 14-21, 16-21ರಿಂದ ಚೀನಾದ ಶಿ ಫೆಂಗ್ ಎದುರು, ಪ್ರಿಯಾಂಶು 21-14, 19-21, 25-27ರಿಂದ ದಕ್ಷಿಣ ಕೊರಿಯಾದ ಕ್ವಾಂಗ್ ಹೀ ಹಿಯೊ ವಿರುದ್ಧ, ಮಿಥುನ್ 18-21, 12-21ರಿಂದ ಜಪಾನ್‌ನ ಕೆಂಟಾ ನಿಶಿಮೊಟೊ ಎದುರು ನಿರಾಸೆ ಅನುಭವಿಸಿದರು.

ಮಹಿಳಾ ಸಿಂಗಲ್ಸ್ ಮೊದಲ ಸುತ್ತಿನಲ್ಲಿ ಅಸ್ಮಿತಾ ಚಲಿಹಾ 21-16, 21-19ರಿಂದ ಭಾರತದವರೇ ಆದ ಅನುಪಮಾ ಉಪಾಧ್ಯಾಯ ಅವರನ್ನು ಸೋಲಿಸಿ ಮುನ್ನಡೆದರು. ಡಬಲ್ಸ್‌ನಲ್ಲಿ ಸಿಮ್ರಾನ್ ಸಿಂಘಿ– ರಿತಿಕಾ ಠಕ್ಕರ್ 8-21, 10-21ರಿಂದ ಚೀನಾದ ಶೆಂಗ್ ಶು ಮತ್ತು ಶು ಚಿಯಾನ್ ಜಾಂಗ್ ಎದುರು ಸೋತರು.

ಮಿಶ್ರ ಡಬಲ್ಸ್‌ನಲ್ಲಿ ರೋಹನ್ ಕಪೂರ್– ಸಿಕ್ಕಿ ರೆಡ್ಡಿ 21-11, 21-16ರಿಂದ ಕೆನಡಾದ ಟೈ ಅಲೆಕ್ಸಾಂಡರ್ ಲಿಂಡೆಮನ್– ಜೋಸೆಫ್‌ವು ಎದುರು ಗೆದ್ದು ಎರಡನೇ ಸುತ್ತು ತಲುಪಿದರು.

ಬಿ. ಸುಮಿತ್ ರೆಡ್ಡಿ–ಅಶ್ವಿನಿ ಪೊನ್ನಪ್ಪ ಜೋಡಿಯು 11-21, 17-21ರಿಂದ ಇಂಡೊನೇಷ್ಯಾದ ರೆಹಾನ್ ನೌಫಲ್ ಕುಶರ್ಜಂಟೊ ಮತ್ತು ಲಿಸಾ ಆಯು ಕುಸುಮಾವತಿ ಎದುರು ಸೋತಿತು.

ಕ್ರಿಕೆಟ್: ಭಾರತಕ್ಕೆ ದಕ್ಷಿಣ ಆಫ್ರಿಕಾ ಸವಾಲು

ಈಸ್ಟ್ ಲಂಡನ್, ದಕ್ಷಿಣ ಆಫ್ರಿಕಾ (ಪಿಟಿಐ): ಭಾರತ ಮಹಿಳಾ ತಂಡವು ಟಿ20 ತ್ರಿಕೋನ ಸರಣಿಯ ಫೈನಲ್ ಪಂದ್ಯದಲ್ಲಿ ಗುರುವಾರ ಆತಿಥೇಯ ದಕ್ಷಿಣ ಆಫ್ರಿಕಾ ಸವಾಲು ಎದುರಿಸಲಿದೆ. ಮಹಿಳೆಯರ ಟಿ20 ವಿಶ್ವಕಪ್ ಟೂರ್ನಿ ಕೆಲವೇ ದಿನಗಳು ಬಾಕಿ ಇರುವಾಗ ಈ ಪಂದ್ಯವು ಉಭಯ ತಂಡಗಳಿಗೆ ಅಭ್ಯಾಸವಾಗಿ ಪರಿಣಮಿಸಿದೆ.

ತವರಿನಲ್ಲಿ ಆಸ್ಟ್ರೇಲಿಯಾ ಎದುರಿನ ಐದು ಪಂದ್ಯಗಳ ಸರಣಿಯನ್ನು 1–4ರಿಂದ ಕಳೆದುಕೊಂಡಿದ್ದ ಭಾರತ, ಈ ತ್ರಿಕೋನ ಸರಣಿಯಲ್ಲಿ ಪುಟಿದೆದ್ದಿದೆ. ಮೂರು ಪಂದ್ಯಗಳಲ್ಲಿ ಜಯ ಸಾಧಿಸಿರುವ ತಂಡವು ಅಂತಿಮ ಪಂದ್ಯದಲ್ಲಿಯೂ ಗೆಲುವಿನ ವಿಶ್ವಾಸದಲ್ಲಿದೆ.

ಪಂದ್ಯ ಆರಂಭ: ಸಂಜೆ 6.30

ಹಾಕಿ: ರೇನ್‌ಬೊ ಕ್ಲಬ್‌ಗೆ ಜಯ

ಬೆಂಗಳೂರು: ರೇನ್‌ಬೊ ಕ್ಲಬ್ ತಂಡವು ಕೆಎಸ್‌ಎಚ್‌ಎ ಸೂಪರ್ ಡಿವಿಷನ್ ಹಾಕಿ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಕೆಎಸ್‌ಎಚ್‌ಎ ಕ್ರೀಡಾಂಗಣದಲ್ಲಿ ಬುಧವಾರ ಆರಂಭವಾದ ಟೂರ್ನಿಯ ಪಂದ್ಯದಲ್ಲಿ ರೇನ್‌ಬೊ 3–1ರಿಂದ ಶ್ಲೋಕ್ ಹಾಕಿ ಕ್ಲಬ್ ತಂಡವನ್ನು ಪರಾಭವಗೊಳಿಸಿತು. ವಿಜೇತ ತಂಡದ ಪರ ಮಗೇಶ್ (40 ಮತ್ತು 43ನೇ ನಿಮಿಷ) ಎರಡು ಗೋಲು ದಾಖಲಿಸಿದರು. ಇನ್ನೊಂದು ಗೋಲನ್ನು ಕಾರ್ತಿಕ್ (11ನೇ ನಿ.) ಗಳಿಸಿದರು. ಶ್ಲೋಕ್ ಪರ ಫಹಾದ್ (32ನೇ ನಿ.) ಗೋಲು ಹೊಡೆದರು. ಇನ್ನೊಂದು ಪಂದ್ಯದಲ್ಲಿ 5ಸಿ ಸ್ಪೋರ್ಟ್ಸ್ ಕ್ಲಬ್ 1–1ರಿಂದ ಮೆಟ್ರೊ ಕ್ಲಬ್ ತಂಡದೊಂದಿಗೆ ಡ್ರಾ ಸಾಧಿಸಿತು.

ಹಳಿಯಾಳ: 4ರಿಂದ ರಾಷ್ಟ್ರಮಟ್ಟದ ಕುಸ್ತಿ

ಪ್ರಜಾವಾಣಿ ವಾರ್ತೆ

ಹಳಿಯಾಳ: ಇಲ್ಲಿನ ಜಿಲ್ಲಾ ಕುಸ್ತಿ ಅಖಾಡದಲ್ಲಿ ಇದೇ 4ರಿಂದ 6ರ ವರೆಗೆ ರಾಜ್ಯ, ರಾಷ್ಟ್ರಮಟ್ಟದ ಪುರುಷ ಹಾಗೂ ಮಹಿಳೆಯರ ಮುಕ್ತ ಕುಸ್ತಿ ಸ್ಪರ್ಧೆಗಳು ನಡೆಯಲಿವೆ.

ವಿ.ಆರ್.ದೇಶಪಾಂಡೆ ಮೆಮೊರಿಯಲ್ ಟ್ರಸ್ಟ್ ಹಾಗೂ ರಾಜ್ಯ ಕುಸ್ತಿ ಸಂಸ್ಥೆಯ ಆಶ್ರಯದಲ್ಲಿ ನಡೆಯಲಿರುವ ಟೂರ್ನಿಯಲ್ಲಿ ಬೆಳ್ಳಿ ಗದೆ, ಒಟ್ಟು ₹17 ಲಕ್ಷ ಪ್ರಶಸ್ತಿ ನೀಡಲಾಗುತ್ತಿದೆ.

ರಾಷ್ಟ್ರಮಟ್ಟದ ಕುಸ್ತಿಯಲ್ಲಿ ಪುರುಷರ 75 ಕೆ.ಜಿ ಮೇಲ್ಪಟ್ಟ ವಿಭಾಗದ ‘ಶ್ರೀಚನ್ನಬಸವೇಶ್ವರ ಕೇಸರಿ’ ಪ್ರಶಸ್ತಿಗಾಗಿ ನಡೆಯಲಿರುವ ಕುಸ್ತಿಗೆ ಪ್ರಥಮ ಬಹುಮಾನ ₹2.25 ಲಕ್ಷ ಜೊತೆಗೆ ಬಂಗಾರದ ಪದಕ ನೀಡಲಾಗುವುದು. ಮಹಿಳೆಯರ 55 ಕೆ.ಜಿ. ಮೇಲ್ಪಟ್ಟ ವಿಭಾಗದ ‘ವೀರಮಾತಾ ಕಿತ್ತೂರ ರಾಣಿ ಚನ್ನಮ್ಮ ಭಾರತ ಕೇಸರಿ’ ಪ್ರಶಸ್ತಿಗಾಗಿ ಪ್ರಥಮ ಬಹುಮಾನ ₹50 ಸಾವಿರ ನಗದು ಹಾಗೂ ಬಂಗಾರದ ಪದಕವಿದೆ.

74 ಕೆ.ಜಿ ಮೇಲ್ಪಟ್ಟ ವಿಭಾಗದ ಕರ್ನಾಟಕ ಕಂಠೀರವ, 74 ಕೆ.ಜಿ. ವಿಭಾಗದ ಕರ್ನಾಟಕ ಕೇಸರಿ, 70 ಕೆ.ಜಿ. ವಿಭಾಗದಲ್ಲಿ ಕರ್ನಾಟಕ ಕುಮಾರ, 65 ಕೆ.ಜಿ. ವಿಭಾಗದಲ್ಲಿ ಕರ್ನಾಟಕ ಕಿಶೋರ, 61 ಕೆ.ಜಿ. ವಿಭಾಗದಲ್ಲಿ ಕರ್ನಾಟಕ ಚಾಂಪಿಯನ್, 57 ಕೆ.ಜಿ. ವಿಭಾಗದಲ್ಲಿ ಕರ್ನಾಟಕ ಚಾಂಪಿಯನ್, 55 ಕೆ.ಜಿ. ವಿಭಾಗದಲ್ಲಿ ವೀರಮಾತಾ ಒನಕೆ ಒಬವ್ವ ಕರ್ನಾಟಕ ಕೇಸರಿ ಪ್ರಶಸ್ತಿಯ ಕುಸ್ತಿ ನಡೆಯಲಿದೆ.

ಬಾಲಕರ 29 ಕೆ.ಜಿ. ವಿಭಾಗದಿಂದ 55 ಕೆ.ಜಿ ತೂಕದ ವಿಭಾಗದ ವರೆಗೆ ಹಾಗೂ ಬಾಲಕಿಯರ 29 ಕೆ.ಜಿ. ವಿಭಾಗದಿಂದ 48 ಕೆ.ಜಿ ವರೆಗೆ ಕುಸ್ತಿ ನಡೆಯಲಿದೆ.

‘17 ವರ್ಷದ ಒಳಗಿನ ಬಾಲಕ, ಬಾಲಕಿಯರ ತೂಕವನ್ನು ಫೆ.4ರಂದು ತೆಗೆದುಕೊಳ್ಳಲಾಗುವುದು. ಪ್ರಶಸ್ತಿಗಾಗಿ ನಡೆಯುವ ಎಲ್ಲ ಅಂತಿಮ ಕುಸ್ತಿಗಳನ್ನು ಮಟ್ಟಿಯಲ್ಲಿ ನಡೆಸಲಾಗುವುದು. ಪಂದ್ಯಗಳು ಅಂತರರಾಷ್ಟ್ರೀಯ ನಿಯಮಾವಳಿ ಪ್ರಕಾರ ನಡೆಯುಲಿದೆ ’ ಎಂದು ಕುಸ್ತಿ ಸಂಘಟನಕಾರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಷೇರುಪೇಟೆ ವಹಿವಾಟು 158



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,616
ಇಂದಿನ ಅಂತ್ಯ	17,662
▼	46
ದಿನದ ಕನಿಷ್ಠ	17,353

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹465
12 ಮೊಟ್ಟೆಗೆ	₹63
ಮೈಸೂರು	
100 ಮೊಟ್ಟೆಗೆ	₹465

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈಂಡ್)	₹1620 (1620)
ಸೋಯಾ (ರಿಫೈಂಡ್)	₹1170 (1170)
ಸೂರ್ಯಕಾಂತಿ (ರಿಫೈಂಡ್)	₹1180 (1190)
ಪಾಮೋಲಿನ್	₹930 (930)

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹139
ಆರ್‌ಎಸ್‌ಎಸ್-5	₹134
ಗುಡ್ ಲಾಟ್	₹129.50

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1200-1400
ಮಧ್ಯಮ	₹1000-1200
ಸಣ್ಣ	₹500-1000

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹139
ಆರ್‌ಎಸ್‌ಎಸ್-5	₹134
ಗುಡ್ ಲಾಟ್	₹129.50

ಕೆಲ ಶಾಸಕರು, ಟಿಕೆಟ್ ಆಕಾಂಕ್ಷಿಗಳಿಂದ ಕುಕ್ಕರ್, ಗೃಹೋಪಯೋಗಿ ವಸ್ತುಗಳ ವಿತರಣೆ

ಚುನಾವಣೆಗೂ ಮೊದಲೇ 'ಉಡುಗೊರೆ ಭಾಗ್ಯ'

ಪ್ರಜಾವಾಣಿ ವಾರ್ತೆ

ತುಮಕೂರು / ರಾಮನಗರ / ಚಿಕ್ಕಬಳ್ಳಾಪುರ: ವಿಧಾನಸಭಾ ಚುನಾವಣೆಗೂ ಮುನ್ನವೇ ಶಾಸಕರು, ಟಿಕೆಟ್ ಆಕಾಂಕ್ಷಿಗಳು ಮತದಾರರಿಗೆ ಉಡುಗೊರೆ ಕೊಡಲು ಆರಂಭಿಸಿದ್ದಾರೆ. ಧಾರ್ಮಿಕ ಸ್ಥಳಗಳಿಗೂ ಅಭ್ಯರ್ಥಿಗಳ ಖರ್ಚಿನಲ್ಲಿ ಸಾವಿರಾರು ಮತದಾರರು ಈಗಾಗಲೇ ಪ್ರವಾಸ ಮಾಡಿದ್ದಾರೆ.

ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನಲ್ಲಿ ಕಾಂಗ್ರೆಸ್ ಶಾಸಕ ಡಾ.ರಂಗನಾಥ್ ಎಲ್ಲರಿಗಿಂತ ಒಂದು ಹೆಜ್ಜೆ ಮುಂದಿದ್ದಾರೆ. 'ಕುಣಿಗಲ್ ಉತ್ಸವ'ದ ಹೆಸರಿನಲ್ಲಿ ಮಹಿಳೆಯರನ್ನು ಆಹ್ವಾನಿಸಿ ವಿವಿಧ ಸ್ಪರ್ಧೆಗಳನ್ನು ಹಮ್ಮಿಕೊಂಡು, ಬಂದವರಿಗೆಲ್ಲ ಉಡುಗೊರೆ ಕೊಟ್ಟು ಕಳುಹಿಸಿದ್ದರು.

ಗುಬ್ಬಿಯ ಜೆಡಿಎಸ್ ಶಾಸಕ ಎಸ್. ಆರ್. ಶ್ರೀನಿವಾಸ್ ಹೆಸರಿನಲ್ಲಿ ಕುಕ್ಕರ್, ಇತರೆ ಗೃಹೋಪಯೋಗಿ ವಸ್ತುಗಳನ್ನು ನೀಡಲಾಗುತ್ತಿದೆ. ಈ ಬಗ್ಗೆ ಕ್ಷೇತ್ರದಲ್ಲಿ ಆಕ್ಷೇಪ ವ್ಯಕ್ತವಾದ ನಂತರ 'ನಾನು ಯಾವುದೇ ಉಡುಗೊರೆ ಕೊಟ್ಟಿಲ್ಲ' ಎಂದು ಅವರು ಸ್ಪಷ್ಟಪಡಿಸಿದರು.

ತುಮಕೂರು ನಗರ ಕ್ಷೇತ್ರದಿಂದ ಸ್ಪರ್ಧಿಸುವುದಾಗಿ ಹೇಳಿಕೊಂಡು ಆಗಾಗ ಭೇಟಿ ನೀಡುತ್ತಿರುವ ಬೆಂಗಳೂರಿನ ಬೊಮ್ಮನಹಳ್ಳಿ ಬಾಬು (ಅಟ್ಟಿಕಾ ಬಾಬು) ಹೆಸರಿನಲ್ಲಿ ನಗರದ ಕೊಳೆಗೇರಿಗಳಲ್ಲಿ ಕುಕ್ಕರ್, ಮಿಕ್ಸಿ ನೀಡಲಾಗುತ್ತಿದೆ.

ತುಮಕೂರು ಗ್ರಾಮಾಂತರ ಕ್ಷೇತ್ರದಲ್ಲಿ ಜೆಡಿಎಸ್ ಶಾಸಕ ಡಿ.ಸಿ. ಗೌರಿಶಂಕರ್ ದೇಗುಲಗಳ ಅಭಿವೃದ್ಧಿಗೆ ₹5 ಲಕ್ಷದವರೆಗೂ ನೆರವು ಕೊಟ್ಟಿದ್ದಾರೆ.

ರಾಮನಗರ ಜಿಲ್ಲೆಯಲ್ಲಿ ಈಚೆಗೆ ಡಿ.ಕೆ. ಶಿವಕುಮಾರ್ ಹಾಗೂ ಡಿ.ಕೆ. ಸುರೇಶ್ ನೇತೃತ್ವದಡಿ ಭರ್ಜರಿಯಾಗಿ ಕನಕೋತ್ಸವ ನಡೆಯಿತು. ಇದರ ನೆಪದಲ್ಲಿ ಕನಕಪುರ ಹಾಗೂ ರಾಮನಗರ ವಿಧಾನಸಭಾ ಕ್ಷೇತ್ರದ ಮತದಾರರಿಗೆ ಉಡುಗೊರೆ ಸಂದಾಯ ಆಗಿದೆ.

ರಾಮನಗರದಲ್ಲಿ ಪ್ರತಿ ಮನೆಗೆ ಕಾಂಗ್ರೆಸ್ ಕಾರ್ಯಕರ್ತರು ಎರಡು ತವಾ ಉಳ್ಳ ಉಡುಗೊರೆ ತಲುಪಿಸಿದ್ದಾರೆ. ಇದರ ಮೇಲ್ಭಾಗದಲ್ಲಿ ಶಿವಕುಮಾರ್, ಸುರೇಶ್ ಭಾವಚಿತ್ರದ ಜೊತೆಗೆ ರಾಮನಗರ ಕ್ಷೇತ್ರದ ಕಾಂಗ್ರೆಸ್‌ನ ಸಂಭಾವ್ಯ ಅಭ್ಯರ್ಥಿ ಇಕ್ಬಾಲ್ ಹುಸೇನ್ ಅವರ ಭಾವಚಿತ್ರವೂ ಇದೆ.

ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದಲ್ಲಿ 'ಚಿಕ್ಕಬಳ್ಳಾಪುರ ಉತ್ಸವ'ದ ನೆಪದಲ್ಲಿ ಮಹಿಳೆಯರಿಗೆ ರಂಗೋಲಿ ಸ್ಪರ್ಧೆ ಹಮ್ಮಿಕೊಳ್ಳಲಾಗಿತ್ತು. ಸ್ಪರ್ಧೆಯಲ್ಲಿ ಪಾಲ್ಗೊಂಡ ಎಲ್ಲರಿಗೂ ಸುಧಾಕರ್ ಫೌಂಡೇಷನ್‌ನಿಂದ ಸ್ಟೌ ವಿತರಣೆಗೆ ಸಿದ್ಧತೆ ನಡೆದಿದೆ. ಉತ್ಸವದಲ್ಲಿ ಆಯೋಜಿಸಿದ್ದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ನಗದು ಬಹುಮಾನ ನೀಡಲಾಗಿದೆ.

ಗೌರಿಬಿದನೂರು ಕ್ಷೇತ್ರದಲ್ಲಿ ಸಮಾಜ ಸೇವಕ ಪುಟ್ಟಸ್ವಾಮಿ ಗೌಡ ಅವರು ಗೌರಿ– ಗಣೇಶ ಹಬ್ಬದ ಪ್ರಯುಕ್ತ ಕ್ಷೇತ್ರದಲ್ಲಿ ಸೀರೆ ವಿತರಿಸಿದರು. ಈಗ ಅಂಗವಿಕಲರಿಗೆ ಸಹಾಯಧನ, ಹೊಲಿಗೆ ಯಂತ್ರ ವಿತರಿಸುತ್ತಿದ್ದಾರೆ. ಇದೇ ಕ್ಷೇತ್ರದಲ್ಲಿ ಪಕ್ಷೇತರರಾಗಿ ಸ್ಪರ್ಧಿಸುವುದಾಗಿ ಘೋಷಿಸಿರುವ ಜಿ.ಪಂ. ಮಾಜಿ ಸದಸ್ಯ ಕೆಂಪರಾಜು, ರಂಗೋಲಿ ಸ್ಪರ್ಧೆ ನಡೆಸಿ ಬಹುಮಾನ ವಿತರಿಸುತ್ತಿದ್ದಾರೆ. ಗೃಹೋಪಯೋಗಿ ವಸ್ತುಗಳನ್ನೂ ನೀಡುತ್ತಿದ್ದಾರೆ.

ಬಾಗೇಪಲ್ಲಿ ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿ ಸಿ. ಮುನಿರಾಜು ಗಡಿಯಾರ, ಸೀರೆ ನೀಡಿದ್ದಾರೆ.



ಗೌರಿಬಿದನೂರು ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಲು ನಿರ್ಧರಿಸಿರುವ ಜಿ.ಪಂ. ಮಾಜಿ ಸದಸ್ಯ ಕೆಂಪರಾಜು, ಮತದಾರರಿಗೆ ಫ್ಯಾನ್ ವಿತರಿಸಿದರು

ಪ್ರಜಾ ಮತ ಜನತಂತ್ರದ ಹಬ್ಬ — ಕರ್ನಾಟಕ ವಿಧಾನಸಭಾ ಚುನಾವಣೆ - 2023

ಬಳ್ಳಾರಿ ನಗರದಿಂದಲೇ ಸ್ಪರ್ಧೆ: ಸೋಮಶೇಖರ ರೆಡ್ಡಿ

ಬಳ್ಳಾರಿ: ಬಳ್ಳಾರಿ ನಗರ ವಿಧಾನಸಭೆ ಕ್ಷೇತ್ರದಿಂದ ಕಲ್ಯಾಣ ರಾಜ್ಯ ಕರ್ನಾಟಕ ಪಕ್ಷದ (ಕೆಆರ್‌ಪಿಪಿ) ಅಧ್ಯಕ್ಷ ಜಿ.ಜನಾರ್ದನರೆಡ್ಡಿ ಪತ್ನಿ ಲಕ್ಷ್ಮೀ ಅರುಣಾ ಹೆಸರು ಪ್ರಕಟಿಸಿರುವುದರಿಂದ ಸಿಟ್ಟಿಗೆದ್ದಿರುವ ಶಾಸಕ ಜಿ. ಸೋಮಶೇಖರ ರೆಡ್ಡಿ ಯಾವುದೇ ಪರಿಸ್ಥಿತಿಯಲ್ಲೂ ಚುನಾವಣೆಗೆ ನಿಲ್ಲುವುದಾಗಿ ಘೋಷಿಸಿ ತಮ್ಮನಿಗೆ ಸವಾಲ್ ಹಾಕಿದ್ದಾರೆ.

2018ರ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯಿಂದ ಆಯ್ಕೆಯಾಗಿರುವ ಸೋಮಶೇಖರ ರೆಡ್ಡಿ ಈ ಸಲವೂ ಬಿಜೆಪಿಯಿಂದಲೇ ಸ್ಪರ್ಧಿಸುವುದಾಗಿ ಖಚಿತಪಡಿಸಿದ್ದಾರೆ. ಅಕಸ್ಮಾತ್ ಬಿಜೆಪಿ ಟಿಕೆಟ್ ಸಿಗದಿದ್ದರೆ ಪಕ್ಷೇತರನಾಗಿ ನಿಂತು ಗೆದ್ದು, ಪುನಃ ಬಿಜೆಪಿಗೆ ಹೋಗುವುದಾಗಿ ಬುಧವಾರ ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದರು.

'ಬಾವ(ಸೋಮಶೇಖರ ರೆಡ್ಡಿ) ಮತ್ತು ಸೊಸೆ (ಲಕ್ಷ್ಮೀ ಅರುಣಾ) ಸ್ಪರ್ಧೆಯಿಂದ ಚುನಾವಣೆ ರೋಚಕವಾಗಿರುತ್ತದೆ. ನಾನು ತಟಸ್ಥನಾಗುವುದು ಅಸಾಧ್ಯದ ಮಾತು; ಅದು ಜಾಯಮಾನದಲ್ಲೇ ಇಲ್ಲ. ಸೊಸೆ ಸ್ಪರ್ಧೆಯನ್ನು ನಾನು ನಿರೀಕ್ಷಿಸಿದ್ದೆ. ಅವರ ಪಾರ್ಟಿಗೆ ಕರೆದರೂ ಬರೊಲ್ಲ ಎಂದೆ. ಆ ಸಿಟ್ಟನ್ನು ಹೀಗೆ ತೋರಿಸುತ್ತಿದ್ದಾರೆ' ಎಂದು ರೆಡ್ಡಿ ದೂರಿದರು. 'ನಮ್ಮ ಕೆಲವು ಕಾರ್ಯಕರ್ತರಿಗೆ ರೊಕ್ಕದ ಆಸೆ. ನನ್ನ ಜತೆಗಿದ್ದರೆ ಏನೂ ಬರೊಲ್ಲ. ಅಲ್ಲಿದ್ದರೆ ಬರುತ್ತೆ ಎಂಬ ಆಸೆಯಿಂದ ಆ ಕಡೆ ಹೋಗುತ್ತಿದ್ದಾರೆ. ನಿಷ್ಠಾವಂತರು ನನ್ನ ಜತೆ ಇದ್ದಾರೆ. ಅಷ್ಟಕ್ಕೂ ಅವರು ಜನರ ನಡುವೆ ಎಲ್ಲಿದ್ದಾರೆ? ಈವರೆಗೆ ಹವಾನಿಯಂತ್ರಿತ ಮನೆಯಲ್ಲಿ ಇದ್ದರು. ಈಗ ಹೊರಗೆ ಬಂದಿದ್ದಾರೆ' ಎಂದು ಲೇವಡಿ ಮಾಡಿದರು.

'ನನ್ನ ತಮ್ಮ ಒಳಗಿದ್ದಾನೆ (ಜೈಲಿನಲ್ಲಿ) ಎಂಬ ಕಾರಣಕ್ಕೆ 2013ರ ಚುನಾವಣೆ ತ್ಯಾಗ ಮಾಡಿ ಅವನಿಗಾಗಿ ಅಡ್ಡಾಡಿದ್ದೆ. 63 ದಿನ ಜೈಲಲ್ಲೂ ಇದ್ದೆ. ಅದನ್ನೂ ಲೆಕ್ಕಕ್ಕೆ ತೆಗೆದುಕೊಂಡಿಲ್ಲ. ಬಾವ ನಿನ್ನ ಋಣ ತೀರಿಸಲಾಗದು ಎಂದು ಸೊಸೆ ಒಮ್ಮೆ ಹೇಳಿದ್ದಳು. ರೆಡ್ಡಿ ಅವರ ಮಗಳೂ ಒಂದು ಸಲ, ದೊಡ್ಡಪ್ಪ ನಿನ್ನ ಋಣ ತೀರಿಸಲು ಸಾಧ್ಯವಿಲ್ಲ ಎಂದಿದ್ದಳು' ಎಂದು ಸೋಮಶೇಖರ ರೆಡ್ಡಿ ನೆನಪಿಸಿಕೊಂಡರು.

ಬಿಜೆಪಿಗೆ ಸಂದೇಶ್ ನಾಗರಾಜ್ ರಾಜೀನಾಮೆ

ಮೈಸೂರು: ಬಿಜೆಪಿ ಪ್ರಾಥಮಿಕ ಸದಸ್ಯತ್ವಕ್ಕೆ ವಿಧಾನ ಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜ್ ರಾಜೀನಾಮೆ ನೀಡಿದ್ದಾರೆ. 'ಸ್ವ ಇಚ್ಛೆಯಿಂದ ರಾಜೀನಾಮೆ ನೀಡುತ್ತಿದ್ದು, ಅಂಗೀಕರಿಸಬೇಕು' ಎಂದು ಜ.31ರಂದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ ಕಟೀಲ್ ಅವರಿಗೆ ಪತ್ರ ಸಲ್ಲಿಸಿದ್ದಾರೆ.

'ಬಿಜೆಪಿ ಮುಖಂಡರ ಬಗ್ಗೆ ಬಹಳಷ್ಟು ಬೇಸರವಿದೆ. ಪಕ್ಷ ತೊರೆದ ಕಾರಣವನ್ನು ಸದ್ಯದಲ್ಲಿಯೇ ಸುದ್ದಿಗೋಷ್ಠಿ ನಡೆಸಿ ತಿಳಿಸುವೆ. ಈಗ ಬೇರೇನೂ ಹೇಳಲಾರೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಸಮ್ಮುಖದಲ್ಲಿ ಶೀಘ್ರ ಕಾಂಗ್ರೆಸ್ ಸೇರುತ್ತಿದ್ದೇನೆ. ಯಾವುದೇ ಹುದ್ದೆ ಬಯಸಿಲ್ಲ. ಆಕಾಂಕ್ಷೆಗಳಿಲ್ಲ. ಸಿದ್ಧಾಂತ ಒಪ್ಪಿ ಸೇರುತ್ತಿರುವೆ' ಎಂದು ಸಂದೇಶ್ ನಾಗರಾಜ್ ಬುಧವಾರ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಫೆಬ್ರುವರಿಯಲ್ಲೇ ಎಸ್ಸೆಸ್ಸೆಲ್ಸಿ ಪೂರ್ವ ಸಿದ್ಧತಾ ಪರೀಕ್ಷೆ

ಬೆಂಗಳೂರು: 2022–23ನೇ ಸಾಲಿನ ಎಸ್ಸೆಸ್ಸೆಲ್ಸಿ ಪೂರ್ವ ಸಿದ್ಧತಾ ಪರೀಕ್ಷೆಗಳನ್ನು ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳ(ಬಿಇಒ) ಹಂತದಲ್ಲೇ ಫೆಬ್ರುವರಿ ಅಂತ್ಯದ ಒಳಗೆ ನಡೆಸಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆದೇಶ ಹೊರಡಿಸಿದೆ.

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯಿಂದ ಮಾದರಿ ಪ್ರಶ್ನೆಪತ್ರಿಕೆಗಳನ್ನು ರಾಜ್ಯದ ಎಲ್ಲ ಬಿಇಒಗಳಿಗೆ ಕಳುಹಿಸಲಾಗುತ್ತದೆ. ಅದರ ಆಧಾರದ ಮೇಲೆ ಸ್ಥಳೀಯವಾಗಿ ಪ್ರಶ್ನೆ ಪತ್ರಿಕೆಗಳನ್ನು ಸಿದ್ಧಪಡಿಸಿಕೊಂಡು, ವೇಳಾಪಟ್ಟಿ ಪ್ರಕಟಿಸಬೇಕು ಎಂದು ಸೂಚಿಸಲಾಗಿದೆ.

ಮುಂಬೈ ಧಾರಣೆ

ಶೇಂಗಾ

1–2-2023

ಜಾವಾ 70/80(ಹೊಸ)	12200-12250
ಜಾವಾ 80/90(ಹೊಸ)	11200-11250
ದಪ್ಪ ಮಧ್ಯಪ್ರದೇಶ(ಹೊಸ)	10550-10650
ದಪ್ಪ ಗುಜರಾತ್(ಹೊಸ)	11650-11750

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1630 (1630)
ಒಂದು ವಾರದ ಡೆಲಿವರಿ	1625 (1625)
ಸೋಯಾ ಕಚ್ಚಾ	1095 (1075)
ಪಾಮ್ ವಾರದ ಡೆಲಿವರಿ	928 (928)
ಸೂರ್ಯಕಾಂತಿ ಎಣ್ಣೆ ಕಚ್ಚಾ	1060 (1080)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
57,650 (56,650)
ಬೆಳ್ಳಿ ಕೆ.ಜಿ 69,450 (67,700)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ವಾಟ್ಸ್‌ಆ್ಯಪ್ ಕಂಪನಿಗೆ ಸುಪ್ರೀಂ ಕೋರ್ಟ್ ಸೂಚನೆ

ಖಾಸಗಿತನದ ನೀತಿ: ಪ್ರಚಾರ ನೀಡಿ

ಪ್ರಜಾವಾಣಿ ವಾರ್ತೆ

ನವದೆಹಲಿ: 'ತಾನು 2021ರಲ್ಲಿ ಜಾರಿಗೊಳಿಸಿರುವ ಖಾಸಗಿತನದ ನೀತಿಯನ್ನು ಸ್ವೀಕರಿಸಲೇಬೇಕೆಂದು ಬಳಕೆದಾರರ ಮೇಲೆ ಒತ್ತಡ ಹೇರಿಲ್ಲ ಎಂದು ವಾಟ್ಸ್‌ಆ್ಯಪ್ ಕಂಪನಿಯು ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯಕ್ಕೆ ಈ ಹಿಂದೆಯೇ ತಿಳಿಸಿದೆ. ಈ ವಿಚಾರವನ್ನು ಮಾಧ್ಯಮಗಳ ಮೂಲಕ ವ್ಯಾಪಕವಾಗಿ ಪ್ರಚಾರ ಮಾಡುವಂತೆ ಆ ಕಂಪನಿಗೆ ನಾವು ತಾಕೀತು ಮಾಡುತ್ತಿದ್ದೇವೆ' ಎಂದು ಸುಪ್ರೀಂ ಕೋರ್ಟ್ ಬುಧವಾರ ಹೇಳಿದೆ.

ಬಳಕೆದಾರರ ದತ್ತಾಂಶವನ್ನು ಫೇಸ್‌ಬುಕ್ ಹಾಗೂ ಇತರರೊಂದಿಗೆ ಹಂಚಿಕೊಳ್ಳುವ ಕುರಿತ ವಾಟ್ಸ್‌ಆ್ಯಪ್ ನೀತಿಯನ್ನು ವಿದ್ಯಾರ್ಥಿಗಳಾದ ಕರ್ಮಣ್ಯ ಸಿಂಗ್ ಸರೀನ್ ಮತ್ತು ಶ್ರೇಯಾ ಸೇಥಿ ಎಂಬುವರು ಪ್ರಶ್ನಿಸಿದ್ದರು. ಈ ನೀತಿಯು ತಮ್ಮ ಖಾಸಗಿತನ ಹಾಗೂ ಮುಕ್ತ ಸ್ವಾತಂತ್ರ್ಯದ ಹಕ್ಕನ್ನು ಉಲ್ಲಂಘಿಸಲಿದೆ ಎಂದು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ್ದ ಅರ್ಜಿಯಲ್ಲಿ ದೂರಿದ್ದರು.

ನ್ಯಾಯಮೂರ್ತಿ ಕೆ.ಎಂ.ಜೋಸೆಫ್ ನೇತೃತ್ವದ ಐವರು ಸದಸ್ಯರನ್ನೊಳಗೊಂಡ ಸಾಂವಿಧಾನಿಕ ಪೀಠವು ಬುಧವಾರ ಇದರ ವಿಚಾರಣೆ ನಡೆಸಿತು.

'ಖಾಸಗಿತನದ ನೀತಿಯನ್ನು ಒಪ್ಪದಿದ್ದರೂ (ಅಪ್ಡೇಟ್) ಸಂದೇಶ ವಿನಿಮಯ ಮಾಡಲು ಬಳಕೆದಾರರಿಗೆ ಅವಕಾಶ ನೀಡುವುದಾಗಿ ವಾಟ್ಸ್‌ಆ್ಯಪ್ ತಿಳಿಸಿದೆ. ಈ ಕುರಿತು ಮಾಧ್ಯಮಗಳ ಮೂಲಕ ವ್ಯಾಪಕ ಪ್ರಚಾರ ನೀಡಿದರೆ ನೀತಿಗೆ ವಿರೋಧ ವ್ಯಕ್ತಪಡಿಸಿರುವವರಿಗೆ ಅನುಕೂಲವಾಗಲಿದೆ. ಹೀಗಾಗಿ ರಾಷ್ಟ್ರೀಯ ಮಟ್ಟದ ಯಾವುದಾದರೂ ಐದು ಪತ್ರಿಕೆಗಳಿಗೆ ಈ ಕುರಿತು ಎರಡು ಬಾರಿ ಜಾಹೀರಾತು ನೀಡಿ' ಎಂದು ನ್ಯಾಯಮೂರ್ತಿಗಳಾದ ಅಜಯ್ ರಸ್ತೋಗಿ, ಅನಿರುದ್ಧ ಬೋಸ್, ಹೃಶಿಕೇಷ್ ರಾಯ್ ಮತ್ತು ಸಿ.ಟಿ.ರವಿಕುಮಾರ್ ಅವರನ್ನೊಳಗೊಂಡ ನ್ಯಾಯಪೀಠವು ವಾಟ್ಸ್‌ಆ್ಯಪ್ ಕಂಪನಿಗೆ ಸೂಚಿಸಿದೆ. ಈ ಕುರಿತ ವಿಚಾರಣೆಯನ್ನು ಏಪ್ರಿಲ್ 11ಕ್ಕೆ ಮುಂದೂಡಿದೆ.

ಮೂವರು ಮಕ್ಕಳ ಕೊಂದು ತಂದೆ ಆತ್ಮಹತ್ಯೆ: ಪತ್ನಿ ಸ್ಥಿತಿ ಗಂಭೀರ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ವ್ಯಕ್ತಿಯೊಬ್ಬ ತನ್ನ ಪತ್ನಿ ಹಾಗೂ ಮೂವರು ಮಕ್ಕಳ ಮೇಲೆ ಸುತ್ತಿಗೆಯಿಂದ ಹಲ್ಲೆ ನಡೆಸಿ, ತಾನು ನೇಣು ಹಾಕಿಕೊಂಡ ಘಟನೆ ನಡೆದಿದೆ.

ಗಂಭೀರವಾಗಿ ಗಾಯಗೊಂಡಿದ್ದ ಮಕ್ಕಳು ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ. ಚಿಕಿತ್ಸೆ ಪಡೆಯುತ್ತಿರುವ ತಾಯಿ ಸಾವು–ಬದುಕಿನ ನಡುವೆ ಹೋರಾಟ ನಡೆಸುತ್ತಿದ್ದಾರೆ. ತಾಲ್ಲೂಕಿನ ಸುಳ್ಳ ಗ್ರಾಮದಲ್ಲಿ ಬುಧವಾರ ಬೆಳಗಿನ ಜಾವ ಘಟನೆ ನಡೆದಿದೆ.

ಫಕ್ಕೀರಪ್ಪ ಮಾದರ (35) ಆತ್ಮಹತ್ಯೆ ಮಾಡಿಕೊಂಡವರು. ಶ್ರೇಯಸ್ (6), ಶ್ಯಾಮಲಾ (8) ಹಾಗೂ ಸೃಷ್ಟಿ (4) ಮೃತ ಮಕ್ಕಳು.

ಗಂಭೀರವಾಗಿ ಗಾಯಗೊಂಡಿರುವ 30 ವರ್ಷದ ಪತ್ನಿ ಮುದುಕವ್ವ ಅವರು ಕಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

'ಫಕ್ಕೀರಪ್ಪ ಮದ್ಯ ವ್ಯಸನಿಯಾಗಿದ್ದ. ಕೆಲ ವರ್ಷಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಎಂದು ಸ್ಥಳೀಯರು ತಿಳಿಸಿದ್ದಾರೆ. ಕೃತ್ಯಕ್ಕೆ ಕಾರಣ ಗೊತ್ತಾಗಿಲ್ಲ. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ' ಎಂದು ಹುಬ್ಬಳ್ಳಿ ಗ್ರಾಮೀಣ ಠಾಣೆ ಇನ್‌ಸ್ಪೆಕ್ಟರ್ ಮುರುಗೇಶ ಚನ್ನಣ್ಣವರ ಅವರು ತಿಳಿಸಿದ್ದಾರೆ.

ಗ್ರಾಮಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲೋಕೇಶ ಜಗಲಾಸರ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಘಟನೆಯಿಂದಾಗಿ ಗ್ರಾಮದಲ್ಲಿ ಮೌನ ಆವರಿಸಿದೆ.

ವಾಲಿಬಾಲ್ ಆಡುತ್ತಿದ್ದ ವೇಳೆ ಚರಂಡಿಗೆ ಬಿದ್ದು ವಿದ್ಯಾರ್ಥಿ ಸಾವು

ಸಿಂಧನೂರು (ರಾಯಚೂರು ಜಿಲ್ಲೆ): ತಾಲ್ಲೂಕಿನ ಜವಳಗೇರಾ ಗ್ರಾಮದ ಕೊಪ್ಪಳ ಕ್ಯಾಂಪ್‌ನ ಬಳಿಯಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆ ಆವರಣದಲ್ಲಿ ಮಂಗಳವಾರ ವಾಲಿಬಾಲ್ ಆಡುತ್ತಿದ್ದ ವೇಳೆ ಕಾಲು ಜಾರಿ ಚರಂಡಿಯಲ್ಲಿ ಬಿದ್ದು, ಶಾಲೆಯ 7ನೇ ತರಗತಿ ವಿದ್ಯಾರ್ಥಿ ಹನುಮಂತ ನಾರಾಯಣಸ್ವಾಮಿ (13) ಮೃತಪಟ್ಟಿದ್ದಾನೆ. ಆತ ಧುಮತಿ ಗ್ರಾಮದ ನಿವಾಸಿಯಾಗಿದ್ದ.

'ಚರಂಡಿಯಲ್ಲಿ ಬಿದ್ದ ವೇಳೆ ಹನುಮಂತ ತಲೆಗೆ ತೀವ್ರ ಪೆಟ್ಟು ಬಿದ್ದಿದೆ. ತಕ್ಷಣವೇ ಆತನನ್ನು ಜವಳಗೇರಾ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕರೆದೊಯ್ದು ಚಿಕಿತ್ಸೆ ಕೊಡಿಸಲಾಯಿತು. ಆದರೆ, ಪ್ರಯೋಜನವಾಗಲಿಲ್ಲ' ಎಂದು ಬಳಗಾನೂರು ಠಾಣೆಯ ಪೊಲೀಸರು ತಿಳಿಸಿದ್ದಾರೆ.

'ಭದ್ರತೆಯನ್ನು ಹೊರಗುತ್ತಿಗೆ ನೀಡಲಾಗದು'



ಮನೋಜ್ ಪಾಂಡೆ

ಪುಣೆ (ಪಿಟಿಐ): 'ದೇಶದ ಭದ್ರತೆಯನ್ನು ಹೊರಗುತ್ತಿಗೆ ನೀಡಲಾಗದು. ಅದು ಇನ್ನೊಬ್ಬರ ಔದಾರ್ಯದ ಮೇಲೆ ಅವಲಂಬಿತವಾಗುವಂತಹದ್ದಲ್ಲ' ಎಂದು ಸೇನಾ ಮುಖ್ಯಸ್ಥ, ಜನರಲ್ ಮನೋಜ್ ಪಾಂಡೆ ಅವರು ಹೇಳಿದ್ದಾರೆ.

ಬುಧವಾರ ಇಲ್ಲಿ ಹಮ್ಮಿಕೊಳ್ಳಲಾಗಿದ್ದ ಆರ್ಮಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸಂಸ್ಥೆಯ 'ಫೌಂಡೇಷನ್ ಡೇ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಕೃತಕ ಬುದ್ಧಿಮತ್ತೆ, ದತ್ತಾಂಶ ವಿಶ್ಲೇಷಣೆ, 5 ಜಿ ಮತ್ತು ಆಟೊಮೇಷನ್‌ನಂತಹ ವಿನೂತನ ತಂತ್ರಜ್ಞಾನಗಳನ್ನು ಸಮರ್ಥವಾಗಿ ಬಳಸಿಕೊಳ್ಳುವ ಸಲುವಾಗಿ 'ಸೆಂಟರ್ ಆಫ್ ಎಕ್ಸಲೆನ್ಸ್' ಆರಂಭಿಸಿದ್ದೇವೆ' ಎಂದು ಅವರು ತಿಳಿಸಿದ್ದಾರೆ.

ಶ್ರೀನಗರದಲ್ಲಿ ಹಿಮಕುಸಿತ: ಇಬ್ಬರು ಪ್ರವಾಸಿಗರ ಸಾವು

ಶ್ರೀನಗರ (ಪಿಟಿಐ): ಜಮ್ಮು–ಕಾಶ್ಮೀರದ ಗುಲ್ಮರ್ಗ್‌ನಲ್ಲಿರುವ ಸ್ಕಿ ರೆಸಾರ್ಟ್‌ನಲ್ಲಿ ಬುಧವಾರ ಸಂಭವಿಸಿದ ಭಾರಿ ಹಿಮಪಾತದಲ್ಲಿ ಪೋಲೆಂಡ್‌ನ ಇಬ್ಬರು ಪ್ರವಾಸಿಗರು ಮೃತರಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಬುಧವಾರ ಬೆಳಗ್ಗೆ 12.30 ಸುಮಾರಿಗೆ ಹಿಮಕುಸಿತ ಸಂಭವಿಸಿದ್ದು, ಈ ಇಬ್ಬರು ಅಲ್ಲದೆ ಇತರ ವಿದೇಶಿಗರು ಮತ್ತು ಸ್ಥಳೀಯರು ಇಳಿಜಾರಿನಲ್ಲಿದ್ದರು. ಈವರೆಗೆ ಕನಿಷ್ಠ 19 ವಿದೇಶಿಗರನ್ನು ರಕ್ಷಿಸಿ ಅಫರ್‌ವತ್ ಪ್ರದೇಶಕ್ಕೆ ಸ್ಥಳಾಂತರಿಸಲಾಗಿದೆ. ಪೋಲೆಂಡ್‌ನ ಇಬ್ಬರು ಪ್ರವಾಸಿಗರ ಶವವನ್ನು ವಶಪಡಿಸಿಕೊಳ್ಳಲಾಗಿದ್ದು, ವೈದ್ಯಕೀಯ ಹಾಗೂ ಕಾನೂನು ಪ್ರಕ್ರಿಯೆಗಾಗಿ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ಬಾರಾಮುಲ್ಲಾ ಜಿಲ್ಲೆಯ ಪ್ರವಾಸಿ ತಾಣದಲ್ಲಿ ರಕ್ಷಣಾ ಕಾರ್ಯಾಚರಣೆ ಪ್ರಗತಿಯಲ್ಲಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಹಿಮಪಾತದ ವಿಡಿಯೊಗಳು, ಜನರು ತಮ್ಮ ಪ್ರಾಣರಕ್ಷಣೆಗಾಗಿ ಓಡುತ್ತಿರುವ ವಿಡಿಯೊಗಳು ಸಾಮಾಜಿಕ ಮಾಧ್ಯಮದಲ್ಲಿ ವ್ಯಾಪಕವಾಗಿ ಹರಿದಾಡಿದ್ದು, ಇಬ್ಬರು ವಿದೇಶಿ ಸ್ಕೀಯರ್‌ಗಳು, ಇಬ್ಬರು ಗೈಡ್‌ಗಳು ಸೇರಿ ನಾಲ್ಕು ವ್ಯಕ್ತಿಗಳು ಕಾಣೆಯಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'20 ಅಡಿ ಎತ್ತರದ ಹಿಮ ಕುಸಿದದ್ದನ್ನು ಕಣ್ಣಾರೆ ಕಂಡೆವು. ಪ್ರಕೃತಿ ತನ್ನ ಕೋಪವನ್ನು ತೋರಿತು' ಎಂದು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿ ಸದಸ್ಯ ಕರ್ನಾಟಕದ ದೀಪಕ್ ಚಿಂಚೋರ್ ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ		ರಾಶಿ	35,100-46,750	ಚಾಲಿ	34,500-42,000
ಕೋಕ	12,500-25,000	ಸರಕು	54,640-80,019	ಕೆಂಪುಗೋಟು	23899-35686
ಹಳತು	48,000-54,500	**ಸಿದ್ದಾಪುರ**			
ಹೊಸತು	22,500-40,000	ಬಿಳಿಗೋಟು	27,500-33,199	ರಾಶಿ	37,899-46,119
ಕುಮಟ		ಚಾಲಿ	38,299-40,099	**ಯಲ್ಲಾಪುರ**	
ಚಿಪ್ಪು	27,019-32,089	ಕೋಕ	2,609-31,589	ಬಿಳಿಗೋಟು	23,899-31,699
ಕೋಕ	17,509-30,199	ಕೆಂಪುಗೋಟು	28,199-33,500	ಹಳೆಚಾಲಿ	35,799-40,911
ಫ್ಯಾಕ್ಟರಿ	11,609-19,749			ಹೊಸಚಾಲಿ	31,699-35,219
ಹಳೆಚಾಲಿ	36,099-39,299	ರಾಶಿ	42,099-45,799	ಕೋಕ	16,899-29,699
ಹೊಸಚಾಲಿ	30,000-35,917	ತಟ್ಟಿಬೆಟ್ಟೆ	38,009-42,599	ಕೆಂಪುಗೋಟು	24,899-34,990
ಶಿವಮೊಗ್ಗ		**ಶಿರಸಿ**			
ಬೆಟ್ಟೆ	40,000-52,500	ಬೆಟ್ಟೆ	36,009-42,899	ರಾಶಿ	43,809-53,629
ಗೊರಬಲು	19,009-35,996	ಬಿಳಿಗೋಟು	20,696-34,199	ತಟ್ಟಿಬೆಟ್ಟೆ	38,030-43,899